ಶುಕ್ರವಾರ, ಜುಲೈ 19, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 200 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
'ಚಿತ್ರರಂಗವೇ ಮುಳುಗುತ್ತದೆಂಬ ಭಯವಿದೆ'
ಸಂದರ್ಶನದಲ್ಲಿ ನಟ, ರ್‍ಯಾಪರ್ ಚಂದನ್ ಶೆಟ್ಟಿ ಕಳವಳ



ಆಳ–ಅಗಲ
ರಾಜ್ಯಗಳ ಬೊಕ್ಕಸಕ್ಕೆ ಹೊರೆ?
ಕನ್ನಡಿಗರಿಗೆ ಮೀಸಲಾತಿ: ಸರ್ಕಾರದ 'ಯೂ ಟರ್ನ್'ಗೆ ವಿರೋಧ 9
ಬಾಂಗ್ಲಾದೇಶ: ನಿಲ್ಲದ ಹಿಂಸಾಚಾರ 12

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,343	24,800	₹76,930 (ಬೆಂಗಳೂರು)	₹94,200 (ಬೆಂಗಳೂರು)	83.63

ಶಿರಾಡಿ ಘಾಟ್‌ನಲ್ಲಿ ಸಂಚಾರ ನಿರ್ಬಂಧ

ಪ್ರಜಾವಾಣಿ ವಾರ್ತೆ

ಹಾಸನ: ನಿರಂತರ ಮಳೆಯಾಗಿ ಭೂಕುಸಿತವಾಗುತ್ತಿರುವುದರಿಂದ ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿ 75 ರಲ್ಲಿ ಹಾಸನದಿಂದ ಮಾರನ ಹಳ್ಳಿಯವರೆಗೆ ಎಲ್ಲ ರೀತಿಯ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

ಬೆಂಗಳೂರು - ಮಂಗಳೂರು ಹೆದ್ದಾರಿಯ ಹಾಸನದಿಂದ ಮಾರನ ಹಳ್ಳಿವರೆಗಿನ ರಸ್ತೆಯಲ್ಲಿ ಅಹಿತಕರ ಘಟನೆಗಳು ನಡೆಯದಂತೆ ತಡೆಯುವ ಸಲುವಾಗಿ ಹಾಗೂ ಸಾರ್ವಜನಿಕ ಹಿತ ದೃಷ್ಟಿಯಿಂದ ಜುಲೈ 18 ರಿಂದ ರಸ್ತೆ ದುರಸ್ತಿ ಕಾರ್ಯ ಮುಗಿಯುವವರೆಗೆ ಎಲ್ಲ ರೀತಿಯ ವಾಹನ ಸಂಚಾರ ನಿರ್ಬಂಧಿಸಿ ಜಿಲ್ಲಾಧಿಕಾರಿ ಸಿ.ಸತ್ಯಭಾಮಾ ಆದೇಶಿಸಿದ್ದಾರೆ.

ಹಳಿ ತಪ್ಪಿದ ರೈಲು ಮೂರು ಸಾವು

ಗೊಂಡಾ/ನವದೆಹಲಿ/ಲಖನೌ: ಉತ್ತರ ಪ್ರದೇಶದ ಗೊಂಡಾ ಜಿಲ್ಲೆ ಯಲ್ಲಿ ಚಂಡೀಗಢ–ದಿಬ್ರೂಗಢ ಎಕ್ಸ್‌ಪ್ರೆಸ್ ರೈಲು ಗುರುವಾರ ಹಳಿ ತಪ್ಪಿದ ಪರಿಣಾಮ ಮೂವರು ಮೃತಪಟ್ಟು, ಇತರ 33 ಮಂದಿ ಗಾಯಗೊಂಡಿದ್ದಾರೆ. 13

ಚಿನಕುರುಳಿ

ಪ್ರಕಾಶ್ ಶೆಟ್ಟಿ



ತಾರಕಕ್ಕೇರಿದ ವಾಕ್ಸಮರ • ಸಿ.ಎಂ ಉತ್ತರಕ್ಕೂ ಅವಕಾಶ ಕೊಡದ ಬಿಜೆಪಿ

ಹಗರಣ: ಕಲಾಪ ಹರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ಕುರಿತು ಮೂರು ದಿನಗಳಿಂದ ವಿರೋಧ ಪಕ್ಷಗಳು ಮಾಡಿದ ಆರೋಪಗಳಿಗೆ ಸರ್ಕಾರದ ಪರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ತರ ನೀಡಲು ಗುರುವಾರ ಮುಂದಾದರು. ಈ ವೇಳೆ, ಬಿಜೆಪಿ ಎತ್ತಿದ ಆಕ್ಷೇಪ ವಾಗ್ವಾದಕ್ಕೆ ದಾರಿ ಮಾಡಿ ಕೊಟ್ಟು,ಕಲಾಪವು ಕೋಲಾಹಲದಲ್ಲೇ ಕೊನೆಗೊಂಡಿತು.

ಹಗರಣದ ಕುರಿತು ಕಾವೇರಿದ ಚರ್ಚೆ, ಪರಸ್ಪರ ಆರೋಪ–ಪ್ರತ್ಯಾರೋಪಗಳು ನಡೆದವು. ಆಡಳಿತ–ವಿರೋಧ ಪಕ್ಷದವರು ಪೋಸ್ಟರ್ ಪ್ರದರ್ಶಿಸಿದರಲ್ಲದೇ, ಪರಸ್ಪರ ಟೀಕಾತ್ಮಕ ಘೋಷಣೆ ಕೂಗಿದರು. ಸಭಾಧ್ಯಕ್ಷರ ಪೀಠದ ಎದುರು ವಿರೋಧ ಪಕ್ಷದ ಸದಸ್ಯರ ಧರಣಿ ನಡೆಸಿದರು. ಮುಖ್ಯಮಂತ್ರಿ ಉತ್ತರಕ್ಕೆ ತೀವ್ರ ತಕರಾರು ತೆಗೆದ ಬಿಜೆಪಿ ಸದಸ್ಯರು ಮಾತು ಪೂರ್ಣಗೊಳಿಸಲು ಅವಕಾಶವನ್ನೇ ನೀಡಲಿಲ್ಲ. ಗದ್ದಲದ ಮಧ್ಯೆಯೇ, ಕಲಾಪವನ್ನು ಶುಕ್ರವಾರಕ್ಕೆ ಮುಂದೂಡಲಾಯಿತು.

ಹಗರಣ ಕುರಿತ ಆರೋಪಗಳಿಗೆ ಉತ್ತರ ನೀಡಿದ ಮುಖ್ಯಮಂತ್ರಿ, ಆತ್ಮಹತ್ಯೆ ಮಾಡಿಕೊಂಡ ನಿಗಮದ ಅಧಿಕಾರಿ ಚಂದ್ರಶೇಖರನ್ ಅವರ 'ಮರಣಪತ್ರ' ಓದಲು ಆರಂಭಿಸಿದರು. ಆಗ ಮಧ್ಯ ಪ್ರವೇಶಿಸಿದ ಬಿಜೆಪಿಯ ವಿ. ಸುನಿಲ್ ಕುಮಾರ್, 'ಚಂದ್ರಶೇಖರನ್ ತಮ್ಮ ಮರಣ ಪತ್ರದಲ್ಲಿ ಮಾಜಿ ಸಚಿವ ನಾಗೇಂದ್ರ ಮೌಖಿಕ ಆದೇಶ ನೀಡಿದ್ದ ಅಂಶವನ್ನು ಪ್ರಸ್ತಾಪಿಸಿದ್ದರು.

9ನೇ ಪುಟ ನೋಡಿ



ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು ಎಂದು ಆಗ್ರಹಿಸಿ ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಹೊರಟ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಪೊಲೀಸರು ವಶಕ್ಕೆ ಪಡೆದರು
ಪ್ರಜಾವಾಣಿ ಚಿತ್ರ/ ಎಂ.ಎಸ್.ಮಂಜುನಾಥ್

ದದ್ದಲ್‌ಗೆ ಇ.ಡಿ ವಿಚಾರಣೆ

ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಮತ್ತು ಕಾಂಗ್ರೆಸ್ ಶಾಸಕ ಬಸನಗೌಡ ದದ್ದಲ್ ಅವರನ್ನು ಜಾರಿ ನಿರ್ದೇಶನಾಲಯವು ಗುರುವಾರ ವಿಚಾರಣೆಗೆ ಒಳಪಡಿಸಿತು.

ನಗರದ ಶಾಂತಿನಗರದಲ್ಲಿರುವ ಜಾರಿ ನಿರ್ದೇಶನಾಲಯದ (ಇ.ಡಿ) ಕಚೇರಿಗೆ ಹಾಜರಾಗುವಂತೆ ದದ್ದಲ್ ಅವರಿಗೆ ನಿರ್ದೇಶನಾಲಯವು ಸೂಚಿಸಿತ್ತು. ಅದರಂತೆ ಗುರುವಾರ ಬೆಳಿಗ್ಗೆ 11.30ರ ವೇಳೆಗೆ ಅವರು ಇ.ಡಿ ಕಚೇರಿಗೆ ಹಾಜರಾಗಿದ್ದರು. ಕಚೇರಿಯಲ್ಲೇ ಅವರ ವಿಚಾರಣೆ ನಡೆಸಿ ರಾತ್ರಿ ವೇಳೆಗೆ ಮನೆಗೆ ಕಳುಹಿಸಲಾಗಿದೆ.



ಕೃಷ್ಣಾ ಜಲಧಾರೆ.. ವಿಜಯಪುರ ಜಿಲ್ಲೆಯ ಆಲಮಟ್ಟಿ ಜಲಾಶಯದ ಗೇಟ್ ತೆರೆದು 65,480 ಕ್ಯುಸೆಕ್ ನೀರು ಬಿಟ್ಟಿರುವುದರಿಂದ ಮೈದುಂಬಿ ಹರಿಯುತ್ತಿರುವ ಕೃಷ್ಣಾ ನದಿಯ ವಿಹಂಗಮ ನೋಟ
–ಪ್ರಜಾವಾಣಿ ಚಿತ್ರ: ಸಂಗಮೇಶ ಬಡಿಗೇರ

ಮಳೆ ಸುದ್ದಿಗಳು 08

ನೀಟ್- ಯುಜಿ: 'ನಾಳೆಯೊಳಗೇ ಕೇಂದ್ರವಾರು ಫಲಿತಾಂಶ ಪ್ರಕಟಿಸಿ'

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ (ಪಿಟಿಐ): ಪ್ರಸ್ತುತ ಸಾಲಿನ 'ನೀಟ್–ಯುಜಿ'ಯ ಕೇಂದ್ರವಾರು ಮತ್ತು ನಗರವಾರು ಫಲಿತಾಂಶವನ್ನು ಇದೇ 20ರ ಮಧ್ಯಾಹ್ನ 12 ಗಂಟೆಯೊಳಗೆ ಪ್ರಕಟಿಸಬೇಕು ಎಂದು ಸುಪ್ರೀಂ ಕೋರ್ಟ್ ಗುರುವಾರ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಗೆ (ಎನ್‌ಟಿಎ) ನಿರ್ದೇಶಿಸಿದೆ. ಈ ವೇಳೆ ಪರೀಕ್ಷಾರ್ಥಿಗಳ ಗುರುತನ್ನು ಮರೆಮಾಚಿಸಬೇಕು ಎಂದೂ ಸೂಚಿಸಿದೆ.

ಮೇ 5ರಂದು ನಡೆದ 'ನೀಟ್–ಯುಜಿ' ಪರೀಕ್ಷೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಅವ್ಯವಹಾರಗಳು ನಡೆದಿವೆ ಎಂಬ ಆರೋಪಗಳು ವ್ಯಕ್ತವಾಗಿರುವ ಕಾರಣ ಇಡೀ ಪರೀಕ್ಷೆಯನ್ನು ರದ್ದುಗೊಳಿಸಬೇಕು, ಮರು ಪರೀಕ್ಷೆ ನಡೆಸಬೇಕು ಮತ್ತು ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸಬೇಕು ಎಂದು ಕೋರಿ ಸಲ್ಲಿಕೆಯಾಗಿರುವ 40ಕ್ಕೂ ಹೆಚ್ಚು ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸಿತು.

ದಿನವಿಡೀ ಈ ಕುರಿತು ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ, ಮನೋಜ್ ಮಿಶ್ರಾ ಅವರ ಪೀಠವು, ಬೃಹತ್ ಜಾಲವಿಲ್ಲದೆ ಪ್ರಶ್ನೆಪತ್ರಿಕೆ ಸೋರಿಕೆ ಸಾಧ್ಯವಿಲ್ಲ ಎಂದು ಹೇಳಿತು. ಅರ್ಜಿಗಳ ವಿಚಾರಣೆಯನ್ನು ಇದೇ 22ಕ್ಕೆ ಮುಂದೂಡಿತು.

ವಿಚಾರಣೆಯ ಆರಂಭದಲ್ಲಿ, 'ಇದು ಸಾಮಾಜಿಕವಾಗಿ ಪರಿಣಾಮಗಳನ್ನು ಹೊಂದಿರುವ ವಿಷಯವಾಗಿದ್ದು, ಲಕ್ಷಾಂತರ ಯುವ ವಿದ್ಯಾರ್ಥಿಗಳು ಇದಕ್ಕಾಗಿ ಕಾಯುತ್ತಿದ್ದಾರೆ. ಈ ಪ್ರಕರಣವನ್ನು ಆಲಿಸಿ, ನಿರ್ಧರಿಸೋಣ' ಎಂದು ಪೀಠ ಹೇಳಿತು.

ಕೌನ್ಸೆಲಿಂಗ್ ತಡೆಗೆ ನಕಾರ

ವೈದ್ಯಕೀಯ ಕೋರ್ಸ್‌ಗಳ ಕೌನ್ಸೆಲಿಂಗ್‌ಗೆ ತಡೆ ನೀಡಬೇಕು ಎಂದು ಅರ್ಜಿದಾರರೊಬ್ಬರ ಪರ ವಾದಿಸಿದ ಹಿರಿಯ ವಕೀಲ ನರೇಂದ್ರ ಹೂಡಾ ಅವರ ಮನವಿಯನ್ನು ಪೀಠ ತಿರಸ್ಕರಿಸಿತು.

'ಈ ವಿಷಯವನ್ನು ಇದೇ 22ರಂದು ಗಮನಿಸುತ್ತೇವೆ. ಅದಾಗ್ಯೂ ಕೌನ್ಸೆಲಿಂಗ್ ಇದೇ 24 ಅಥವಾ ಮೂರನೇ ವಾರದಲ್ಲಿ ಆರಂಭವಾಗಲಿದ್ದು, ತಿಂಗಳು ಅಥವಾ ಅದಕ್ಕೂ ಹೆಚ್ಚು ಕಾಲ ಮುಂದುವರಿಯಲಿದೆ' ಎಂದು ಪೀಠ ಹೇಳಿತು.

ಏನಿದು ಪ್ರಕರಣ?

ಮೇ 5ರಂದು, ದೇಶದ 571 ನಗರಗಳು ಸೇರಿದಂತೆ ವಿದೇಶಗಳಲ್ಲಿನ 14 ಕಡೆಗಳಲ್ಲಿನ 4,750 ಕೇಂದ್ರಗಳಲ್ಲಿ ನೀಟ್–ಯುಜಿ ಪರೀಕ್ಷೆ ನಡೆದಿತ್ತು. ಸುಮಾರು 23.33 ಲಕ್ಷ ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು. ಪರೀಕ್ಷೆಯಲ್ಲಿ ಅಕ್ರಮಗಳು ನಡೆದಿವೆ ಎಂದು ಆರೋಪಿಸಿ ದೇಶದಾದ್ಯಂತ ಪ್ರತಿಭಟನೆಗಳು ನಡೆದಿದ್ದವು. ಕೆಲ ಅಭ್ಯರ್ಥಿಗಳು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

13ನೇ ಪುಟ ನೋಡಿ

ರಾಜ್ಯ ಸರ್ಕಾರ ಅಸ್ಥಿರಗೊಳಿಸಲು 'ಇ.ಡಿ' ಅಸ್ತ್ರ

ಸಿ.ಎಂ, ಡಿಸಿಎಂ ಹೆಸರು ಹೇಳುವಂತೆ ಅಧಿಕಾರಿಗಳ ಮೇಲೆ ಒತ್ತಡ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಾಲ್ಮೀಕಿ ನಿಗಮದ ಹಗರಣದ ನೆಪದಲ್ಲಿ ಜಾರಿ ನಿರ್ದೇಶನಾಲಯವನ್ನು (ಇ.ಡಿ) ಬಳಸಿಕೊಂಡು ರಾಜ್ಯ ಸರ್ಕಾರ ಅಸ್ಥಿರಗೊಳಿಸುವ ಪ್ರಯತ್ನವನ್ನು ಕೇಂದ್ರ ಮಾಡುತ್ತಿದೆ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಕೆಲ ಸಚಿವರನ್ನು ಸಿಲುಕಿಸುವ ಪ್ರಯತ್ನ ನಡೆದಿದೆ ಎಂದು ಸಿದ್ದರಾಮಯ್ಯ ಸಂಪುಟದ ಐವರು ಸಚಿವರು ಆರೋಪಿಸಿದರು.

ವಿಧಾನಸೌಧದಲ್ಲಿ ಗುರುವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವರಾದ ಕೆ.ಜೆ.ಜಾರ್ಜ್, ಕೃಷ್ಣ ಬೈರೇಗೌಡ, ದಿನೇಶ್ ಗುಂಡೂರಾವ್, ಪ್ರಿಯಾಂಕ್ ಖರ್ಗೆ, ಸಂತೋಷ್ ಲಾಡ್ ಅವರು, ಸರ್ಕಾರದ ಪ್ರಮುಖರ ಹೆಸರು ಹೇಳುವಂತೆ ಬಂಧಿತ ಅಧಿಕಾರಿಗಳ ಮೇಲೆ ಇ.ಡಿ ಒತ್ತಡ ಹೇರುತ್ತಿದೆ ಎಂದು ದೂರಿದರು.

ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಾತನಾಡಿ, 'ಕೇಂದ್ರ ಸರ್ಕಾರದ ನಡೆ ಪ್ರಜಾಪ್ರಭುತ್ವ ವಿರೋಧಿಯಾಗಿದೆ. ಹಗರಣದಲ್ಲಿ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹೆಸರು ಹೇಳುವಂತೆ ಇ.ಡಿ ಅಧಿಕಾರಿಗಳು ಒತ್ತಡ ಹಾಕುತ್ತಿದ್ದಾರೆ. ಹೆಸರು ಹೇಳಿದರೆ ಪ್ರಕರಣದಲ್ಲಿ ನಿಮಗೆ ಅನುಕೂಲ ಮಾಡಲಾಗುತ್ತದೆ. ತಪ್ಪೊಪ್ಪಿಗೆ ನೀಡದಿದ್ದರೆ ಸಂಕಷ್ಟಕ್ಕೆ ಸಿಲುಕುತ್ತೀರಿ ಎಂದು ಬೆದರಿಸಲಾಗುತ್ತಿದೆ. ಇಂತಹ ಗೊಡ್ಡು ಬೆದರಿಕೆಗಳಿಗೆ ಬಗ್ಗುವ ಮಾತೇ ಇಲ್ಲ' ಎಂದರು.

'ಕೇಂದ್ರದಲ್ಲಿ ಆಡಳಿತ ಚುಕ್ಕಾಣಿ ಹಿಡಿದ ಎನ್‌ಡಿಎ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಚುನಾಯಿತ ಸರ್ಕಾರವನ್ನೇ ಬುಡಮೇಲು ಮಾಡುವ ಕೆಲಸಕ್ಕೆ ಮುಂದಾಗಿದೆ' ಎಂದರು.

> ವಾಲ್ಮೀಕಿ ನಿಗಮದ ಹಗರಣದಲ್ಲಿ ಇ.ಡಿ ದಾಳಿಯ ಉದ್ದೇಶವೇ ಕಾಂಗ್ರೆಸ್ ನಾಯಕರನ್ನು ಸಿಲುಕಿಸುವುದು. ಇ.ಡಿ ಬಿಜೆಪಿಯ ರಾಜಕೀಯ ವಿಭಾಗ ಆಗಿದೆ
> **ದಿನೇಶ್ ಗುಂಡೂರಾವ್**, ಆರೋಗ್ಯ ಸಚಿವ

> ಇ.ಡಿ ದಾಳಿ ಪ್ರಕರಣಗಳಲ್ಲಿ ತನಿಖಾ ಪ್ರಕ್ರಿಯೆಯ ಅಂಶಗಳನ್ನೇ ಮರೆಮಾಚಿಸಲಾಗಿದೆ. ಇಂತಹ ರಾಜಕೀಯ ದುರುದ್ದೇಶದ ವಿರುದ್ಧ ಕಾಂಗ್ರೆಸ್ ಕಾನೂನು ಹೋರಾಟ ನಡೆಸಲಿದೆ
> **ಕೆ.ಜೆ. ಜಾರ್ಜ್**, ಇಂಧನ ಸಚಿವ

9ನೇ ಪುಟ ನೋಡಿ

‘ಮಾರ್ಟಿನ್’ ನಿರ್ಮಾಪಕರಿಗೆ ವಂಚನೆ: ಆರೋಪಿ ಬಂಧನ

ಬೆಂಗಳೂರು: ಧ್ರುವ ಸರ್ಜಾ ಅಭಿನಯದ ‘ಮಾರ್ಟಿನ್’ ಚಿತ್ರದ ನಿರ್ಮಾಪಕರಿಗೆ ₹2.50 ಕೋಟಿ ವಂಚಿಸಿರುವ ಆರೋಪದಡಿ ಡಿಜಿಟಲ್ ಟೆರೇನ್ ಪ್ರೊಡಕ್ಷನ್ ಸಂಸ್ಥೆಯ ನಿರ್ದೇಶಕ ಸತ್ಯರೆಡ್ಡಿ ಅವರನ್ನು ಬಸವೇಶ್ವರನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಿರ್ಮಾಪಕ ಉದಯ್ ಎ. ಮೆಹ್ತಾ ಅವರು ನೀಡಿದ್ದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ. ಆರೋಪಿ ವಿರುದ್ಧ ವಂಚನೆ ಪ್ರಕರಣ ದಾಖಲಾಗಿತ್ತು. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ಮಾರ್ಟಿನ್ ಸಿನಿಮಾಕ್ಕೆ ಸಿ.ಜಿ ಹಾಗೂ ವಿಎಫ್‌ಎಕ್ಸ್ (ಗ್ರಾಫಿಕ್ಸ್) ಕೆಲಸ ಮಾಡಿಕೊಡುವ ವಿಚಾರದಲ್ಲಿ ಸತ್ಯರೆಡ್ಡಿ, ಸುನೀಲ್ ಸೇರಿದಂತೆ ಮೂವರು ಹಣ ಪಡೆದು ಮೋಸ ಎಸಗಿದ್ದಾರೆ. ಹಂತಹಂತವಾಗಿ ಹಣ ಪಡೆದುಕೊಂಡಿದ್ದರು ಎಂದು ಆರೋಪಿಸಿ ದೂರು ನೀಡಲಾಗಿತ್ತು. ಆ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ನೈಸ್ ರಸ್ತೆ ಸಮೀಪ 250 ಮೀಟರ್ ಎತ್ತರದ ಟವರ್‌ಗೆ 25 ಎಕರೆ ಭೂಮಿ

ಹೆಮ್ಮಿಗೆಪುರದಲ್ಲಿ ಸ್ಕೈಡೆಕ್ ನಿರ್ಮಾಣ

• ನವೀನ್ ಮಿನೇಜಸ್

ಬೆಂಗಳೂರು: ಹೆಮ್ಮಿಗೆಪುರದಲ್ಲಿರುವ 25 ಎಕರೆ ಭೂಮಿಯಲ್ಲಿ ನಗರದ ಅತಿದೊಡ್ಡ ಟವರ್ ‘ಸ್ಕೈಡೆಕ್’ ನಿರ್ಮಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಈ ತೀರ್ಮಾನ ಕೈಗೊಂಡಿದೆ. ಹೆಮ್ಮಿಗೆಪುರದಲ್ಲಿ ಸ್ಕೈಡೆಕ್ ಸುಮಾರು 250 ಮೀಟರ್ ಎತ್ತರ ನಿರ್ಮಾಣವಾಗಲಿದ್ದು, ಪ್ರವಾಸಿ ತಾಣವನ್ನಾಗಿಸಲು ಉದ್ದೇಶಿಸಲಾಗಿದೆ. ಹೀಗಾಗಿ, ಬೆಂಗಳೂರಿನ ದಕ್ಷಿಣ ಹಾಗೂ ನೈರುತ್ಯ ದಿಕ್ಕಿನಲ್ಲಿ ನಗರದ ಎರಡನೇ ಅಂತರ-ರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣವಾಗುವುದಿಲ್ಲ ಎನ್ನಲಾಗಿದೆ.

ಎಚ್‌ಎಎಲ್ ಭೂಮಿ ನೀಡಲು ನಿರಾಕರಿಸಿದ ಮೇಲೆ ಬಿಬಿಎಂಪಿ ಮೂರು ಸ್ಥಳಗಳನ್ನು ಗುರುತಿಸಿತ್ತು. ಅದರಲ್ಲಿ ಹೆಮ್ಮಿಗೆಪುರ ಕೂಡ ಒಂದಾಗಿತ್ತು. ನಗರದ ಸಚಿವರು ಹಾಜರಿದ್ದ ಸಭೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೆಮ್ಮಿಗೆಪುರ ಸೇರಿದಂತೆ ಜ್ಞಾನಭಾರತಿ ಆವರಣ ಹಾಗೂ ಕೊಮ್ಮಘಟ್ಟ ಪ್ರದೇಶವನ್ನು ಸ್ಕೈಡೆಕ್ ನಿರ್ಮಾಣಕ್ಕೆ ಪ್ರಸ್ತಾಪಿಸಿದ್ದರು.

ಜ್ಞಾನಭಾರತಿ ಆವರಣ ಸುಮಾರು 1,201 ಎಕರೆ ಪ್ರದೇಶದಲ್ಲಿದ್ದು, ಇದರಲ್ಲಿ ಪ್ರವಾಸಿ ತಾಣ ಮಾಡಿದರೆ ಪಕ್ಷಿ ಸಂಕುಲಕ್ಕೆ ತೊಂದರೆಯಾಗುತ್ತದೆ. ಜೊತೆಗೆ ಶೈಕ್ಷಣಿಕ ತಾಣವಾಗಿದ್ದು, ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ ಎಂದು ಈ ಪ್ರಸ್ತಾವ-ವನ್ನು ಕೈಬಿಡಲಾಯಿತು. ಪ್ರಧಾನಿ ಮೋದಿ ಅವರಿಗಾಗಿ ಹೆಲಿಪ್ಯಾಡ್ ನಿರ್ಮಾಣ ಮಾಡಿದ್ದ ಕೊಮ್ಮಘಟ್ಟ ಪ್ರದೇಶ ತುಂಬಾ ದಟ್ಟಣೆಯಾಗಿರುವುದರಿಂದ ಅದನ್ನು ಕೈಬಿಡಲಾಯಿತು.



ಬೆಂಗಳೂರಿನಲ್ಲಿ ನಿರ್ಮಿಸಲು ಉದ್ದೇಶಿಸಿರುವ ಸ್ಕೈಡೆಕ್ ಮಾದರಿ

ನೈಸ್ ಸಂಸ್ಥೆ ಅಧೀನದಲ್ಲಿರುವ ಹೆಮ್ಮಿಗೆಪುರದ 25 ಎಕರೆ ಪ್ರದೇಶದಲ್ಲಿ ‘ಸ್ಕೈಡೆಕ್’ ಮಾಡಲು ನಗರದ ಸಚಿವರು ಸಮ್ಮತಿಸಿದರು.

ತುರಹಳ್ಳಿ ಅರಣ್ಯ ಪ್ರದೇಶ, ಸೋಮಪುರ ಈ ಪ್ರದೇಶಕ್ಕೆ ಹೊಂದಿಕೊಂಡಿದ್ದು, ತಲಘಟ್ಟಪುರ ಮೆಟ್ರೊ ನಿಲ್ದಾಣ ಐದು ಕಿಲೋ ಮೀಟರ್ ದೂರದಲ್ಲಿದೆ. ಅಲ್ಲದೆ ಈ ಪ್ರದೇಶ ಡಿ.ಕೆ. ಶಿವಕುಮಾರ್ ಅವರು ವಿಧಾನಸಭೆ ಕ್ಷೇತ್ರ ಕನಕಪುರಕ್ಕೂ ಹತ್ತಿರವಾಗಿದೆ ಎಂದು ಅಂತಿಮ-ಗೊಳಿಸಲಾಯಿತು ಎನ್ನಲಾಗಿದೆ.

‘ಸ್ಕೈಡೆಕ್ ನಿರ್ಮಾಣದ ಪ್ರದೇಶ ನಿಗದಿಪಡಿಸುವ ಬಗ್ಗೆ ಸಚಿವ ಸಂಪುಟದಲ್ಲಿ ವಿಸ್ತಾರವಾಗಿ ಚರ್ಚಿಸಲಾಗು-ವುದು. ಬೆಂಗಳೂರಿನ ಎರಡನೇ ವಿಮಾನ ನಿಲ್ದಾಣವನ್ನು ಗಮನದಲ್ಲಿಟ್ಟುಕೊಂಡು ಸ್ಥಳವನ್ನು ಅಂತಿಮಗೊಳಿಸುವ ಯಾವ ಉದ್ದೇಶವೂ ಇಲ್ಲ. ಎಲ್ಲ ದೃಷ್ಟಿಕೋನಗಳಿಂದಲೂ ಆಲೋಚನೆ ಮಾಡಿ ತೀರ್ಮಾನ ಮಾಡಲಾಗುತ್ತದೆ’ ಎಂದು ರಾಜ್ಯ ಸರ್ಕಾರದ ಹಿರಿಯ ಅಧಿಕಾರಿಗಳು ತಿಳಿಸಿದರು.

ಮೂರು ವೋಲ್ವೊ ಬಸ್ ಸೇವೆ ಆರಂಭ



ಮೂರು ಹೊಸ ವೋಲ್ವೊ ಬಸ್‌ಗಳಿಗೆ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಶ್ರೀನಿವಾಸ್ ಹಸಿರು ನಿಶಾನೆ ತೋರಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವತಿಯಿಂದ ಮೂರು ಹೊಸ ವೋಲ್ವೊ ಬಸ್‌ಗಳನ್ನು ಗುರುವಾರ ಸಾರ್ವಜನಿಕ ಸೇವೆಗೆ ಸಮರ್ಪಿಸಲಾಯಿತು.

ರಾಜ್ಯ, ಅಂತರಾಜ್ಯಗಳ ಪ್ರವಾಸಿ ತಾಣಗಳಿಗೆ ಪ್ರವಾಸ ಕೈಗೊಳ್ಳಬಹುದಾದ ಈ ವಾಹನಗಳಿಗೆ ನಿಗಮದ ಅಧ್ಯಕ್ಷ ಎಂ. ಶ್ರೀನಿವಾಸ್ ಹಾಗೂ ಸಿಬ್ಬಂದಿ ವರ್ಗ ಹಸಿರು ನಿಶಾನೆ ತೋರಿಸಿದರು.

55 ಆಸನಗಳ ಬಸ್‌ನಲ್ಲಿ ತಿರುಪತಿ, 47 ಆಸನಗಳ ಬಸ್‌ನಲ್ಲಿ ಶಿರಡಿ ಹಾಗೂ 47 ಆಸನಗಳ ಬಸ್‌ನಲ್ಲಿ ಪುದುಚೇರಿ ಪ್ರವಾಸ ಕೈಗೊಳ್ಳಬಹುದು. ನಿಗಮದ ಯಶವಂತಪುರ ಕೇಂದ್ರ ಕಚೇರಿಯ ಬುಕ್ಕಿಂಗ್ ಕೌಂಟರ್, ಮೈಸೂರು ಸಾರಿಗೆ ವಿಭಾಗದ ಬುಕ್ಕಿಂಗ್ ಕೌಂಟರ್, ಕೆಂಪೇಗೌಡ ಬುಕ್ಕಿಂಗ್ ಕೌಂಟರ್, ರೆಡ್‌ಬಸ್ ಪೋರ್ಟಲ್, ಕೆ.ಎಸ್.ಆರ್.ಟಿ.ಸಿ ಅವತಾರ್ ಹಾಗೂ ನಿಗಮದ ಅಧಿಕೃತ ಟ್ರಾವೆಲ್ ಏಜೆಂಟ್‌ಗಳ ಮುಖಾಂತರ ಮುಂಗಡ ಬುಕ್ಕಿಂಗ್ ಮಾಡಬಹುದು.

ಮಾಹಿತಿಗೆ: www.kstdc.co, **ಮೊಬೈಲ್:** 918970650070

ಪುಸ್ತಕ ಬಹುಮಾನಕ್ಕೆ ಕೃತಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪುಸ್ತಕ ಬಹುಮಾನಕ್ಕೆ 2023ರಲ್ಲಿ ಪ್ರಕಟವಾದ ವಿವಿಧ ಪ್ರಕಾರಗಳ ಕೃತಿಗಳನ್ನು ಆಹ್ವಾನಿಸಿದೆ.



ಕಾವ್ಯ (ವಚನಗಳು ಮತ್ತು ಹನಿಗವನಗಳು), ಕಾದಂಬರಿ, ಸಣ್ಣಕತೆ, ನಾಟಕ, ಲಲಿತ ಪ್ರಬಂಧ, ಪ್ರವಾಸ ಸಾಹಿತ್ಯ, ಜೀವನ ಚರಿತ್ರೆ, ಆತ್ಮಕತೆ, ಸಾಹಿತ್ಯ ವಿಮರ್ಶೆ, ಗ್ರಂಥ ಸಂಪಾದನೆ (ಪ್ರಾಚೀನ ಕೃತಿಗಳ ಸಂಪಾದನೆ), ಮಕ್ಕಳ ಸಾಹಿತ್ಯ, ವಿಜ್ಞಾನ ಸಾಹಿತ್ಯ, ಮಾನವಿಕ ವಿಷಯಗಳು, ಸಂಶೋಧನೆ, ಅನುವಾದ, ಸಂಕೀರ್ಣ ಸೇರಿದಂತೆ 23 ವಿಭಾಗಗಳಲ್ಲಿ ಕೃತಿಗಳನ್ನು ಆಹ್ವಾನಿಸಿದ್ದು, ಪ್ರತಿ ಪ್ರಕಾರದಲ್ಲಿ ವಿಮರ್ಶಕರು ಆಯ್ಕೆ ಮಾಡಿದ ಒಂದು ಕೃತಿಗೆ ಪ್ರಶಸ್ತಿ ನೀಡಲಾಗುತ್ತದೆ.

ಕೃತಿಗಳು 2023ರ ಜನವರಿ 1ರಿಂದ ಡಿಸೆಂಬರ್ 31ರೊಳಗೆ ಪ್ರಥಮ ಆವೃತ್ತಿಯಾಗಿ ಪ್ರಕಟವಾಗಿರಬೇಕು. ಜನಪದ ಪ್ರಕಾರ ಹಾಗೂ ಪಿಎಚ್.ಡಿ ಪದವಿಗಾಗಿ ಸಿದ್ಧಪಡಿಸಿದ ಸಂಶೋಧನಾ ಗ್ರಂಥಗಳನ್ನು ಪ್ರಶಸ್ತಿಗೆ ಪರಿಗಣಿಸುವುದಿಲ್ಲ. ಕೃತಿಯ ನಾಲ್ಕು ಪ್ರತಿಗಳನ್ನು ಆ.31ರೊಳಗೆ ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, 2 ನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು– 560002 ಈ ವಿಳಾಸಕ್ಕೆ ಕಳುಹಿಸುವಂತೆ ಅಕಾಡೆಮಿಯ ಪ್ರಕಟಣೆ ತಿಳಿಸಿದೆ. **ವಿವರಕ್ಕೆ:** sahithyaacademy.karnataka.gov.in

ಬಿಲ್ ಪಾವತಿ ವಿಳಂಬ: 11 ಇಂದಿರಾ ಕ್ಯಾಂಟೀನ್ ಸ್ಥಗಿತ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಎರಡು ವಾರಗಳಿಂದ ಬಿಲ್ ಪಾವತಿ ಮಾಡದ್ದರಿಂದ ನಗರದಲ್ಲಿರುವ 11 ಇಂದಿರಾ ಕ್ಯಾಂಟೀನ್‌ಗಳು ಸ್ಥಗಿತಗೊಂಡಿವೆ.

ಬಿಬಿಎಂಪಿಯ ದಕ್ಷಿಣ ವಲಯದ ಬಸವನಗುಡಿ, ಬೈರಸಂದ್ರ, ವಿ.ವಿ. ಪುರ, ಜಯನಗರ, ಆಡುಗೋಡಿ, ಈಜಿಪುರ ಮತ್ತು ಸಿದ್ದಾಪುರದಲ್ಲಿರುವ ಇಂದಿರಾ ಕ್ಯಾಂಟೀನ್‌ಗಳು ಬಂದ್ ಆಗಿವೆ.

ಇಂದಿರಾ ಕ್ಯಾಂಟೀನ್‌ಗಳಲ್ಲಿ ಉಪಾಹಾರ, ಊಟ ಮತ್ತು ರಾತ್ರಿ ಊಟವನ್ನು ರಿಯಾಯಿತಿ ದರದಲ್ಲಿ ಒದಗಿಸುತ್ತಿದ್ದ ಏಜೆನ್ಸಿಗಳಿಗೆ ₹40 ಕೋಟಿ ಬಿಲ್ ಅನ್ನು ಬಿಬಿಎಂಪಿ ಪಾವತಿಸದ ಕಾರಣ ಕಾರ್ಯಾಚರಣೆ ನಿಲ್ಲಿಸಿದ್ದಾರೆ ಎಂದು ಹೇಳಲಾಗಿದೆ.

'ನಗರದ ಇತರೆ ಭಾಗದಲ್ಲಿ ಇಂದಿರಾ ಕ್ಯಾಂಟೀನ್ ನಡೆಸುತ್ತಿರುವ ಎಲ್ಲ ಏಜೆನ್ಸಿಗಳ ಬಿಲ್‌ಗಳನ್ನು ನಾವು ಪಾವತಿಸಿದ್ದೇವೆ. ದಕ್ಷಿಣ ವಲಯದ ಏಜೆನ್ಸಿ ನಾಗರಿಕರಿಗೆ ಒದಗಿಸಿದ ಆಹಾರಕ್ಕಿಂತ ಹೆಚ್ಚಿನ ಮೊತ್ತದ ಬಿಲ್ ಸಲ್ಲಿಸಿರುವುದರಿಂದ ಹಣ ಪಾವತಿ ಮಾಡಿಲ್ಲ. ಈ ಪ್ರದೇಶಗಳಲ್ಲಿ ನಾವು ಪರ್ಯಾಯ ವ್ಯವಸ್ಥೆ ಮಾಡಲಿದ್ದೇವೆ' ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಶ್ ಅವರು ತಿಳಿಸಿದರು.

ನಗರದಲ್ಲಿ ಉತ್ತಮ ಮಳೆ: ಹಲವು ಕಡೆಗಳಲ್ಲಿ ನೀರು ನಿಂತಿದ್ದರಿಂದ ವಾಹನ ಸವಾರರ ಪರದಾಟ

ಕೆಲವೆಡೆ ಮರಬಿದ್ದು ಸಂಚಾರಕ್ಕೆ ತೊಡಕು


ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಗುರುವಾರ ಉತ್ತಮವಾಗಿ ಮಳೆಯಾಗಿದೆ. ಕೆಲವು ರಸ್ತೆಗಳಲ್ಲಿ ಮಳೆ ನೀರು ನಿಂತು ವಾಹನ ಸಂಚಾರಕ್ಕೆ ತೊಡಕಾಯಿತು. ಇನ್ನು ಕೆಲವೆಡೆ ಮರದ ಕೊಂಬೆ ಬಿದ್ದು ಸಂಚಾರ ವ್ಯತ್ಯಯವಾಯಿತು.

ಕಾರ್ತಿಕ್ ನಗರದ ರಸ್ತೆಯಲ್ಲಿ ಮರ ಬಿದ್ದ ಕಾರಣ ಕೆ.ಆರ್. ಪುರ ಕಡೆಗೆ ಕೆಲಹೊತ್ತು ಸಂಚಾರ ಸ್ಥಗಿತಗೊಂಡಿತು. ಮರ ತೆರವುಗೊಳಿಸಿದ ಬಳಿಕ ವಾಹನ ಸಂಚಾರ ಆರಂಭವಾಯಿತು. ಎಂ.ಎಸ್. ಪಾಳ್ಯ ಜಂಕ್ಷನ್ ಬಳಿ ರಸ್ತೆಯಲ್ಲಿ ಮರದ ಕೊಂಬೆ ಬಿದ್ದ ಕಾರಣ ಯಲಹಂಕ ಕಡೆಗೆ ಸಾಗುವ ವಾಹನಗಳಿಗೆ ತೊಂದರೆ ಉಂಟಾಯಿತು.

ಮಾರತಹಳ್ಳಿ ಪೊಲೀಸ್ ಠಾಣಾ ಸರ್ವೀಸ್ ರಸ್ತೆಯಲ್ಲಿ ನೀರು ನಿಂತಿದ್ದರಿಂದ ಕಾಡುಬೀಸನಹಳ್ಳಿ ಕಡೆಗೆ ಹೋಗುವ ವಾಹನಗಳು ನಿಧಾನವಾಗಿ ಸಂಚರಿಸಿದವು. ಹೆಬ್ಬಾಳ ಸರ್ಕಲ್ ಬಳಿ ನೀರು ನಿಂತು ಸಮಸ್ಯೆ ಉಂಟಾಯಿತು. ಎಸ್ಟಿಮ್ ಮಾಲ್ ಬಳಿ ನೀರು ನಿಂತಿದ್ದರಿಂದ ಹೆಬ್ಬಾಳ ಸರ್ಕಲ್ ಕಡೆಗೆ ಹೋಗುವ ವಾಹನಗಳ ಸವಾರರು ತೊಂದರೆ ಅನುಭವಿಸಿದರು.

ಮಳೆ ವಿವರ: ವಿದ್ಯಾಪೀಠ 1.3 ಸೆಂ.ಮೀ., ಕೆಂಗೇರಿ 1.2 ಸೆಂ.ಮೀ., ಅರಕೆರೆ 1 ಸೆಂ.ಮೀ., ರಾಜರಾಜೇಶ್ವರಿ ನಗರ 1 ಸೆಂ.ಮೀ., ಪುಟ್ಟೇನಹಳ್ಳಿ 1 ಸೆಂ.ಮೀ., ನಾಯಂಡಹಳ್ಳಿಯಲ್ಲಿ 1 ಸೆಂ.ಮೀ. ಮಳೆ ದಾಖಲಾಗಿದೆ.





1. ನಗರದ ಎಂ.ಎಸ್.ಪಾಳ್ಯದಲ್ಲಿ ಮರದ ಕೊಂಬೆ ಮುರಿದು ರಸ್ತೆಗೆ ಅಡ್ಡಲಾಗಿ ಬಿದ್ದಿದ್ದರಿಂದ ವಾಹನ ಸಂಚಾರಕ್ಕೆ ತೊಡಕುಂಟಾಯಿತು 2. ಮಾರತಹಳ್ಳಿಯಲ್ಲಿ ರಸ್ತೆಯಲ್ಲಿ ನೀರು ನಿಂತು ಕಾಲುವೆಯಂತಾಗಿತ್ತು

2ಎ ಮೀಸಲಾತಿ; ವಕೀಲರ ಸಭೆ 23ಕ್ಕೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಹಾಗೂ ಎಲ್ಲ ಲಿಂಗಾಯತ ಉಪಪಂಗಡಗಳಿಗೆ ಕೇಂದ್ರ ಸರ್ಕಾರದ ಒಬಿಸಿ ಮೀಸಲಾತಿಗಾಗಿ ಕಾನೂನಾತ್ಮಕ ಹೋರಾಟ ನಡೆಸಲು ಬೆಂಗಳೂರಿನಲ್ಲಿ ಜುಲೈ 23ರಂದು ಸಮಾಜದ ವಕೀಲರ ರಾಜ್ಯಮಟ್ಟದ ಸಭೆ ಕರೆಯಲಾಗಿದೆ' ಎಂದು ಕೂಡಲಸಂಗಮದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

'ಮೀಸಲಾತಿಗಾಗಿ ಈಗ ಐದನೇ ಹಂತದ ಪತ್ರ ಚಳವಳಿ ನಡೆದಿದೆ. ಮುಂದಿನ ಹಂತದಲ್ಲಿ ಕಾನೂನು ಹೋರಾಟಕ್ಕೆ ಸಮಾಜದ ಹಿರಿಯ ವಕೀಲರ ತಂಡ ರಚಿಸಲಾಗುವುದು. ಶಾಶ್ವತ ಹಿಂದುಳಿದ ವರ್ಗಗಳ ಆಯೋಗ, ಮುಖ್ಯಮಂತ್ರಿ, ಕಾನೂನು ಸಚಿವರಿಗೆ ಮನವಿ ಸಲ್ಲಿಸಲಾಗುವುದು. ಅಲ್ಲದೆ, ಜಿಲ್ಲಾ, ತಾಲ್ಲೂಕು ಮಟ್ಟದಲ್ಲಿ ವಕೀಲರ ಸಂಘದ ಮೂಲಕ ಹೋರಾಟ ನಡೆಸಲಾಗುವುದು' ಎಂದು ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ವಿವಿಧ ಪಕ್ಷಗಳಲ್ಲಿ ಲಿಂಗಾಯತ ಪಂಚಮಸಾಲಿ ಸಮಾಜದ 20 ಶಾಸಕರಿದ್ದಾರೆ. ಎಲ್ಲರೂ ಈ ಅಧಿವೇಶನದಲ್ಲಿ ಮೀಸಲಾತಿಗಾಗಿ ಧ್ವನಿ ಎತ್ತಬೇಕು. ಆ ಮೂಲಕ ಸಮಾಜದ ಋಣ ತೀರಿಸಬೇಕು. ಸಮಾಜದ ಶಾಸಕರು ಗೆಲ್ಲಲು ಮೀಸಲಾತಿ ಹೋರಾಟವೂ ಕಾರಣ' ಎಂದು ಹೇಳಿದರು.

ಪಿಎಂ ಸ್ವನಿಧಿ ಯೋಜನೆ: ಬಿಬಿಎಂಪಿಗೆ ಎರಡನೇ ಸ್ಥಾನ



ಪಿಎಂ ಸ್ವನಿಧಿ ಯೋಜನೆಯ 'ಹಣಕಾಸು ಸೇರ್ಪಡೆ ಮತ್ತು ಬೀದಿ ವ್ಯಾಪಾರಿಗಳ ಸಬಲೀಕರಣ ಪ್ರವೇಶಕ್ಕಾಗಿ ಕಾರ್ಯಕ್ಷಮತೆ ಗುರುತಿಸುವಿಕೆ' ಕಾರ್ಯಕ್ರಮದಲ್ಲಿ 'ಮೆಗಾ ಮತ್ತು ಮಿಲಿಯನ್ ಪ್ಲಸ್ ನಗರಗಳಡಿ' ದ್ವಿತೀಯ ಪ್ರಶಸ್ತಿಯನ್ನು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸ್ವೀಕರಿಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಂ ಸ್ವನಿಧಿ ಯೋಜನೆಯ 'ಹಣಕಾಸು ಸೇರ್ಪಡೆ ಮತ್ತು ಬೀದಿ ವ್ಯಾಪಾರಿಗಳ ಸಬಲೀಕರಣ ಪ್ರವೇಶಕ್ಕಾಗಿ ಕಾರ್ಯಕ್ಷಮತೆ ಗುರುತಿಸುವಿಕೆ' ಕಾರ್ಯಕ್ರಮದಲ್ಲಿ ದೇಶದ 'ಮೆಗಾ ಮತ್ತು ಮಿಲಿಯನ್ ಪ್ಲಸ್ ನಗರಗಳಡಿ' ಬಿಬಿಎಂಪಿ ಎರಡನೇ ರ‍್ಯಾಂಕ್ ಗಳಿಸಿದೆ.

ದೆಹಲಿಯ 'ಇಂಡಿಯಾ ಹ್ಯಾಬಿಟೇಟ್ ಸೆಂಟರ್'ನಲ್ಲಿ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಮನೋಹರ್ ಲಾಲ್ ಅವರು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ, ದೀನ್ ದಯಾಳ್ ಅಂತ್ಯೋದಯ ಯೋಜನೆ - ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ ವತಿಯಿಂದ ಪ್ರಧಾನ ಮಂತ್ರಿ ಬೀದಿ ವ್ಯಾಪಾರಿಗಳ ಆತ್ಮ ನಿರ್ಭರ್ ನಿಧಿ(ಪಿಎಂ ಸ್ವನಿಧಿ) ಯೋಜನೆಯನ್ನು ಜಾರಿಗೆ ತರಲಾಗಿದೆ. ಅದರಡಿ ಬೀದಿ ಬದಿ ವ್ಯಾಪಾರಿಗಳನ್ನು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ನೆರವಾಗುವ ಉದ್ದೇಶದಿಂದ ಕಿರು ಸಾಲಗಳನ್ನು ನೀಡಲಾಗುತ್ತದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ 2,04,173 ಅರ್ಜಿಗಳು ಬಂದಿದ್ದು, 1,64,276 ಅರ್ಜಿಗಳಿಗೆ ಮಂಜೂರಾತಿ ನೀಡಲಾಗಿದೆ. 1,28,844 ಫಲಾನುಭವಿಗಳು ಸಾಲ ಪಡೆದಿದ್ದಾರೆ. ₹ 199.94 ಕೋಟಿ ಸಾಲ ಮಂಜೂರಾಗಿದ್ದು, ₹ 184.36 ಕೋಟಿ ವಿತರಣೆಯಾಗಿದೆ. ಈ ಕ್ರಮಗಳಿಗಾಗಿ ಬಿಬಿಎಂಪಿ ಪ್ರಶಸ್ತಿ ಪಡೆಯಿತು.

ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ರಾಜ್ಯ ಸಚಿವ ತೋಹಾನ್ ಸಾಹು, ಬಿಬಿಎಂಪಿ ಕಲ್ಯಾಣ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್, ಪಿಎಂ ಸ್ವನಿಧಿಯ ಸಮುದಾಯ ಸಂಘಟಕ ಜನಾರ್ದನಾಚಾರ್ ಹಾಜರಿದ್ದರು.

ಪುಟ್ಟೇನಹಳ್ಳಿ ಠಾಣೆಯಲ್ಲಿ ಕರ್ತವ್ಯದ ಅವಧಿಯಲ್ಲೇ ಪರಸ್ಪರ ಕಿತ್ತಾಟ • ಶಿಸ್ತು ಕ್ರಮ

ಎಎಸ್‌ಐ, ಹೆಡ್‌ಕಾನ್‌ಸ್ಟೆಬಲ್ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ಪರಸ್ಪರ ಕಿತ್ತಾಡಿಕೊಂಡಿದ್ದ ಎಎಸ್‌ಐ ಹಾಗೂ ಹೆಡ್‌ಕಾನ್‌ಸ್ಟೆಬಲ್ ಅವರನ್ನು ಅಮಾನತು ಮಾಡಿ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಗುರುವಾರ ಆದೇಶ ಹೊರಡಿಸಿದ್ದಾರೆ.

ಸಹಾಯಕ ಸಬ್‌ಇನ್‌ಸ್ಪೆಕ್ಟರ್ ಮಂಜುನಾಥ್ ಹಾಗೂ ಹೆಡ್ ಕಾನ್‌ಸ್ಟೆಬಲ್ ಅಂಜನಮೂರ್ತಿ ಅಮಾನತುಗೊಂಡ ಸಿಬ್ಬಂದಿ. ಪ್ರಾಥಮಿಕ ವಿಚಾರಣೆ ವೇಳೆ ಇಬ್ಬರೂ ತಪ್ಪು ಎಸಗಿರುವುದು ಸಾಬೀತಾಗಿದ್ದು ಇಲಾಖೆ ವಿಚಾರಣೆ ಕಾಯ್ದಿರಿಸಿ ಅಮಾನತು ಮಾಡಲಾಗಿದೆ.

ಜುಲೈ 16ರಂದು ಠಾಣೆಯಲ್ಲಿ ಕರ್ತವ್ಯದ ಅವಧಿಯಲ್ಲಿ ಇಬ್ಬರು ಪರಸ್ಪರ ಕಿತ್ತಾಡಿಕೊಂಡಿದ್ದರು. ಅವಾಚ್ಯ ಶಬ್ದಗಳಿಂದ ನಿಂದಿಸಿಕೊಂಡಿದ್ದರು.

ಇಬ್ಬರ ವಿರುದ್ಧ ಕ್ರಮ ಕೈಗೊಳ್ಳುವಂತೆ ಡಿಸಿಪಿ ಅವರಿಗೆ ವಿಸ್ತೃತ ವರದಿ ಸಲ್ಲಿಸಲಾಗಿತ್ತು. ಅವರು ವಿಚಾರಣೆ ನಡೆಸಿ ನಗರ ಪೊಲೀಸ್ ಕಮಿಷನರ್‌ಗೆ ವರದಿ ಸಲ್ಲಿಸಿದ್ದರು. ಅದನ್ನು ಆಧರಿಸಿ ಅಮಾನತು ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಹೊಯ್ಸಳ ಸಿಬ್ಬಂದಿ ವಿರುದ್ಧ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಕ್‌ನಿಂದ ಬಿದ್ದು ಗಾಯಗೊಂಡಿದ್ದ ವಿದ್ಯಾರ್ಥಿಯನ್ನು ಆಸ್ಪತ್ರೆಗೆ ಕರೆದೊಯ್ಯಲು ನಿರಾಕರಿಸಿದ ಹೊಯ್ಸಳ ಸಿಬ್ಬಂದಿ ವಿರುದ್ಧ ವಿಚಾರಣೆಗೆ ಉತ್ತರ ವಿಭಾಗದ ಡಿಸಿಪಿ ಸೈದುಲ್ಲಾ ಅದಾವತ್ ಆದೇಶಿಸಿದ್ದಾರೆ.

ಕಾನೂನು ಕಾಲೇಜೊಂದರ ವಿದ್ಯಾರ್ಥಿ ರಾಹುಲ್ ಗೌಡ ಅವರು ಸ್ನೇಹಿತರ ಮನೆಯಿಂದ ಸೋಮವಾರ ರಾತ್ರಿ ಬೈಕ್‌ನಲ್ಲಿ ವಾಪಸ್ ಬರುವ ವೇಳೆ ಯಶವಂತಪುರದ ತ್ರಿವೇಣಿ ರಸ್ತೆಯಲ್ಲಿ ಹಂಪ್ಸ್ ಬಳಿ ನಿಯಂತ್ರಣ ತಪ್ಪಿ ಕೆಳಗೆ ಬಿದ್ದಿದ್ದಾರೆ. ರಸ್ತೆ ಮಧ್ಯೆ ರಾಹುಲ್ ರಕ್ತಸ್ರಾವದಿಂದ ಬಳಲುತ್ತಿರುವುದನ್ನು ಗಮನಿಸಿದ ಸ್ಥಳೀಯರು, ಹೊಯ್ಸಳ



ವಾಹನ ಹಾಗೂ ಆಂಬುಲೆನ್ಸ್‌ಗೆ ಕರೆ ಮಾಡಿದ್ದಾರೆ. ಆಂಬುಲೆನ್ಸ್ ಬರುವುದು ಸ್ವಲ್ಪ ತಡವಾಗಿದೆ.

ಅಷ್ಟರಲ್ಲಿ ಘಟನಾ ಸ್ಥಳಕ್ಕೆ ಬಂದಿದ್ದ ಹೊಯ್ಸಳ ವಾಹನ ಸಿಬ್ಬಂದಿ ರಾಹುಲ್ ಅವರನ್ನು ತಮ್ಮ ವಾಹನದಲ್ಲಿ ಆಸ್ಪತ್ರೆಗೆ ಕರೆದೊಯ್ಯಲು ನಿರಾಕರಿಸಿದ್ದಾರೆ. ಸ್ಥಳೀಯರು ಎಷ್ಟೇ ಮನವಿ ಮಾಡಿದರೂ ಒಪ್ಪಲಿಲ್ಲ. ಕೊನೆಗೆ ಸಾರ್ವಜನಿಕರೊಬ್ಬರ ಕಾರಿನಲ್ಲಿ ಕರೆದೊಯ್ದು ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಯಶವಂತಪುರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಮಾನವೀಯತೆ ದೃಷ್ಟಿಯಿಂದ ಪೊಲೀಸ್ ಸಿಬ್ಬಂದಿ ಗಾಯಾಳುವನ್ನು ಆಸ್ಪತ್ರೆಗೆ ದಾಖಲಿಸಬೇಕಾಗಿತ್ತು. ಘಟನೆ ಕುರಿತು ಹೊಯ್ಸಳ ವಾಹನ ಸಿಬ್ಬಂದಿ ವಿರುದ್ಧ ವಿಚಾರಣೆಗೆ ಆದೇಶಿಸಲಾಗಿದೆ. ವರದಿ ಬಂದ ಬಳಿಕ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಆಸ್ಪತ್ರೆಯಲ್ಲಿ ವಿದ್ಯಾರ್ಥಿ ಚೇತರಿಸಿಕೊಳ್ಳುತ್ತಿದ್ದಾರೆ. ಅಪಘಾತ ಸಂಭವಿಸಿದ ಸಂದರ್ಭದಲ್ಲಿ ವಿದ್ಯಾರ್ಥಿ ಹೆಲ್ಮೆಟ್ ಧರಿಸಿರಲಿಲ್ಲ. ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು’ ಎಂದು ಡಿಸಿಪಿ ಸೈದುಲ್ಲಾ ತಿಳಿಸಿದರು.

ನಕಲಿ ದಾಖಲೆ ಸೃಷ್ಟಿಸಿ ಸಾಲ ಪಡೆದಿದ್ದ ಮೂವರ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ನಕಲಿ ದಾಖಲೆ ಸೃಷ್ಟಿಸಿ ಬ್ಯಾಂಕ್‌ನಿಂದ ₹2.32 ಕೋಟಿ ಸಾಲ ಪಡೆದಿದ್ದ ಮೂವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಸೈಯದ್ ಹಾಶಿಂ, ಶಿವಣ್ಣ, ರಂಗನಾಥ ಬಂಧಿತರು. ಇದೇ ಪ್ರಕರಣದಲ್ಲಿ ಇನ್ನೂ ಇಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದು, ಅವರಿಗಾಗಿ ಶೋಧ ಮುಂದುವರೆದಿದೆ ಎಂದು ಸಿಸಿಬಿ ಪೊಲೀಸರು ಹೇಳಿದರು.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ (ಎಸ್‌ಬಿಐ) ಬೆಂಗಳೂರು ಕೇಂದ್ರ ಶಾಖೆಯ ಸಹಾಯಕ ಪ್ರಧಾನ ವ್ಯವಸ್ಥಾಪಕ ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ನಿವೇಶನ ಖರೀದಿಸುವ ಸೋಗಿನಲ್ಲಿ ಆರೋಪಿಗಳು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಬೆಂಗಳೂರು ಕೇಂದ್ರ ಶಾಖೆಯ (ಬೌರಿಂಗ್ ಆಸ್ಪತ್ರೆ ಎದುರು) ಬ್ಯಾಂಕ್‌ಗೆ ನಕಲಿ ದಾಖಲೆ ಸಲ್ಲಿಸಿ ಸಾಲ ಪಡೆದಿದ್ದರು.

ಬೆಂಗಳೂರು ಉತ್ತರ ತಾಲ್ಲೂಕಿನ ಮಲ್ಲತ್ತಹಳ್ಳಿ ಗ್ರಾಮದಲ್ಲಿ ಶಿವಣ್ಣ ಅವರಿಗೆ ಸೇರಿದ ನಿವೇಶನ ಖರೀದಿಸಲು ಸಾಲಕ್ಕಾಗಿ ಬ್ಯಾಂಕ್‌ಗೆ ಅಚ್ಚುಕುಟ್ಟನ್ ಅವರು ಅರ್ಜಿ ಸಲ್ಲಿಸಿದ್ದರು. 2023ರ ಜನವರಿಯಲ್ಲಿ ₹1.16 ಕೋಟಿ ಸಾಲ ಮಂಜೂರು ಆಗಿತ್ತು. ಸಾಲ ಮರುಪಾವತಿ ಮಾಡದಿದ್ದಾಗ ಬ್ಯಾಂಕ್‌ನಿಂದ ಅಚ್ಚುಕುಟ್ಟನ್ ಅವರಿಗೆ ನೋಟಿಸ್ ಜಾರಿ ಮಾಡಲಾಗಿತ್ತು. ನೋಟಿಸ್ ಸ್ವೀಕೃತಿಯಾಗದೆ ವಾಪಸ್ ಬಂದಿತ್ತು. ಅದಾದ ಮೇಲೆ ಬ್ಯಾಂಕ್ ಅಧಿಕಾರಿಗಳು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದಾಗ ನಿವೇಶನ ಬೇರೆಯವರ ಹೆಸರಿನಲ್ಲಿ ಇರುವುದು ಪತ್ತೆಯಾಗಿದೆ. ‘ಇದೇ ರೀತಿ ಆರೋಪಿ ಮೊಹಮ್ಮದ್ ಫಯಾಜ್ ಎಂಬುವವರೂ ಶಿವಣ್ಣ ಅವರಿಗೆ ಸೇರಿದ ನಿವೇಶನ ಖರೀದಿಸಲು ಸಾಲಕ್ಕಾಗಿ ಅರ್ಜಿ ಸಲ್ಲಿಸಿ ₹1.16 ಕೋಟಿ ಸಾಲ ಪಡೆದುಕೊಂಡಿದ್ದರು. ಅವರಿಗೂ ನೋಟಿಸ್ ನೀಡಿದ್ದು ಸ್ವೀಕೃತವಾಗದೇ ವಾಪಸ್ ಬಂದಿತ್ತು. ಅವರೂ ನಕಲಿ ದಾಖಲೆ ಸೃಷ್ಟಿಸಿ ಸಾಲ ಪಡೆದಿದ್ದರು’ ಎಂದು ತನಿಖಾಧಿಕಾರಿಗಳು ಹೇಳಿದರು.



ತ್ಯಾಜ್ಯ

ನಗರದ ಪಂಪ ಮಹಾಕವಿ ರಸ್ತೆಯಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ ಬಳಿ ರಸ್ತೆಯಲ್ಲಿ ತ್ಯಾಜ್ಯ ಬಿದ್ದಿರುವುದು ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಯುವಕನ ವಿರುದ್ಧದ ಪ್ರಕರಣ ರದ್ದುಗೊಳಿಸಿದ ಹೈಕೋರ್ಟ್

‘ಒಪ್ಪಿತ ಮಿಲನ ಅತ್ಯಾಚಾರವಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರೀತಿಯ ಕೊಳದಲ್ಲಿ ಈಜಾಡಿದ ಯುವಕ-ಯುವತಿ ಮಧ್ಯದ ಒಪ್ಪಿತ ದೈಹಿಕ ಸಂಬಂಧದಲ್ಲಿ; ಯಾರಾದರೂ ಒಬ್ಬರು ಅತ್ಯಾಚಾರದ ಆರೋಪ ಹೊರಿಸಿ ಸಿಡಿದು ನಿಂತರೆ ಅದನ್ನು ಅತ್ಯಾಚಾರ ಎಂದು ಪರಿಗಣಿಸಲು ಆಗದು’ ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಪುನರುಚ್ಚರಿಸಿದೆ.

ಈ ಸಂಬಂಧ ನಗರದ ಯುವಕನೊಬ್ಬ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ಪುರಸ್ಕರಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ಅರ್ಜಿದಾರ ಯುವಕನ ವಿರುದ್ಧದ ವಂಚನೆ, ಅತ್ಯಾಚಾರ ಎಸಗಿದ, ಮದುವೆಯಾಗುವುದಾಗಿ ಸುಳ್ಳು ಭರವಸೆ ನೀಡಿದ ಮತ್ತು ಜೀವ ಬೆದರಿಕೆ ಹಾಕಿದ ಆರೋಪಗಳಡಿ ದಾಖಲಾಗಿದ್ದ ದೂರು ಹಾಗೂ ಅದಕ್ಕೆ ಸಂಬಂಧಿಸಿದ ಸೆಷನ್ಸ್ ನ್ಯಾಯಾಲಯದ ವಿಚಾರಣೆಯನ್ನು ರದ್ದುಪಡಿಸಿದೆ.

‘ಅರ್ಜಿದಾರ ಯುವಕ ಹಾಗೂ ದೂರು ದಾಖಲಿಸಿರುವ ಯುವತಿ



ಇಬ್ಬರೂ ಪ್ರೀತಿಯ ಪರಾಕಾಷ್ಠೆಯಲ್ಲಿ ಆರು ವರ್ಷಗಳ ಕಾಲ ಯೌವ್ವನದ ಸುಖವುಂಡಿದ್ದಾರೆ. ಆದರೆ, ಕ್ರಮೇಣವಾಗಿ ಪ್ರೀತಿ ದುರ್ಬಲಗೊಂಡ ಪರಿಣಾಮ ಯುವತಿಯು, ಯುವಕನ ವಿರುದ್ಧ ಅತ್ಯಾಚಾರ ಹಾಗೂ ವಂಚನೆಯ ದೂರು ದಾಖಲಿಸಿದ್ದಾರೆ. ಪ್ರೀತಿಯ ಗತಿ ಕ್ಷೀಣಗೊಂಡಿದೆ ಎಂದ ಮಾತ್ರಕ್ಕೆ ಸುಂದರ ಸಮಯಕ್ಕೆ ಸಾಕ್ಷಿಯಾದ ಒಪ್ಪಿತ ದೈಹಿಕ ಸಂಬಂಧವನ್ನು ಅತ್ಯಾಚಾರ ಎಂದು ಪರಿಗಣಿಸಲು ಆಗದು’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪ್ರಕರಣವೇನು?: ‘ದೂರು ನೀಡಿದ್ದ ಯುವತಿ ತನ್ನ ಮೊಬೈಲ್‌ನ ಸಿಮ್ ಕಾರ್ಡ್‌ಗೆ ರೀ-ಚಾರ್ಜ್ ಮಾಡಿಸಲು 2012ರಲ್ಲಿ ಆಗಾಗ್ಗೆ ಯುವಕನ ಮೊಬೈಲ್ ಅಂಗಡಿಗೆ ಭೇಟಿ ನೀಡುತ್ತಿದ್ದರು. ಈ ಸಮಯದಲ್ಲಿ ಇಬ್ಬರ ಮಧ್ಯೆ ಪ್ರೀತಿಯ ಕುಡಿಯೊಡೆದಿತ್ತು. ಆರು ವರ್ಷಗಳ ಕಾಲ ಪ್ರೀತಿಯ ಬುತ್ತಿಯನ್ನು ಬಿಚ್ಚಿಕೊಂಡಿದ್ದ ಇಬ್ಬರೂ ಹಲವು ಬಾರಿ ದೈಹಿಕವಾಗಿ ಪರಸ್ಪರ ಒಪ್ಪಿಗೆಯ ಮೇರೆಗೆ ಲೈಂಗಿಕ ತೃಪ್ತಿ ಹೊಂದಿದ್ದರು. ಆದರೆ, ಯುವಕ 2018ರ ಏಪ್ರಿಲ್‌ನಿಂದ ನನ್ನನ್ನು ನಿರ್ಲಕ್ಷಿಸಲು ಆರಂಭಿಸಿದ’ ಎಂದು ದೋಷಾರೋಪ ಪಟ್ಟಿಯಲ್ಲಿ ವಿವರಿಸಲಾಗಿತ್ತು.

‘ಆರೋಪಿ ಯುವಕ 2018ರ ಏಪ್ರಿಲ್ 7ರಂದು ಕೊನೆಯ ಬಾರಿಗೆ ನನ್ನೊಂದಿಗೆ ಸಂಭೋಗ ನಡೆಸಿದ್ದ. ನಂತರ ಮೊಬೈಲ್ ಕರೆ ಸ್ವೀಕರಿಸದೆ ನಿರ್ಲಕ್ಷಿಸಲು ಆರಂಭಿಸಿದ. ಕಾರಣ ಕೇಳಲು ಮೊಬೈಲ್ ಶಾಪ್‌ಗೆ ಹೋದರೆ ನನ್ನ ಮೇಲೆ ಹಲ್ಲೆ ನಡೆಸಿದ್ದಾನೆ. ಅವನಿಗೆ ಬೇರೊಬ್ಬ ಯುವತಿಯ ಜೊತೆ ವಿವಾಹ ನಿಶ್ಚಯವಾಗಿರುವುದು ನನಗೆ ನಂತರ ತಿಳಿಯಿತು’ ಎಂದು ಯುವತಿ 2018ರ ಜುಲೈ 3ರಂದು ಯುವಕನ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ತನಿಖೆ ನಡೆಸಿದ್ದ ಪೊಲೀಸರು ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಚಿನ್ನಾಭರಣ ಕಳವು: ರೈಲ್ವೆ ಸ್ವಚ್ಛತಾ ಸಿಬ್ಬಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲ್ವೆ ಪ್ರಯಾಣಿಕರ ಚಿನ್ನಾಭರಣ, ಮೊಬೈಲ್ ಹಾಗೂ ಟ್ಯಾಬ್ ಕಳವು ಮಾಡುತ್ತಿದ್ದ ಇಬ್ಬರು ರೈಲ್ವೆ ಸ್ವಚ್ಛತಾ ಸಿಬ್ಬಂದಿಯನ್ನು ರೈಲ್ವೆ ಪೊಲೀಸರು ಬಂಧಿಸಿದ್ದಾರೆ.

ಯಶವಂತಪುರದ ಬಿ.ಕೆ ನಗರದ ಏಳನೇ ಕ್ರಾಸ್‌ನ ನಿವಾಸಿ ಸೈಯದ್ ಜಬಿ ಹಾಗೂ ಯಶವಂತಪುರ ಬಿ.ಕೆ ಕ್ರಾಸ್‌ನ ಯಲ್ಲಮ್ಮ ದೇವಸ್ಥಾನದ ಬಳಿಯ ನಿವಾಸಿ ವಿಜಯ್ ಕುಮಾರ್ ಬಂಧಿತರು.

‘ಸೈಯದ್ ಜಬಿ ಅವರ ಸ್ವಂತ ಊರು ಮೈಸೂರಿನ ಬಿಡಿ ಕಾಲೊನಿ. ವಿಜಯ್‌ಕುಮಾರ್ ಅವರದ್ದು ಬಿಹಾರ ರಾಜ್ಯದ ವೈಶಾಲಿ ಜಿಲ್ಲೆಯ ಕತೋನಿಯಾ ಗ್ರಾಮ. ಇಬ್ಬರೂ ಕಳೆದ 5 ವರ್ಷಗಳಿಂದ ಗುತ್ತಿಗೆ ಆಧಾರದಲ್ಲಿ ರೈಲ್ವೆ ಸ್ವಚ್ಛತಾ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು’ ಎಂದು ರೈಲ್ವೆ ಪೊಲೀಸರು ಹೇಳಿದರು.

‘ಬಂಧಿತರಿಂದ ₹21 ಲಕ್ಷ ಮೌಲ್ಯದ ವಿವಿಧ ಕಂಪನಿಯ 49 ಮೊಬೈಲ್‌ಗಳು, ಮೂರು ಟ್ಯಾಬ್, 153 ಗ್ರಾಂ ಚಿನ್ನಾಭರಣ, 825 ಗ್ರಾಂ ಬೆಳ್ಳಿ ಸಾಮಗ್ರಿ, ₹1.50 ಲಕ್ಷ ನಗದು ಜಪ್ತಿ ಮಾಡಲಾಗಿದೆ. ಆರೋಪಿಗಳನ್ನು ಬಂಧಿಸಿ ವಿಚಾರಣೆ ನಡೆಸಲಾಗಿತ್ತು. ಇವರ ಬಂಧನದಿಂದ ಏಳು ಪ್ರಕರಣಗಳು ಪತ್ತೆಯಾಗಿವೆ. ಇಬ್ಬರನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ಆರೋಪಿಗಳಿಬ್ಬರು ಯಶವಂತಪುರ ನಿಲ್ದಾಣದಲ್ಲಿ ಮುಂಜಾನೆ ಬರುತ್ತಿದ್ದ ರೈಲುಗಳನ್ನು ಸ್ವಚ್ಛಗೊಳಿಸುವ ಹಾಗೂ ನೀರು ತುಂಬಿಸುವ ಕೆಲಸ ಮಾಡುತ್ತಿದ್ದರು. ನಿದ್ರೆಯಲ್ಲಿರುತ್ತಿದ್ದ ಪ್ರಯಾಣಿಕರ ನಗದು, ಚಿನ್ನಾಭರಣ ದೋಚುತ್ತಿದ್ದರು’ ಎಂದು ರೈಲ್ವೆ ವಿಭಾಗದ ಪೊಲೀಸರು ತಿಳಿಸಿದ್ದಾರೆ.

ವಿದ್ಯಾರ್ಥಿನಿಯರ ಎದುರು ಪುಂಡರ ಅಸಭ್ಯ ವರ್ತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಎಲ್ ಬಳಿ ಮದ್ಯದ ನಶೆಯಲ್ಲಿ ಪುಂಡರ ಗುಂಪೊಂದು ಪಾದಚಾರಿ ಮಾರ್ಗದ ಮೇಲೆ ಕಾರು ಹತ್ತಿಸಿ, ಶಾಲಾ ವಿದ್ಯಾರ್ಥಿನಿಯರ ಜತೆಗೆ ಅಸಭ್ಯ ವರ್ತನೆ ತೋರಿದೆ.

ಎಚ್‌ಎಎಲ್‌ನ ಖಾಸಗಿ ಶಾಲೆಯೊಂದರ ಸಮೀಪದ ರಸ್ತೆಯಲ್ಲಿ ಇನ್ನೋವಾ ಕಾರಿನಲ್ಲಿ ಯುವಕರು ಬಂದಿದ್ದರು. ಇದೇ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ವಿದ್ಯಾರ್ಥಿನಿಯರ ಬಳಿ ಕಾರನ್ನು ನಿಲ್ಲಿಸಿದ್ದರು. ನಂತರ, ವಿದ್ಯಾರ್ಥಿನಿಯರೊಂದಿಗೆ ಅಸಭ್ಯವಾಗಿ ವರ್ತಿಸಿದ್ದಾರೆ ಎನ್ನಲಾಗಿದೆ.

ಇದನ್ನು ಪ್ರಶ್ನಿಸಿದ್ದ ಸ್ಥಳೀಯರ ಮೇಲೆ ಮೂವರು ಯುವಕರು ಹಲ್ಲೆ ನಡೆಸಿದ್ದಾರೆ. ನಂತರ, ವಿದ್ಯಾರ್ಥಿನಿಯರಿಗೆ ಹೆದರಿಸಲು ಯತ್ನಿಸಿದ್ದರು. ಸ್ಥಳೀಯರು ಪೊಲೀಸ್ ಸಹಾಯವಾಣಿಗೆ ಮಾಹಿತಿ ನೀಡಿದ್ದರು. ಕೂಡಲೇ ಸ್ಥಳಕ್ಕೆ ಪೊಲೀಸ್ ವಾಹನ ಬಂದಿದ್ದು, ಅಷ್ಟರಲ್ಲಿ ಪುಂಡರ ಗುಂಪು ಅಲ್ಲಿಂದ ತೆರಳಿತ್ತು ಎಂದು ಮೂಲಗಳು ತಿಳಿಸಿವೆ.



ಮೃತಪಟ್ಟಿರುವ ಮೇಕೆಗಳು

ನಿಯಂತ್ರಣ ತಪ್ಪಿ ಉರುಳಿ ಬಿದ್ದ ವಾಹನ: 18 ಮೇಕೆ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈಸ್ ರಸ್ತೆ ಗ್ರಾಯತ್ರಿ ಕ್ರಷರ್ ಬಳಿ ಬೊಲೆರೊ ವಾಹನವೊಂದು ನಿಯಂತ್ರಣ ತಪ್ಪಿ ರಸ್ತೆಬದಿಗೆ ಉರುಳಿ ಬಿದ್ದ ಪರಿಣಾಮ, ವಾಹನದಲ್ಲಿದ್ದ 18 ಮೇಕೆಗಳು ಸ್ಥಳದಲ್ಲೇ ಮೃತಪಟ್ಟಿವೆ. ಗುರುವಾರ ಮಧ್ಯಾಹ್ನ 1 ಗಂಟೆ ಸುಮಾರಿಗೆ ಈ ಅಪಘಾತ ಸಂಭವಿಸಿದೆ.

ಶಿವಾನಂದ ಅವರು ವಿಜಯಪುರದಿಂದ ತಮಿಳುನಾಡಿನ ಸೇಲಂಗೆ 40 ಮೇಕೆಗಳನ್ನು ಬೊಲೆರೊ ವಾಹನದಲ್ಲಿ ಕೊಂಡೊಯ್ಯುತ್ತಿದ್ದರು. ನೈಸ್ ರಸ್ತೆಯ ತಿರುವಿನಲ್ಲಿ ವೇಗವಾಗಿ ಚಲಿಸುತ್ತಿದ್ದ ವಾಹನ ಉರುಳಿ ಬಿದ್ದಿದೆ. ಅದರಲ್ಲಿ 22 ಮೇಕೆಗಳು ಬದುಕುಳಿದಿವೆ. ಚಾಲಕ ಅಪಾಯದಿಂದ ಪಾರಾಗಿದ್ದಾರೆ. ನಿಗದಿಗಿಂತ ಹೆಚ್ಚಿನ ಭಾರ ತುಂಬಿದ್ದರಿಂದ ವಾಹನ ಉರುಳಿ ಬಿದ್ದಿದೆ. ಚಾಲಕ ವಿರುದ್ಧ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಎಲ್‌ಇಡಿ ದೀಪ: 192 ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಖರ ಬೆಳಕು ಹೊರ ಹಾಕುವ ಎಲ್‌ಇಡಿ ದೀಪಗಳನ್ನು ಅಳವಡಿಸಿಕೊಂಡಿದ್ದ 192 ವಾಹನ ಸವಾರರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಪೂರ್ವ ಸಂಚಾರ ವಿಭಾಗದ ವ್ಯಾಪ್ತಿಯಲ್ಲಿ ಮಂಗಳವಾರ ಮತ್ತು ಬುಧವಾರ ಕಾರ್ಯಾಚರಣೆ ನಡೆಸಿದ ಪೊಲೀಸರು, 427 ವಾಹನಗಳ ತಪಾಸಣೆ ನಡೆಸಿದರು. ನಿಯಮ ಉಲ್ಲಂಘಿಸಿದ 192 ಮಂದಿ ವಿರುದ್ಧ ಪ್ರಕರಣ ದಾಖಲಿಸಿ, ₹96 ಸಾವಿರ ದಂಡ ವಸೂಲು ಮಾಡಿದ್ದಾರೆ.

ಸಂಚಾರ ನಿಯಮಗಳನ್ನು ಕಡ್ಡಾಯವಾಗಿ ಪಾಲನೆ ಮಾಡುವುದು ಹಾಗೂ ನಿಯಮಗಳ ಮಹತ್ವದ ಬಗ್ಗೆ ಸವಾರರಿಗೆ ಅರಿವು ಮೂಡಿಸಲಾಯಿತು. ಮುಂದಿನ ದಿನಗಳಲ್ಲಿಯೂ ವಿಶೇಷ ಕಾರ್ಯಾಚರಣೆ ನಡೆಸಲಾಗುವುದು ಎಂದು ಡಿಸಿಪಿ ಕುಲದೀಪ್ ಕುಮಾರ್ ಆರ್.ಜೈನ್ ತಿಳಿಸಿದ್ದಾರೆ.

ಕಾಲ್‌ಸೆಂಟರ್ ಉದ್ಯೋಗಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಸ್‌ಆರ್ ಲೇಔಟ್ 4ನೇ ಹಂತದ 15ನೇ ಕ್ರಾಸ್‌ನಲ್ಲಿ ಸ್ಕೂಟಿ ಹಾಗೂ ಶಾಲಾ ಬಸ್ ನಡುವೆ ಗುರುವಾರ ಬೆಳಿಗ್ಗೆ ಸಂಭವಿಸಿದ ಅಪಘಾತದಲ್ಲಿ ಕಾಲ್ ಸೆಂಟರ್ ಉದ್ಯೋಗಿ ಮೃತಪಟ್ಟಿದ್ದಾರೆ. ಕನಕಪುರ ರಸ್ತೆಯ ನಿವಾಸಿ ದರ್ಶನ್ ರಮೇಶ್ ಮೃತ ಉದ್ಯೋಗಿ.

‘ದೇವರಬೀಸನಹಳ್ಳಿಯಲ್ಲಿರುವ ಕಚೇರಿಗೆ ಎಚ್‌ಎಸ್‌ಆರ್ ಲೇಔಟ್ ಮೂಲಕ ದರ್ಶನ್ ಅವರು ಬೆಳಿಗ್ಗೆ 7.40ರ ಸುಮಾರಿಗೆ ಸ್ಕೂಟಿಯಲ್ಲಿ ತೆರಳುತ್ತಿದ್ದರು. ಅದೇ ವೇಳೆಗೆ ಎದುರಿನಿಂದ ವೇಗವಾಗಿ ಬಂದ ಬಸ್ ಹಾಗೂ ಸ್ಕೂಟಿ ನಡುವೆ ಅಪಘಾತ ಸಂಭವಿಸಿದೆ. ರಸ್ತೆ ಮೇಲೆ ಬಿದ್ದ ದರ್ಶನ್ ಅವರ ತಲೆಗೆ ಗಂಭೀರ ಗಾಯವಾಗಿತ್ತು. ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಅವರು ಮೃತಪಟ್ಟಿದ್ದಾರೆ’ ಎಂದು ಸಂಚಾರ ಪೊಲೀಸರು ಹೇಳಿದರು. ಎಚ್‌ಎಸ್‌ಆರ್ ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ರೈತನಿಗೆ ಪ್ರವೇಶ ನಿರಾಕರಣೆ: ವಿಧಾನಸಭೆಯಲ್ಲಿ ವಿಷಯ ಪ್ರಸ್ತಾಪಿಸಿದ ಸಭಾಧ್ಯಕ್ಷ ಯು.ಟಿ. ಖಾದರ್

ಆಸ್ತಿ ತೆರಿಗೆ ಬಾಕಿ: ಜಿಟಿ ವರ್ಲ್ಡ್ ಮಾಲ್‌ಗೆ ಬೀಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ತೆರಿಗೆ ಪಾವತಿ ಮಾಡದ ಮಾಗಡಿ ರಸ್ತೆಯಲ್ಲಿರುವ ಜಿಟಿ ವರ್ಲ್ಡ್ ಮಾಲ್ ಅನ್ನು ಬಿಬಿಎಂಪಿ ಬಂದ್ ಮಾಡಿದೆ.

ಪಂಚೆ ಧರಿಸಿಕೊಂಡಿದ್ದ ರೈತ, ಮಾಲ್ ಪ್ರವೇಶಿಸದಂತೆ ಸಿಬ್ಬಂದಿ ತಡೆದಿದ್ದರು. ಇದು ವಿವಾದಕ್ಕೆ ಅವಕಾಶ ಮಾಡಿಕೊಟ್ಟ ಜೊತೆಗೆ, ವಿಧಾನಸಭೆಯಲ್ಲೂ ಗುರುವಾರ ಚರ್ಚೆಗೆ ಬಂದಿತ್ತು.

ವಿಧಾನಸಭೆಯಲ್ಲಿ ವಿಷಯ ಚರ್ಚೆಗೆ ಬಂದ ನಂತರ, ಜಿಟಿ ವರ್ಲ್ಡ್ ಮಾಲ್‌ಗೆ ಗುರುವಾರ ಬೆಳಿಗ್ಗೆ ನೋಟಿಸ್ ಜಾರಿ ಮಾಡಿದ ಬಿಬಿಎಂಪಿ, 'ಪಂಚೆ ತೊಟ್ಟಿದ್ದಕ್ಕೆ ರೈತನಿಗೆ ಮಾಲ್ ಪ್ರವೇಶಕ್ಕೆ ನಿರಾಕರಣೆ ಮಾಡಿರುವ ಕುರಿತು 24 ಗಂಟೆಗಳಲ್ಲಿ ಹೇಳಿಕೆ ಸಲ್ಲಿಸಬೇಕು' ಎಂದು ತಿಳಿಸಿತ್ತು.

ಆಸ್ತಿ ತೆರಿಗೆ ಪಾವತಿ ಮಾಡದ್ದಕ್ಕೆ ಬುಧವಾರ ಸಂಜೆ ಪೊಲೀಸರ ರಕ್ಷಣೆಯೊಂದಿಗೆ ಬಿಬಿಎಂಪಿ ಸಿಬ್ಬಂದಿ ಮಾಲ್‌ಗೆ ಬೀಗ ಹಾಕಿದರು.

'ಜಿಟಿ ವರ್ಲ್ಡ್ ಮಾಲ್ ₹1.78 ಕೋಟಿ ಆಸ್ತಿ ತೆರಿಗೆಯನ್ನು ಬಾಕಿ ಉಳಿಸಿಕೊಂಡಿದೆ. 'ಬೇಡಿಕೆಯ ನೋಟಿಸ್' ಜಾರಿ ಮಾಡಲಾಗಿತ್ತು. ಅದನ್ನು ಪಾವತಿ ಮಾಡದ್ದರಿಂದ ಮಾಲ್ ಅನ್ನು ಬಂದ್ ಮಾಡಲಾಗಿದೆ' ಎಂದು ಬೆಂಗಳೂರು ದಕ್ಷಿಣ ವಲಯದ ಆಯುಕ್ತೆ ವಿನೋತ್ ಪ್ರಿಯಾ ತಿಳಿಸಿದರು.

'ಮಾಲ್ ಅನ್ನು ಜಪ್ತಿ ಮಾಡುವಂತೆ ವಲಯ ಕಚೇರಿಗೆ ಸೂಚಿಸಲಾಗಿದೆ' ಎಂದು ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ಅವರು ಹೇಳಿದರು.



ಜಿಟಿ ಮಾಲ್‌ಗೆ ಬಿಬಿಎಂಪಿ ಸಿಬ್ಬಂದಿ ಗುರುವಾರ ಸಂಜೆ ಬೀಗ ಹಾಕಿದರು

ಮುಖ್ಯಾಂಶಗಳು

- ಏಳು ದಿನಗಳ ಕಾಲ ಮಾಲ್ ಬಂದ್: ಸಚಿವ
- ₹1.78 ಕೋಟಿ ಆಸ್ತಿ ತೆರಿಗೆ ಬಾಕಿ

ಏಳು ದಿನ ಬಂದ್: ಪಂಚೆ ಧರಿಸಿದ್ದರು ಎಂಬ ಕಾರಣಕ್ಕಾಗಿ ರೈತರೊಬ್ಬರಿಗೆ ಒಳಕ್ಕೆ ಪ್ರವೇಶ ನೀಡದೇ ಅವಮಾನಿಸಿರುವ ನಗರದ ಜಿಟಿ ಮಾಲ್ ಏಳು ದಿನಗಳ ಕಾಲ ಬಂದ್ ಮಾಡಿಸಲಾಗುವುದು ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ತಿಳಿಸಿದರು.

ವಿಧಾನಸಭೆಯಲ್ಲಿ ಗುರುವಾರ ಸ್ವಯಂಪ್ರೇರಿತವಾಗಿ ವಿಷಯ ಪ್ರಸ್ತಾಪಿಸಿದ ಸಭಾಧ್ಯಕ್ಷ ಯು.ಟಿ. ಖಾದರ್ ಅವರು, 'ಕನ್ನಡ ನಾಡಿನ ಸಾಂಪ್ರದಾಯಿಕ ಉಡುಗೆ ತೊಟ್ಟಿದ್ದ ರೈತರೊಬ್ಬರಿಗೆ ಜಿಟಿ ಮಾಲ್‌ನ ಒಳಗೆ ಪ್ರವೇಶ ನೀಡದಿರುವುದು ಖಂಡನೀಯ. ಮಾಲ್ ಆಡಳಿತದ ವಿರುದ್ಧ ಸರ್ಕಾರ ಮುಲಾಜಿಲ್ಲದೇ ಕ್ರಮ ಜರುಗಿಸಬೇಕು' ಎಂದು ನಿರ್ದೇಶನ ನೀಡಿದರು.

ಆಗ ಉತ್ತರ ನೀಡಿದ ಸುರೇಶ್, 'ಬಿಬಿಎಂಪಿ ಆಯುಕ್ತರ ಜತೆ ಮಾತನಾಡಿದ್ದೇನೆ. ಏಳು ದಿನಗಳ ಕಾಲ ಮಾಲ್ ಬಂದ್ ಮಾಡಲು ಸರ್ಕಾರಕ್ಕೆ ಅಧಿಕಾರವಿದೆ ಎಂದು ತಿಳಿಸಿದ್ದಾರೆ. ಆ ಕ್ರಮವನ್ನು ಕೈಗೊಳ್ಳುತ್ತೇವೆ' ಎಂದರು.

ಮಾಲ್ ವಿರುದ್ಧ ಎಫ್‌ಐಆರ್

ಪಂಚೆ ಧರಿಸಿ ಬಂದಿದ್ದ ಹಾವೇರಿ ಜಿಲ್ಲೆಯ ರೈತ ಫಕೀರಪ್ಪ ಅವರಿಗೆ ಪ್ರವೇಶ ನಿರಾಕರಿಸಿದ್ದ ಆರೋಪದಡಿ ಮಾಗಡಿ ರಸ್ತೆಯ ಜಿಟಿ ವರ್ಲ್ಡ್ ಮಾಲ್ ಮಾಲೀಕರು ಹಾಗೂ ಭದ್ರತಾ ಸಿಬ್ಬಂದಿ ಅರುಣ್ ವಿರುದ್ಧ ಕೆಪಿ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಗುರುವಾರ ಎಫ್‌ಐಆರ್ ದಾಖಲಾಗಿದೆ.

'ಧರ್ಮರಾಜ್‌ಗೌಡ ಎಂಬುವವರು ದೂರು ನೀಡಿದ್ದು, ಭಾರತೀಯ ನ್ಯಾಯ ಸಂಹಿತೆ(ಬಿಎನ್‌ಎಸ್)ಯ 126 ಅಡಿ (ಅಕ್ರಮ ತಡೆ) ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ಕಾನೂನು ಪ್ರಕಾರ ನೋಟಿಸ್ ನೀಡಿ ವಿಚಾರಣೆಗೆ ಬರುವಂತೆ ಸೂಚಿಸಲಾಗುವುದು' ಎಂದು ಪೊಲೀಸರು ಹೇಳಿದರು.

ಪಂಚೆ ಧರಿಸಿ ಬಂದಿದ್ದ ಫಕೀರಪ್ಪ ಅವರನ್ನು ತಡೆದು ನಿಲ್ಲಿಸಿ ಅವಮಾನ ಮಾಡಲಾಗಿದೆ. ಭದ್ರತಾ ಸಿಬ್ಬಂದಿ ಹಾಗೂ ಮಾಲೀಕರು ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ಆಗ್ರಹಿಸಲಾಗಿದೆ.

ನಾಗರಾಜ್ ಅವರು ತಮ್ಮ ತಂದೆ ಫಕೀರಪ್ಪ ಅವರಿಗೆ 'ಕಲ್ಕಿ' ಸಿನಿಮಾ ತೋರಿಸಲು ಜಿಟಿ ವರ್ಲ್ಡ್ ಮಾಲ್‌ಗೆ ಮಂಗಳವಾರ ಸಂಜೆ ಕರೆದುಕೊಂಡು ಬಂದಿದ್ದರು. ಫಕೀರಪ್ಪ ಅವರು ಪಂಚೆ ಧರಿಸಿ ತಲೆಗೆ ಟವಲ್‌ನಿಂದ ಪೇಟ ಸುತ್ತಿಕೊಂಡಿದ್ದರು. ಮಾಲ್‌ನ ಭದ್ರತಾ ಸಿಬ್ಬಂದಿ, ಪ್ರವೇಶ ದ್ವಾರದಲ್ಲೇ ತಡೆದು ಪ್ರವೇಶ ನಿರಾಕರಿಸಿದ್ದರು. ಅಲ್ಲದೇ ಅರ್ಧ ಗಂಟೆಗೂ ಹೆಚ್ಚು ಕಾಲ ಪ್ರವೇಶ ದ್ವಾರದಲ್ಲೇ ಕಾಯಿಸಿದ್ದರು.

ರೈತರ ಪ್ರತಿಭಟನೆ

ಕರ್ನಾಟಕ ರಾಜ್ಯ ರೈತ ಸಂಘದ (ರೈತ ಬಣ) ನೇತೃತ್ವದಲ್ಲಿ ಗುರುವಾರ ಮಾಲ್ ಎದುರು ಪ್ರತಿಭಟನೆ ನಡೆಯಿತು.

'ಹಾವೇರಿ ರೈತರಿಗೆ ಅವಮಾನ ಮಾಡಲಾಗಿದೆ. ಈ ರೀತಿ ಬೇರೆಲ್ಲೂ ನಡೆಯಬಾರದು' ಎಂದು ರೈತರು ಆಗ್ರಹಿಸಿದರು.

ಪ್ರವೇಶ ನಿರಾಕರಣೆ ಮಾಹಿತಿ ತಿಳಿದ ಕನ್ನಡ ಸಂಘಟನೆಗಳು ಬುಧವಾರ ಬೆಳಿಗ್ಗೆ ಮಾಲ್ ಎದುರು ಪ್ರತಿಭಟನೆ ನಡೆಸಿದ್ದರು. ಅಲ್ಲದೇ ಮಾಲ್ ಬಂದ್ ಮಾಡುವಂತೆಯೂ ಆಗ್ರಹಿಸಿದ್ದರು. ನಂತರ, ಫಕೀರಪ್ಪ ಅವರನ್ನು ಸ್ಥಳಕ್ಕೆ ಕರೆಸಿ ಪಂಚೆ ಧರಿಸಿಯೇ ಮಾಲ್‌ಗೆ ಪ್ರವೇಶಿಸುವಂತೆ ಮಾಡಿದ್ದರು. ಅಲ್ಲದೇ ಮಾಲ್ ಆಡಳಿತ ಮಂಡಳಿಯ ಉಸ್ತುವಾರಿ ಸುರೇಶ್ ಅವರು ಫಕೀರಪ್ಪ ಅವರ ಕ್ಷಮೆ ಕೋರಿ ಸನ್ಮಾನಿಸಿದ್ದರು.

ಸಿಬ್ಬಂದಿ ಕೆಲಸದಿಂದ ವಜಾ: 'ಆಗಬಾರದ ಘಟನೆಯೊಂದು ನಡೆದಿದೆ. ಅದಕ್ಕಾಗಿ ಫಕೀರಪ್ಪ ಅವರಲ್ಲಿ ಕ್ಷಮೆ ಕೇಳುತ್ತೇನೆ. ತಪ್ಪು ಮಾಡಿದ್ದ ಸಿಬ್ಬಂದಿಯನ್ನು ಕೆಲಸದಿಂದ ವಜಾ ಮಾಡಲಾಗಿದೆ. ನಮ್ಮ ತಂದೆಯವರೂ ಸಹ ಮಾತಾಡಿ ಕ್ಷಮೆ ಕೇಳಿದ್ದಾರೆ. ಮುಂದಿನ ಸೂಚನೆ ಬರುವ ತನಕ ಮಾಲ್ ಬಂದ್ ಮಾಡುತ್ತೇವೆ' ಎಂದು ಜಿಟಿ ಮಾಲ್ ಮಾಲೀಕ ಆನಂದ್ ಅವರ ಪುತ್ರ ಪ್ರಶಾಂತ್ ತಿಳಿಸಿದ್ದಾರೆ.

ಕಾಂಗ್ರೆಸ್‌ನ ಪ್ರಕಾಶ್ ಕೋಳಿವಾಡ ಮಾತನಾಡಿ, 'ಅವಮಾನಕ್ಕೊಳಗಾದ ರೈತ ನನ್ನ ಕ್ಷೇತ್ರದವರು. ಒಂಬತ್ತು ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಿದ್ದಾರೆ. ಎಂಬಿಎ ಓದುತ್ತಿರುವ ಮಗನನ್ನು ನೋಡಲು ಬೆಂಗಳೂರಿಗೆ ಬಂದಿದ್ದರು. ರೈತನಿಗೆ ಅವಮಾನ ಮಾಡಿರುವ ಮಾಲ್ ಅನ್ನು ಬಂದ್ ಮಾಡಬೇಕು' ಎಂದರು.

'ಮಾಲ್‌ಗೆ ಕನಿಷ್ಠ ಏಳು ದಿನಗಳ ಕಾಲ ವಿದ್ಯುತ್ ಪೂರೈಕೆ ಸ್ಥಗಿತಗೊಳಿಸಬೇಕು' ಎಂದು ಕಾಂಗ್ರೆಸ್‌ನ ಲಕ್ಷ್ಮಣ ಸವದಿ ಆಗ್ರಹಿಸಿದರು.

'ಇದು ವೈಯಕ್ತಿಕ ಘನತೆಗೆ ಧಕ್ಕೆ ತಂದ ಪ್ರಕರಣ. ಈ ಬಗ್ಗೆ ವರದಿ ಪಡೆದು ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುತ್ತೇವೆ' ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್‌.ಸಿ. ಮಹದೇವಪ್ಪ ಭರವಸೆ ನೀಡಿದರು.

ಸುದ್ದಿ 2 ನಿಮಿಷ

'ಮದ್ಯ ಅಕ್ರಮ ಮಾರಾಟ ಮಾಡಿದರೆ ನಿರ್ದಾಕ್ಷಿಣ್ಯ ಕ್ರಮ'

ಬೆಂಗಳೂರು: 'ನಿರ್ದಿಷ್ಟವಾಗಿ ಇಂತಹ ಕಡೆ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದನ್ನು ದಾಖಲೆ ಸಹಿತ ನೀಡಿದರೆ, ಕಾನೂನು ಕ್ರಮ ಜರುಗಿಸಲು ಹಿಂದೆಮುಂದೆ ನೋಡುವುದಿಲ್ಲ' ಎಂದು ಅಬಕಾರಿ ಸಚಿವ ಆರ್‌.ಬಿ. ತಿಮ್ಮಾಪೂರ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಅನಿಲ್‌ಕುಮಾರ್ ಪ್ರಶ್ನೆಗೆ ಅವರು ಉತ್ತರಿಸಿದರು.

'ಕೋಲಾರ, ಚಿಕ್ಕಬಳ್ಳಾಪುರ ಸೇರಿದಂತೆ ಅನೇಕ ಕಡೆ ಕಾನೂನು ಬಾಹಿರವಾಗಿ ಮದ್ಯ ಮಾರಾಟ ಮಾಡಲಾಗುತ್ತಿದೆ. ಕಾನೂನುಬಾಹಿರ ಚಟುವಟಿಕೆ, ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿವೆ. ಕೋಲಾರದಲ್ಲಿ ಗೋಪಿ ಎಂಬ ಅಧಿಕಾರಿ 14 ವರ್ಷದಿಂದ ಒಂದೇ ಸ್ಥಳದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರನ್ನು ಏಕೆ ವರ್ಗಾವಣೆ ಮಾಡಿಲ್ಲ' ಎಂದು ಅನಿಲ್ ಕುಮಾರ್ ಪ್ರಶ್ನಿಸಿದರು.

ಅದಕ್ಕೆ ತಿಮ್ಮಾಪೂರ, 'ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ಪಡೆದು ಆ ಅಧಿಕಾರಿಯನ್ನು ವರ್ಗಾವಣೆ ಮಾಡುತ್ತೇವೆ' ಎಂದರು.



ಸದನದಲ್ಲಿ ಅಶೋಕಗೆ ಮುಜುಗರ

ಬೆಂಗಳೂರು: ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಅವರು ವಿಧಾನಸಭೆಯಲ್ಲಿ ವಿರೋಧಪಕ್ಷದ ನಾಯಕ ಆರ್‌.ಅಶೋಕ ಅವರನ್ನು ಮುಜುಗರಕ್ಕೀಡು ಮಾಡಿದ ಘಟನೆ ನಡೆಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ತರ ನೀಡುವಾಗ, 'ನಾನು ತುಂಬಾ ಬದಲಾಗಿದ್ದೇನೆ ಎಂದು ಯತ್ನಾಳ ಹೇಳಿದ್ದಾರೆ. ವಾಜಪೇಯಿ ಮಂತ್ರಿಮಂಡಲದಲ್ಲಿ ಸಚಿವರಾಗಿದ್ದ ಯತ್ನಾಳ ಅವರು ಆಗ ಇದ್ದ ಹಾಗೆ ಈಗ ಇದ್ದಾರಾ? ನಾನು ಬದಲಾಗಿಲ್ಲ, ಹಾಗೇ ಇದ್ದೀನಿ. 1983 ರಲ್ಲಿ ಹೇಗಿದ್ದಿನೋ ಹಾಗೇ ಇದ್ದೇನೆ' ಎಂದರು.

ಆಗ ಎದ್ದು ನಿಂತು ಮಾತನಾಡಿದ ಆರ್‌.ಅಶೋಕ, 'ನಿನ್ನೆ ಯತ್ನಾಳ ಅವರು ಸಿದ್ದರಾಮಯ್ಯ ಅವರನ್ನು ಹೊಗಳಿದ್ದಾರೆ' ಎಂದರು.

ಇದಕ್ಕೆ ತಕ್ಷಣ ಪ್ರತಿಕ್ರಿಯಿಸಿದ ಯತ್ನಾಳ, 'ನೀವು ಇಲ್ಲದ ಬಣ್ಣ ಹಚ್ಚಲು ಹೋಗಬೇಡಿ. ನಾನು ಸಿದ್ದರಾಮಯ್ಯ ಅವರನ್ನು ಹೊಗಳಲಿಲ್ಲ. ಅವರ ಕಚೇರಿಗೂ ಹೋಗಲಿಲ್ಲ. ನೀವು ಹೀಗೆ ಫುಲ್‌ಟಾಸ್ ಹಾಕಿದರೆ ಯತ್ನಾಳಗೆ ಏನೂ ಆಗಲ್ಲ. ನಾನು ಯಾವುದೇ ಅಡ್ಜೆಸ್ಟ್‌ಮೆಂಟ್ ಮಾಡಿಕೊಂಡಿಲ್ಲ. ಯಾವುದೇ ಕೆಲಸ ಮಾಡಿಸಿಕೊಳ್ಳಲು ಅವರ ಬಳಿ ಹೋಗಲಿಲ್ಲ' ಎಂದರು. ಈ ಉತ್ತರ ಅಶೋಕ ಅವರನ್ನು ಮುಜುಗರಗೊಳಿಸಿತು.



ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದಿಂದ ಚಿತ್ರದುರ್ಗದಲ್ಲಿ ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ರಾಜ್ಯ ಪತ್ರಿಕಾ ವಿತರಕರ ರಾಜ್ಯ ಸಮ್ಮೇಳನದ ಲಾಂಛನವನ್ನು ಗುರುವಾರ ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅನಾವರಣ ಮಾಡಿದರು. ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ರಾಜ್ಯಾಧ್ಯಕ್ಷ ಕೆ. ಶಂಭುಲಿಂಗ, ಚಿತ್ರದುರ್ಗ ಜಿಲ್ಲಾಧ್ಯಕ್ಷ ತಿಪ್ಪೇಸ್ವಾಮಿ ಮತ್ತು ಪದಾಧಿಕಾರಿಗಳು ಭಾಗವಹಿಸಿದ್ದರು

'ಇದು ಹಗರಣಗಳ ಸರ್ಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದು ಹಗರಣಗಳ ಸರ್ಕಾರ. ಪರಿಶಿಷ್ಟರು, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು, ಕಾರ್ಮಿಕರು ಎಲ್ಲರ ಹಣವೂ ಈ ಸರ್ಕಾರದಲ್ಲಿ ಲೂಟಿಯಾಗುತ್ತಿದೆ ಎಂದು ವಿರೋಧ ಪಕ್ಷದ ಉಪ ನಾಯಕ ಅರವಿಂದ ಬೆಲ್ಲದ್ ವಿಧಾನಸಭೆಯಲ್ಲಿ ವಾಗ್ದಾಳಿ ನಡೆಸಿದರು.

'ವಾಲ್ಮೀಕಿ ನಿಗಮದ ಹಣ ಲೂಟಿಯಾಗಿದೆ. ಕಾರ್ಮಿಕ ಇಲಾಖೆಯಲ್ಲಿ ₹ 300 ಕೋಟಿ ಮೊತ್ತದ ಅಕ್ರಮ ನಡೆದಿದೆ' ಎಂದರು.

'ಧರೆ ಹತ್ತಿ ಉರಿದೊಡೆ ನಿಲಬಹುದೆ' ಎಂಬ ಬಸವಣ್ಣನವರ ವಚನ ಉಲ್ಲೇಖಿಸಿದ ಬೆಲ್ಲದ್, 'ಬೇಲಿಯೇ ಎದ್ದು ಹೊಲ ಮೇಯ್ದರೆ ಗತಿ ಏನಾಗಬೇಕು? ಚುನಾವಣೆಗೆ ಹಣ ಹೊಂದಿಸುವ ಒತ್ತಡದಲ್ಲಿ ಹಗರಣ ಮುಚ್ಚಿಹಾಕಲು ಇವರಿಗೆ ಸಮಯ ಸಿಗಲಿಲ್ಲ. ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧೀಕ್ಷಕ ಪಿ. ಚಂದ್ರಶೇಖರನ್ ಆತ್ಮಹತ್ಯೆ ಮಾಡಿಕೊಳ್ಳದೇ ಇದ್ದಿದ್ದರೆ ಲಪಟಾಯಿಸಿದ ಮೊತ್ತಕ್ಕೆ ಬಿಲ್ ಸೃಷ್ಟಿಸಿ, ಹಗರಣ ಮುಚ್ಚಿಹಾಕುತ್ತಿದ್ದರು' ಎಂದರು.

ಪರಿಹಾರಕ್ಕೆ ಆಗ್ರಹ

'ಹಗರಣದ ಕಾರಣದಿಂದ ಆತ್ಮಹತ್ಯೆ ಮಾಡಿಕೊಂಡಿರುವ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧೀಕ್ಷಕ ಪಿ. ಚಂದ್ರಶೇಖರನ್ ಕುಟುಂಬಕ್ಕೆ ₹25 ಲಕ್ಷ ಪರಿಹಾರ ನೀಡಬೇಕು. ಅವರ ಇಬ್ಬರೂ ಮಕ್ಕಳ ಶೈಕ್ಷಣಿಕ ವೆಚ್ಚವನ್ನು ಸರ್ಕಾರ ಭರಿಸಬೇಕು' ಎಂದು ಬಿಜೆಪಿಯ ಎಸ್‌. ಚನ್ನಬಸಪ್ಪ ವಿಧಾನಸಭೆಯಲ್ಲಿ ಒತ್ತಾಯಿಸಿದರು.

'ಚಂದ್ರಶೇಖರನ್ ಅವರದ್ದು ಸರ್ಕಾರಿ ಪ್ರಾಯೋಜಿತ ಕೊಲೆ. ಈ ದುರ್ಘಟನೆಯ ಹೊಣೆಯನ್ನು ಸರ್ಕಾರ ಹೊತ್ತುಕೊಳ್ಳಬೇಕು. ₹ 197 ಕೋಟಿ ಉಳಿಸಲು ಪ್ರಾಣತ್ಯಾಗ ಮಾಡಿದ ಅಧಿಕಾರಿಯ ಕುಟುಂಬಕ್ಕೆ ನೆರವು ನೀಡಲಾಗದಿದ್ದರೆ ಈ ಮುಖ್ಯಮಂತ್ರಿ, ಈ ಸರ್ಕಾರ ಅಧಿಕಾರದಲ್ಲಿ ಮುಂದುವರಿಯಬೇಕೆ' ಎಂದು ಪ್ರಶ್ನಿಸಿದರು.

ಹ್ಯಾಬಿಟೇಟ್ ಅಕ್ರಮ: ತನಿಖೆಗೆ ಆಗ್ರಹ

'ಕರ್ನಾಟಕ ರಾಜ್ಯ ಹ್ಯಾಬಿಟೇಟ್ ಕೇಂದ್ರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆ ಉಲ್ಲಂಘಿಸಿ ₹ 400 ಕೋಟಿ ಅಕ್ರಮ ನಡೆಸಿರುವ ಆರೋಪದ ಬಗ್ಗೆ ತನಿಖೆ ನಡೆಸಬೇಕು' ಎಂದು ವಿಧಾನಸಭೆಯ ವಿರೋಧ ಪಕ್ಷದ ಉಪ ನಾಯಕ ಅರವಿಂದ ಬೆಲ್ಲದ್ ಆಗ್ರಹಿಸಿದರು. 'ಕಾಯ್ದೆ ಉಲ್ಲಂಘಿಸಿ ₹ 400 ಕೋಟಿ ಬಳಕೆ' ಶೀರ್ಷಿಕೆಯಡಿ 'ಪ್ರಜಾವಾಣಿ'ಯ ಗುರುವಾರದ ಸಂಚಿಕೆಯಲ್ಲಿ ಪ್ರಕಟವಾದ ವರದಿ ಕುರಿತು ಸದನದಲ್ಲಿ ಪ್ರಸ್ತಾಪಿಸಿದ ಅವರು, 'ಅಲ್ಪಸಂಖ್ಯಾತರ ಅಭಿವೃದ್ಧಿಗೆ ಮೀಸಲಿಟ್ಟ ಹಣವನ್ನೂ ಹ್ಯಾಬಿಟೇಟ್ ಮೂಲಕ ಲೂಟಿ ಮಾಡಲಾಗಿದೆ. ಈ ಬಗ್ಗೆ ತನಿಖೆ ನಡೆಸಬೇಕು' ಎಂದು ಒತ್ತಾಯಿಸಿದರು.

'ದೆಹಲಿ, ಜಾರ್ಖಂಡ್ ಮಾದರಿ ಜಾರಿಗೆ ಇ.ಡಿ ಯತ್ನ'

ಬೆಂಗಳೂರು: 'ದೆಹಲಿ, ಜಾರ್ಖಂಡ್ ಮುಖ್ಯಮಂತ್ರಿಗಳನ್ನು ಬಂಧಿಸಿದ ಮಾದರಿಯನ್ನೇ ಇಲ್ಲೂ ಜಾರಿಗೆ ತರಲು ಇ.ಡಿ ಯತ್ನಿಸುತ್ತಿದೆ' ಎಂದು ಕಾಂಗ್ರೆಸ್‌ನ ಎ.ಎಸ್. ಪೊನ್ನಣ್ಣ ಆರೋಪಿಸಿದರು.

ವಾಲ್ಮೀಕಿ ನಿಗಮದ ಹಗರಣ ಕುರಿತು ವಿಧಾನಸಭೆಯಲ್ಲಿ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿ, 'ವಾಲ್ಮೀಕಿ ನಿಗಮದ ಹಗರಣಕ್ಕೂ ಮುಖ್ಯಮಂತ್ರಿ ಅವರಿಗೂ ಏನು ಸಂಬಂಧ? ಸತ್ಯವನ್ನು ಮುಚ್ಚಿಟ್ಟು ಜನರನ್ನು ದಿಕ್ಕು ತಪ್ಪಿಸಲಾಗುತ್ತಿದೆ' ಎಂದರು.

2014ರ ಮೊದಲು ಇ.ಡಿ ದಾಖಲಿಸಿದ್ದ ಪ್ರಕರಣದಲ್ಲಿ ಶೇ 47 ವಿರೋಧ ಪಕ್ಷಗಳ ನಾಯಕರಿಗೆ ಸಂಬಂಧಿಸಿದ್ದರೆ, ಶೇ 57ರಷ್ಟು ಪ್ರಕರಣಗಳು ಆಡಳಿತ ಪಕ್ಷದವರ ವಿರುದ್ಧವೇ ಇದ್ದವು. ಈಗ ಶೇ 90ರಷ್ಟು ಪ್ರಕರಣಗಳು ವಿರೋಧ ಪಕ್ಷದವರನ್ನೇ ಗುರಿಯಾಗಿಸಿವೆ. ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್, ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೋರೇನ್ ಬಂಧಿಸಿದಂತೆ ಕರ್ನಾಟಕದಲ್ಲೂ ಇ.ಡಿ ಸಾಗುತ್ತಿದೆ ಎಂದು ದೂರಿದರು.

'ಹಗರಣದ ಬಗ್ಗೆ ತನಿಖೆ ನಡೆಸಲು ರಾಜ್ಯ ಸರ್ಕಾರ ಎಸ್‌ಐಟಿ ನೇಮಿಸಿದೆ. ಸಿಬಿಐ ಕೂಡ ಎಫ್‌ಐಆರ್ ದಾಖಲಿಸಿದೆ. ಈಗ ಇ.ಡಿ ತನಿಖೆಯೂ ಆರಂಭವಾಗಿದೆ. ಎಸ್‌ಐಟಿ ಬೃಹತ್ ಮೊತ್ತವನ್ನು ವಶಪಡಿಸಿಕೊಂಡಿದ್ದು, ಸರಿಯಾಗಿಯೇ ತನಿಖೆ ನಡೆಸುತ್ತಿದೆ. ಇ.ಡಿ ತನಿಖೆಯ ಮಾಹಿತಿಯನ್ನು ಸೋರಿಕೆ ಮಾಡಿ ರಾಜಕೀಯ ಮಾಡುತ್ತಿದೆ' ಎಂದು ಆರೋಪಿಸಿದರು.

ಬಿಜೆಪಿ ವಿರುದ್ಧ ಒಗ್ಗಟ್ಟು ಪ್ರದರ್ಶಿಸಿ ಶಾಸಕರಿಗೆ ಮುಖ್ಯಮಂತ್ರಿ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಧಾನ ಮಂಡಲ ಅಧಿವೇಶನದಲ್ಲಿ ಬಿಜೆಪಿ ವಿರುದ್ಧ ಒಗ್ಗಟ್ಟು ಪ್ರದರ್ಶಿಸಬೇಕು, ಆಕ್ರಮಣಕಾರಿಯಾಗಿ ಉತ್ತರ ನೀಡಬೇಕು' ಎಂದು ಪಕ್ಷದ ಶಾಸಕರು, ಸಚಿವರಿಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ನಗರದ ರ್‍ಯಾಡಿಸನ್ ಬ್ಲ್ಯೂ ಹೋಟೆಲ್‌ನಲ್ಲಿ ಗುರುವಾರ ರಾತ್ರಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆಯಲ್ಲಿ ಮಾತನಾಡಿದ ಸಿದ್ದರಾಮಯ್ಯ, 'ಬಿಜೆಪಿಯವರು ಎಲ್ಲ ತಯಾರಿ ಮಾಡಿಕೊಂಡೇ ಮುಗಿಬೀಳುತ್ತಿದ್ದಾರೆ. ಅವರ ಆಕ್ರಮಣಕಾರಿ ನಡೆಗೆ ಅಷ್ಟೇ ಆಕ್ರಮಣಕಾರಿಯಾಗಿ, ರಕ್ಷಣಾತ್ಮಕವಾಗಿ ನಿಂತು ಬಿಜೆಪಿಯವರ ಬಾಯಿ ಮುಚ್ಚಿಸಬೇಕಿದೆ. ಎಲ್ಲ ಸಚಿವರು, ಶಾಸಕರು ಕಡ್ಡಾಯವಾಗಿ ಕಲಾಪದಲ್ಲಿ ಹಾಜರಾಗಬೇಕು ಎಂದು ಸ್ಪಷ್ಟ ಸೂಚನೆ ನೀಡಿದ್ದಾರೆ' ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

'ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದ ಹಗರಣದ ಬೆನ್ನಲ್ಲೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ (ಮುಡಾ) ನಿವೇಶನ ಹಂಚಿಕೆ ಸೇರಿದಂತೆ ಇತರ ವಿಚಾರಗಳನ್ನು ಎತ್ತಿಕೊಂಡು ಬಿಜೆಪಿಯವರು ಗದ್ದಲ ಸೃಷ್ಟಿಸಬಹುದು. ಹಾಗೆಂದು ಯಾರೂ ಹಿಂಜರಿಯಬೇಕಿಲ್ಲ. ಎಲ್ಲವನ್ನೂ ಒಗ್ಗಟ್ಟಿನಿಂದ ಎದುರಿಸಬೇಕು. ಮಸೂದೆಗಳಿಗೆ ಕೂಡಾ ಗದ್ದಲದ ನಡುವೆಯೇ ಅಂಗೀಕಾರ ನೀಡಬೇಕಾದ ಸ್ಥಿತಿ ಬರಬಹುದು ಎಂದೂ ಹೇಳಿದ್ದಾರೆ' ಎಂದು ಗೊತ್ತಾಗಿದೆ.

'ನನ್ನ ವಿರುದ್ಧ ಷಡ್ಯಂತ್ರ': 'ಎಚ್‌.ಡಿ. ಕುಮಾರಸ್ವಾಮಿ, ಪ್ರಲ್ಹಾದ ಜೋಷಿ, ಮತ್ತು ಸಂತೋಷ್ ನನ್ನ ವಿರುದ್ಧ ಷಡ್ಯಂತ್ರ ಮಾಡುತ್ತಿದ್ದು, ತೇಜೋವಧೆ ನಡೆಸುತ್ತಿದ್ದಾರೆ. ಮುಡಾದಲ್ಲಿ ನಮ್ಮ ಕುಟುಂಬ ಯಾವುದೇ ಅಕ್ರಮ ಎಸಗಿಲ್ಲ. ಕಾನೂನು ವ್ಯಾಪ್ತಿ ಮೀರಿ ನಾವು ಎಲ್ಲೂ ಏನೂ ಮಾಡಿಲ್ಲ. ವಾಲ್ಮೀಕಿ ಅಭಿವೃದ್ಧಿ ನಿಗಮದ ಪ್ರಕರಣದಲ್ಲೂ ಸರ್ಕಾರದಿಂದ ಯಾವುದೇ ತಪ್ಪು ಆಗಿಲ್ಲ. ಸರ್ಕಾರದ ವರ್ಚಸ್ಸಿಗೆ ಧಕ್ಕೆ ತರಲು ಬಿಜೆಪಿ– ಜೆಡಿಎಸ್ ಪಕ್ಷಗಳ ನಾಯಕರು ಯತ್ನಿಸುತ್ತಿದ್ದಾರೆ' ಎಂದು ಸಭೆಯಲ್ಲಿ ಮುಖ್ಯಮಂತ್ರಿ ಹೇಳಿದರು ಎಂದೂ ಮೂಲಗಳು ಹೇಳಿವೆ.

ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್ ಮಾತನಾಡಿ, 'ನಾನು ಕೂಡಾ ನಗರಾಭಿವೃದ್ಧಿ ಸಚಿವನಾಗಿ ಕೆಲಸ ಮಾಡಿದ್ದೇನೆ. ಮುಡಾ ನಿವೇಶನ ಹಂಚಿಕೆಯಲ್ಲಿ ಮುಖ್ಯಮಂತ್ರಿಯವರ ಪಾತ್ರ ಇಲ್ಲ. ನಿಯಮದ ಪ್ರಕಾರವೇ ನಿವೇಶನಗಳ ಹಂಚಿಕೆ ಆಗಿದೆ. ಜೆಡಿಎಸ್– ಬಿಜೆಪಿಯವರಿಗೂ ಮುಡಾ ನಿವೇಶನ ಹಂಚಿಕೆಯಾಗಿದೆ. ಅಧಿವೇಶನದಲ್ಲಿ ಈ ವಿಷಯ ಪ್ರಸ್ತಾಪವಾದಾಗ ಒಗ್ಗಟ್ಟು ಪ್ರದರ್ಶಿಸಬೇಕು ಎಂದು ಸಲಹೆ ನೀಡಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

ಅಲ್ಲದೆ, ಯಾವಾಗ ಬೇಕಿದ್ದರೂ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆ ಘೋಷಣೆ ಆಗಬಹುದು. ಶಾಸಕರು, ಕಾರ್ಯಕರ್ತರ ಜೊತೆ ಸೇರಿ ಪಕ್ಷ ಸಂಘಟನೆಯ ಕೆಲಸ ಮಾಡಬೇಕು ಎಂದೂ ಶಿವಕುಮಾರ್ ಸೂಚನೆ ನೀಡಿದ್ದಾರೆ ಎಂದೂ ಮೂಲಗಳು ತಿಳಿಸಿವೆ.

ಸಚಿವರಾದ ಕೆ.ಜೆ. ಜಾರ್ಜ್, ಎಂ.ಬಿ. ಪಾಟೀಲ, ಎಚ್‌.ಕೆ. ಪಾಟೀಲ, ಎಚ್‌.ಸಿ. ಮಹದೇವಪ್ಪ, ಎನ್‌.ಎಸ್. ಬೋಸರಾಜು, ಸಿ.ಎಂ ರಾಜಕೀಯ ಸಲಹೆಗಾರರಾದ ಬಿ.ಆರ್. ಪಾಟೀಲ, ಮುಖ್ಯ ಸಚೇತಕ ಅಶೋಕ ಪಟ್ಟಣ, ಸಿಎಲ್‌ಪಿ ಕಾರ್ಯದರ್ಶಿ ಅಲ್ಲಮ ಪ್ರಭು ಪಾಟೀಲ, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್ ಸೇರಿ ಹಲವರು ಸಭೆಯಲ್ಲಿ ಇದ್ದರು.

ಸಿಎಲ್‌ಪಿ ಸಭೆ

ಸಚಿವರ ವಿರುದ್ಧ ಮತ್ತೆ ಶಾಸಕರ ಆಕ್ರೋಶ

'ಸಚಿವರು ನಮ್ಮ ಕೆಲಸಗಳನ್ನು ಮಾಡಿಕೊಡುತ್ತಿಲ್ಲ. ಕ್ಷೇತ್ರದ ಕೆಲಸಗಳ ಬಗ್ಗೆ ಮಾತನಾಡಲು ಭೇಟಿಗೆ ಅವಕಾಶವನ್ನೇ ಕೊಡುತ್ತಿಲ್ಲ. ಮುಖ ಕೊಟ್ಟು ಮಾತನಾಡುವ ಸೌಜನ್ಯವನ್ನೂ ತೋರಿಸುತ್ತಿಲ್ಲ. ವರ್ಗಾವಣೆ ವಿಚಾರವಾಗಿಯೂ ಸ್ಪಂದಿಸುತ್ತಿಲ್ಲ. ನಮ್ಮ ತಾಳ್ಮೆಯನ್ನು ಪರೀಕ್ಷೆ ಮಾಡಬೇಡಿ ಎಂದು ಸಚಿವರ ವಿರುದ್ಧ ಕೆಲವು ಶಾಸಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ವರ್ಗಾವಣೆಗೆ ಕೌನ್ಸೆಲಿಂಗ್ ಪದ್ಧತಿ ಜಾರಿಗೊಳಿಸಿರುವುದಕ್ಕೂ ಕೆಲವು ಹಿರಿಯ ಶಾಸಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.' ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

'ಏಳೆಂಟು ಸಚಿವರನ್ನು ಈಗಲೇ ಸಚಿವ ಸಂಪುಟದಿಂದ ಕೈಬಿಟ್ಟರೆ ಒಳ್ಳೆಯದು' ಎಂದು ಸಚಿವರ ಕಾರ್ಯವೈಖರಿಯ ಬಗ್ಗೆ ಕೆಲವರು ಸಮಾಧಾನ ವ್ಯಕ್ತಪಡಿಸಿದ್ದಾರೆ. ಸಚಿವ ಭೈರತಿ ಸುರೇಶ್ ಹೆಸರು ಪ್ರಸ್ತಾಪಿಸದೆ, ಪರೋಕ್ಷವಾಗಿ ಶಾಸಕ ವಿನಯ ಕುಲಕರ್ಣಿ ಅಸಮಾಧಾನ ಹೊರ ಹಾಕಿದ್ದಾರೆ. 'ನಾನು ಅಧ್ಯಕ್ಷನಾಗಿರುವ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಕೆಲಸ ಮಾಡಲು ಬಿಡುತ್ತಿಲ್ಲ. ಪ್ರತಿಯೊಂದಕ್ಕೂ ಹಸ್ತಕ್ಷೇಪ ಮಾಡಲಾಗುತ್ತಿದೆ. ನನ್ನ ಕೆಲಸಗಳಿಗೆ ಅಡ್ಡಿಪಡಿಸುವ ಕೆಲಸ ನಡೆಯುತ್ತಿದೆ. ಇದನ್ನು ಎಷ್ಟು ದಿನ ಸಹಿಸಿಕೊಂಡು ಕೆಲಸ ಮಾಡಲಿ. ನನಗೆ ಕೊಟ್ಟಿರುವ ನಿಗಮ, ಮಂಡಳಿಯಲ್ಲಿ ಸ್ವತಂತ್ರವಾಗಿ ಕೆಲಸ ಮಾಡಲು ಅವಕಾಶ ನೀಡದಿದ್ದರೆ ಹೇಗೆ' ಎಂದು ಪ್ರಶ್ನಿಸಿದ್ದಾರೆ ಎಂದೂ ಗೊತ್ತಾಗಿದೆ.

'ಅನುದಾನ ನೀಡಿ'

'ನಮಗೆ ಅನುದಾನ ಇಲ್ಲದೆ ಕ್ಷೇತ್ರದಲ್ಲಿ ಜನರಿಗೆ ಉತ್ತರ ಹೇಳುವುದು ಕಷ್ಟವಾಗಿದೆ. ಕಳೆದ ಒಂದು ವರ್ಷದಿಂದಲೂ ಗ್ಯಾರಂಟಿ ಕಾರಣಕ್ಕೆ ಅನುದಾನ ಕೇಳಿರಲಿಲ್ಲ. ಅಭಿವೃದ್ಧಿ ಕೆಲಸಗಳಿಗೆ ಈ ಬಾರಿಯಾದರೂ ಅನುದಾನ ಕೊಡಬೇಕು. ಇಲ್ಲದಿದ್ದರೆ ಕ್ಷೇತ್ರದಲ್ಲಿ ಓಡಾಡುವುದೇ ಕಷ್ಟವಾಗಲಿದೆ ಎಂದು ಶಾಸಕರು ಅಲವತ್ತುಕೊಂಡಿದ್ದಾರೆ' ಎಂದೂ ಮೂಲಗಳು ಹೇಳಿವೆ.

ಐಪಿಎಸ್ ಅಧಿಕಾರಿ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಬುರಗಿ ಪೊಲೀಸ್ ಆಯುಕ್ತ ಹುದ್ದೆಯಲ್ಲಿದ್ದ ಐಪಿಎಸ್ ಅಧಿಕಾರಿ ಚೇತನ್ ಆರ್. ಅವರನ್ನು ವರ್ಗಾವಣೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತರಾಗಿ ಅವರನ್ನು ವರ್ಗಾವಣೆ ಮಾಡಲಾಗಿದೆ.

ನಗರದಲ್ಲಿ ಇಂದು

ದೇವಿ ಮುತ್ತು ಮಾರಿಯಮ್ಮನವರ 43ನೇ ವರ್ಷದ ವಿಶೇಷ ಹೂವಿನ ಕರಗ ಮಹೋತ್ಸವ: ಮಹಾಭಿಷೇಕ, ಅಲಂಕಾರ, ಹೋಮ, ಆಯೋಜನೆ ಹಾಗೂ ಸ್ಥಳ: ದೇವಿ ಮುತ್ತು ಮಾರಿಯಮ್ಮ ದೇವಾಲಯ, ಕೃಷ್ಣಾನಂದನಗರ, ನಂದಿನಿ ಲೇಔಟ್, ಬೆಳಿಗ್ಗೆ 7ರಿಂದ


ಆನಂದರಾಜ್ ಎ. ಅವರಿಗೆ 'ಆನಂದ ಮಾರ್ಗ' ಅಭಿನಂದನಾ ಗ್ರಂಥ ಅರ್ಪಣೆ ಮತ್ತು ಅಭಿನಂದನಾ ಸಮಾರಂಭ: ಪುಸ್ತಕ ಬಿಡುಗಡೆ: ಬರಗೂರು ರಾಮಚಂದ್ರಪ್ಪ, ಮುಖ್ಯ ಅತಿಥಿಗಳು: ಪುಟ್ಟಣ್ಣ, ಸಿಂಧು ಬಿ. ರೂಪೇಶ್, ಉಪಸ್ಥಿತಿ: ಶೀಲಾ ಪ್ರಕಾಶ್ ಎಸ್‌.ಎನ್., ಅಧ್ಯಕ್ಷತೆ: ನಾಗಣ್ಣ ಜಿ., ಆಯೋಜನೆ: ಆನಂದರಾಜ್ ಎ. ಅಭಿನಂದನಾ ಸಮಿತಿ, ಸ್ಥಳ: ಮಂಗಳ ಮಂಟಪ, ಎನ್‌.ಎಂ.ಕೆ.ಆರ್‌.ವಿ. ಕಾಲೇಜು ಆವರಣ, ಜಯನಗರ 3ನೇ ಹಂತ, ಬೆಳಿಗ್ಗೆ 10

ಸುಗತ ಮಾಸ ಪತ್ರಿಕೆ ಬಿಡುಗಡೆ: ಚೆನ್ನಪ್ಪ ಕಟ್ಟಿ, ಮುಖ್ಯ ಅತಿಥಿ: ಮಲ್ಲೇಪುರಂ ಜಿ. ವೆಂಕಟೇಶ್, ಅಧ್ಯಕ್ಷತೆ: ಪ್ರೊ.ಸಿ.ಬಿ. ಹೊನ್ನುಸಿದ್ಧಾರ್ಥ, ಉಪಸ್ಥಿತಿ: ಎಚ್‌. ಟಿ. ಪೋತೆ, ಸಂಗಪ್ಪ ಹೊಸಮನಿ, ಆಯೋಜನೆ: ಸುಗತ ಪತ್ರಿಕಾ ಬಳಗ, ಪ್ರೊ. ಮಲ್ಲೇಪುರಂ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ಬಾಬಾಸಾಹೇಬ್ ಡಾ.ಬಿ. ಆರ್‌. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಮಧ್ಯಾಹ್ನ 3.30

ಸುಚೇತ ಕೆ.ಎಸ್‌. ಅವರ 'ಕೇಳದ ಕಿವಿಗಳು ಹೇಳಿದ ಕತೆ' ಹಾಗೂ 'ಬರಿ ಕತೆಯಲ್ಲ–ಅಗ್ರಹಾರದ ಕಥನ' ಕೃತಿ ಬಿಡುಗಡೆ: ನಿರಂಜನ್ ಭಟ್, ಕೃತಿ ಬಗ್ಗೆ ಮಾತು: ಗೀತಾ ವಸಂತ, ದೀಪಾ ಭಟ್, ಅಧ್ಯಕ್ಷತೆ: ಅಶೋಕ ಹಾರನಹಳ್ಳಿ, ಆಯೋಜನೆ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಅನ್ನಪೂರ್ಣ ಪಬ್ಲಿಕೇಷನ್ ಹೌಸ್, ಅಭಿರುಚಿ ಪ್ರಕಾಶನ, ಸ್ಥಳ: ಗಾಯತ್ರಿ ಭವನ, 3070, 9ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಸಂಜೆ 5.30

41ನೇ ಅಂತರ ವಿಭಾಗ ನಾಟಕ ಸ್ಪರ್ಧೆ–2024: 'ಕಂಬನಿ' ನಾಟಕ ಪ್ರದರ್ಶನ, ರಚನೆ: ಬೇಲೂರು ಕೃಷ್ಣಮೂರ್ತಿ, ನಿರ್ದೇಶನ: ದೊಡ್ಡೀರಯ್ಯ, ಆಯೋಜನೆ: ಕನ್ನಡ ಸಾಹಿತ್ಯ ಕೂಟ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 6

'ಧರ್ಮ ಮತ್ತು ಸಂಸ್ಕೃತಿ' ಪುಸ್ತಕದ ಬಗ್ಗೆ ಸಂವಾದ: ಪಾಲ್ಗೊಳ್ಳುವವರು: ಸೂರ್ಯಪ್ರಕಾಶ್ ಪಂಡಿತ್, ವಿ.ಬಿ. ಆರತಿ, ರೋಹಿತ್ ಚಕ್ರತೀರ್ಥ, ರಮೇಶ್ ದೊಡ್ಡಪುರ, ಆಯೋಜನೆ: ಮಂಥನ ಬೆಂಗಳೂರು, ಸ್ಥಳ: ಡಾ.ಸಿ. ಅಶ್ವತ್ಥ್ ಕಲಾಭವನ, ಎನ್‌.ಆರ್‌. ಕಾಲೊನಿ, ಸಂಜೆ 6.30



ರಾಮಕೃಷ್ಣ ಸಂಗೀತ ಸೌರಭ: ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ: ದತ್ತಾತ್ರೇಯ ಎಲ್‌. ವೇಲಣಕರ್, ತಬಲಾ: ಯೋಗೀಶ್ ಭಟ್, ಹಾರ್ಮೋನಿಯಂ: ಸತ್ಯಜೀತ್ ಸಂಜು, ಆಯೋಜನೆ ಹಾಗೂ ಸ್ಥಳ: ಸ್ವಾಮಿ ವಿವೇಕಾನಂದ ಸಭಾಂಗಣ, ರಾಮಕೃಷ್ಣ ಮಠ, ಸಂಜೆ 6

ಚಾತುರ್ಮಾಸ್ಯ ಮಹಿಮೆ ಬಗ್ಗೆ ಧಾರ್ಮಿಕ ಪ್ರವಚನ: ರಾಘವಾಚಾರ್ ಮಿಟ್ಟಿ, ಆಯೋಜನೆ ಹಾಗೂ ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಸಂಜೆ 7

'ಪಿರ್ಸಪ್ಪಾಡ್' ಬ್ಯಾರಿ ಸಾಂಸ್ಕೃತಿಕ ಸಂಭ್ರಮ, ಅಧ್ಯಕ್ಷರು ಮತ್ತು ಸದಸ್ಯರ ಪದಗ್ರಹಣ: ಉದ್ಘಾಟನೆ: ಯು.ಟಿ. ಖಾದರ್, ಮುಖ್ಯ ಅತಿಥಿಗಳು: ಶಿವರಾಜ್ ತಂಗಡಗಿ, ಕೆ.ಜೆ. ಜಾರ್ಜ್, ಜಮೀರ್ ಅಹ್ಮದ್, ದಿನೇಶ್ ಗುಂಡೂರಾವ್, ಆಯೋಜನೆ: ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ, ಸ್ಥಳ: ಬ್ಯಾರಿ ಭವನ, 1ನೇ ಹಂತ, 3ನೇ ಬ್ಲಾಕ್, ಎಚ್‌.ಬಿ.ಆರ್. ಲೇಔಟ್, ಸಂಜೆ 7

ಸದ್ಗುರು ಮಧುಸೂದನ್ ಸಾಯಿ, ಹರಿ ಕೆ.ಮರಾರ್ ಅವರಿಗೆ 'ಡಾಕ್ಟರ್ ಆಫ್ ಸೈನ್ಸ್'

ವಿಟಿಯು: 52,615 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ (ವಿಟಿಯು) ಗುರುವಾರ ನಡೆದ 24ನೇ ವಾರ್ಷಿಕ ಘಟಿಕೋತ್ಸವದಲ್ಲಿ ಮೂವರು ಗಣ್ಯರಿಗೆ 'ಡಾಕ್ಟರ್ ಆಫ್ ಸೈನ್ಸ್' ಹಾಗೂ 52,615 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಚಿಕ್ಕಬಳ್ಳಾಪುರದ ಮಧುಸೂದನ್ ಸಾಯಿ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಸದ್ಗುರು ಮಧುಸೂದನ್ ಸಾಯಿ, ಬಿಇಎಲ್ ವ್ಯವಸ್ಥಾಪಕ ನಿರ್ದೇಶಕ ಹರಿ ಕೆ.ಮರಾರ್ ಅವರಿಗೆ 'ಡಾಕ್ಟರ್ ಆಫ್ ಸೈನ್ಸ್' ಪ್ರದಾನ ಮಾಡಿದರು.

ಬೆಳಗಾವಿಯ ಕೆಎಲ್ಇ ಸಂಸ್ಥೆಯ ಎಂ.ಎಸ್.ಶೇಷಗಿರಿ ಎಂಜಿನಿಯರಿಂಗ್ ಕಾಲೇಜಿನ ಸಿವಿಲ್ ವಿಭಾಗದ ಸಾಹಿಲ್ ಸೋಮನಾಚೆ 12 ಚಿನ್ನದ ಪದಕ ಪಡೆದರು. ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಕಂಪ್ಯೂಟರ್ ಸೈನ್ಸ್ ವಿಭಾಗದ ಜಿ.ವಿಷ್ಣುಪ್ರಿಯಾ 10, ಎಸ್‌ಜೆಬಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ಸ್ ವಿಭಾಗದ ಜಿ.ರೇಷ್ಮಾ, ಇದೇ ಕಾಲೇಜಿನ ಮೆಕ್ಯಾನಿಕಲ್ ವಿಭಾಗದ ಎಲ್.ಮೋಹನಕುಮಾರ್, ಬಳ್ಳಾರಿಯ ಬಳ್ಳಾರಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅಂಡ್ ಮ್ಯಾನೇಜ್‌ಮೆಂಟ್‌ನ ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ವಿಭಾಗದ ಜಿ.ಹೃತಿಕಾ ಅವರು ತಲಾ 7 ಚಿನ್ನದ ಪದಕ ಪಡೆದರು.

ಬೆಂಗಳೂರಿನ ಏಟ್ರಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಕೃತಿಕಾ ಸೆಂಥಿಲ್, ಆರ್‌ಎನ್‌ಎಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಪಿ.ಅನುಶ್ರೀ ತಲಾ 4 ಸೇರಿದಂತೆ ಒಟ್ಟು 27 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಪ್ರದಾನ ಮಾಡಲಾಯಿತು.

ಐಐಎಸ್‌ಸಿ ನಿರ್ದೇಶಕ ಪ್ರೊ. ಗೋವಿಂದನ್ ರಂಗರಾಜನ್ ಘಟಿಕೋತ್ಸವ ಭಾಷಣ ಮಾಡಿದರು. ಪ್ರೊ.ಎಸ್.ವಿದ್ಯಾಶಂಕರ್ ಪದವೀಧರರನ್ನು ಪರಿಚಯಿಸಿದರು.



ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಗುರುವಾರ ಸದ್ಗುರು ಮಧುಸೂದನ್ ಸಾಯಿ ಹಾಗೂ ಹರಿ ಕೆ.ಮರಾರ್ ಅವರಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು 'ಡಾಕ್ಟರ್ ಆಫ್ ಸೈನ್ಸ್' ಪ್ರದಾನ ಮಾಡಿ ನಮಸ್ಕರಿಸಿದರು. ಪ್ರೊ.ಎಸ್.ವಿದ್ಯಾಶಂಕರ, ಪ್ರೊ.ಗೋವಿಂದನ್ ರಂಗರಾಜನ್ ನಗೆ ಬೀರಿದರು – ಪ್ರಜಾವಾಣಿ ಚಿತ್ರ

ಬಡತನದಲ್ಲಿ ಸಾಧನೆ ತೋರಿದ ಮೇಘನಾ

ಬೆಳಗಾವಿಯ ಅಂಗಡಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಆ್ಯಂಡ್ ಮ್ಯಾನೇಜ್‌ಮೆಂಟ್‌ನ ವಿದ್ಯಾರ್ಥಿನಿ ಮೇಘನಾ ಅನಿಲ ಪವಾರ ವಿಟಿಯು ಚಿನ್ನದ ಪದಕ ಪಡೆದರು. ತಂದೆ ಅನಿಲ ಪವಾರ ಆಟೊ ಚಾಲಕ, ತಾಯಿ ಸ್ಮಿತಾ ಗೃಹಿಣಿ. ಬಡತನ ಮಧ್ಯೆಯೂ ಮೇಘನಾ ಸಾಧನೆ ಮಾಡಿದರು. ಆರ್ಟಿಫಿಷಿಯಲ್ ಇಂಟಲಿಜೆನ್ಸ್–ಡೇಟಾಸೈನ್ಸ್‌ನಲ್ಲಿ ಮೇಘನಾ ಪ್ರಥಮ ರ‍್ಯಾಂಕ್ ಪಡೆದರು.

'ಮುಂದೆಯೂ ಓದಬೇಕು ಎಂಬ ಹಂಬಲವಿದೆ. ಆದರೆ, ಎಂಜಿನಿಯರಿಂಗ್ ಪದವಿಗಾಗಿ ₹12 ಲಕ್ಷ ಶೈಕ್ಷಣಿಕ ಸಾಲ ಪಡೆದಿರುವೆ. ಇನ್ನು ಆರೇ ತಿಂಗಳಲ್ಲಿ ಉದ್ಯೋಗ ಪಡೆದು ಸಾಲದ ಕಂತು ಕಟ್ಟಬೇಕು. ತಂಗಿ ಶ್ರದ್ಧಾ ಕೂಡ ವಿಟಿಯುನಲ್ಲಿ ಎಂಜಿನಿಯರಿಂಗ್, ತಮ್ಮ ವಿಶ್ವನಾಥ ಪಿಯು ಓದುತ್ತಿದ್ದಾರೆ. ಅವರೂ ಶೈಕ್ಷಣಿಕ ಸಾಲ ಪಡೆದಿದ್ದಾರೆ' ಎಂದು ಮೇಘನಾ 'ಪ್ರಜಾವಾಣಿ'ಗೆ ತಿಳಿಸಿದರು. 'ಸರ್ಕಾರಿ ಕೋಟಾದಲ್ಲಿ ಎಂಜಿನಿಯರಿಂಗ್ ಸೀಟು ಸಿಕ್ಕಿದ್ದು ಅನುಕೂಲ ಆಯಿತು' ಎಂದರು ಮೇಘನಾ.

ನೇಕಾರನ ಮಗ 'ಚಿನ್ನ'ದ ಹುಡುಗ

ಬೆಂಗಳೂರಿನ ಎಸ್.ಜೆ.ಬಿ. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಾಜಿಯ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿ ಎಲ್. ಮೋಹನಕುಮಾರ 7 ಚಿನ್ನದ ಪದಕ ಸ್ವೀಕರಿಸಿದರು. ಮೋಹನಕುಮಾರ ತಂದೆ ಲೋಕೇಶ ವೃತ್ತಿಯಲ್ಲಿ ಕೂಲಿ ನೇಕಾರ. ಇಬ್ಬರು ಪುತ್ರಿಯರು ಮತ್ತು ಪುತ್ರನ್ನು ಕೂಲಿ ಮಾಡಿ ಓದಿಸುತ್ತಿದ್ದಾರೆ. ಪುತ್ರ ಏಳು ಚಿನ್ನದ ಪದಕ ಬಾಚಿ ಕೊಂಡಿದ್ದನ್ನು ಲೋಕೇಶ ಬೆರಗುಗಣ್ಣಿನಿಂದ ನೋಡಿದರು.

'ಕೂಲಿ ಸಂಬಳದಲ್ಲಿ ಮಕ್ಕಳನ್ನು ಬೆಳೆಸಿದ್ದೇನೆ. ಮಗನ ಸಾಧನೆ ನನ್ನ ಕಷ್ಟ ಮರೆಸಿದೆ. ನನ್ನ ಜೀವನ ಬಡತನದಲ್ಲೇ ಮುಗಿಯಿತು. ಮಕ್ಕಳು ಹೆಮ್ಮೆ ತಂದುಕೊಟ್ಟಿದ್ದಾರೆ' ಎಂದರು.

'ಮಾಹೆ'ಯ ಮೊದಲ ಕುಲಪತಿ ಡಾ.ಎಂ.ಎಸ್. ವಲ್ಯತ್ತಾನ್ ನಿಧನ

ಪ್ರಜಾವಾಣಿ ವಾರ್ತೆ

ಉಡುಪಿ: ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್‌ನ (ಮಾಹೆ) ಮೊದಲ ಕುಲಪತಿ ಹಾಗೂ ಪ್ರಸಿದ್ಧ ಹೃದಯ ಶಸ್ತ್ರಚಿಕಿತ್ಸಕ ಡಾ.ಎಂ.ಎಸ್. ವಲ್ಯತ್ತಾನ್ (90) ಮಣಿಪಾಲದ ಆಸ್ಪತ್ರೆಯಲ್ಲಿ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ.

ತಿರುವನಂತಪುರದ ವೈದ್ಯಕೀಯ ಕಾಲೇಜಿನಲ್ಲಿ ಶಿಕ್ಷಣ ಪೂರೈಸಿದ್ದ ಅವರು, ರಾಯಲ್ ಕಾಲೇಜ್ ಆಫ್ ಸರ್ಜನ್ಸ್ ಆಫ್ ಎಡಿನ್‌ಬರ್ಗ್, ಇಂಗ್ಲೆಂಡ್ ಮತ್ತು ಕೆನಡಾದಿಂದ ಫೆಲೋಶಿಪ್ ಪಡೆದಿದ್ದರು.

ಹೃದಯ ಶಸ್ತ್ರಚಿಕಿತ್ಸೆ ಮತ್ತು ವೈದ್ಯಕೀಯ ತಂತ್ರಜ್ಞಾನಕ್ಕೆ ಅವರು ಗಮನಾರ್ಹ ಕೊಡುಗೆ ನೀಡಿದ್ದರು. ಹೃದಯ ಕವಾಟದಂತಹ ವೈದ್ಯಕೀಯ ಸಾಧನಗಳನ್ನು ಅಭಿವೃದ್ಧಿಪಡಿಸುವಲ್ಲಿ ಅವರ ಕೊಡುಗೆ ಮಹತ್ವದ್ದು. ವಲ್ಯತ್ತಾನ್ ಅವರು 1993 ರಿಂದ ಮಣಿಪಾಲದ ಮಾಹೆಯಲ್ಲಿ ಕುಲಪತಿಯಾಗಿ ಕಾರ್ಯ ನಿರ್ವಹಿಸಿದ್ದರು.



ಡಾ.ಎಂ.ಎಸ್. ವಲ್ಯತ್ತಾನ್

2005ರಲ್ಲಿ ಪದ್ಮವಿಭೂಷಣ, 2002ರಲ್ಲಿ ಪದ್ಮಶ್ರೀ ಪುರಸ್ಕಾರಗಳಿಗೆ ಭಾಜನರಾಗಿದ್ದರು.

ವಲ್ಯತ್ತಾನ್ ಅವರ ಅಂತ್ಯಕ್ರಿಯೆ ನಗರದ ಬೀಡಿನಗುಡ್ಡೆ ಸ್ಮಶಾನದಲ್ಲಿ ಗುರುವಾರ ನೆರವೇರಿತು.

ಶ್ರೇಯಸ್–ಪ್ರಭಾ ಆಯ್ಕೆ ಅಸಿಂಧು ಕೋರಿ ಹೈಕೋರ್ಟ್‌ಗೆ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಗೆದ್ದಿರುವ ಹಾಸನದ ಶ್ರೇಯಸ್ ಎಂ.ಪಟೇಲ್ ಮತ್ತು ದಾವಣಗೆರೆಯ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರ ಆಯ್ಕೆಯ ಸಿಂಧುತ್ವವನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಎರಡು ಪ್ರತ್ಯೇಕ ಚುನಾವಣಾ ತಕರಾರು ಅರ್ಜಿಗಳನ್ನು ದಾಖಲಿಸಲಾಗಿದೆ.

ಗುರುವಾರ ಈ ಅರ್ಜಿಗಳು ಸಲ್ಲಿಕೆಯಾಗಿವೆ. ಇವು ದಸ್ತಾವೇಜು ಕಚೇರಿಯಲ್ಲಿ ಪರಿಶೀಲನೆಗೆ ಒಳಗಾದ ನಂತರ ವಿಚಾರಣೆಗೆ ನಿಗದಿ ಆಗಬೇಕಿದೆ.

ಶ್ರೇಯಸ್ ಪಟೇಲ್ ಆಯ್ಕೆ ಅಸಿಂಧು ಕೋರಿ ಹೈಕೋರ್ಟ್ ವಕೀಲ ಜಿ.ದೇವರಾಜೇಗೌಡ ಪುತ್ರ ಡಿ.ಚರಣ್ ಗೌಡ ಅರ್ಜಿ ಸಲ್ಲಿಸಿದ್ದು, 'ಶ್ರೇಯಸ್ ಪಟೇಲ್ ಚುನಾವಣೆ ವೇಳೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ತಮ್ಮ ಆಸ್ತಿ ವಿವರಗಳನ್ನು ಪ್ರಾಮಾಣಿಕವಾಗಿ ನಮೂದಿಸಿಲ್ಲ. ಐದು ವರ್ಷಗಳ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿಲ್ಲ' ಎಂದು ತಕರಾರು ಎತ್ತಿದ್ದಾರೆ.

ಡಾ. ಪ್ರಭಾ ಮಲ್ಲಿಕಾರ್ಜುನ ಆಯ್ಕೆ ಅಸಿಂಧು ಕೋರಿ ಬಿಜೆಪಿಯ ಪರಾಜಿತ ಅಭ್ಯರ್ಥಿ ಜಿ.ಎಸ್.ಗಾಯತ್ರಿ ಸಿದ್ದೇಶ್ವರ ಅರ್ಜಿ ಸಲ್ಲಿಸಿದ್ದಾರೆ.

'ಪ್ರಭಾ ಅವರು, ಮತದಾರರಿಗೆ ಕಾಂಗ್ರೆಸ್ ಗ್ಯಾರಂಟಿ ಕಾರ್ಡ್ ವಿತರಿಸುವ ಮೂಲಕ ಮಹಿಳೆಯರಿಗೆ ವರ್ಷಕ್ಕೆ ₹1 ಲಕ್ಷ ಕೊಡುವ ಭರವಸೆ ನೀಡಿದ್ದಾರೆ. ಇದು ಪ್ರಜಾಪ್ರತಿನಿಧಿ ಕಾಯ್ದೆ–1951ರ ಕಲಂ 123(1), 123(2), 123(4), 123(6)ಕ್ಕೆ ವಿರುದ್ಧ' ಎಂದಿದ್ದಾರೆ.

ಮುಡಾ; ತನಿಖೆಗೆ ಅಲ್ಪವಿರಾಮ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನಗಳ ಅಕ್ರಮ ಹಂಚಿಕೆ ಪ್ರಕರಣದ ತನಿಖೆಗೆ ಸದ್ಯ ಅಲ್ಪವಿರಾಮ ಬಿದ್ದಿದ್ದು, ದಾಖಲೆಗಳಿರುವ ಕೊಠಡಿಗಳು 'ಸೀಲ್' ಸ್ಥಿತಿಯಲ್ಲೇ ಇವೆ.

ಪ್ರಕರಣದ ತನಿಖೆಗಾಗಿ ಸರ್ಕಾರವು ನಿವೃತ್ತ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ಅವರ ಏಕಸದಸ್ಯ ವಿಚಾರಣಾ ಆಯೋಗವನ್ನು ನೇಮಿಸಿ ಜುಲೈ 14ರಂದು ಆದೇಶ ಹೊರಡಿಸಿದ್ದು, ವಿಚಾರಣೆಗಾಗಿ ಆಯೋಗವು ಮುಡಾ ಕಚೇರಿಗೆ ಇನ್ನೂ ಬಂದಿಲ್ಲ. ಜುಲೈ 1ರಂದು ಸರ್ಕಾರ ನೇಮಿಸಿದ್ದ ಆರ್. ವೆಂಕಟಾಚಲಪತಿ ನೇತೃತ್ವದ ತನಿಖಾ ಸಮಿತಿಯು ಜುಲೈ 13ರವರೆಗೆ ತನಿಖೆ ನಡೆಸಿ ತೆರಳಿದೆ. ಕಂದಾಯ ಪಾವತಿ ಸೇರಿದಂತೆ ಮುಡಾದ ಬಹುತೇಕ ಸೇವೆಗಳು ಎಂದಿನಂತೆ ನಡೆದಿವೆ.

ಸಂಕ್ಷಿಪ್ತ ಸುದ್ದಿ

ಸಜೀವ ದಹನ ಪ್ರಕರಣ: ಮೃತರ ಸಂಖ್ಯೆ ಮೂರಕ್ಕೆ

ಮಹಾಲಿಂಗಪುರ (ಬಾಗಲಕೋಟೆ ಜಿಲ್ಲೆ): ರನ್ನಬೆಳಗಲಿ ಪಟ್ಟಣ ವ್ಯಾಪ್ತಿಯಲ್ಲಿ ಈಚೆಗೆ ನಡೆದ ಇಬ್ಬರ ಸಜೀವ ದಹನ ಪ್ರಕರಣದಲ್ಲಿ ಮೃತರ ಸಂಖ್ಯೆ ಮೂರಕ್ಕೆ ಏರಿದೆ. ತಾಯಿ ಜೈಬಾನು ಮತ್ತು ಪುತ್ರಿ ಶಬಾನಾ ಸ್ಥಳದಲ್ಲೇ ಮೃತಪಟ್ಟಿದ್ದರು. ಜೈಬಾನು ಅವರ ಪುತ್ರ ಸುಬಾನ ಪೆಂಡಾರಿ (27) ಗುರುವಾರ ಆಸ್ಪತ್ರೆಯಲ್ಲಿ ಮೃತಪಟ್ಟರು.



ಸುಬಾನ ಪೆಂಡಾರಿ

'ಶೇ 75ಕ್ಕೂ ಹೆಚ್ಚು ಸುಟ್ಟ ಗಾಯಗಳಾಗಿದ್ದ ಸುಬಾನ ಅವರಿಗೆ ವಿವಿಧೆಡೆ ಚಿಕಿತ್ಸೆ ಕೊಡಿಸಲಾಗಿತ್ತು. ಬೆಳಗಾವಿಯಲ್ಲೇ ಮರಣೋತ್ತರ ಪರೀಕ್ಷೆ ನೆರವೇರಿಸಿ, ಮೃತದೇಹವನ್ನು ಕುಟುಂಬ ಸದಸ್ಯರಿಗೆ ಹಸ್ತಾಂತರಿಸಲಾಗುವುದು. ಜೈಬಾನು ಅವರ ಪತಿ ದಸ್ತಗೀರಸಾಬ ಪೆಂಡಾರಿ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿದೆ. ಪ್ರಕರಣದ ಆರೋಪಿಗಳ ಪತ್ತೆಗೆ ಶೋಧ ಕಾರ್ಯಾಚರಣೆ ಮುಂದುವರೆದಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಸಾಂಸ್ಕೃತಿಕ ಕ್ಷೇತ್ರ ವಸೂಲಿ ಬಾಜಿಗಳ ಸಂತೆ'

ಕಲಬುರಗಿ: 'ರಂಗಭೂಮಿ ಮತ್ತು ಸಾಂಸ್ಕೃತಿಕ ಕ್ಷೇತ್ರ ವಸೂಲಿ ಬಾಜಿಗಳ ಸಂತೆಯಾಗಿದೆ. ಅಧಿಕಾರಕ್ಕೆ ಬಂದ ರಾಜಕೀಯ ಪಕ್ಷಗಳ ವಕ್ತಾರರಿಗೆ ಪ್ರಶಸ್ತಿ, ಸ್ಥಾನಮಾನ ಸಿಗುತ್ತಿದೆ. ಇದರಿಂದ ಅರ್ಹರು ವಂಚಿತರಾಗುತ್ತಿದ್ದಾರೆ' ಎಂದು ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ.ನಾಗರಾಜ ಮೂರ್ತಿ ಅಸಮಾಧಾನ ವ್ಯಕ್ತಪಡಿಸಿದರು.

ನಗರದಲ್ಲಿ ಗುರುವಾರ ರಂಗಸಂಗಮ ಕಲಾ ವೇದಿಕೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಲಾವಿದರಿಗೆ ಜಂಗಮಶೆಟ್ಟಿ ರಂಗ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

'ರಾಜಕೀಯ ಪಕ್ಷಗಳು ಅಧಿಕಾರಕ್ಕೆ ಬಂದಾಗ ಅವರ ಹಿಂಬಾಲಕರಿಗೆ ಪ್ರಶಸ್ತಿ ಸಿಗುವುದು ಸಹಜ ಎನ್ನುವಶ ರೀತಿಯಲ್ಲಿ ನಡೆದುಕೊಂಡು ಬರುತ್ತಿದೆ. ಅರ್ಹರಿಗೆ ಪ್ರಶಸ್ತಿಗಳು ಸಿಗುತ್ತಿಲ್ಲ' ಎಂದ ಅವರು, ರಂಗಸಂಗಮದಂತಹ ಕಲಾ ವೇದಿಕೆಗಳು ಅರ್ಹರನ್ನು ಹುಡುಕಿ ಅವರಿಗೆ ಗೌರವ, ಸತ್ಕಾರ ಮಾಡುತ್ತಿರುವುದು ಹೆಮ್ಮೆಯ ವಿಷಯ' ಎಂದರು.

ಮಗು ಸಾವು; ಡೆಂಗಿ ಶಂಕೆ

ಧಾರವಾಡ: ಜ್ವರದಿಂದ ಬಳಲುತ್ತಿದ್ದ ಐದು ತಿಂಗಳ ಹೆಣ್ಣು ಮಗು ಆರಾಧ್ಯಾ ಲಮಾಣಿ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಬುಧವಾರ ತಡರಾತ್ರಿ ಮೃತಪಟ್ಟಿದೆ. ಡೆಂಗಿ ಶಂಕೆ ವ್ಯಕ್ತವಾಗಿದೆ.

'ಪೊಲೀಸ್ ಕಾನ್‌ಸ್ಟೆಬಲ್ ಗೋಪಾಲ ಲಮಾಣಿ ಪುತ್ರಿ ಆರಾಧ್ಯಾಗೆ ಡೆಂಗಿ ಜ್ವರ ಲಕ್ಷಣಗಳಿದ್ದವು. ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಎನ್‌ಎಸ್1 ಪರೀಕ್ಷೆಯಲ್ಲಿ ಡೆಂಗಿ ಪತ್ತೆಯಾಗಿದೆ. ರಕ್ತವನ್ನು ಪರೀಕ್ಷೆಗೆ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ' ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಶಶಿ ಪಾಟೀಲ 'ಪ್ರಜಾವಾಣಿ'ಗೆ ತಿಳಿಸಿದರು.

ಶಾಲೆಯಿಂದ ಹೊರಗುಳಿದ ಮಕ್ಕಳ ಪತ್ತೆಗೆ ಸಮೀಕ್ಷೆ

ಬೆಂಗಳೂರು: ಈ ಸಾಲಿನಲ್ಲಿ ಶಾಲೆಯಿಂದ ಹೊರಗೆ ಉಳಿದ ಮಕ್ಕಳನ್ನು ಗುರುತಿಸಿ, ಅವರನ್ನು ಮುಖ್ಯವಾಹಿನಿಗೆ ಕರೆತರುವ ಉದ್ದೇಶದಿಂದ ಮನೆ–ಮನೆ ಸಮೀಕ್ಷೆ ನಡೆಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಆದೇಶಿಸಿದೆ.

ಸಮೀಕ್ಷೆಗೆ ಸ್ವಸಹಾಯ ಗುಂಪುಗಳ ಸದಸ್ಯ ಮಹಿಳೆಯರನ್ನು ಗುರುತಿಸುವ ಕೆಲಸವನ್ನು ಶುಕ್ರವಾರವೇ (19ನೇ ಜುಲೈ) ನಡೆಸಬೇಕು. ಇದೇ 20–22ರ ಮಧ್ಯೆ ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಮಟ್ಟದ ಅಧಿಕಾರಿಗಳ ಸಭೆ ನಡೆಸಿ, ಜುಲೈ 31ರ ಒಳಗೆ ಸಮೀಕ್ಷೆಯನ್ನು ಪೂರ್ಣಗೊಳಿಸಬೇಕು ಎಂದು ಸುತ್ತೋಲೆ ಹೊರಡಿಸಿದೆ.

ಕುಟುಂಬ ಕಲಹ: ಪತ್ನಿ, ಅತ್ತೆ, ಮಾವನ ಕೊಲೆ

ಪ್ರಜಾವಾಣಿ ವಾರ್ತೆ

ಸೈದಾಪುರ (ಯಾದಗಿರಿ ಜಿಲ್ಲೆ): ಕೌಟುಂಬಿಕ ಸಮಸ್ಯೆ ಕಾರಣಕ್ಕೆ ವ್ಯಕ್ತಿಯೊಬ್ಬ ತನ್ನ ಪತ್ನಿ, ಅತ್ತೆ ಹಾಗೂ ಮಾವವನ್ನು ಬುಧವಾರ ಕೊಲೆ ಮಾಡಿದ್ದಾನೆ.

ಯಾದಗಿರಿ ತಾಲ್ಲೂಕಿನ ಮುನಗಾಲ ಗ್ರಾಮದ ನಿವಾಸಿ ನವೀನ್ ದೇವೀಂದ್ರಪ್ಪ (35) ಕುಟುಂಬದಲ್ಲಿ ಉಂಟಾದ ಕಲಹದ ಕಾರಣಕ್ಕೆ ಪತ್ನಿ ಅನ್ನಪೂರ್ಣ (25), ಅತ್ತೆ ಕವಿತಾ (45) ಹಾಗೂ ಮಾವ ಬಸವರಾಜಪ್ಪ (52) ಅವರನ್ನು ಕೊಲೆ ಮಾಡಿದ್ದಾನೆ. ಕೊಲೆಯಾದ ಮೂವರೂ ದಾವಣಗೆರೆ ಮೂಲದವರಾಗಿದ್ದಾರೆ.



ನವೀನ್



ಅನ್ನಪೂರ್ಣ



ಕವಿತಾ



ಬಸವರಾಜಪ್ಪ

ಘಟನೆ ವಿವರ: ನಾಲ್ಕು ವರ್ಷಗಳ ಹಿಂದೆ ಪ್ರೀತಿಸಿ ದಾವಣಗೆರೆ ಮೂಲದ ಅನ್ನಪೂರ್ಣ ಅವರನ್ನು ನವೀನ್ ಮದುವೆಯಾಗಿದ್ದ. ದಂಪತಿಗೆ ಒಂದು ಗಂಡು ಮಗು ಇದೆ.

ಒಂದು ವರ್ಷದ ಹಿಂದೆ ಗಂಡನ ಕಿರುಕುಳ ತಾಳಲಾರದೆ ಅನ್ನಪೂರ್ಣ ತವರು ಮನೆಗೆ ಹೋಗಿ ತಂದೆ–ತಾಯಿ ಜೊತೆಗೆ ವಾಸವಾಗಿದ್ದರು. ಜೊತೆಗೆ ಇರೋಣ ಎಂದು ನವೀನ್ ಕರೆದಿದ್ದರಿಂದ ನ್ಯಾಯ ಪಂಚಾಯಿತಿ ಮಾಡಿದ ಬಳಿಕ ಅನ್ನಪೂರ್ಣ ಪೋಷಕರ ಜೊತೆಗೆ ಬುಧವಾರ ಸೈದಾಪುರಕ್ಕೆ ಬಂದಿದ್ದರು.

ಶಹಾಪುರ ತಾಲ್ಲೂಕಿನ ಮನಗನಾಳ–ಖಾನಾಪುರ ನಡುವೆ ಬುಧವಾರ ರಾತ್ರಿ ಕಬ್ಬಿಣದ ರಾಡ್ ಹಾಗೂ ಚಾಕುನಿಂದ ಇರಿದು ಮೂವರನ್ನು ನವೀನ್ ಕೊಲೆ ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತದೇಹಗಳನ್ನು ಕಾರಿನಲ್ಲಿ ತೆಗೆದುಕೊಂಡು ಹೋಗಿದ್ದ ನವೀನ್, ಸಂಗಮ–ಗೋನಾಲ ನಡುವೆ ಮಾವನ ಶವವನ್ನು ಹಾಗೂ ಬೆಂಡೆಬೆಂಬಳಿ–ಜೋಳದಡಿಗಿ ರಸ್ತೆ ಪಕ್ಕದ ಮುಳ್ಳು ಕಂಟಿಯಲ್ಲಿ ಪತ್ನಿ ಮತ್ತು ಅತ್ತೆಯ ಮೃತದೇಹಗಳನ್ನು ಎಸೆದಿದ್ದಾನೆ. ಮೂವರ ಮೃತದೇಹಗಳು ಗುರುವಾರ ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ವಡಗೇರಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಚಿತ್ರರಂಗವೇ ಮುಳುಗುತ್ತದೆಂಬ ಭಯವಿದೆ

ರ್‍ಯಾಪರ್ ಚಂದನ್ ಶೆಟ್ಟಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿರುವ 'ವಿದ್ಯಾರ್ಥಿ ವಿದ್ಯಾರ್ಥಿನಿಯರೇ' ಚಿತ್ರ ಇಂದು (ಜು.19) ತೆರೆ ಕಾಣುತ್ತಿದೆ. ಪಾತ್ರ, ಸಿನಿಮಾ ಮತ್ತು ಸಂಗೀತ ಪಯಣದ ಬಗ್ಗೆ ಮಾತನಾಡಿದ್ದಾರೆ.



ಚಂದನ್ ಶೆಟ್ಟಿ

• ಈ ಚಿತ್ರದಲ್ಲಿ ನಿಮ್ಮ ಪಾತ್ರವೇನು?

ಚಿತ್ರದ ಮೊದಲಾರ್ಧದಲ್ಲಿ ಗುಮಾಸ್ತನಾಗಿ ಕಾಣಿಸಿಕೊಳ್ಳುತ್ತೇನೆ. ಆದರೆ ದ್ವಿತೀಯಾರ್ಧದಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿರುತ್ತೇನೆ. ಗೇಮ್ ಡೆವಲಪರ್ ಪಾತ್ರ. ಚಿತ್ರದ ಶೀರ್ಷಿಕೆಯೇ ಹೇಳುವಂತೆ ಇದೊಂದು ಕಾಲೇಜಿನ ಕಥೆ. ಹೀಗಾಗಿ ಚಿತ್ರದಲ್ಲಿ ನಾಯಕ ಎಂದಿಲ್ಲ. ನಾಲ್ಕು ಪ್ರಮುಖ ಪಾತ್ರಗಳಿವೆ. ಅದರಲ್ಲಿ ಒಂದು ಪಾತ್ರ ನನ್ನದು.

• ಚಿತ್ರೀಕರಣದ ಅನುಭವ ಹೇಗಿತ್ತು?

ನಟನಾಗಿ ನನಗೆ ಇದು ಮೊದಲ ಸಿನಿಮಾ. ಹೀಗಾಗಿ ನಟನೆಗೆ ಸಾಕಷ್ಟು ತಯಾರಿ ಬೇಕಿತ್ತು. ಪಾತ್ರವಾಗಿ ತೊದಲುತ್ತ ಮಾತನಾಡಬೇಕಿತ್ತು. ಇದು ನನಗೆ ಬಹಳ ಸವಾಲು ಎನಿಸಿತು. ಇಲ್ಲಿ ತನಕ ನಾನು ರಿಚ್ ಆಗಿರುವ ಚಿತ್ರೀಕರಣಗಳಲ್ಲಿಯೇ ಭಾಗಿಯಾಗಿದ್ದೆ. ಆದರೆ ಇಲ್ಲಿ ನನ್ನದು ಗುಮಾಸ್ತನ ಪಾತ್ರ. ಹೀಗಾಗಿ ಗೆಟಪ್‌ನಿಂದ ಹಿಡಿದು ಎಲ್ಲವೂ ಸವಾಲಾದವು. ನನ್ನ ಕಂಫರ್ಟ್ ಜೋನ್‌ನಿಂದ ಹೊರಬರಬೇಕಿತ್ತು. ಮೊದಲು ಕೆಲವು ದಿನಗಳ ಚಿತ್ರೀಕರಣ ಸ್ವಲ್ಪ ಕಷ್ಟವಾಯ್ತು.

• ಸಂಗೀತ ಮತ್ತು ನಟನೆಗೆ ಹೋಲಿಸಿದರೆ ನಿಮಗೆ ಯಾವುದು ಸುಲಭ?

ಎರಡೂ ಸುಲಭವಲ್ಲ. ಆದರೆ ಸಂಗೀತದಲ್ಲಿ ಹಿಡಿತ ಹೆಚ್ಚಿದೆ. ನಟನೆ ಹೊಸತು. ಸಂಗೀತದಲ್ಲಿ ಏಳುಬೀಳುಗಳನ್ನೆಲ್ಲ ನೋಡಿಯಾಗಿದೆ. ನಟನಾಗಿ ಜನ ಹೇಗೆ ಸ್ವೀಕರಿಸುತ್ತಾರೆ ಎಂಬ ಆತಂಕ, ಭಯವಿದೆ. ಜನರ ಪ್ರತಿಕ್ರಿಯೆ ಹೇಗಿರುತ್ತದೆ ಎಂದು ನೋಡಬೇಕು. ಕಾರ್ಯಕ್ರಮಗಳಲ್ಲಿ ನನ್ನ ಮ್ಯೂಸಿಕ್‌ಗೆ ಹುಚ್ಚೆದ್ದು ಕುಣಿಯುವ ಅಭಿಮಾನಿಗಳೆಲ್ಲ ಚಿತ್ರಮಂದಿರಕ್ಕೆ ಬಂದು ಸಿನಿಮಾ ನೋಡುತ್ತಾರೆಯೇ ಎಂಬ ಪ್ರಶ್ನೆಯಿದೆ. ಸಂಗೀತದಲ್ಲಿ ಸೋಲು, ತಪ್ಪುಗಳು ಅಭ್ಯಾಸವಾಗಿದೆ. ಏನೇ ಸೋಲಾದ್ರು ಧೈರ್ಯ ತಂದುಕೊಳ್ಳುತ್ತೇನೆ. ಅಲ್ಲಿ ಆತ್ಮವಿಶ್ವಾಸ ಹೆಚ್ಚಿದೆ. ಇಲ್ಲಿ ಎಲ್ಲವನ್ನೂ ಹೊಸತಾಗಿ ಕಲಿಯುತ್ತಿದ್ದೇನೆ.

• ಇವತ್ತಿನ ಸ್ಥಿತಿಯಲ್ಲಿ ಸ್ಟಾರ್‌ಗಳ ನಡುವೆ ಹೊಸ ನಟನಿಗೆ ಭವಿಷ್ಯವಿದೆ ಎನ್ನಿಸುತ್ತದೆಯಾ?

ಬಹಳ ಕಷ್ಟವಿದೆ. ಒಳ್ಳೆಯ ಸಿನಿಮಾದ ವ್ಯಾಖ್ಯಾನವೇ ಕಷ್ಟವಾಗಿದೆ. ಕೆಲ ಒಳ್ಳೆಯ ಸಿನಿಮಾಗಳಿಗೆ ಜನರ ಬರಲಿಲ್ಲ ಎಂಬುದನ್ನು ಕೇಳಿದ್ದೇನೆ. ಇವತ್ತು ಚಿತ್ರ ಚೆನ್ನಾಗಿದೆ, ಸರಾಸರಿಯಾಗಿದೆ ಎಂದರೆ ಜನ ಚಿತ್ರಮಂದಿರಕ್ಕೆ ಬರುವುದಿಲ್ಲ. ಅತ್ಯದ್ಭುತವಾಗಿದೆ, ನೋಡಲೇಬೇಕು ಎಂಬ ರಿಪೋರ್ಟ್ ಬಂದರೆ ಮಾತ್ರ ಜನ ಬರುತ್ತಾರೆ. ಇಲ್ಲವಾದರೆ ಆ ಸಿನಿಮಾ ಕಥೆ ಮುಗಿಯಿತು ಎಂದರ್ಥ. ಈಗಿನ ಪರಿಸ್ಥಿತಿ ನೋಡಿದರೆ ಕನ್ನಡ ಚಿತ್ರರಂಗವೇ ಮುಳುಗುವ ಹಂತ ತಲುಪುತ್ತಿದೆಯೇನೋ ಎಂಬ ಆತಂಕ ಮನೆ ಮಾಡಿದೆ. ತಮಿಳು, ಮಲಯಾಳಂ ಭಾಷೆಗಳಂತೆ ಇಲ್ಲಿಯೂ ದೊಡ್ಡ ನಟರುಗಳು ಹೊಸಬರ ಬೆಂಬಲಕ್ಕೆ ಬರಬೇಕು. ಒಳ್ಳೆಯ ಸಿನಿಮಾಗಳು ಬಂದಾಗ ಜೊತೆಗೆ ನಿಂತು ಪ್ರಚಾರ ಮಾಡಬೇಕು. ಆಗ ಮಾತ್ರ ಉದ್ಯಮ ಬೆಳೆಯಲು ಸಾಧ್ಯ. ಹೆಚ್ಚು ಸ್ಟಾರ್‌ಗಳು ಹುಟ್ಟಿದಾಗಲೇ ಉದ್ಯಮದ ವಿಸ್ತಾರವಾಗುತ್ತದೆ. ಆದರೆ ನಮ್ಮಲ್ಲಿ ಆ ಕೆಲಸ ನಡೆಯುತ್ತಿಲ್ಲ.

• ಸಂಗೀತ ನಿರ್ದೇಶಕನಾಗಿ ನಿಮ್ಮ ಬಳಿ ಇರುವ ಪ್ರಾಜೆಕ್ಟ್‌ಗಳು ಬಗ್ಗೆ...

ನನ್ನ ಸಂಯೋಜನೆಯ 'ಕರಾಬು' ಹಾಡನ್ನು 31 ಕೋಟಿ ಜನ ನೋಡಿದ್ದಾರೆ. ಇದು ಇವತ್ತಿಗೂ ನಂಬರ್ ಒನ್ ಸಾಂಗ್. ನಾನೇ ಸ್ವತಂತ್ರವಾಗಿ (...ನೋಡಿದ) 'ಮೂರೇ ಮೂರು ಪೆಗ್ಗಿಗೆ' ಹಾಡು ಕೂಡ ಯೂಟ್ಯೂಬ್‌ನಲ್ಲಿ ದಾಖಲೆಯ ವೀಕ್ಷಣೆ ಪಡೆದಿದೆ. ಇಷ್ಟಾಗಿಯೂ ಸಂಗೀತ ನಿರ್ದೇಶಕನಾಗಿ ನನ್ನ ಕೈಯ್ಯಲ್ಲಿ ಸಿನಿಮಾಗಳಿಲ್ಲ. ಯಾಕೆ ಎಂಬ ಪ್ರಶ್ನೆ ಯಾವಾಗಲೂ ಕಾಡುತ್ತಿದೆ. ಯೂಟ್ಯೂಬ್ ನನಗೆ ಒಂದು ರೀತಿ ಜೀವನಾಧಾರ. ನನ್ನ ಆದಾಯದ ಮೂಲ. ಹೀಗಾಗಿ ಅಲ್ಲಿ ನನ್ನ ಕೆಲಸಗಳು ಮುಂದುವರಿಯುತ್ತವೆ. ವರ್ಷಕ್ಕೆ 2–3 ಹೊಸ ಹಾಡು ಬಿಡುಗಡೆ ಮಾಡುತ್ತೇನೆ. ಆ ನಿಟ್ಟಿನಲ್ಲಿ ಕೆಲಸ ಮುಂದುವರಿದಿದೆ.

• ನಿಮ್ಮ ಮುಂದಿನ ಸಿನಿಮಾಗಳು...

ನಾನು ಪೂರ್ಣ ಪ್ರಮಾಣದಲ್ಲಿ ನಾಯಕನಾಗಿ ನಟಿಸಿರುವ 'ಸೂತ್ರಧಾರಿ' ಚಿತ್ರ ಬಿಡುಗಡೆಗೆ ಸಿದ್ಧವಿದೆ. 'ಎಲ್ಲರ ಕಾಲೆಳೆಯುತ್ತೆ ಕಾಲ' ಕೂಡ ಬಿಡುಗಡೆಯಾಗಬೇಕಿದೆ. ನಿವೇದಿತಾ ಗೌಡ ಜೊತೆ 'ಕ್ಯಾಂಡಿಕ್ರಶ್' ಸಿನಿಮಾದಲ್ಲಿ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಬೇರೆ ಯಾವ ಸಿನಿಮಾಗಳನ್ನು ಒಪ್ಪಿಕೊಂಡಿಲ್ಲ.

ಸಿನಿಮಾದತ್ತಲೇ ಲಿಯೋನಿಲ್ಲಾ ಚಿತ್ತ



ಅಭಿಲಾಷ್ ಪಿ.ಎಸ್.

ಕರಾವಳಿಯಿಂದ ಹಲವು ಕಲಾವಿದರು ಚಂದನವನಕ್ಕೆ ಹೆಜ್ಜೆ ಇಟ್ಟಿದ್ದಾರೆ. ಈ ಪೈಕಿ 'ಖಾಸಗಿ ಪುಟಗಳು' ಸಿನಿಮಾ ಮೂಲಕ ನಾಯಕಿಯಾಗಿದ ಲಿಯೋನಿಲ್ಲಾ ಶ್ವೇತಾ ಡಿಸೋಜಾ ಅವರೂ ಒಬ್ಬರು. ಅವರ ನಟನೆಯ 'ಪ್ಯಾರಲಲ್ ಲೈಫ್' ಎಂಬ ಭಿನ್ನವಾದ ಜಾನರ್‌ನ ಹರ್ಷಪ್ರಿಯ ನಿರ್ದೇಶನದ 'ಹೆಜ್ಜಾರು' ಇಂದು ತೆರೆಕಾಣುತ್ತಿದೆ. ಈ ಹೊಸ್ತಿಲಲ್ಲಿ ಲಿಯೋನಿಲ್ಲಾ ಜೊತೆಗೊಂದು ಮಾತುಕತೆ.

'ನಾನು ದಕ್ಷಿಣ ಕನ್ನಡದ ಬಜ್ಪೆ ಸಮೀಪದವಳು. ಮಂಗಳೂರಿನಲ್ಲೇ ಪದವಿಪೂರ್ವ ಶಿಕ್ಷಣ ಪೂರ್ಣಗೊಳಿಸಿ, ಎಂಜಿನಿಯರಿಂಗ್ ವಿದ್ಯಾಭ್ಯಾಸಕ್ಕೆ ರಾಜಧಾನಿಗೆ ಕಾಲಿಟ್ಟೆ. ಎಂಜಿನಿಯರಿಂಗ್ ಬಳಿಕ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡಿದೆ. ಕಿರುಚಿತ್ರದ ಮೂಲಕ ಬಣ್ಣದ ಲೋಕಕ್ಕೆ ಕಾಲಿಟ್ಟ ನಾನು 'Y' ಎಂಬ ಹಿಂದಿ ಸಿನಿಮಾದಲ್ಲಿ ಅಭಿನಯಿಸಿದೆ. ಇದು ನನ್ನ ಮೊದಲ ಸಿನಿಮಾ' ಎಂದು ಮಾತು ಆರಂಭಿಸಿದರು ಲಿಯೋನಿಲ್ಲಾ.

'ನಟನೆ, ಸಿನಿಮಾದ ಯಾವ ಹಿನ್ನೆಲೆಯೂ ನನಗಿಲ್ಲ. ನಟಿಯಾಗಬೇಕು ಎನ್ನುವ ಕನಸೂ ಇರಲಿಲ್ಲ. ಆರಂಭದಲ್ಲಿ ಸಿನಿಮಾ ಮಾಡುತ್ತಾ ಐ.ಟಿ. ಕೆಲಸವನ್ನೂ ಮಾಡುತ್ತಿದ್ದೆ. ರಜೆ ಹಾಕಿ ಶೂಟಿಂಗ್‌ನಲ್ಲಿ ಭಾಗವಹಿಸುತ್ತಿದ್ದೆ. ಇದೀಗ ಪೂರ್ಣಪ್ರಮಾಣದಲ್ಲಿ ಸಿನಿಮಾದತ್ತಲೇ ನನ್ನ ಚಿತ್ತವಿದೆ. 'ಖಾಸಗಿ ಪುಟಗಳು' ಶೂಟಿಂಗ್ ಬಳಿಕ ಸಣ್ಣದೊಂದು ಬ್ರೇಕ್ ತೆಗೆದುಕೊಂಡಿದ್ದೆ. 'ಹೆಜ್ಜಾರು' ಭಿನ್ನವಾದ ಕಂಟೆಂಟ್ ಇರುವ ಸಿನಿಮಾ. 'ರಾಜಾರಾಮ್' ಮತ್ತು 'ಭಗತ್' ಎಂಬ ಇಬ್ಬರ ನಡುವಿನ ಕಥೆಯಿದು. ರಾಜಾರಾಮ್ ಜೀವನದಲ್ಲಿ ನಡೆದ ಘಟನೆ ಭಗತ್ ಜೀವನದಲ್ಲೂ ಕೆಲ ವರ್ಷಗಳ ಬಳಿಕ ಪ್ಯಾರಲಲ್ ಆಗಿ ನಡೆಯುತ್ತಿರುತ್ತದೆ. ಈ ಪ್ರಶ್ನೆಯನ್ನು ಹುಡುಕುತ್ತಾ ಭಗತ್ ಜೀವನದ ಹಿಂದೆ ರಾಜಾರಾಮ್ ಬೀಳುತ್ತಾರೆ. ನಾನು ಈ ಸಿನಿಮಾದಲ್ಲಿ 'ಜಾನಕಿ' ಎಂಬ ಪಾತ್ರದಲ್ಲಿ ನಟಿಸಿದ್ದೇನೆ. ಈಕೆ ಭಗತ್ ಪ್ರೇಯಸಿ. ಮಧ್ಯಮ ವರ್ಗದ ಹುಡುಗಿ(ನ್ಯಾಚುರಲ್ ರಾ ಪಾತ್ರ ಈಕೆ.)' ಎಂದು ತಮ್ಮ ಪಾತ್ರವನ್ನು ವಿವರಿಸಿದರು.


'ಸಿನಿಮಾ ಆಯ್ಕೆ ವಿಚಾರದಲ್ಲಿ ನಾನೊಂದಿಷ್ಟು ಬೌಂಡರಿಗಳನ್ನು ಹಾಕಿಕೊಂಡಿದ್ದೇನೆ. 'ಖಾಸಗಿ ಪುಟಗಳು' ಸಿನಿಮಾ ಬಳಿಕ ಒಳ್ಳೆಯ ಪಾತ್ರಗಳ ನಿರೀಕ್ಷೆಯಲ್ಲಿದ್ದೆ. ಆಗ 'ಹೆಜ್ಜಾರು' ಸಿಕ್ಕಿತು. ಗ್ಲ್ಯಾಮರ್ ಎನ್ನುವುದಷ್ಟೇ ಮುಖ್ಯವಲ್ಲ. ನನ್ನ ಪಾತ್ರವು ಎಷ್ಟರ ಮಟ್ಟಿಗೆ ಪ್ರಭಾವ ಬೀರುತ್ತದೆ ಎನ್ನುವುದನ್ನೂ ನೋಡುತ್ತೇನೆ. ಜನರು ಆ ಪಾತ್ರಕ್ಕೆ ಕನೆಕ್ಟ್ ಆಗದೇ ಇದ್ದರೆ ಸಿನಿಮಾ ಮಾಡಿ ಪ್ರಯೋಜನವೇನು? 'ಹೆಜ್ಜಾರು' ಬಳಿಕ 'ನೆಲ್ಸನ್' ಒಪ್ಪಿಕೊಂಡಿದ್ದೆ. ಈ ಸಿನಿಮಾದ ಮೊದಲ ಹಂತದ ಚಿತ್ರೀಕರಣ ಪೂರ್ಣಗೊಂಡಿದೆ. ಜೊತೆಗೆ ಅನೂಪ್ ಕಶ್ಯಪ್ ಅವರ 'ಗಾಂಧಿ ಸ್ಕ್ವೇರ್' ಸಿನಿಮಾದ ಶೂಟಿಂಗ್ ಶೇ 80ರಷ್ಟು ಪೂರ್ಣಗೊಂಡಿದೆ. ರಮೇಶ್ ಇಂದಿರಾ ಅವರು ನಿರ್ದೇಶಿಸುತ್ತಿರುವ, ಪ್ರಮೋದ್ ಅವರು ನಾಯಕರಾಗಿ ನಟಿಸುತ್ತಿರುವ ಸಿನಿಮಾದಲ್ಲೂ ನಟಿಸುತ್ತಿದ್ದೇನೆ. ಹೊಸ ಕಥೆಗಳನ್ನು ಕೇಳುತ್ತಿದ್ದೇನೆ. ಮಾತುಕತೆ ನಡೆಯುತ್ತಿದೆ' ಎಂದರು.

ಮ್ಯಾಕ್ಸ್ ಟೀಸರ್ ರಿಲೀಸ್

ಸ್ಯಾಂಡಲ್‌ವುಡ್‌ನ ಅಭಿನಯ ಚಕ್ರವರ್ತಿ 'ಕಿಚ್ಚ' ಸುದೀಪ್ ಅವರ ಕೊನೆಯ ಸಿನಿಮಾ ಬಂದಿದ್ದು 2022ರ ಜುಲೈನಲ್ಲಿ. ಇದಾದ ಬಳಿಕ ಅವರ ಯಾವ ಸಿನಿಮಾವೂ ರಿಲೀಸ್ ಆಗಿಲ್ಲ. ಸುದೀಪ್ ನಟನೆಯ 'ಮ್ಯಾಕ್ಸ್' ಸಿನಿಮಾದ ರಿಲೀಸ್ ಯಾವಾಗ ಎನ್ನುವ ಅಭಿಮಾನಿಗಳ ನಿರಂತರ ಪ್ರಶ್ನೆಗೆ ಇದೀಗ ಉತ್ತರ ಸಿಕ್ಕಿದೆ.

ಸುದೀಪ್ ನಟನೆಯ 'ಮ್ಯಾಕ್ಸ್' ಚಿತ್ರದ ಟೀಸರ್ ರಿಲೀಸ್ ಆಗಿದ್ದು, ಆದಷ್ಟು ಶೀಘ್ರದಲ್ಲೇ ಸಿನಿಮಾ ತೆರೆಗೆ ಬರಲಿದೆ ಎಂದಿದೆ ಚಿತ್ರತಂಡ. ವಿಜಯ್ ಕಾರ್ತಿಕೇಯ ನಿರ್ದೇಶನದ ಈ ಆ್ಯಕ್ಷನ್ ಥ್ರಿಲ್ಲರ್ ಸಿನಿಮಾ ಪ್ಯಾನ್ ಇಂಡಿಯಾ ಮಟ್ಟದಲ್ಲಿ ತೆರೆಕಾಣುತ್ತಿದೆ. ಸುದೀಪ್ ಜೊತೆಗೆ 'ಪುಷ್ಪ' ಖ್ಯಾತಿಯ ಸುನೀಲ್, ವರಲಕ್ಷ್ಮೀ ಶರತ್ ಕುಮಾರ್, ಸಂಯುಕ್ತ ಹೊರನಾಡು, ಶರತ್ ಲೋಹಿತಾಶ್ವ, ಪ್ರಮೋದ್ ಶೆಟ್ಟಿ ಮುಂತಾದವರ ಪಾತ್ರದ ತುಣುಕುಗಳನ್ನು ಟೀಸರ್ ಹೊಂದಿದೆ.

'ಜೈಲರ್' ಸಿನಿಮಾಗೆ ಸಾಹಸ ನಿರ್ದೇಶನ ಮಾಡಿದ್ದ ಕೆವಿನ್ ಕುಮಾರ್ 'ಮ್ಯಾಕ್ಸ್'ನ ಕ್ಲೈಮ್ಯಾಕ್ಸ್‌ಗೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಚಿತ್ರಕ್ಕೆ ಅಜನೀಶ್ ಲೋಕನಾಥ್ ಸಂಗೀತ ಸಂಯೋಜನೆ ಮಾಡಿದ್ದು, ವಿ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ಕಲೈಪುಲಿ ಎಸ್. ತನು ಹಾಗೂ ಕಿಚ್ಚ ಸುದೀಪ್ ಕಿಚ್ಚ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ಈ ಚಿತ್ರವನ್ನು ನಿರ್ಮಿಸಿದ್ದಾರೆ.



ಮ್ಯಾಕ್ಸ್ ಸುದೀಪ್

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣ; 24ನೇ ಎಸಿಎಂಎಂ ನ್ಯಾಯಾಲಯ ಆದೇಶ

ನಟ ದರ್ಶನ್ ನ್ಯಾಯಾಂಗ ಬಂಧನ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಾದ ನಟ ದರ್ಶನ್ ಸೇರಿ 17 ಮಂದಿಯ ನ್ಯಾಯಾಂಗ ಬಂಧನದ ಅವಧಿಯನ್ನು ವಿಸ್ತರಿಸಿ 24ನೇ ಎಸಿಎಂಎಂ ನ್ಯಾಯಾಲಯ ಗುರುವಾರ ಆದೇಶಿಸಿದೆ.

ಈ ಹಿಂದೆ ನೀಡಲಾಗಿದ್ದ 14 ದಿನಗಳ ನ್ಯಾಯಾಂಗ ಬಂಧನದ ಅವಧಿ ಗುರುವಾರಕ್ಕೆ ಮುಕ್ತಾಯವಾಗಿತ್ತು. ಹೀಗಾಗಿ ಗುರುವಾರ ಜೈಲಿನಿಂದಲೇ ವಿಡಿಯೊ ಕಾನ್ಫರೆನ್ಸ್ ಮೂಲಕ ಆರೋಪಿಗಳನ್ನು ನ್ಯಾಯಾಧೀಶರ ಎದುರು ಹಾಜರು ಪಡಿಸಲಾಗಿತ್ತು. ಆರೋಪಿ ಪವಿತ್ರಾಗೌಡ ಅವರನ್ನು ಪ್ರತ್ಯೇಕವಾದ ಕೊಠಡಿಯಿಂದ ಹಾಜರುಪಡಿಸಲಾಗಿತ್ತು.

ಆರೋಪಿಗಳಿಗೆ ಆಗಸ್ಟ್ 1ರವರೆಗೆ ನ್ಯಾಯಾಂಗ ಬಂಧನ ವಿಸ್ತರಿಸಿ ನ್ಯಾಯಾಲಯ ಆದೇಶಿಸಿದೆ.

ದರ್ಶನ್ ಪರ ವಕೀಲರು ನ್ಯಾಯಾಲಯಕ್ಕೆ ಜಾಮೀನು ಅರ್ಜಿ ಸಲ್ಲಿಸಿಲ್ಲ. ಕೊಲೆ ಪ್ರಕರಣಗಳಲ್ಲಿ ಪೊಲೀಸರಿಗೆ ದೋಷಾರೋಪಣ ಪಟ್ಟಿ ಸಲ್ಲಿಸಲು 90 ದಿನಗಳವರೆಗೆ ಅವಕಾಶ ಇದೆ ಎಂದು ಮೂಲಗಳು ಹೇಳಿವೆ.

ದರ್ಶನ್ ಸೇರಿದಂತೆ 14 ಮಂದಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಇದ್ದಾರೆ. ರವಿಶಂಕರ್, ಕಾರ್ತಿಕ್ ಅಲಿಯಾಸ್ ಕಪ್ಪೆ, ಕೇಶವಮೂರ್ತಿ, ನಿಖಿಲ್ ನಾಯಕ್ ಅವರು ತುಮಕೂರು ಕಾರಾಗೃಹದಲ್ಲಿದ್ದಾರೆ.


ದರ್ಶನ್


ಪವಿತ್ರಾಗೌಡ

ಆರೋಪಿಗಳಿಗೆ ಜಾಮೀನು ನೀಡಿದರೆ ಸಾಕ್ಷ್ಯ ನಾಶಪಡಿಸುವ ಮತ್ತು ಬೆದರಿಕೆ ಹಾಕುವ ಸಾಧ್ಯತೆಯಿದೆ. ಸೆಕ್ಷನ್ 164ರ ಅಡಿ ಇನ್ನೂ ಕೆಲವರ ಹೇಳಿಕೆ ದಾಖಲು ಮಾಡಿಕೊಳ್ಳಬೇಕಿದೆ. ಹಣ ಬಲ ಹಾಗೂ ಪ್ರಭಾವವಿರುವ ಆರೋಪಿಗಳಿಗೆ ಜಾಮೀನು ನೀಡುವುದು ಸೂಕ್ತವಲ್ಲ. ಪ್ರಕರಣ ಇನ್ನೂ ತನಿಖಾ ಹಂತದಲ್ಲಿದ್ದು, ದರ್ಶನ್ ಹಾಗೂ ತಂಡಕ್ಕೆ ನ್ಯಾಯಾಂಗ ಬಂಧನ ಮುಂದುವರಿಸಲು ತನಿಖಾಧಿಕಾರಿಗಳು ನ್ಯಾಯಾಲಯದಲ್ಲಿ ಮನವಿ ಮಾಡಿದ್ದರು.

ಇನ್ನೂ ಕೈಸೇರದ ವರದಿ: ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್ಎಸ್ಎಲ್) ವರದಿ ಇನ್ನೂ ತನಿಖಾಧಿಕಾರಿಗಳ ಕೈಸೇರಿಲ್ಲ. ಕೆಲವೇ ದಿನಗಳಲ್ಲಿ ವರದಿ ಬರುವ ನಿರೀಕ್ಷೆಯಿದೆ ಎಂದು ಮೂಲಗಳು ತಿಳಿಸಿವೆ.

ಮನೆ ಊಟದಿಂದ ಹೆಚ್ಚು–ಕಮ್ಮಿಯಾದರೆ ಯಾರು ಹೊಣೆ?

ಬೆಂಗಳೂರು: 'ನಟ ದರ್ಶನ್‌ಗೆ ಮನೆ ಊಟ ಪಡೆಯಲು ಅನುಮತಿ ನೀಡಿದರೆ ಮತ್ತು ಅದನ್ನು ಉಂಡು ನಾಳೆ ಅವರಿಗೆ ಏನಾದರೂ ಹೆಚ್ಚುಕಡಿಮೆ ಆದರೆ ಅದಕ್ಕೆ ಜೈಲು ಅಧಿಕಾರಿಗಳೇ ಹೊಣೆಯಾಗಬೇಕಾಗುತ್ತದೆ. ಹಾಗಾಗಿ, ದರ್ಶನ್ ಕೋರಿರುವ ಮನೆ ಊಟ ಮತ್ತು ಇತರೆ ಸವಲತ್ತುಗಳ ಬೇಡಿಕೆಯನ್ನು ಯಾವ ಕಾರಣಕ್ಕೂ ಮನ್ನಿಸಬಾರದು' ಎಂದು ಪ್ರಾಸಿಕ್ಯೂಷನ್ ಹೈಕೋರ್ಟ್‌ಗೆ ಮನವಿ ಮಾಡಿದೆ.

'ನನಗೆ ಮನೆಯಿಂದ ಊಟ, ಬಟ್ಟೆ, ಚಾಕು, ಕತ್ತರಿ, ಫೋರ್ಕ್ ಮತ್ತು ಪುಸ್ತಕಗಳನ್ನು ತರಿಸಿಕೊಳ್ಳಲು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಜೈಲು ಅಧೀಕ್ಷಕರಿಗೆ ನಿರ್ದೇಶಿಸಬೇಕು' ಎಂದು ಕೋರಿ ದರ್ಶನ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್ ಮತ್ತು ಹೆಚ್ಚುವರಿ ಅಡ್ವೊಕೇಟ್ ಜನರಲ್ ವಿ.ಜಿ.ಭಾನುಪ್ರಕಾಶ್ ಅವರು ದರ್ಶನ್ ಅರ್ಜಿಗೆ ಸಂಬಂಧಿಸಿದಂತೆ ನ್ಯಾಯಪೀಠಕ್ಕೆ ಲಿಖಿತ ಆಕ್ಷೇಪಣೆ ಸಲ್ಲಿಸಿದರು.

ಆಕ್ಷೇಪಣೆಯಲ್ಲಿ ಏನಿದೆ?: 'ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣ ಇಡೀ ಕರ್ನಾಟಕವನ್ನೇ ಬೆಚ್ಚಿಬೀಳಿಸಿದೆ. ಈ ಪ್ರಕರಣದಲ್ಲಿ ಜೈಲಿನಲ್ಲಿರುವ ನಟ ದರ್ಶನ್ ಆರೋಗ್ಯ ಚೆನ್ನಾಗಿಯೇ ಇದೆ. ಒಂದು ವೇಳೆ ಏನಾದರೂ ವ್ಯತ್ಯಯ ಉಂಟಾದರೆ ಜೈಲಿನಲ್ಲೇ ಉತ್ತಮ ಚಿಕಿತ್ಸಾ ಸೌಲಭ್ಯವಿದೆ. ಅಂತೆಯೇ, ಪ್ರತಿಯೊಬ್ಬ ಕೈದಿಯ ಉತ್ತಮ ಆರೋಗ್ಯಕ್ಕಾಗಿ ಪೌಷ್ಟಿಕಾಂಶಯುಕ್ತ ಆಹಾರವನ್ನೇ ನೀಡಲಾಗುತ್ತಿದೆ' ಎಂದು ವಿವರಿಸಲಾಗಿದೆ.

'ಕರ್ನಾಟಕ ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಕೈಪಿಡಿ–2021ರ ನಿಯಮ 720 ಹಾಗೂ 728ರ ಅನುಸಾರ ಕೊಲೆ ಪ್ರಕರಣದ ವಿಚಾರಣಾಧೀನ ಕೈದಿಗಳನ್ನು ಜೈಲಿನಲ್ಲಿ ವಿಶೇಷ ನಿಗಾದಲ್ಲಿಯೇ ಇರಿಸಬೇಕಾಗುತ್ತದೆ. ಅವರು ಪರಾರಿಯಾಗುವ ಅಥವಾ ಆತ್ಮಹತ್ಯೆಗೆ ಪ್ರಯತ್ನಿಸುವಂತಹ ಸಾಧ್ಯತೆಗಳಿರುತ್ತವೆ. ಇಂತಹವರಿಗೆ ಖಾಸಗಿಯಾಗಿ ಮನೆಯಿಂದ ಊಟ, ಬಟ್ಟೆ, ಹಾಸಿಗೆ, ಕುಡಿಯುವ ನೀರಿನ ಲೋಟ, ತಟ್ಟೆ, ಚಪ್ಪಲಿ, ಚಮಚ, ಫೋರ್ಕ್ ಹಾಗೂ ಇತರೆ ಅಗತ್ಯ ವಸ್ತುಗಳನ್ನು ತರಿಸಿಕೊಳ್ಳಲು ಅವಕಾಶವಿಲ್ಲ' ಎಂದು ಸ್ಪಷ್ಟಪಡಿಸಿದೆ.

ಆಕ್ಷೇಪಣೆ ಸ್ವೀಕರಿಸಿದ ನ್ಯಾಯಪೀಠ ಶುಕ್ರವಾರ (ಜುಲೈ 19) ಅರ್ಜಿ ವಿಚಾರಣೆ ನಡೆಸುವುದಾಗಿ ತಿಳಿಸಿತು. ದರ್ಶನ್ ಪರ ಹಿರಿಯ ವಕೀಲ ಕೆ.ಎನ್.ಫಣೀಂದ್ರ ಹಾಜರಿದ್ದರು.



ಕಾಡಾನೆ ರಕ್ಷಣೆ... ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನ ಕೆ.ಬೈಗೋಡು ಗ್ರಾಮದ ಎಚ್.ಎ.ಗಣೇಶ್ ಅವರ ಮನೆ ಬಳಿ ಗುಂಡಿಗೆ ಬಿದ್ದು ಹೊರಬರಲಾಗದೆ ಒದ್ದಾಡುತ್ತಿದ್ದ ಕಾಡಾನೆಯನ್ನು ಅರಣ್ಯ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ರಕ್ಷಿಸಿದರು

ಪ್ರವಾಸೋದ್ಯಮ ಇಲಾಖೆ ಹಣ ವರ್ಗಾವಣೆ ಪ್ರಕರಣ

ಐಡಿಬಿಐ ಬ್ಯಾಂಕ್ ನೌಕರ ಸೆರೆ

• ಬಸವರಾಜ ಹವಾಲ್ದಾರ


ಸೂರಜ್ ಸಾಗರ

ಬಾಗಲಕೋಟೆ: ಪ್ರವಾಸೋದ್ಯಮ ಇಲಾಖೆ ಖಾತೆಯಲ್ಲಿದ್ದ ₹2.47 ಕೋಟಿ ಅನುದಾನದ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಐಡಿಬಿಐ ಬ್ಯಾಂಕ್‌ನ 'ಸೇಲ್ಸ್ ಎಕ್ಸಿಕ್ಯೂಟಿವ್' ಸೂರಜ್ ಸಾಗರ ಎಂಬ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಅಕ್ರಮದಲ್ಲಿ ಭಾಗಿಯಾದ ಇನ್ನಷ್ಟು ಜನರ ಪತ್ತೆಗಾಗಿ ಪೊಲೀಸರು ಶೋಧ ಮುಂದುವರಿಸಿದ್ದಾರೆ.

ಹಗರಣ ಗೊತ್ತಾಗುತ್ತಿದ್ದಂತೆಯೇ ಐಡಿಬಿಐ ಬ್ಯಾಂಕ್‌ನ ನಾಲ್ಕಕ್ಕೂ ಹೆಚ್ಚು ಸಿಬ್ಬಂದಿ ನಾಪತ್ತೆಯಾಗಿದ್ದಾರೆ. ಕೆಲವರು ರಜೆ ಹಾಕಿದರೆ, ಇನ್ನೂ ಕೆಲವರು ಅನಧಿಕೃತವಾಗಿ ಗೈರಾಗಿದ್ದಾರೆ.

'ಬ್ಯಾಂಕ್‌ನ ಹೊರಗುತ್ತಿಗೆ ನೌಕರನಾಗಿದ್ದ ಸೂರಜ್ ಮತ್ತು ಬ್ಯಾಂಕ್‌ನ ಕೆಲ ಸಿಬ್ಬಂದಿ ನಕಲಿ ವೋಚರ್, ಜಿಲ್ಲಾಧಿಕಾರಿ ಸಹಿ ಸೇರಿ ವಿವಿಧ ದಾಖಲೆ ಸೃಷ್ಟಿಸಿ, ಸ್ನೇಹಿತರ ಖಾತೆಗೆ ಹಣ ವರ್ಗಾವಣೆ ಮಾಡಿರುವುದು ಪತ್ತೆಯಾಗಿದೆ. ಇಲಾಖೆಯ ಹಣವನ್ನು ವಿವಿಧ ಖಾತೆಗಳಿಗೆ ವರ್ಗಾವಣೆ ಮಾಡಿ, ಹಣ ಮರಳಿ ಪಡೆದಿದ್ದಾರೆ' ಎಂಬುದು ಪ್ರಾಥಮಿಕ ತನಿಖೆಯಲ್ಲಿ ಗೊತ್ತಾಗಿದೆ.

ಹಣ ವರ್ಗಾವಣೆಯಾದ ಖಾತೆದಾರರನ್ನು ಕರೆದು ವಿಚಾರಣೆ ಆರಂಭಿಸಲಾಗಿದೆ. 'ಖಾತೆಗೆ ಹಣ ಜಮಾ ಆಗಿರುವುದು ನಿಜ. ಸ್ನೇಹಿತನೆಂದು ಹಣ ಹಾಕಿಸಿಕೊಂಡು, ನಂತರ ಅವನಿಗೆ ಮರಳಿ ನೀಡಿದ್ದೇವೆ ಎಂದಿದ್ದಾರೆ' ಎಂದು ತಿಳಿದು ಬಂದಿದೆ.

ಗ್ರಾಹಕರ ಖಾತೆಯಿಂದಲೂ ಹಣ ಡ್ರಾ: 'ಇಲಾಖೆಯ ಮೂರು ಖಾತೆಗಳಲ್ಲಿ ಹಣವನ್ನು ತಮ್ಮ ಸ್ನೇಹಿತರ ಖಾತೆಗಳಿಗೆ ವರ್ಗಾವಣೆ ಮಾಡಿ ಹಣವಿಲ್ಲದಂತೆ ಮಾಡಲಾಗಿತ್ತು. ಇಲಾಖೆಯ ಅಧಿಕಾರಿಗಳು ಕಾಮಗಾರಿಗೆ ಸಂಬಂಧಿಸಿದ ಚೆಕ್ ನೀಡಿದಾಗ ಅದು ಪಾಸಾಗದಿದ್ದರೆ, ಇಲಾಖೆಯ ಅಧಿಕಾರಿಗಳಿಗೆ ಗೊತ್ತಾಗುತ್ತದೆ ಎಂದು ಬ್ಯಾಂಕ್‌ನ ಬೇರೆ ಗ್ರಾಹಕರ ಖಾತೆಯಲ್ಲಿದ್ದ ಹಣ ಡ್ರಾ ಮಾಡಿ ಚೆಕ್ ಪಾಸ್ ಮಾಡಲಾಗುತ್ತಿತ್ತು' ಎಂದು ಮೂಲಗಳು ತಿಳಿಸಿವೆ.

'ಗ್ರಾಹಕರು ಬಂದು ತಮ್ಮ ಖಾತೆಯಿಂದ ಹಣ ಡ್ರಾ ಆಗಿರುವ ಕುರಿತು ದೂರು ನೀಡಿದಾಗ ತಪ್ಪಾಗಿ ಬೇರೆ ಖಾತೆಗೆ ಜಮಾ ಮಾಡಲಾಗಿದೆ. ಒಂದೆರಡು ದಿನಗಳಲ್ಲಿ ವಾಪಸ್ ಜಮಾ ಮಾಡಿಸುವುದಾಗಿ ಹೇಳಿ ಕಳುಹಿಸುತ್ತಿದ್ದರು. ಮತ್ತೊಬ್ಬರ ಖಾತೆಯಲ್ಲಿದ್ದ ಹಣವನ್ನು ಡ್ರಾ ಮಾಡಿ ಇವರ ಖಾತೆಗೆ ಜಮಾ ಮಾಡುತ್ತಿದ್ದರು. ಹೀಗೆಯೇ ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗಳಿಗೆ ಗೊತ್ತಾಗದಂತೆ ನಿರ್ವಹಣೆ ಮಾಡಿದ್ದರು' ಎಂದು ಗೊತ್ತಾಗಿದೆ.

'ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಖಾತೆ ತೆರೆಯಿರಿ'

'ಐಡಿಬಿಐ ಬ್ಯಾಂಕ್‌ನಲ್ಲಿ ಖಾತೆ ಹೊಂದಿದ್ದ ಇನ್ನೆರಡು ಇಲಾಖೆಯ ಅನುದಾನವನ್ನು ಇದೇ ಮಾದರಿಯಲ್ಲಿ ವರ್ಗಾವಣೆ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ. ರಾಷ್ಟ್ರೀಕೃತ ಅಲ್ಲದ ಬ್ಯಾಂಕ್‌ಗಳಿಗೆ ತೆರಳಿ ಖಾತೆಯಲ್ಲಿ ಹಣ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಖಚಿತ ಪಡಿಸಿಕೊಳ್ಳುವಂತೆ, ಆ ಖಾತೆಗಳನ್ನು ಬಂದ್ ಮಾಡಿ, ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಖಾತೆ ತೆರೆಯಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದು ಜಿಲ್ಲಾಧಿಕಾರಿ ಕೆ.ಎಂ. ಜಾನಕಿ ತಿಳಿಸಿದರು.

ಹಣ ವರ್ಗಾವಣೆಗೆ ಸಂಬಂಧಿಸಿದಂತೆ ಸೂರಜ್ ಸಾಗರ ಎಂಬ ಆರೋಪಿಯನ್ನು ಬಂಧಿಸಲಾಗಿದೆ. ಇನ್ನಷ್ಟು ಜನರ ಬಂಧನಕ್ಕೆ ತಂಡ ರಚಿಸಲಾಗಿದೆ

ಅಮರನಾಥ ರಡ್ಡಿ,
ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಬಾಗಲಕೋಟೆ

ಕನ್ನಡದ ಅನುವಾದಿತ ಕೃತಿಗೆ 'ಇಂಗ್ಲಿಷ್ ಪೆನ್' ಪ್ರಶಸ್ತಿ

ಬೆಂಗಳೂರು: ಲೇಖಕಿ ಬಾನು ಮುಷ್ತಾಕ್ ಅವರ 'ಹಸೀನಾ ಮತ್ತು ಇತರ ಕತೆಗಳು' ಕಥಾ ಸಂಕಲನದ ಇಂಗ್ಲಿಷ್ ಅನುವಾದಿತ 'ಹಸೀನಾ ಆ್ಯಂಡ್ ಅದರ್ ಸ್ಟೋರೀಸ್' ಕೃತಿಯು 'ಇಂಗ್ಲಿಷ್ ಪೆನ್' ಪ್ರಶಸ್ತಿಗೆ ಆಯ್ಕೆಯಾಗಿದೆ.

ಈ ಕೃತಿಯನ್ನು ಲೇಖಕಿ ದೀಪಾ ಬಸ್ತಿ ಅನುವಾದಿಸಿದ್ದಾರೆ. ಕನ್ನಡ ಸೇರಿ ಹತ್ತು ಭಾಷೆಗಳಿಂದ ಇಂಗ್ಲಿಷ್‌ಗೆ ಅನುವಾದಗೊಂಡ 16 ಕೃತಿಗಳು ಈ ಪ್ರಶಸ್ತಿಗೆ ಆಯ್ಕೆಯಾಗಿವೆ. ಇದೇ ಮೊದಲ ಬಾರಿಗೆ ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದಗೊಂಡ ಕೃತಿಗೆ ಈ ಪ್ರಶಸ್ತಿ ಲಭಿಸಿದೆ ಎಂದು ಇಂಗ್ಲಿಷ್ ಪೆನ್ ಸಂಘಟನೆ ತಿಳಿಸಿದೆ.

ಜಯಚಂದ್ರಗೆ ಬಿ.ಎಂ.ಶ್ರೀ. ದತ್ತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನ ನೀಡುವ 'ಕಂಬತ್ತಳ್ಳಿ ಜೀವಣ್ಣ ಪದ್ಮಾವತಮ್ಮ ಪ್ರಶಸ್ತಿ'ಗೆ ಸಾಹಿತಿ ಎಂ.ಎ. ಜಯಚಂದ್ರ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹ 25 ಸಾವಿರ ನಗದು ಮತ್ತು ಪ್ರಶಸ್ತಿ ಫಲಕ ಒಳಗೊಂಡಿದೆ. ಕೆ.ಜೆ. ಪಾರ್ಶ್ವನಾಥ ಅವರು ತಮ್ಮ ತಂದೆ–ತಾಯಿ ಹೆಸರಿನಲ್ಲಿ ಈ ಪ್ರಶಸ್ತಿ ಸ್ಥಾಪಿಸಿದ್ದಾರೆ. ಜೈನ ಧರ್ಮ ಮತ್ತು ಕನ್ನಡ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿದ ಸಾಹಿತಿ ಅಥವಾ ಸಂಶೋಧಕರೊಬ್ಬರನ್ನು ಗುರುತಿಸಿ, ಪ್ರಶಸ್ತಿ ನೀಡಲಾಗುತ್ತಿದೆ. ಸಾಹಿತಿ ಹಂ.ಪ. ನಾಗರಾಜಯ್ಯ, ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, ಪ್ರಕಾಶ್ ಕಂಬತ್ತಳ್ಳಿ ಹಾಗೂ ಶಾಂತರಾಜು ಒಳಗೊಂಡ ಸಮಿತಿ ಈ ಆಯ್ಕೆ ಮಾಡಿದೆ.



ಇದೇ 21ರಂದು ಬಿ.ಎಂ.ಶ್ರೀ. ಪ್ರತಿಷ್ಠಾನದ ಸಭಾಂಗಣದಲ್ಲಿ ಹಂ.ಪ. ನಾಗರಾಜಯ್ಯ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

'ಹೊಸ ರೈಲು ಮಾರ್ಗ ಸಮೀಕ್ಷೆ'

ಸಕಲೇಶಪುರ–ಸುಬ್ರಹ್ಮಣ್ಯ ಪ್ರಯಾಣ ಅವಧಿ ತಗ್ಗಿಸಲು ಕ್ರಮ

ಪ್ರಜಾವಾಣಿ ವಾರ್ತೆ

ಹಾಸನ: 'ಸಕಲೇಶಪುರ ಮಾರ್ಗವಾಗಿ ಕುಕ್ಕೆ ಸುಬ್ರಹ್ಮಣ್ಯಕ್ಕೆ ಸಂಪರ್ಕ ಕಲ್ಪಿಸುವ ರೈಲು ಮಾರ್ಗದಲ್ಲಿ ಪ್ರಯಾಣಕ್ಕೆ 3 ಗಂಟೆ ಕಾಲ ಬೇಕಾಗುತ್ತಿದೆ. ಈ ಅವಧಿಯನ್ನು ಕಡಿಮೆ ಮಾಡಲು ಹೊಸ ರೈಲು ಮಾರ್ಗಕ್ಕೆ ಸಮೀಕ್ಷೆ ನಡೆಸುವಂತೆ ಅನುಭವಿ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಅವರ ವರದಿ ಬಳಿಕ ಕ್ರಮ ಕೈಗೊಳ್ಳಲಾಗುವುದು' ಎಂದು ಕೇಂದ್ರ ರೈಲ್ವೆ ಹಾಗೂ ಜಲಶಕ್ತಿ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.

ನಗರದಲ್ಲಿ ಅಧಿಕಾರಿಗಳ ಸಭೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, 'ರಾಜ್ಯದಲ್ಲಿ ಮಂಗಳೂರಿನಲ್ಲಿ ಮಾತ್ರ ದೊಡ್ಡ ಬಂದರು ಇದೆ. ಮಂಗಳೂರಿಗೆ ಸಂಪರ್ಕ ಕಲ್ಪಿಸುವ ರೈಲ್ವೆ ಮಾರ್ಗದ ಉನ್ನತೀಕರಣಕ್ಕೆ ಎಲ್ಲ ಕ್ರಮ ಕೈಗೊಳ್ಳಲಾಗುವುದು' ಎಂದರು.

'ಮಂಗಳೂರು -ಬೆಂಗಳೂರು ಮಧ್ಯೆ ಹೊಸ ರೈಲು ಸಂಚಾರಕ್ಕೆ ಒಪ್ಪಿಗೆ ಸಿಕ್ಕಿದ್ದು, ಶೀಘ್ರ ಸಂಚಾರ ಆರಂಭವಾಗಲಿದೆ' ಎಂದರು.

'ರೈಲ್ವೆ ಯೋಜನೆಗಳಿಗಾಗಿ ಜಿಲ್ಲೆಗೆ ₹11 ಸಾವಿರ ಕೋಟಿ ವ್ಯಯ ಮಾಡಬೇಕಾಗಿದ್ದು, ಅದರಲ್ಲಿ ರಾಜ್ಯ ಸರ್ಕಾರ ₹5,500 ಕೋಟಿ ಪಾಲು ಕೊಡಬೇಕು. ಆದರೆ ಇದುವರೆಗೂ ₹500 ಕೋಟಿ ಸಹ ನೀಡಿಲ್ಲ. ಪ್ರಧಾನಿ ನರೇಂದ್ರ ಮೋದಿ ಹಾಗೂ ಸಂಬಂಧಪಟ್ಟ ಸಚಿವರೊಂದಿಗೆ ಮಾತನಾಡಿ, ಪೂರ್ಣ ಪ್ರಮಾಣದ ಹಣವನ್ನು ಕೇಂದ್ರದಿಂದಲೇ ನೀಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

'2025-26 ರೊಳಗೆ ರಾಜ್ಯದ 58 ರೈಲ್ವೆ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಿ, ತ್ರೀಸ್ಟಾರ್ ಮಾದರಿ ಸೇವೆ ನೀಡಲಾಗುವುದು. ಕುಡಿಯುವ ನೀರು, ಶೌಚಾಲಯ, ವಿಶ್ರಾಂತಿ ಗೃಹ, ಕ್ಯಾಂಟೀನ್ ಸೇರಿದಂತೆ ಮೂಲಸೌಕರ್ಯ ಒದಗಿಸಲಾಗುವುದು' ಎಂದರು.

'3 ತಿಂಗಳಿಗೊಮ್ಮೆ ಶಾಸಕರೊಂದಿಗೆ ಸಭೆ'

ಚಿಕ್ಕಮಗಳೂರು: ಶಾಸಕರು, ವಿಧಾನ ಪರಿಷತ್ ಸದಸ್ಯರು ಮತ್ತು ಸಂಸದರನ್ನೊಳಗೊಂಡ ಸಲಹಾ ಸಮಿತಿ ರಚನೆ ಮಾಡಿ ಮೂರು ತಿಂಗಳಿಗೊಮ್ಮೆ ಸಭೆ ನಡೆಸಲು ಎಲ್ಲಾ ವಿಭಾಗೀಯ ರೈಲ್ವೆ ವ್ಯವಸ್ಥಾಪಕರಿಗೆ (ಡಿಆರ್‌ಎಂ) ಶೀಘ್ರವೇ ಆದೇಶ ಹೊರಡಿಸಲಾಗುವುದು ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದರು.

ವಿಭಾಗೀಯ ರೈಲ್ವೆ ವ್ಯವಸ್ಥಾಪಕರು ತಮ್ಮ ವ್ಯಾಪ್ತಿಯ ಜನಪ್ರತಿನಿಧಿಗಳನ್ನು ಕರೆದು ಸಲಹೆಗಳನ್ನು ಪಡೆದುಕೊಂಡರೆ ಜನರಿಗೆ ಇನ್ನಷ್ಟು ಅನುಕೂಲ ಆಗುವಂತೆ ಕಾರ್ಯಕ್ರಮಗಳನ್ನು ರೂಪಿಸಲು ಸಾಧ್ಯವಾಗಲಿದೆ ಎಂದು ಗುರುವಾರ ಇಲ್ಲಿ ಸುದ್ದಿಗಾರರಿಗೆ ಹೇಳಿದರು.

ಪ್ರಜ್ವಲ್ ಅರ್ಜಿ ವಿಚಾರಣೆ 22ಕ್ಕೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರ ಆರೋಪಕ್ಕೆ ಸಂಬಂಧಿಸಿದ ವಿವಿಧ ಪ್ರಕರಣಗಳಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರು ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿ ವಿಚಾರಣೆಯನ್ನು ಜನಪ್ರತಿನಿಧಿಗಳ ನ್ಯಾಯಾಲಯ ಇದೇ 22ಕ್ಕೆ ಮುಂದೂಡಿದೆ.

ಈ ಸಂಬಂಧ ಪ್ರಜ್ವಲ್ ರೇವಣ್ಣ ಸಲ್ಲಿಸಿರುವ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ (ಸಿಸಿಎಚ್–82) ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರು ಗುರುವಾರ ವಿಚಾರಣೆ ನಡೆಸಿದರು.

ಕಲಾಪ ಅವಧಿಯಲ್ಲಿ ಸಮಯದ ಕೊರತೆ ಇದ್ದ ಕಾರಣ ನ್ಯಾಯಾಧೀಶರು ವಿಚಾರಣೆಯನ್ನು ಇದೇ 22ಕ್ಕೆ ಮುಂದೂಡಿ ಆದೇಶಿಸಿದರು.

ಕೈವಾರ: ಇಂದಿನಿಂದ ಸಂಗೀತೋತ್ಸವ


ಪ್ರಜಾವಾಣಿ ವಾರ್ತೆ




ಚಿಂತಾಮಣಿ: ಪ್ರಸಿದ್ಧ ಯಾತ್ರಾ ಸ್ಥಳ ತಾಲ್ಲೂಕಿನ ಕೈವಾರದ ಯೋಗಿ ನಾರೇಯಣ ಮಠದಲ್ಲಿ ಜುಲೈ19 ರಿಂದ 21ರವರೆಗೆ ಗುರುಪೂಜೆ ಮತ್ತು ಸಂಗೀತೋತ್ಸವ ನಡೆಯಲಿದೆ.

ಪ್ರತಿ ವರ್ಷವೂ ಕೈವಾರ ಮಠದಲ್ಲಿ ಗುರುಪೂಜೆ ಪ್ರಯುಕ್ತ ಮೂರು ದಿನಗಳ ಸಂಗೀತೋತ್ಸವ ನಡೆಯಲಿದೆ. ನೂರಾರು ಸಂಗೀತ ಕಲಾವಿದರು ಹಾಗೂ ಸಂಗೀತ ಪ್ರೇಮಿಗಳು ಒಂದೆಡೆ ಸೇರಿ ನಿರಂತರವಾಗಿ 72 ತಾಸು ಸಂಗೀತ ಸುಧೆ ಹರಿಸಲಿದ್ದಾರೆ.

ಸ್ಥಳೀಯ ಹಾಗೂ ವಿವಿಧ ರಾಜ್ಯಗಳ ಹಲವಾರು ಸಂಗೀತ ಕಲಾವಿದರು ಕೈವಾರ ತಾತಯ್ಯನವರಿಗೆ ಮೂರು ದಿನ ಸಂಗೀತ ಸೇವೆ ಸಲ್ಲಿಸಲಿದ್ದಾರೆ.







1.ಮಂಡ್ಯ ಜಿಲ್ಲೆಯ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ಗುರುವಾರ ಸಂಜೆ 114.5 ಅಡಿಗೆ ಏರಿದೆ. ಕಳೆದ ವರ್ಷ ಇದೇ ದಿನ 89.72 ಅಡಿ ಇತ್ತು 2. ನಂಜನಗೂಡಿನಲ್ಲಿ ಕಪಿಲಾ ನದಿಯ ಸ್ನಾನಘಟ್ಟ ಮುಳುಗಡೆಯಾಗಿದೆ (ಮಧ್ಯದ ಚಿತ್ರ) – ಪ್ರಜಾವಾಣಿ ಚಿತ್ರಗಳು.3. ಸಕಲೇಶಪುರದ ಹೊಳೆಮಲ್ಲೇಶ್ವರ ದೇವಸ್ಥಾನದ ಎದುರು ಹೇಮಾವತಿ ನದಿ ಮೈದುಂಬಿ ಹರಿಯುತ್ತಿದೆ ಪ್ರಜಾವಾಣಿ ಚಿತ್ರ/ ಜಾನೇಕೆರೆ ಆರ್. ಪರಮೇಶ್

ಅಪಾಯದ ಮಟ್ಟ ಮೀರಿ ಹರಿಯುತ್ತಿರುವ ನದಿಗಳು, ಪ್ರವಾಹ ಭೀತಿ • ಮೈದುಂಬಿದ ಭರಚುಕ್ಕಿ ಜಲಪಾತ

ಮಳೆ ಅಬ್ಬರ, ಜನಜೀವನ ಅಸ್ತವ್ಯಸ್ತ

ಪ್ರಜಾವಾಣಿ ವಾರ್ತೆ

ಮಡಿಕೇರಿ/ಮಂಗಳೂರು: ರಾಜ್ಯದ ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳು ಸೇರಿದಂತೆ ವಿವಿಧೆಡೆ ಗುರುವಾರ ಬಿರುಸಿನ ಮಳೆಯಾಗಿದೆ. ಕೊಡಗು, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಕುಂಭದ್ರೋಣ ಮಳೆ ಅಬ್ಬರಿಸಿದ್ದು, ಜನಜೀವನ ನಲುಗಿದೆ. ಕೆಲವೆಡೆ ಬುಧವಾರ ರಾತ್ರಿಯಿಂದ ಗುರುವಾರ ಹಗಲಿಡೀ ಸುರಿದ ಮಳೆಯಿಂದ ನದಿಗಳು ತುಂಬಿ ಹರಿದಿದ್ದು ಪ್ರವಾಹ ಪರಿಸ್ಥಿತಿ ತಲೆದೋರಿದೆ.

ಕೊಡಗು ಜಿಲ್ಲೆಯ ಕರಡಿಗೋಡು ಗ್ರಾಮದ ಪ್ರಾಥಮಿಕ ಶಾಲೆಯಲ್ಲಿ ಕಾಳಜಿ ಕೇಂದ್ರ ತೆರೆಯಲಾಗಿದೆ. ಜಿಲ್ಲೆಯ ಎಲ್ಲ ನದಿಗಳು ಅಪಾಯದಂಚು ತಲುಪಿವೆ. ಅಂಗನವಾಡಿಗಳು, ಶಾಲೆಗಳು ಹಾಗೂ ಪಿಯು ಕಾಲೇಜುಗಳಿಗೆ ಜುಲೈ 19ರಂದು ರಜೆ ಘೋಷಿಸಲಾಗಿದೆ.

ಮಂಗಳೂರಿಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ–275ರಲ್ಲಿ ಮಡಿಕೇರಿ ತಾಲ್ಲೂಕಿನ ಕರ್ತೋಜಿ ಎಂಬಲ್ಲಿ ಗುಡ್ಡ ಕುಸಿಯುವ ಹಂತ ತಲುಪಿದೆ. ಹೀಗಾಗಿ, ಇಲ್ಲಿ ಎಲ್ಲ ಬಗೆಯ ವಾಹನ ಸಂಚಾರವನ್ನು ಜುಲೈ 22ರವರೆಗೆ ನಿತ್ಯ ರಾತ್ರಿ 8 ಗಂಟೆಯಿಂದ ಬೆಳಿಗ್ಗೆ 6 ಗಂಟೆಯವರೆಗೆ ನಿಷೇಧಿಸಲಾಗಿದೆ.

ಜಿಲ್ಲೆಯ ಮೂಲಕ ಮಂಗಳೂರಿನಿಂದ ಮೈಸೂರು, ಬೆಂಗಳೂರಿಗೆ ತೆರಳುವ ವಾಹನಗಳು ಚಾರ್ಮಾಡಿ ಘಾಟ್–ಕೊಟ್ಟಿಗೆಹಾರ ಮೂಲಕ ಪ್ರಯಾಣಿಸಬೇಕು ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ಆದೇಶ ಹೊರಡಿಸಿದ್ದಾರೆ.

ಕೊಡಗಿನಲ್ಲಿ 22 ಮನೆಗಳು ಕುಸಿದಿವೆ. ಬಿರುಸಾದ ಗಾಳಿಗೆ 51 ವಿದ್ಯುತ್ ಕಂಬಗಳು ನೆಲಕಚ್ಚಿವೆ. ಗೋಣಿಕೊಪ್ಪಲುವಿನ 4 ಬಡಾವಣೆಗಳು ಸಂಪೂರ್ಣ ಜಲಾವೃತಗೊಂಡಿವೆ. ಪ್ಲಾಸ್ಟಿಕ್ ತ್ಯಾಜ್ಯ ನಿಯಂತ್ರಿಸಲು ಕೀರೆಹೊಳೆಯಲ್ಲಿ ₹ 6.5 ಲಕ್ಷ ವೆಚ್ಚದಲ್ಲಿ ಈಚೆಗಷ್ಟೇ ನಿರ್ಮಿಸಿದ್ದ ಕಸದ ತಡೆಗೋಡೆ ಕೊಚ್ಚಿಕೊಂಡು ಹೋಗಿದೆ. ಭಾಗಮಂಡಲದಲ್ಲಿ ನದಿ ನೀರಿನ ಪ್ರವಾಹ ಭಗಂಡೇಶ್ವರ ದೇಗುಲದ ಅಂಗಳ ತಲುಪಿದೆ.

ಜಡಿ ಮಳೆ: ಚಿಕ್ಕಮಗಳೂರು ಜಿಲ್ಲೆಯಲ್ಲಿ ಜನ ಜೀವನ ಅಸ್ತವ್ಯಸ್ತಗೊಂಡಿದೆ. ಕೊಟ್ಟಿಗೆಹಾರದಲ್ಲಿ ಬಿರುಗಾಳಿಯೊಂದಿಗೆ ಮಳೆ ಆರ್ಭಟಿಸುತ್ತಿದ್ದು, ಮನೆಯಿಂದ ಹೊರಗೆ ಬರಲು ಅವಕಾಶ ನೀಡದಷ್ಟು ಮಳೆ ಸುರಿದಿದೆ. ಮೂಡಿಗೆರೆ, ಕಳಸ, ಕೊಪ್ಪ, ಶೃಂಗೇರಿ, ಎನ್.ಆರ್.ಪುರ, ಬಾಳೆಹೊನ್ನೂರಿನಲ್ಲೂ ಇದೇ ಸ್ಥಿತಿ ಇದೆ. ಹಲವೆಡೆ ಮನೆಗಳು ಕುಸಿದಿದ್ದು, ಮರ ಮತ್ತು ವಿದ್ಯುತ್ ಕಂಬಗಳು ಉರುಳಿವೆ.

ತುಂಗಾ, ಭದ್ರಾ, ನೇತ್ರಾವತಿ, ವೇದಾವತಿ, ಹೇಮಾವತಿ ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, ಅಲ್ಲಲ್ಲಿ ಸಣ್ಣದಾಗಿ ಗುಡ್ಡ ಕುಸಿತಗಳು ಸಂಭವಿಸುತ್ತಿವೆ. ಕೆಲವೆಡೆ ಮಳೆಯ ನಡುವೆ ಭತ್ತದ ನಾಟಿ ಕಾರ್ಯ ಆರಂಭವಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ನೇತ್ರಾವತಿ, ಕುಮಾರಧಾರಾ, ಫಲ್ಗುಣಿ, ನಂದಿನಿ, ಶಾಂಭವಿ ನದಿಗಳು ಗುರುವಾರ ತುಂಬಿ ಹರಿದವು.

ಬಂಟ್ವಾಳ ತಾಲ್ಲೂಕಿನ ಕೊಳ್ನಾಡು ಗ್ರಾಮದ ಸುರಿಬೈಲು-ಖಂಡಿಗ ರಸ್ತೆ ನಡುವಿನ ಕಿರು ಸೇತುವೆಯಡಿ ಅಳವಡಿಸಿದ್ದ ಮೋರಿಯು ಮಳೆಗೆ ಕೊಚ್ಚಿ ಹೋಗಿದೆ. ಬೆಳ್ತಂಗಡಿ ತಾಲ್ಲೂಕಿನ ಮುಂಡಾಜೆ ಪರಿಸರದಲ್ಲಿ ನೇತ್ರಾವತಿ ಉಕ್ಕಿಹರಿದು ತೆಂಗು ಹಾಗೂ ಕಂಗಿನ ತೋಟಗಳು ಜಲಾವೃತವಾಗಿದ್ದವು.

ಉಡುಪಿ ಜಿಲ್ಲೆಯಲ್ಲಿ ಮಳೆಯಿಂದಾಗಿ ಉಂಟಾದ ಜಲಧಾರೆ ಹಳ್ಳ, ಕೊಳ್ಳಗಳಲ್ಲಿ ತುಂಬಿ, ಕೃಷಿ ಪ್ರದೇಶಕ್ಕೆ ನುಗ್ಗುತ್ತಿದೆ. ಹಿರಿಯಡಕ ಪರಿಸರದಲ್ಲಿ ನದಿಗಳಲ್ಲಿ ನೀರಿನ ಹರಿವು ಹೆಚ್ಚಳವಾಗಿದ್ದು, ನದಿ ಪಾತ್ರದ ಕೆಲವು ಕೃಷಿ ಭೂಮಿ ಜಲಾವೃವಾಗಿವೆ.

ನಂಜನಗೂಡು ಪಟ್ಟಣಕ್ಕೆ ಕುಡಿಯುವ ನೀರು ಪೂರೈಸುವ ದೇಬೂರು ಪಂಪ್‌ಹೌಸ್ ಮುಳುಗಡೆಯಾಗಿದ್ದು, ನೀರು ಪೂರೈಕೆಯಲ್ಲಿ ವ್ಯತ್ಯಯವಾಗುವ ಸಾಧ್ಯತೆ ಇದೆ.

ಕಬಿನಿ ಜಲಾಶಯದಿಂದ ಹೆಚ್ಚುವರಿ ನೀರು ಹೊರಬಿಟ್ಟಿರುವುದರಿಂದ ಕೊಳ್ಳೇಗಾಲ ತಾಲ್ಲೂಕಿನ ಹಲವು ಗ್ರಾಮಗಳು ಮುಳುಗಡೆ ಭೀತಿಯಲ್ಲಿವೆ.

ಶಿವಮೊಗ್ಗ ವರದಿ: ಶಿವಮೊಗ್ಗದಲ್ಲಿ 1, ಪುರಲೆಯಲ್ಲಿ 2 ಮನೆಗಳು ಕುಸಿದಿವೆ. ಸಂತ್ರಸ್ತರಿಗೆ ಸರ್ಕಾರದ ಕಾಳಜಿ ಕೇಂದ್ರದಲ್ಲಿ ಆಶ್ರಯ ನೀಡಲಾಗಿದೆ. ಹೊಸನಗರ ತಾಲ್ಲೂಕಿನಲ್ಲಿ ಭಾರೀ ಮಳೆಯಿಂದ ಅರಸಾಳು ಗ್ರಾಮದ ಬಟಾಣಿಜೆಡ್ಡು ಬಳಿ ಗುರುವಾರ ರೈಲ್ವೆ ಹಳಿಯ ಮೇಲೆ ಮರ ಬಿದ್ದು, ರೈಲು ಸಂಚಾರದಲ್ಲಿ ವ್ಯತ್ಯಯವಾಯಿತು. ರೈಲ್ವೆ ಇಲಾಖೆ ಸಿಬ್ಬಂದಿ ಮರ ತೆರವುಗೊಳಿಸಿದರು. ಇದರಿಂದ ತಾಳಗುಪ್ಪದಿಂದ ಬೆಂಗಳೂರಿಗೆ ಹೊರಟಿದ್ದ ರೈಲು 2 ತಾಸು ವಿಳಂಬವಾಗಿ ಸಂಚರಿಸಿತು.

ಚನ್ನಪಟ್ಟಣ ವರದಿ: ಭಾರಿ ಮಳೆ, ಗಾಳಿಗೆ ಚನ್ನಪಟ್ಟಣ ತಾಲ್ಲೂಕಿನಲ್ಲಿ ಒಂಬತ್ತು ವಿದ್ಯುತ್ ಕಂಬಗಳು ರಸ್ತೆ ಹಾಗೂ ಮನೆ ಮೇಲೆ ಉರುಳಿ ಬಿದ್ದಿವೆ. ಮನೆಯೊಂದರ ಮೇಲೆ ವಿದ್ಯುತ್ ಕಂಬ ಹಾಗೂ ಮರವೊಂದು ಬಿದ್ದಿವೆ. ವಿದ್ಯುತ್ ಪೂರೈಕೆ ಸ್ಥಗಿತಗೊಂಡಿದ್ದರಿಂದ ಅಪಾಯ ತಪ್ಪಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	114.90	40,490	2,560
ಹಾರಂಗಿ	2,859	2,853.35	17,416	10,000
ಕಬಿನಿ	2,284.00	2,281.12	52,777	70,000
ಹೇಮಾವತಿ	2,922	2,912.55	30,547	250
ಲಿಂಗನಮಕ್ಕಿ	1,819	1,787.8	69,226	-
ಸೂಪಾ (ಮೀ)	564	539.25	33,361	-
ಮಾಣಿ	595	580.4	941	-
ತುಂಗಭದ್ರಾ	1,633	1,615.67	1,12,498	411
ಮಲಪ್ರಭಾ	2,079.5	2,058	6,247	194
ಘಟಪ್ರಭಾ	2175	2,145.13	8,29	426
ಭದ್ರಾ	186	153	42,165	153
ಆಲಮಟ್ಟಿ (ಮೀ)	519.6	518.11	72,286	65,480
ನಾರಾಯಣಪುರ (ಮೀ)	492.25	491.75	70,000	68,920

* ನೆಲಮಟ್ಟದಿಂದ



ಕೊಡಗು ಜಿಲ್ಲೆಯ ಸಿದ್ದಾಪುರ ಸಮೀಪದ ಕರಡಿಗೋಡುವಿನಲ್ಲಿ ಕಾವೇರಿ ನದಿ ನೀರು ಮನೆಗಳ ಬಳಿಯಲ್ಲಿ ತಲುಪಿದ್ದು, ಪ್ರವಾಹದ ಭೀತಿ ಎದುರಾಗಿದೆ

ಹೊಳೆಯಲ್ಲಿ ಕೊಚ್ಚಿಹೋದ ಕಾರ್ಮಿಕ

ಹೆಬ್ರಿ (ಉಡುಪಿ ಜಿಲ್ಲೆ): ಇಲ್ಲಿನ ನಾಡ್ಪಾಲು ಗ್ರಾಮದ ನೆಲ್ಲಿಕಟ್ಟೆ ಚೀರೊಳ್ಳಿ ಎಂಬಲ್ಲಿ ಗುರುವಾರ ಸಂಜೆ ಕೃಷಿ ಕೂಲಿ ಕಾರ್ಮಿಕ ತುಮಕೂರಿನ ಆನಂದ (55) ಎಂಬುವವರು ಹೊಳೆಯಲ್ಲಿ ಕೊಚ್ಚಿ ಹೋಗಿದ್ದಾರೆ. ಆನಂದ ಅವರು ನಾಡ್ಪಾಲಿನ ಮನೋರಮಾ ಹೆಗ್ಡೆ ಎಂಬುವವರಿಗೆ ಸೇರಿದ ತೋಟದಲ್ಲಿ ಹಲವು ವರ್ಷಗಳಿಂದ ಕೃಷಿ ಕೂಲಿ ಕಾರ್ಮಿಕರಾಗಿ ದುಡಿಯುತ್ತಿದ್ದರು.

ಅವರು ಕೆಲಸ ಮಾಡುವ ಮನೆಗೆ ತೆರಳಲು ಹೊಳೆ ದಾಟಿ ಹೋಗಬೇಕಿತ್ತು. ಹೊಳೆ ದಾಟಲು ಕಾಲು ಸಂಕ ಸಹಿತ ಯಾವುದೇ ವ್ಯವಸ್ಥೆ ಇರಲಿಲ್ಲ. ಹಗ್ಗದ ಸಹಾಯದಿಂದ ಹೊಳೆ ದಾಟುವಾಗ ಹಗ್ಗ ತುಂಡಾಗಿ ಘಟನೆ ಸಂಭವಿಸಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ಮಣ್ಣಲ್ಲಿ ಹೂತು ಹೋದ ಮಾರುತಿ ಆಮ್ನಿ

ಹಾಸನ: ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿ 75 ರ ಸಕಲೇಶಪುರ ತಾಲ್ಲೂಕಿನ ದೊಡ್ಡತಪ್ಪಲೆ ಗ್ರಾಮದ ಬಳಿ ಮತ್ತೆ ಭೂಕುಸಿತ ಉಂಟಾಗಿದೆ. ಗುರುವಾರ ಬೆಳಗಿನ ಜಾವ ಮಣ್ಣಿನಡಿ ಮಾರುತಿ ಆಮ್ನಿ ವಾಹನ ಸಿಲುಕಿದ್ದು, ಕಾರಿನಲ್ಲಿದ್ದ ಐವರನ್ನು ರಕ್ಷಿಸಲಾಗಿದೆ. ಒಬ್ಬರಿಗೆ ಗಾಯಗಳಾಗಿದ್ದು, ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಬುಧವಾರ ಮಧ್ಯಾಹ್ನವೇ ಇಲ್ಲಿ ಭಾರಿ ಪ್ರಮಾಣದ ಗುಡ್ಡ ಕುಸಿದ ವೇಳೆ, ವಾಹನ ಸಂಚಾರ ಸ್ಥಗಿತಗೊಳಿಸಿ, ಮಣ್ಣು ತೆರವು ಮಾಡಲಾಗಿತ್ತು. ಗುರುವಾರ ಬೆಳಗಿನ ಜಾವ ನೂರು ಅಡಿಗೂ ಎತ್ತರದ ಗುಡ್ಡ ಕುಸಿದು ಬಿದ್ದಿದೆ. ರಸ್ತೆಯ ತುಂಬೆಲ್ಲ ಮಣ್ಣು ತುಂಬಿದ್ದು, ವಾಹನ ಸಂಚಾರ ಸ್ಥಗಿತಗೊಂಡಿತ್ತು. ಸುಮಾರು 10 ಕಿ.ಮೀ. ಉದ್ದಕ್ಕೂ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಮಣ್ಣು ತೆರವು ಮಾಡಿ, ಮಧ್ಯಾಹ್ನದ ನಂತರ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ.

ಕರ್ನಾಟಕ–ಗೋವಾ ಸಂಚಾರ ವ್ಯತ್ಯಯ

ಖಾನಾಪುರ (ಬೆಳಗಾವಿ): ಚೋರ್ಲಾ ಘಟ್ಟದಲ್ಲಿ ಭೂ ಕುಸಿತ ಉಂಟಾಗಿ ಕರ್ನಾಟಕ– ಗೋವಾ ನಡುವೆ ಕೆಲಕಾಲ ವಾಹನ ಸಂಚಾರದಲ್ಲಿ ವ್ಯತ್ಯಯ ಉಂಟಾಯಿತು.ಉತ್ತರ ಗೋವಾ ಜಿಲ್ಲೆಯ ಕೇರಿ ಎಂಬಲ್ಲಿ ಈ ಭೂ ಕುಸಿತ ಉಂಟಾಗಿದ್ದು, ರಸ್ತೆಯ ಒಂದು ಭಾಗದ ಕೆಳಗಿನ ಮಣ್ಣು ಕುಸಿದಿದೆ. ಘಟನೆಯ ಮಾಹಿತಿ ತಿಳಿಯುತ್ತಲೇ ಸ್ಥಳಕ್ಕೆ ಧಾವಿಸಿದ ಗೋವಾ ಪೊಲೀಸರು ಭೂ ಕುಸಿತವಾದ ರಸ್ತೆಯ ಅಕ್ಕಪಕ್ಕ ಬ್ಯಾರಿಕೇಡ್ ಅಳವಡಿಸಿದ್ದಾರೆ. ತಾತ್ಕಾಲಿಕವಾಗಿ ರಸ್ತೆಯ ಮತ್ತೊಂದು ಬದಿಯಲ್ಲಿ ಲಘು ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಟ್ಟದ್ದಾರೆ.

ಮೈಸೂರು–ಊಟಿ ಹೆದ್ದಾರಿ ಜಲಾವೃತ

ಪ್ರಜಾವಾಣಿ ವಾರ್ತೆ

ಮೈಸೂರು: ನಗರವೂ ಸೇರಿದಂತೆ ಜಿಲ್ಲೆಯಾದ್ಯಂತ ಗುರುವಾರವೂ ನಗರದಲ್ಲಿ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೂ ಜೋರು ಮಳೆ ಮುಂದುವರಿಯಿತು.

ಎಚ್.ಡಿ. ಕೋಟೆ ತಾಲ್ಲೂಕಿನ ಕಬಿನಿ ಜಲಾಶಯದಿಂದ ಕಪಿಲ ನದಿಗೆ 70ಸಾವಿರ ಕ್ಯುಸೆಕ್ ನೀರು ಹರಿಸಲಾಗುತ್ತಿದ್ದು, ಮಾದಾಪುರದಿಂದ ಬೆಳತ್ತೂರು, ಚಕ್ಕೂರು, ಅಡಹಳ್ಳಿ ಸೇರಿದಂತೆ ಇತರ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಸೇತುವೆ ಮುಳುಗಡೆಯಾಗಿದ್ದು, ಜನ ಹಾಗೂ ವಾಹನಗಳ ಸಂಚಾರವನ್ನು ಸ್ಥಗಿತಗೊಳಿಸಲಾಗಿದೆ. ಪರ್ಯಾಯ ಮಾರ್ಗವಿದ್ದು, ಜನ ಸುತ್ತಿಬಳಸಿ ಸಂಚರಿಸಬೇಕಾದ ಪರಿಸ್ಥಿತಿ ಎದುರಾಗಿದೆ.

ನದಿ ಅಪಾಯದ ಮಟ್ಟವನ್ನು ಮೀರಿ ಹರಿಯುತ್ತಿದ್ದು, ಸೇತುವೆ ಮೇಲೆ ಜನ ಸಂಚರಿಸದಂತೆ ಬ್ಯಾರಿಕೇಡ್‌ಗಳನ್ನು ಇಡಲಾಗಿದೆ. 2019ರಲ್ಲಿ ಮುಳುಗಡೆಯಾಗಿದ್ದ ಹಂಪಾಪುರ ಸಮೀಪದ ಹೊಮ್ಮರಗಳ್ಳಿಯಿಂದ ಹುಲ್ಲಹಳ್ಳಿಗೆ ಸಂಪರ್ಕ ಕಲ್ಪಿಸುವ ಸೇತುವೆ ಈ ಬಾರಿ ಮುಳುಗುವ ಸಾಧ್ಯತೆ ಇದೆ.

ನಂಜನಗೂಡು ತಾಲ್ಲೂಕಿನ ಸುತ್ತೂರು ಬಳಿ ಸೇತುವೆ ಮಟ್ಟಕ್ಕೆ ನೀರು ಹರಿಯುತ್ತಿದೆ.



ಚಿಕ್ಕಮಗಳೂರು ಜಿಲ್ಲೆ ಆಲ್ದೂರು ಸಮೀಪದ ಗದ್ದೆಯಲ್ಲಿ ಗುರುವಾರ ಭತ್ತದ ನಾಟಿ ಮಾಡಲಾಯಿತು





ಶಿರಸಿ ತಾಲ್ಲೂಕಿನ ಬನವಾಸಿ ಬಳಿ ವರದಾ ನದಿ ಅಪಾಯ ಮಟ್ಟದಲ್ಲಿ ಹರಿಯುತ್ತಿದೆ (ಎಡಚಿತ್ರ) ರಾಣೆಬೆನ್ನೂರು ತಾಲ್ಲೂಕಿನ ಶರಣ ಅಂಬಿಗರ ಚೌಡಯ್ಯನವರ ಐಕ್ಯ ಮಂಟಪ ಮುಳುಗಿದೆ– ಪ್ರಜಾವಾಣಿ ಚಿತ್ರಗಳು

5 ಜಿಲ್ಲೆಗಳಿಗೆ ‘ರೆಡ್ ಅಲರ್ಟ್’ ಮುಂದುವರಿಕೆ

ಬೆಂಗಳೂರು: ರಾಜ್ಯದ ವಿವಿಧೆಡೆ ಶುಕ್ರವಾರವೂ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಐದು ಜಿಲ್ಲೆಗಳಿಗೆ ‘ರೆಡ್ ಅಲರ್ಟ್’ ಘೋಷಿಸಿದೆ.

ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗೆ ‘ರೆಡ್ ಅಲರ್ಟ್’ ನೀಡಲಾಗಿದೆ. ಈ ಜಿಲ್ಲೆಗಳಲ್ಲಿ ನಿರಂತರ ಗಾಳಿಯೊಂದಿಗೆ ಧಾರಾಕಾರ ಮಳೆ ಮುಂದುವರಿಯುವ ಸಂಭವವಿದೆ. ಕೊಡಗು ಜಿಲ್ಲೆಗೆ ‘ಆರೆಂಜ್ ಅಲರ್ಟ್’, ಯಾದಗಿರಿ, ಬೆಳಗಾವಿ, ಧಾರವಾಡ, ಹಾವೇರಿ ಹಾಗೂ ಹಾಸನ ಜಿಲ್ಲೆಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ. ಈ ಜಿಲ್ಲೆಗಳಲ್ಲಿ 40 ರಿಂದ 50 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದೆ.

ಕುಸಿತದ ಭೀತಿ ನಡುವೆ ತೆರವು ಕಾರ್ಯ

ಶಿರೂರು ಗುಡ್ಡ ಕುಸಿತ ಪ್ರಕರಣ: ಮೂವರ ಮೃತದೇಹ ಪತ್ತೆ: ಏಳಕ್ಕೇರಿದ ಸಾವಿನ ಸಂಖ್ಯೆ

• ಗಣಪತಿ ಹೆಗಡೆ

ಕಾರವಾರ: ‘ಮಳೆಗಾಲದಲ್ಲಿ ಶಿರೂರು ಗುಡ್ಡದಿಂದ ಜಿನುಗುತ್ತಿದ್ದ ಝರಿಗಳನ್ನು ಕಂಡು ಮೈ ಪುಳಕಿತಗೊಳ್ಳುತ್ತಿತ್ತು. ಈಗ ಅದೇ ಝರಿಗಳನ್ನು ಕಂಡು ಮೈ ನಡುಗುತ್ತದೆ. ಭಯದಲ್ಲೇ ರಸ್ತೆಗೆ ಬಿದ್ದ ಮಣ್ಣನ್ನು ಎತ್ತಿ ಸಾಗಿಸುತ್ತಿದ್ದೇವೆ’ ಎಂದು ಬಿಹಾರದ ಕಾರ್ಮಿಕ ಜಿತನ್‌ರಾಮ್ ಹೇಳುವಾಗ ಅವರ ಕೈ ನಡುಗುತ್ತಿತ್ತು. ಅವರ ದೃಷ್ಟಿ ಹೆದ್ದಾರಿಯಂಚಿನ ಗುಡ್ಡದತ್ತ ನೆಟ್ಟಿತ್ತು.

ಅಂಕೋಲಾ ತಾಲ್ಲೂಕಿನ ಶಿರೂರಿನಲ್ಲಿ ಗುಡ್ಡ ಕುಸಿದು ಮೂರು ದಿನವಾದರೂ ಹೆದ್ದಾರಿ ಆವರಿಸಿರುವ ಮಣ್ಣಿನ ರಾಶಿ ತೆರವು ಆಗಿಲ್ಲ. ಐದಾರು ಜೆಸಿಬಿಗಳು ಮಣ್ಣು ತೆಗೆದರೆ, ಅಷ್ಟೇ ಸಂಖ್ಯೆಯ ಟಿಪ್ಪರ್‌ಗಳು ಮಣ್ಣನ್ನು ದೂರಕ್ಕೆ ಸಾಗಿಸುತ್ತಿವೆ. ಜೆಸಿಬಿ, ಟಿಪ್ಪರ್ ಚಾಲಕರು, ಅವರಿಗೆ ಮಾರ್ಗದರ್ಶನ ನೀಡುವ ಸಿಬ್ಬಂದಿ ಸೇರಿ ಎಲ್ಲರೂ ಆತಂಕದಲ್ಲೇ ಕಾರ್ಯನಿರತರಾಗಿದ್ದಾರೆ.

ಸದ್ಯ ಹೆದ್ದಾರಿಗೆ ಬಿದ್ದು, ಗಂಗಾವಳಿ ನದಿಯನ್ನೂ ಆವರಿಸಿಕೊಂಡು, ಹಲವು ಜೀವಗಳನ್ನು ಬಲಿ ಪಡೆದ ಗುಡ್ಡದ ಅಕ್ಕಪಕ್ಕದಲ್ಲಿನ ಗುಡ್ಡಗಳಿಂದ ನಿರಂತರವಾಗಿ ಜಲಧಾರೆ ಒಸರುತ್ತಿದೆ. ಗುಡ್ಡದ ಮೇಲಿನಿಂದ ಮಣ್ಣುಗಳ ಮುದ್ದೆ ಕೆಳಕ್ಕೆ ಬೀಳುತ್ತಿದೆ. ಇದು ನೋಡುಗರ ಎದೆ ಝಲ್ಲೆನ್ನಿಸುತ್ತಿದೆ.

‘ಹೆದ್ದಾರಿ ಆವರಿಸಿಕೊಂಡ ಮಣ್ಣಿನ ರಾಶಿ ತೆರವುಗೊಳಿಸಿ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂಬ ಒತ್ತಡ ಹಲವು ಕಾರ್ಮಿಕರಲ್ಲಿದೆ. ‘ಕೆಲಸದ ಒತ್ತಡದ ಜೊತೆ ಗುಡ್ಡ ಕುಸಿದರೆ ನಮ್ಮ ಜೀವಕ್ಕೆ ಯಾರು ಹೊಣೆ’ ಎಂಬ ಆತಂಕ ಅವರಲ್ಲಿದೆ. ಎಡಬಿಡದೆ ಸುರಿಯುತ್ತಿರುವ ಮಳೆಯಿಂದ ಕಾರ್ಯಾಚರಣೆಗೆ ನಿರಂತರ ತೊಡಕು ಎದುರಾಗುತ್ತಿದೆ’ ಎಂದು ತೆರವು ಕಾರ್ಯಕ್ಕೆ ವಾಹನಗಳನ್ನು ಪೂರೈಸುವ ಅರುಣ ಹರ್ಕಡೆ ‘ಪ್ರಜಾವಾಣಿ’ಗೆ ತಿಳಿಸಿದರು.

ಮೃತದೇಹ ಪತ್ತೆಗೂ ತೊಡಕು: ಮೂರು ದಿನಗಳಾದರೂ ದುರ್ಘಟನೆಯಲ್ಲಿ ಕಾಣೆಯಾದವರ ಬಗ್ಗೆ ಇನ್ನೂ ಮಾಹಿತಿ ಸಿಕ್ಕಿಲ್ಲ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ (ಎನ್‌ಡಿಆರ್‌ಎಫ್) 29 ಸದಸ್ಯರು ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪಡೆಯ (ಎಸ್‌ಡಿಆರ್‌ಎಫ್) 34 ಸದಸ್ಯರು ಗಂಗಾವಳಿ ನದಿಯಲ್ಲಿ ಶೋಧ ಮುಂದುವರೆಸಿದ್ದಾರೆ.

‘ನದಿಗೆ ಕಲ್ಲು, ಮಣ್ಣಿನ ರಾಶಿ ಬಿದ್ದಿದ್ದು, ಅವುಗಳಡಿ ಮೃತದೇಹಗಳು ಸಿಲುಕಿರಬಹುದು. ನದಿಯ ಅಂಚಿನಲ್ಲಿ ಗಿಡಗಂಟಿಗಳು ಹೆಚ್ಚಿದ್ದು, ಹುಡುಕಾಟ ಕಷ್ಟವಾಗಿದೆ’ ಎಂದು ಎಸ್‌ಡಿಆರ್‌ಎಫ್ ತಂಡದ ಸದಸ್ಯರೊಬ್ಬರು ತಿಳಿಸಿದರು.

‘ಗಂಗಾವಳಿ ನದಿಯಲ್ಲಿ ಗುರುವಾರ ಬೆಳಿಗ್ಗೆ ಅವಂತಿಕಾ ನಾಯ್ಕ (6) ಮತ್ತು 45 ವರ್ಷದ ಪುರುಷನ ಮೃತದೇಹ ಸಿಕ್ಕಿದೆ. ಬೆಳಂಬಾರದ ಕಡಲತೀರದಲ್ಲಿ ದೇಹವೊಂದರ ಅರ್ಧ ಭಾಗ ದೊರೆತಿದೆ. ಅಲ್ಲಿಗೆ ಘಟನೆಯಲ್ಲಿ ಮೃತರ ಸಂಖ್ಯೆ ಏಳಕ್ಕೆ ಏರಿಕೆಯಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.



ಅಂಕೋಲಾ ತಾಲ್ಲೂಕಿನ ಶಿರೂರಿನಲ್ಲಿ ಗುಡ್ಡ ಕುಸಿದ ಸ್ಥಳದಲ್ಲಿ ಮಣ್ಣಿನ ರಾಶಿ ತೆರವು ಕಾರ್ಯ ನಡೆಯಿತು

ಶಿರೂರು ದುರಂತದಲ್ಲಿ 10 ಮಂದಿ ಕಾಣೆಯಾಗಿದ್ದು, ಏಳು ಜನರ ಮೃತದೇಹ ಸಿಕ್ಕಿದೆ. ಶೋಧ ಕಾರ್ಯಾಚರಣೆ ಮುಂದುವರೆದಿದೆ. ಮಾಹಿತಿಗೆ 9483511015 ಸಹಾಯವಾಣಿ ಸಂಪರ್ಕಿಸಿ
ಕೆ.ಲಕ್ಷ್ಮಿಪ್ರಿಯಾ, ಜಿಲ್ಲಾಧಿಕಾರಿ

‘ನದಿ ತೀರದಲ್ಲಿ ಪ್ರವಾಹ ಭೀತಿ’

ಉತ್ತರ ಕನ್ನಡ ಜಿಲ್ಲೆಯಾದ್ಯಂತ ಮಳೆಯ ಅಬ್ಬರ ಮುಂದುವರಿದಿದ್ದು ನದಿ ತೀರದ ಪ್ರದೇಶಗಳಲ್ಲಿ ಪ್ರವಾಹ ಭೀತಿ ಸೃಷ್ಟಿಯಾಗಿದೆ. ಗಂಗಾವಳಿ, ಅಘನಾಶಿನಿ, ಗುಂಡಬಾಳ ನದಿಗಳಲ್ಲಿ ನೀರಿನ ಮಟ್ಟ ಏರಿಕೆ ಆಗಿದೆ. ಮನೆಗಳಿಗೆ ನೀರು ನುಗ್ಗಿದೆ. ಹೊನ್ನಾವರ, ಕುಮಟಾದಲ್ಲಿ 15ಕ್ಕೂ ಹೆಚ್ಚು ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದೆ.

ಕುಮಟಾ ತಾಲ್ಲೂಕಿನ ಬರ್ಗಿ ಸಮೀಪ ಚತುಷ್ಪಥ ರಾಷ್ಟ್ರೀಯ ಹೆದ್ದಾರಿ–66ರ ಅಂಚಿನ ಗುಡ್ಡ ಕುಸಿದು ಹೆದ್ದಾರಿ ಮೇಲೆ ಮಣ್ಣಿನ ರಾಶಿ ಬಿದ್ದಿದೆ. ಇದರಿಂದ ಒಂದು ಪಥದಲ್ಲಿ ಸಂಚಾರ ಸ್ಥಗಿತಗೊಳಿಸಲಾಗಿದೆ. ಗೋವಾದ ಮೊಲೆಮ್ ಸಮೀಪದ ದೂದಸಾಗರ ಸ್ವಾಮಿ ದೇವಸ್ಥಾನದ ಬಳಿ ಗುಡ್ಡ ಕುಸಿದಿದ್ದರಿಂದ ರಾಮನಗರ–ಗೋವಾ ಹೆದ್ದಾರಿಯಲ್ಲಿ ಕೆಲ ಗಂಟೆ ಸಂಚಾರ ಸ್ಥಗಿತಗೊಂಡಿತ್ತು.

ಚನ್ನಪಟ್ಟಣ ಉಪ ಚುನಾವಣೆ ಘೋಷಣೆಗೂ ಮೊದಲೇ ಬಿಜೆಪಿ, ಜೆಡಿಎಸ್ ಕಿತ್ತಾಟ

‘ಮೈತ್ರಿ’ಯಲ್ಲಿ ಅಪಸ್ವರ: ‘ಫ್ರೆಂಡ್ಲಿ ಫೈಟ್’ ಸವಾಲು!

• ಓದೇಶ ಸಕಲೇಶಪುರ

ರಾಮನಗರ: ಚನ್ನಪಟ್ಟಣ ಉಪ ಚುನಾವಣೆ ಅಖಾಡಕ್ಕೆ ಯಾರು ಇಳಿಯಬೇಕು ಎನ್ನುವ ಕುರಿತು ಬಿಜೆಪಿ–ಜೆಡಿಎಸ್ ಮೈತ್ರಿಕೂಟದಲ್ಲಿ ಅದಾಗಲೇ ಭಿನ್ನ ರಾಗ ಶುರುವಾಗಿದೆ.

ಇಲ್ಲಿಯವರೆಗೂ ಎರಡೂ ಪಕ್ಷಗಳ ಒಳಗೆ ನಡೆಯುತ್ತಿದ್ದ ರಾಜಕೀಯ ಮೇಲಾಟ ಇದೀಗ ಬೀದಿಗೆ ಬಂದಿದೆ. ಎರಡೂ ಪಕ್ಷಗಳ ರಾಜ್ಯ ನಾಯಕರು ಈ ಬಗ್ಗೆ ಮೌನ ವಹಿಸಿದ್ದು, ಸ್ಥಳೀಯ ಮುಖಂಡರು ಮತ್ತು ಕಾರ್ಯಕರ್ತರು ಬಹಿರಂಗವಾಗಿ ಪರಸ್ಪರ ಪೈಪೋಟಿಗೆ ಇಳಿದಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಭಾರಿ ಒಗ್ಗಟ್ಟು ಪ್ರದರ್ಶಿಸಿದ್ದ ಎರಡೂ ಪಕ್ಷಗಳ ಸ್ಥಳೀಯ ಮುಖಂಡರು ಮತ್ತು ಕಾರ್ಯಕರ್ತರು ಚನ್ನಪಟ್ಟಣ ಉಪ ಚುನಾವಣೆ ಘೋಷಣೆಗೂ ಮೊದಲೇ ‘ಮೈತ್ರಿ ಬದಿಗಿಟ್ಟು ಫ್ರೆಂಡ್ಲಿ ಫೈಟ್ ಮಾಡೋಣ’ ಎಂದು ಪರಸ್ಪರ ತೊಡೆ ತಟ್ಟುತ್ತಿದ್ದಾರೆ.

ಮುಖ್ಯಾಂಶಗಳು

- ‘ಫ್ರೆಂಡ್ಲಿ ಫೈಟ್’ಸಂದೇಶದ ಹಿಂದೆ ‘ಗೇಮ್ ಚೇಂಜರ್’ ಯೋಗೇಶ್ವರ
- ಜೆಡಿಎಸ್‌ಗೆ ಕ್ಷೇತ್ರ ಉಳಿಸಿಕೊಳ್ಳುವ ಅನಿವಾರ್ಯತೆ

ಎಚ್.ಡಿ.ಕುಮಾರಸ್ವಾಮಿ ಪುತ್ರ ನಿಖಿಲ್ ಕುಮಾರಸ್ವಾಮಿ ಹೆಸರನ್ನು ಜೆಡಿಎಸ್ ಮುನ್ನೆಲೆಗೆ ತಂದಿದೆ. ‘ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಒಬ್ಬರೇ ಚುನಾವಣೆ ಗೆಲ್ಲಬಲ್ಲ ಸಮರ್ಥ ಅಭ್ಯರ್ಥಿ’ ಎಂದು ಅವರ ಬೆಂಬಲಿಗರು ವಾದ ಮಂಡಿಸುತ್ತಿದ್ದಾರೆ. ‘ಯೋಗೇಶ್ವರ್ ಅವರ ವಿಧಾನ ಪರಿಷತ್ ಸದಸ್ಯತ್ವ ಅವಧಿ ಇನ್ನೂ ಒಂದೂವರೆ ವರ್ಷ ಬಾಕಿ ಇದೆ’ ಎಂಬ ವಾದವನ್ನು ಮುಂದಿಟ್ಟುಕೊಂಡು ಜೆಡಿಎಸ್ ಅಡ್ಡಗಾಲು ಹಾಕುತ್ತಿದೆ.

ಅಭ್ಯರ್ಥಿ ಅಂತಿಮವಾಗುವ ಮೊದಲೇ ಎರಡೂ ಪಕ್ಷಗಳ ಸ್ಥಳೀಯ ಮುಖಂಡರು ಮಾಧ್ಯಮಗಳ ಮುಂದೆ ಬಹಿರಂಗ ಹೇಳಿಕೆ ನೀಡತೊಡಗಿದ್ದಾರೆ. ಚನ್ನಪಟ್ಟಣದಲ್ಲಿ ರಾಜಕೀಯ ಅಸ್ತಿತ್ವ ಉಳಿಸಿಕೊಳ್ಳುವ ಪ್ರಶ್ನೆ ಎದುರಾದಾಗ ಗೆಳೆತನ ಮರೆತು ಹಗೆತನದ ಮಾತು ಕೇಳಿ ಬರುತ್ತಿವೆ.

ಮತ್ತೊಂದೆಡೆ ‘ಚನ್ನಪಟ್ಟಣದಿಂದ ಹೊಸ ರಾಜಕೀಯ ಅಧ್ಯಾಯ ಶುರು’ ಎಂದು ಈಗಾಗಲೇ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚುನಾವಣಾ ಅಖಾಡ ಪ್ರವೇಶಿಸಿದ್ದಾರೆ. ಸಾರ್ವಜನಿಕರ ಸಮಸ್ಯೆ ಆಲಿಸಲು ಮೂರು ದಿನ ಜನಸ್ಪಂದನ ಕಾರ್ಯಕ್ರಮ ಮಾಡಿದ್ದಾರೆ. ಮೇಲಿಂದ ಮೇಲೆ ಚನ್ನಪಟ್ಟಣಕ್ಕೆ ಭೇಟಿ ಕೊಡುತ್ತಿದ್ದಾರೆ. ಅದಾಗಲೇ ಚುನಾವಣಾ ವಾತಾವರಣ ಸೃಷ್ಟಿಸಿದ್ದಾರೆ.

ಡಿ.ಕೆ. ಶಿವಕುಮಾರ್ ಅಬ್ಬರದ ಬೆನ್ನಲೇ ಮೈತ್ರಿಕೂಟದಲ್ಲೂ ಅಭ್ಯರ್ಥಿ ಚರ್ಚೆ ಬಿರುಸುಗೊಂಡಿದೆ. ಜೆಡಿಎಸ್‌ನಿಂದ ನಿಖಿಲ್ ಕುಮಾರಸ್ವಾಮಿ, ಸಂಸದ ಡಾ. ಸಿ.ಎನ್. ಮಂಜುನಾಥ್ ಅವರ ಪತ್ನಿ ಅನಸೂಯ, ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಜಯಮುತ್ತು ಹೆಸರು ಕೇಳಿ ಬರುತ್ತಿವೆ.

ಜೆಡಿಎಸ್‌ನಿಂದ ಮೂರು ಹೆಸರು ಮುನ್ನೆಲೆಗೆ ಬರುತ್ತಿದ್ದಂತೆ ದೆಹಲಿಗೆ ತೆರಳಿದ ಯೋಗೇಶ್ವರ್ ಬಿಜೆಪಿ ಮುಖಂಡರು ಮತ್ತು ಕುಮಾರಸ್ವಾಮಿ ಅವರನ್ನು ಕಂಡು ಚರ್ಚಿಸಿ ಬಂದಿದ್ದಾರೆ. ಅಲ್ಲಿಂದ ಮರಳಿದ ಬಳಿಕ ಮಾಧ್ಯಮದವರ ಮುಂದೆ ಬಂದ ಯೋಗೇಶ್ವರ್, ‘ನಾನೇ ಕ್ಷೇತ್ರದ ಅಭ್ಯರ್ಥಿ. ಕುಮಾರಸ್ವಾಮಿ ಸಹಮತ ವ್ಯಕ್ತಪಡಿಸಿದ್ದು, ಚುನಾವಣೆಗೆ ಸಿದ್ಧರಾಗುವಂತೆ ಸೂಚಿಸಿದ್ದಾರೆ. ಎರಡ್ಮೂರು ದಿನದಲ್ಲಿ ಅವರೇ ಅಧಿಕೃತವಾಗಿ ಹೆಸರು ಘೋಷಿಸಲಿದ್ದಾರೆ’ ಎಂದು ಹೇಳಿಬಿಟ್ಟರು.

ಆದರೆ, ಎಲ್ಲಿಯೂ ಅಪ್ಪಿತಪ್ಪಿಯೂ ಯೋಗೇಶ್ವರ್ ಹೆಸರು ಹೇಳದ ಕುಮಾರಸ್ವಾಮಿ, ಸ್ಥಳೀಯ ಮುಖಂಡರ ಅಭಿಪ್ರಾಯ ಸಂಗ್ರಹಿಸಿ ತೀರ್ಮಾನಿಸುವೆ ಎಂದು ಉಲ್ಟಾ ಹೊಡೆದಿದ್ದಾರೆ. ಅದಕ್ಕೆ ಕೆರಳಿದ ಸಿಪಿವೈ ಬೆಂಬಲಿಗರು, ‘ಮೈತ್ರಿ ಬದಿಗಿಟ್ಟು ಫ್ರೆಂಡ್ಲಿ ಫೈಟ್ ಮಾಡೋಣ’ ಎಂದು ಸವಾಲು ಹಾಕಿದ್ದಾರೆ.

ಗುತ್ತಿಗೆ ಬಸವಣ್ಣ ಏತ ನೀರಾವರಿ ಯೋಜನೆ:ಎನ್‌ಜಿಟಿ ಚಾಟಿ

ಕಾಡು ಬೆಳೆಸಲು ವಿವಾದಿತ ಜಾಗ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಳಗಾವಿ ಜಿಲ್ಲೆಯ ಗುತ್ತಿ ಬಸವಣ್ಣ ಏತ ನೀರಾವರಿ ಕುಡಿಯುವ ನೀರಿನ ಯೋಜನೆಗೆ ಬಳಕೆಯಾಗುವ ಅರಣ್ಯಕ್ಕೆ ಪರ್ಯಾಯವಾಗಿ ಪರಿಹಾರಾತ್ಮಕ ಅರಣ್ಯೀಕರಣ ಮಾಡಲು ಒತ್ತುವರಿಯಾಗಿರುವ 100 ಹೆಕ್ಟೇರ್ ಜಾಗ ಗುರುತಿಸಿ ಶಿಫಾರಸು ಮಾಡಿರುವುದು ‘ಅರಣ್ಯ ಸಂರಕ್ಷಣಾ ಕಾಯ್ದೆ 1980’ ಹಾಗೂ ‘ಪರಿಸರ ಸಂರಕ್ಷಣಾ ಕಾಯ್ದೆ 1986’ರ ಸ್ಪಷ್ಟ ಉಲ್ಲಂಘನೆ ಎಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಕಿಡಿ ಕಾರಿದೆ.

ಮಾಧ್ಯಮ ವರದಿಗಳ ಆಧಾರದಲ್ಲಿ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿರುವ ನ್ಯಾಯಮೂರ್ತಿ ಪ್ರಕಾಶ್ ಶ್ರೀವಾಸ್ತವ ನೇತೃತ್ವದ ಪ್ರಧಾನ ಪೀಠವು, ಕರ್ನಾಟಕ ಅರಣ್ಯ ಪಡೆ ಮುಖ್ಯಸ್ಥರು, ಕೇಂದ್ರ ಪರಿಸರ ಸಚಿವಾಲಯ ಹಾಗೂ ಮುಖ್ಯ ವನ್ಯಜೀವಿ ಸಂರಕ್ಷಕರಿಗೆ (ಪಿಸಿಸಿಎಫ್) ನೋಟಿಸ್ ನೀಡಿದೆ. ವಿವಾದಿತ ಜಾಗವನ್ನು ಶಿಫಾರಸು ಮಾಡಿರುವುದು ಗಂಭೀರ ಲೋಪ ಎಂದು ಕೇಂದ್ರ ಪರಿಸರ ಸಚಿವಾಲಯ ಸಹ ಅಸಮಾಧಾನ ವ್ಯಕ್ತಪಡಿಸಿತ್ತು. ಈ ಬಗ್ಗೆ ‘ಪ್ರಜಾವಾಣಿ’ ಜೂನ್ 17ರಂದು ವರದಿ ಪ್ರಕಟಿಸಿತ್ತು.

ಈ ಯೋಜನೆಯಡಿ ಮಾರ್ಕಾಂಡೇಯ ನದಿಗೆ ಅಣೆಕಟ್ಟೆ ನಿರ್ಮಿಸಿ ಕುಡಿಯುವ ನೀರಿನ ಬಳಕೆಗೆ 6 ಟಿಎಂಸಿ ಅಡಿ ನೀರು ಸಂಗ್ರಹಿಸಲಾಗುತ್ತದೆ. ಗೋಕಾಕ, ಹುಕ್ಕೇರಿ, ಬೈಲಹೊಂಗಲ ಪಟ್ಟಣ ಹಾಗೂ ಸುತ್ತಮುತ್ತಲ ಗ್ರಾಮಗಳಿಗೆ ಕುಡಿಯುವ ನೀರು ಪೂರೈಕೆಯ ಗುರಿ ಹೊಂದಲಾಗಿದೆ. ಈ ಯೋಜನೆಗೆ 575 ಹೆಕ್ಟೇರ್ ಅರಣ್ಯ ಬಳಸಿಕೊಳ್ಳಲಾಗುತ್ತದೆ.


‘ಬೆಳಗಾವಿ ಜಿಲ್ಲೆಯ ಅಥಣಿ ವಲಯದ 462 ಹೆಕ್ಟೇರ್, ಗೋಕಾಕ್ ವಲಯದ 72 ಹೆಕ್ಟೇರ್ ಹಾಗೂ ಸವದತ್ತಿ ವಲಯದ 154 ಹೆಕ್ಟೇರ್ ಅನ್ನು ಪರಿಹಾರಾತ್ಮಕ ಅರಣ್ಯೀಕರಣಕ್ಕೆ ಗುರುತಿಸಲಾಗಿದೆ. ಅರಣ್ಯ ಇಲಾಖೆಯ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಪ್ರಸ್ತಾವನೆ ಸಿದ್ಧಪಡಿಸಬೇಕು. ಈ ಜಾಗ ಒತ್ತುವರಿಯಾಗಿದೆಯೇ ಎಂಬುದನ್ನು ಪರಿಶೀಲನೆ ಮಾಡಬೇಕು. ಆದರೆ, ಈ ಪ್ರಕರಣದಲ್ಲಿ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸದೆಯೇ ಜಾಗ ಶಿಫಾರಸು ಮಾಡಿದಂತಿದೆ. ಅಧಿಕಾರಿಗಳ ಇಂತಹ ಧೋರಣೆಯನ್ನು ಸಹಿಸಲು ಸಾಧ್ಯವಿಲ್ಲ’ ಎಂದು ಎನ್‌ಜಿಟಿ ಹೇಳಿದೆ.

ನೋಟಿಸ್‌ಗೆ ಪ್ರತಿಕ್ರಿಯೆ ನೀಡಲು ಅರಣ್ಯ ಇಲಾಖೆ ನಾಲ್ಕು ವಾರಗಳ ಕಾಲಾವಕಾಶ ಕೇಳಿದೆ. ಪ್ರಕರಣದ ವಿಚಾರಣೆಯನ್ನು ದಕ್ಷಿಣ ವಲಯ ಪೀಠಕ್ಕೆ ವರ್ಗಾಯಿಸಲಾಗಿದೆ. ಮುಂದಿನ ವಿಚಾರಣೆ ಸೆಪ್ಟೆಂಬರ್ 11ರಂದು ನಡೆಯಲಿದೆ.


ಸಿದ್ದರಾಮಯ್ಯ– ಸಿ.ಎನ್. ಅಶ್ವತ್ಥ ನಾರಾಯಣ ವಾಕ್ಸಮರ

ಬೆಂಗಳೂರು: ಭ್ರಷ್ಟಾಚಾರ ಕುರಿತ ಚರ್ಚೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಬಿಜೆಪಿಯ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಮಧ್ಯೆ ಗುರುವಾರ ವಿಧಾನಸಭೆಯಲ್ಲಿ ಭಾರಿ ವಾಕ್ಸಮರಕ್ಕೆ ಕಾರಣವಾಯಿತು. ಈ ಇಬ್ಬರ ಮಧ್ಯೆ ಆರಂಭವಾದ ಮಾತಿನ ಸಮರ, ಕಾಂಗ್ರೆಸ್– ಬಿಜೆಪಿ ಮಧ್ಯದ ಜಗಳವಾಗಿ ಪರಿವರ್ತನೆಯಾಯಿತು. ಎರಡೂ ಕಡೆಯ ಸದಸ್ಯರ ಗದ್ದಲದಿಂದ ಕೆಲವು ಸಮಯ ಸದನದಲ್ಲಿ ಕೋಲಾಹಲದ ವಾತಾವರಣ ನಿರ್ಮಾಣವಾಗಿತ್ತು. ಮಾತಿನ ಚಕಮಕಿ ಹೀಗಿತ್ತು.

ವಿಧಾನಸಭೆಯಲ್ಲಿ ಏಟು–ಎದಿರೇಟು



- ನಿಂದೆಲ್ಲ ಬಿಚ್ಚಿಡಬೇಕಾಗುತ್ತದೆ ನಾನೀಗ ಅಷ್ಟೇ. ಕೆಲವರದೆಲ್ಲ ತೆಗೀತೀನಿ ಈಗ. ನೀನು ಭ್ರಷ್ಟಾಚಾರದ ಪಿತಾಮಹ.
- ದಲಿತ ಅಂತ ಹೇಳಬೇಡಿ ಎಂದು ಸಂವಿಧಾನದಲ್ಲಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಎಂದು ಹೇಳಿ. ಪದೇ ಪದೇ ದಲಿತ, ದಲಿತ ಅಂತ ಯಾಕೆ ಹೇಳ್ತೀರಿ?
- ಬಿಜೆಪಿಯವರು ಸಾಮಾಜಿಕ ನ್ಯಾಯದ ವಿರೋಧಿಗಳು ಎನ್ನುವುದು ಇವರ ನಡವಳಿಕೆಯಿಂದಲೇ ಗೊತ್ತಾಗುತ್ತದೆ.
- 40 ವರ್ಷದಿಂದ ರಾಜಕೀಯದಲ್ಲಿದ್ದೇನೆ. ಒಂದು ಕಪ್ಪು ಚುಕ್ಕೆ ಇಲ್ಲ. ನೀನು ಸುಳ್ಳು ಹೇಳಿದರೆ ಜನರು ನಂಬುವುದಿಲ್ಲ. ಅನಾಚಾರ, ಭ್ರಷ್ಟಾಚಾರ ಮಾಡಿ ನಮಗೆ ಹೇಳುತ್ತಾನೆ.
- ಇವರ ಭ್ರಷ್ಟಾಚಾರ ಬಯಲಾಗಿದೆ. ಇವರ ಕಾಲದಲ್ಲಿ ಏನೇನು ನಡೀತು ಎಲ್ಲ ತೆಗೆದಿಡ್ತೀನಿ. ನೀವು ಭ್ರಷ್ಟಾಚಾರ ತಡೆದಿದ್ದಕ್ಕೆ ಡಿ.ಎಸ್. ವೀರಯ್ಯ ಜೈಲಿಗೆ ಹೋಗಿದ್ದಾ? ಮಾನ ಮರ್ಯಾದೆ ಇದೆಯಾ ? ಎಪಿಎಂಸಿ. ಬೋವಿ ಅಭಿವೃದ್ಧಿ ನಿಗಮ, ದೇವರಾಜ ಅರಸು ಟ್ರಕ್ ಟರ್ಮಿನಲ್‌ನಲ್ಲಿ ಏನಾಯಿತು?
- ಸರ್ಕಾರ ಹೇಗೆ ನಡೆಸಬೇಕು ಅನ್ನೋದು ನಿನ್ನಿಂದ ಕಲಿಯಬೇಕಿಲ್ಲ. ಸುಮ್ನೆ ಕೂತ್ಕೊ.



- 100 ಪರ್ಸೆಂಟ್ ಸರ್ಕಾರ, ಪೇಸಿಎಂ ನೀವೆ. ನಾಚಿಕೆ ಇದೆಯಾ? ಮಾತನಾಡಲು ಯಾವ ನೈತಿಕತೆ ಇದೆ ನಿಮಗೆ. 100 ಪರ್ಸೆಂಟ್ ಭ್ರಷ್ಟಾಚಾರಕ್ಕೆ ದಾಖಲೆ ಕೊಡ್ತೀವಿ.
- ನಿಮ್ಮದೇ ಭ್ರಷ್ಟಾಚಾರ. ನೀವು 100 ಪರ್ಸೆಂಟ್ ಸಿಎಂ. ಕರ್ನಾಟಕ ಇಂತಹ ಭ್ರಷ್ಟ ಮುಖ್ಯಮಂತ್ರಿಯನ್ನು ಯಾವತ್ತೂ ಕಂಡಿರಲಿಲ್ಲ.
- ತೆಗೀರಿ, ಯಾರು ಬೇಡ ಅಂದವರು. ನಿಮಗೆ ಅಧಿಕಾರ ಕೊಟ್ಟಿದ್ದೇ ಅದಕ್ಕಾಗಿ. ಭ್ರಷ್ಟಾಚಾರದ ವಿರುದ್ಧವಾಗಿದ್ದೀವಿ, ಭ್ರಷ್ಟಾಚಾರ ನಿರ್ಮೂಲನೆ ಮಾಡುತ್ತೀವಿ, 40 ಪರ್ಸೆಂಟ್ ಸರ್ಕಾರ ಅಂತ ಆರೋಪ ಮಾಡಿಕೊಂಡು ಬಂದ್ರಿ. ಈಗ 100 ಪರ್ಸೆಂಟ್ ಸರ್ಕಾರ ನಡೆಸ್ತಾ ಇದ್ದೀರಿ.
- ಇಂತಹ ಭ್ರಷ್ಟ ಮುಖ್ಯಮಂತ್ರಿಯನ್ನೇ ಮುಂದುವರಿಸಿಕೊಂಡು ಹೋಗುವ ಪರಿಸ್ಥಿತಿ ಕಾಂಗ್ರೆಸ್‌ಗೆ ಬಂದಿದೆ. ಭ್ರಷ್ಟರಾದರೂ ಅವರೇ ನಾಯಕ. ಪರ್ಯಾಯ ನಾಯಕರೇ ಇಲ್ಲ. ಬಡವರ ದುಡ್ಡು ಲೂಟಿ ಹೊಡೆಯೋದೇ ಆಡಳಿತವಾ?
- ನೀವೇ ಸ್ವತಃ ಆರಂಭ ಮಾಡಿದ್ದ ಅಹಿಂದದಲ್ಲಿ ಏನಿದೆ? ನೀವೇ ಹೇಳಿಕೊಂಡು ಬಂದು ಈಗ ಬೇರೆಯವರಿಗೆ ಏಕೆ ಪಾಠ ಹೇಳ್ತೀರಿ. ಮೊದಲು ಅವರು ಸರಿ ಮಾಡಿಕೊಳ್ಳಲಿ. ಆಮೇಲೆ ಉಳಿದವರಿಗೆ ಪಾಠ ಹೇಳಿ.
- ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗಿದೆ ಎಂದು ಹೇಳುತ್ತಾ ಇದ್ದೀವಿ.

ಪಿಟಿಸಿಎಲ್: ಮರು ಪರಿಶೀಲನಾ ಅರ್ಜಿಗೆ ಆಗ್ರಹ

ಬೆಂಗಳೂರು: ಕರ್ನಾಟಕ ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್‌ಟಿ) (ಕೆಲವು ಭೂಮಿಗಳ ವರ್ಗಾವಣೆ ನಿಷೇಧ– ಪಿಟಿಸಿಎಲ್) ಕಾಯ್ದೆಗೆ ಸಂಬಂಧಿಸಿದ ಪ್ರಕರಣದಲ್ಲಿ ಪರಿಶಿಷ್ಟರಿಗೆ ನ್ಯಾಯ ಒದಗಿಸಲು ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಮರು ಪರಿಶೀಲನಾ ಅರ್ಜಿ ಸಲ್ಲಿಸಬೇಕು ಎಂದು ಪಿಟಿಸಿಎಲ್ ಕಾಯ್ದೆ ಭೂಮಿ ವಂಚಿತರ ಹೋರಾಟ ಸಮಿತಿ ಆಗ್ರಹಿಸಿದೆ.

'ನೆಕ್ಕಂಟಿ ರಾಮಲಕ್ಷ್ಮಿ ಮತ್ತು ಕರ್ನಾಟಕ ಸರ್ಕಾರದ ಮಧ್ಯದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನಿಂದ ಪರಿಶಿಷ್ಟರಿಗೆ ಅನ್ಯಾಯವಾಗಿದೆ. ಅದನ್ನು ಸರಿಪಡಿಸಲು ರಾಜ್ಯ ಸರ್ಕಾರ ಕಾಯ್ದೆಗೆ ತಂದಿರುವ ತಿದ್ದುಪಡಿಯಿಂದಲೂ ನ್ಯಾಯ ದೊರಕಿಲ್ಲ. 2017ರ ಹಿಂದೆ ವಜಾಗೊಂಡಿರುವ ಪ್ರಕರಣಗಳಿಗೆ ಈ ತಿದ್ದುಪಡಿ ಅನ್ವಯಿಸುವುದಿಲ್ಲ. ಶೇಕಡ 10ರಷ್ಟು ಪ್ರಕರಣಗಳು ಮಾತ್ರ ತಿದ್ದುಪಡಿಯ ವ್ಯಾಪ್ತಿಗೆ ಬರುತ್ತವೆ. ಇದರಿಂದ ಪರಿಶಿಷ್ಟರಿಗೆ ಅನ್ಯಾಯವೇ ಆಗಿದೆ' ಎಂದು ಹೋರಾಟ ಸಮಿತಿಯ ಅಧ್ಯಕ್ಷ ಮಂಜುನಾಥ್ ಪತ್ರಿಕಾ ಹೇಳಿಕೆಯಲ್ಲಿ ದೂರಿದ್ದಾರೆ.

ಈ ಅನ್ಯಾಯವನ್ನು ಸರಿಪಡಿಸಲು ರಾಜ್ಯ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು. ನೆಕ್ಕಂಟಿ ರಾಮಲಕ್ಷ್ಮಿ ಮತ್ತು ಕರ್ನಾಟಕ ಸರ್ಕಾರದ ಮಧ್ಯದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ಪ್ರಶ್ನಿಸಿ ಮರು ಪರಿಶೀಲನಾ ಅರ್ಜಿ ಸಲ್ಲಿಸಬೇಕು. ಅದು ಸಾಧ್ಯವಾಗದಿದ್ದರೆ, ಪ್ರಕರಣವನ್ನು ಸುಪ್ರೀಂ ಕೋರ್ಟ್‌ನ ಸಾಂವಿಧಾನಿಕ ಪೀಠಕ್ಕೆ ವರ್ಗಾಯಿಸುವಂತೆ ಅರ್ಜಿ ಸಲ್ಲಿಸಬೇಕು ಎಂದು ಆಗ್ರಹಿಸಿದ್ದಾರೆ.

ಸಾಮಾಜಿಕ ನ್ಯಾಯದ ಬಗ್ಗೆ ಬಿಜೆಪಿಯವರಿಂದ ಪಾಠ ಹೇಳಿಸಿಕೊಳ್ಳಬೇಕಾಗಿಲ್ಲ: ತಿರುಗೇಟು

ಸರ್ಕಾರ ಯಾರನ್ನೂ ರಕ್ಷಿಸುವುದಿಲ್ಲ:ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಸರ್ಕಾರ ಯಾರನ್ನೂ ರಕ್ಷಿಸುವುದಿಲ್ಲ. ತಪ್ಪು ಯಾರೇ ಮಾಡಿದ್ದರೂ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವುದು ನಿಶ್ಚಿತ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿ ಹೇಳಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ಕುರಿತು ಉತ್ತರ ನೀಡಿದ ಅವರು, 'ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕುರಿತ ಕಾಳಜಿ ನಾನು ಬದುಕಿರುವವರೆಗೂ ಇರುತ್ತದೆ. ಸಾಮಾಜಿಕ ನ್ಯಾಯದ ಬಗ್ಗೆ ಬಿಜೆಪಿಯವರಿಂದ ಪಾಠ ಹೇಳಿಸಿಕೊಳ್ಳಬೇಕಾಗಿಲ್ಲ. ಅದರ ಅಗತ್ಯವೂ ಇಲ್ಲ' ಎಂದು ಬಿಜೆಪಿ ಸದಸ್ಯರನ್ನು ತಿವಿದರು.

'ಎಸ್‌ಸಿಎಸ್‌ಪಿ ಟಿಎಸ್‌ಪಿ ಜಾರಿ ಮಾಡಿದ್ದು ನಮ್ಮ ಸರ್ಕಾರ. ಆದಕ್ಕಾಗಿ ಕಾನೂನು ಮಾಡಿದೆವು. ನೀವು ಬಿಜೆಪಿಯವರು ಮಾಡಲಿಲ್ಲ. ಗುತ್ತಿಗೆಯಲ್ಲಿ ಮೀಸಲಾತಿ ಜಾರಿ ಮಾಡಿದ್ದ ಮೊದಲ ರಾಜ್ಯ ನಮ್ಮದು. ಅದನ್ನು ಮಾಡಿದವರೂ ನಾವು. ಆದ್ದರಿಂದ ನಾವು ಪರಿಶಿಷ್ಟರ ವಿರೋಧಿ ಆಗಲು ಸಾಧ್ಯವೇ? ಈ ವರ್ಗಕ್ಕೆ ಏನೂ ಮಾಡದ ನೀವು ಅನ್ಯಾಯ ಆಗಿದೆ, ಅನ್ಯಾಯ ಆಗಿದೆ... ಎಂದು ಬೊಬ್ಬೆ ಹೊಡೆಯುತ್ತಿದ್ದೀರಿ' ಎಂದು ಕಿಡಿಕಾರಿದರು.

'ಆತ್ಮಹತ್ಯೆ ಮಾಡಿಕೊಂಡ ಅಧಿಕಾರಿ ಚಂದ್ರಶೇಖರನ್ ತಮಿಳುನಾಡಿನ ಭೋವಿ ಸಮಾಜಕ್ಕೆ ಸೇರಿದವರು' ಎಂದು ಸಿದ್ದರಾಮಯ್ಯ ಹೇಳಿದಾಗ, ಕೆಲವು ಕಾಂಗ್ರೆಸ್ ಸದಸ್ಯರು, 'ತಮಿಳುನಾಡಿನಲ್ಲಿ ಭೋವಿ ಸಮಾಜ ಹಿಂದುಳಿದ ವರ್ಗವೇ ಹೊರತು ಪರಿಶಿಷ್ಟ ಜಾತಿ ಅಲ್ಲ' ಎಂದು ಹೇಳಿದರು. ಇದಕ್ಕೆ ಬಿಜೆಪಿ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು.

'ಸಂವಿಧಾನದಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗ ಎನ್ನುವ ಉಲ್ಲೇಖ ಇದೆ. ಇಬ್ಬರೂ ಸೇರಿ ಶೇ 24.1 ಜನಸಂಖ್ಯೆ ಇದ್ದಾರೆ. ಇವರ ಅಭಿವೃದ್ಧಿ ಆದರೆ ಮಾತ್ರ ಸಮ ಸಮಾಜದ ಆಶಯ ಈಡೇರುತ್ತದೆ. ಈ ಸಮುದಾಯಗಳಿಗೆ ಆರ್ಥಿಕ, ಸಾಮಾಜಿಕ ಶಕ್ತಿ ಬರುತ್ತದೆ. ಅಸಮಾನತೆ ಇರುವವರೆಗೂ ಸಮಾನತೆ ಸಾಧ್ಯವಿಲ್ಲ. ಸಂವಿಧಾನ ಬಂದು 70 ವರ್ಷ ಆದರೂ ಸಮಾನತೆ ಸಿಕ್ಕಿಲ್ಲ. ಇದನ್ನು ಸರಿಪಡಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಹೀಗಾಗಿ ವಾಲ್ಮೀಕಿ, ಭೋವಿ, ಆದಿಜಾಂಬವ, ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ ಸೇರಿ ಹಲವು ಅಭಿವೃದ್ಧಿ ನಿಗಮಗಳು ಆರಂಭಿಸಲಾಗಿದೆ' ಎಂದು ಅವರು ಹೇಳಿದರು.

'ಈ ಎಲ್ಲ ನಿಗಮಗಳ ಉದ್ದೇಶ ಆಯಾ ಸಮುದಾಯಗಳನ್ನು ಆರ್ಥಿಕವಾಗಿ ಬಲಿಷ್ಠರನ್ನಾಗಿಸುವುದೇ ಆಗಿದೆ' ಎಂದು ಸಿದ್ದರಾಮಯ್ಯ ಹೇಳಿದರು.

ಸಿದ್ದರಾಮಯ್ಯ– ಆರಗ ಜ್ಞಾನೇಂದ್ರ ಮಾತಿನ ಜಟಾಪಟಿ

ಸದನದಲ್ಲಿ ಉತ್ತರ ನೀಡುವ ಸಂದರ್ಭದಲ್ಲಿ ಸಿದ್ದರಾಮಯ್ಯ ಮತ್ತು ಬಿಜೆಪಿಯ ಆರಗ ಜ್ಞಾನೇಂದ್ರ ಮಧ್ಯೆ ಮಾತಿನ ಜಟಾಪಟಿ ನಡೆಯಿತು.

- **ಸಿದ್ದರಾಮಯ್ಯ**– ನಾನು ಡೆತ್ ನೋಟ್ ಓದುತ್ತಿಲ್ಲ. ಅಶೋಕ ಅವರೇ ಓದಿದ್ದಾರಲ್ಲ
- **ಆರಗ**– ನೀವೂ ಡೆತ್ ನೋಟ್ ಕೂಡ ಓದಬೇಕು. ಅದರಲ್ಲಿ ಸಚಿವರ ಮೌಖಿಕ ಸೂಚನೆ ನೀಡಿರುವ ವಿಚಾರ ಇದೆ. ಅದನ್ನು ಬಿಟ್ಟು ಅನಗತ್ಯ ಮಾಹಿತಿ ಓದುವುದು ಸರಿಯಲ್ಲ...
- **ಆರಗ**– ಮುಖ್ಯಮಂತ್ರಿಯವರು ಡೆತ್‌ನೋಟ್ ಸರಿಯಾಗಿ ಓದಬೇಕು. ಆರೋಪಿಗಳನ್ನು ರಕ್ಷಣೆ ಮಾಡಲು ಮುಂದಾಗಬೇಡಿ. ಆತ್ಮವಂಚನೆ ಮಾಡಿಕೊಳ್ಳಬೇಡಿ. ನಿಮಗೆ ಶೋಭೆ ತರುವುದಿಲ್ಲ. ಎಫ್ಐಆರ್‌ನಿಂದ ಉದ್ದೇಶಪೂರ್ವಕವಾಗಿ ಮಂತ್ರಿ ಹೆಸರು ತೆಗೆಸಿದ್ದೀರಿ?
- **ಸಿದ್ದರಾಮಯ್ಯ**– ನಮ್ಮ ಸರ್ಕಾರ ಯಾರನ್ನೂ ರಕ್ಷಿಸಲ್ಲ
- **ಆರಗ**– ಪೊಲೀಸರು ಮೃತರ ಪತ್ನಿಯನ್ನು ಮಧ್ಯರಾತ್ರಿ 2 ಗಂಟೆಗೆ ಪೊಲೀಸ್ ಠಾಣೆಗೆ ಕರೆಸಿ ಹೇಳಿಕೆ ಪಡೆದಿದ್ದಾರೆ. ಮಧ್ಯರಾತ್ರ ಕರೆಸಿ ಹೇಳಿಕೆ ಪಡೆಯುವ ಜರೂರು ಏನಿತ್ತು. ಅಧಿಕಾರಿಯ ಡೆತ್ ನೋಟ್‌ಗೆ ಬೆಲೆ ಇಲ್ಲವೇ? ಇದ್ದರೆ ಅದರ ಆಧಾರದಲ್ಲಿ ಎಫ್ಐಆರ್ ಏಕೆ ದಾಖಲಿಸಲಿಲ್ಲ
- **ಸಿದ್ದರಾಮಯ್ಯ**– ಐ ಯಾಮ್ ನಾಟ್ ಈಲ್ಡಿಂಗ್
- **ಸುನಿಲ್ ಕುಮಾರ್**– ಎಫ್ಐಆರ್‌ನಲ್ಲಿ ಸಚಿವರ ಹೆಸರು ಸೇರಿಸಿಲ್ಲ
- **ಸಿದ್ದರಾಮಯ್ಯ**– ನಿಮಗೆ ಹೆದರಲ್ಲ



ಧರಣಿ... ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ತರವನ್ನು ವಿರೋಧಿಸಿ ಬಿಜೆಪಿ ಸದಸ್ಯರು ವಿಧಾನಸಭೆಯಲ್ಲಿ ಸಭಾಧ್ಯಕ್ಷರ ಪೀಠದ ಮುಂದೆ ಧರಣಿ ನಡೆಸಿದರು -ಪ್ರಜಾವಾಣಿ ಚಿತ್ರ

ಹಗರಣ: ಸದನದ ಕಲಾಪ ಹರಣ

ಒಂದನೇ ಪುಟದಿಂದ...

ಆದರೆ ಮುಖ್ಯಮಂತ್ರಿಯವರು ಈ ಅಂಶವನ್ನು ಉದ್ದೇಶಪೂರ್ವಕವಾಗಿ ಮುಚ್ಚಿಟ್ಟಿದ್ದಾರೆ. ಯೂನಿಯನ್ ಬ್ಯಾಂಕ್ ಅಧಿಕಾರಿಗಳ ಹೆಸರು ಮಾತ್ರ ಹೇಳಿ ನೈಜ ಆರೋಪಿಗಳನ್ನು ಬಚಾವು ಮಾಡಲು ಹೊರಟಿದ್ದಾರೆ. ಮುಖ್ಯಮಂತ್ರಿ ನೇತೃತ್ವದಲ್ಲಿ ಹಗರಣ ನಡೆದಿರುವುದರಿಂದಲೇ ಈ ಅಂಶ ಮುಚ್ಚಿಡುತ್ತಿದ್ದಾರೆ' ಎಂದು ಆರೋಪಿಸಿದರು. ಬಸನಗೌಡ ಪಾಟೀಲ ಯತ್ನಾಳ, ಅರವಿಂದ ಬೆಲ್ಲದ ಅವರು ಇದಕ್ಕೆ ಧ್ವನಿಗೂಡಿಸಿದರು.

ಇದಕ್ಕೆ ಕಾಂಗ್ರೆಸ್ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಬಿಜೆಪಿ ಸದಸ್ಯರು ಸಭಾಧ್ಯಕ್ಷರ ಪೀಠದ ಮುಂದೆ ಧರಣಿಗೆ ಮುಂದಾದರಲ್ಲದೇ, ಘೋಷಣೆ ಕೂಗಲು ಆರಂಭಿಸಿದರು.

'ನಾನು ಉತ್ತರ ನೀಡಿ ಬಿಡುತ್ತೇನೆ. ಆ ಮೇಲೆ ನೀವು ಪ್ರತಿಭಟನೆ ಮಾಡಿಕೊಳ್ಳಿ. ಉತ್ತರಕ್ಕೆ ಅವಕಾಶ ನೀಡಿ' ಎಂದು ಮುಖ್ಯಮಂತ್ರಿಯವರು ಕೋರಿಕೊಂಡಾಗ ಬಿಜೆಪಿ ಸದಸ್ಯರು ಕಿವಿಗೆ ಹಾಕಿಕೊಳ್ಳಲಿಲ್ಲ. ಬಿಜೆಪಿ ಸದಸ್ಯರು ಸರ್ಕಾರದ ವಿರುದ್ಧ ಮುಗಿಬೀಳಲು ಎದ್ದು ನಿಂತಾಗ, ತಮ್ಮ ಪಕ್ಷದ ಸದಸ್ಯರಿಗೂ ಎದ್ದು ನಿಲ್ಲುವಂತೆ ಸಿದ್ದರಾಮಯ್ಯ ಸಂಜ್ಞೆ ಮಾಡಿದರು. ಗದ್ದಲ ತಾರಕಕ್ಕೇ ಏರಿತು. ಸಭಾಧ್ಯಕ್ಷರು ಕಲಾಪ ಮುಂದೂಡಿದರು. ಸಭಾಧ್ಯಕ್ಷರ ನೇತೃತ್ವದಲ್ಲಿ ನಡೆದ ಸಂಧಾನ ಸಭೆ ಫಲ ನೀಡಲಿಲ್ಲ. ಮತ್ತೆ ಕಲಾಪ ಆರಂಭವಾದಾಗ ಬಿಜೆಪಿ ಸದಸ್ಯರು ಧರಣಿ ಮುಂದುವರೆಸಿದರು. ಸಭಾಧ್ಯಕ್ಷರು ಕಲಾಪವನ್ನು ಮುಂದೂಡಿದರು.

'ಮುಡಾ, ವಾಲ್ಮೀಕಿ ಹಗರಣ ಸಿಬಿಐಗೆ ವಹಿಸಿ'

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಭ್ರಷ್ಟಾಚಾರ ಹಾಗೂ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಬಿಜೆಪಿ ಬೃಹತ್ ಪ್ರತಿಭಟನೆ ನಡೆಸಿತು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿ, 'ದೊಡ್ಡವರು ಹೇಳಿದ್ದಕ್ಕೆ ಹಣ ದುರುಪಯೋಗ ಎಂಬ ಮಾಹಿತಿಯನ್ನು ಇ.ಡಿ. ವಶದಲ್ಲಿರುವ ಮಾಜಿ ಸಚಿವ ನಾಗೇಂದ್ರ ಹೇಳಿದ್ದಾಗಿ ಮಾಹಿತಿ ಇದೆ. ನಾಗೇಂದ್ರ ಎಲ್ಲಿ ತಮ್ಮ ಹೆಸರು ಹೇಳುವರೋ ಎಂಬ ಭಯ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಕಾಡುತ್ತಿದೆ. ಸರ್ಕಾರ ಪತನವಾಗುತ್ತದೆ ಎಂಬ ಆತಂಕವೂ ಅವರಿಗೆ ಇದೆ' ಎಂದರು.

'ಕಾಂಗ್ರೆಸ್ ಸರ್ಕಾರ ಕಿತ್ತೊಗೆಯುವವರೆಗೆ, ಸಿ.ಎಂ ರಾಜೀನಾಮೆ ಕೊಡುವವರೆಗೆ ಹೋರಾಟ ಮುಂದುವರೆಯಲಿದೆ' ಎಂದು ವಿಜಯೇಂದ್ರ ಹೇಳಿದರು. ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ, ಸಂಸದ ಗೋವಿಂದ ಕಾರಜೋಳ, ಶಾಸಕರಾದ ಚಂದ್ರ ಲಮಾಣಿ, ಸಿಮೆಂಟ್ ಮಂಜು, ಪರಿಷತ್ ಸದಸ್ಯರಾದ ಎನ್.ರವಿಕುಮಾರ್, ಛಲವಾದಿ ನಾರಾಯಣಸ್ವಾಮಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ವಿಜಯೇಂದ್ರ ವಶಕ್ಕೆ

ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಹೊರಟ ಬಿ.ಎಸ್.ವಿಜಯೇಂದ್ರ ಸೇರಿದಂತೆ ಹಲವು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು. ಕೆಲವರು ಬ್ಯಾರಿಕೇಡ್ ದಾಟಲು ಯತ್ನಿಸಿ ಕೆಳಗೆ ಬಿದ್ದರು. ಬ್ಯಾರಿಕೇಡ್ ಮೇಲೆ ಬಿದ್ದ ಮಾಜಿ ಶಾಸಕ ರಾಜುಗೌಡ ಅವರನ್ನು ಪೊಲೀಸರು ಹಾಗೂ ಕಾರ್ಯಕರ್ತರು ಮೇಲಕ್ಕೆ ಎತ್ತಿದರು. ಈ ವೇಳೆ ನೂಕಾಟ, ತಳ್ಳಾಟ ನಡೆಯಿತು. ಕೆಲವರು ಬಸ್ ಟಾಪ್ ಮೇಲೆ ಕುಳಿತು ಘೋಷಣೆ ಕೂಗಿದರು. ಬಳಿಕ ಪೊಲೀಸರು ಎಲ್ಲರನ್ನೂ ಕೆಳಗಿಳಿಸಿ ಬಸ್‌ನಲ್ಲಿ ಕರೆದೊಯ್ದರು.

ಬಳಿಕ ಬಿಜೆಪಿ ರಾಜ್ಯ ಎಸ್‌ಟಿ ಮೋರ್ಚಾ ಅಧ್ಯಕ್ಷ ಬಂಗಾರು ಹನುಮಂತ ನೇತೃತ್ವದಲ್ಲಿ ಕೆಲವರು ವಿಧಾನಸೌಧಕ್ಕೆ ಮುತ್ತಿಗೆ ಯತ್ನಿಸಿದರು. ಪೊಲೀಸರು ಅವರನ್ನು ತಡೆದರು.

ನಾಗೇಂದ್ರ ಕಸ್ಟಡಿ ವಿಸ್ತರಣೆ

ಇದೇ ಪ್ರಕರಣದಲ್ಲಿ ಮಾಜಿ ಸಚಿವ ಮತ್ತು ಕಾಂಗ್ರೆಸ್ ಶಾಸಕ ಬಿ.ನಾಗೇಂದ್ರ ಅವರ ಇ.ಡಿ ಕಸ್ಟಡಿ ಗುರುವಾರ ಅಂತ್ಯವಾಗಬೇಕಿತ್ತು. ಇ.ಡಿ ಅಧಿಕಾರಿಗಳು ನಾಗೇಂದ್ರ ಅವರನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ತನಿಖೆ ಮುಂದುವರಿಸಲು ಕಸ್ಟಡಿಯನ್ನು ವಿಸ್ತರಿಸಬೇಕು ಎಂದು ಕೋರಿದರು. ನ್ಯಾಯಾಲಯವು ನಾಗೇಂದ್ರ ಅವರ ಕಸ್ಟಡಿಯನ್ನು ಇನ್ನೂ ಐದು ದಿನಗಳವರೆಗೆ (ಜುಲೈ 22) ವಿಸ್ತರಿಸಿದೆ.

'ಸೆನ್ ಠಾಣೆಗಳ ಹೆಚ್ಚಳದಿಂದ ಅಧಿಕ ಸೈಬರ್ ಅಪರಾಧ ಪ್ರಕರಣ ದಾಖಲು'

ಬೆಂಗಳೂರು: 'ರಾಜ್ಯದಲ್ಲಿ ಜಿಲ್ಲೆಗೊಂದು ಸೆನ್ (ಸೈಬರ್, ಎಕನಾಮಿಕ್ಸ್ ಮತ್ತು ನಾರ್ಕೋಟಿಕ್) ಠಾಣೆಗಳನ್ನು ಸ್ಥಾಪಿಸಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಸೈಬರ್ ಅಪರಾಧ ಪ್ರಕರಣಗಳು ದಾಖಲಾಗುತ್ತಿವೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಉಮಾಶ್ರೀ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಒಟ್ಟು 43 ಸೆನ್ ಠಾಣೆಗಳಿವೆ. ಐದು ವರ್ಷಗಳಲ್ಲಿ 1,820 ಆನ್‌ಲೈನ್ ವಂಚನೆ ಪ್ರಕರಣ ದಾಖಲಾಗಿದ್ದು, ₹ 178.17 ಕೋಟಿ ವಂಚನೆಯಾಗಿದೆ. ಈ ಪೈಕಿ, ₹ 157.13 ಕೋಟಿ ವಸೂಲಿ ಮಾಡಿಕೊಂಡು, 13 ಮಂದಿಯನ್ನು ಬಂಧಿಸಲಾಗಿದೆ. 68 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ನಕಲಿ ಸಾಲ ಆ್ಯಪ್ ಪ್ರಕರಣಗಳ ಸಂಖ್ಯೆಯೂ ಕಳೆದ ಐದು ವರ್ಷಗಳಲ್ಲಿ ಹೆಚ್ಚಾಗಿದ್ದು, 134 ಪ್ರಕರಣ ದಾಖಲಾಗಿದೆ. ₹ 4.61 ಕೋಟಿ ವಂಚಿಸಲಾಗಿದ್ದು, ₹ 3.25 ಕೋಟಿ ವಸೂಲಿ ಮಾಡಲಾಗಿದೆ. ಒಬ್ಬನನ್ನು ಬಂಧಿಸಲಾಗಿದ್ದು, 11 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ'ಎಂದರು.

'ಉಡ್ತಾ ಕರ್ನಾಟಕ' ಆಗಲು ಬಿಡುವುದಿಲ್ಲ: ಯಾವುದೇ ಕಾರಣಕ್ಕೂ ರಾಜ್ಯವನ್ನು ಊಡ್ತಾ (ನಶಾ) ಕರ್ನಾಟಕವನ್ನಾಗಿ ಮಾಡಲು ಸರ್ಕಾರ ಬಿಡುವುದಿಲ್ಲ' ಎಂದು ಪರಮೇಶ್ವರ ಹೇಳಿದರು.

ವಿಧಾನಪರಿಷತ್‌ನಲ್ಲಿ ಬಿಜೆಪಿಯ ಡಾ. ಧನಂಜಯ ಸರ್ಜಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಈ ಹಿಂದೆ ಕೆಲವು ಸದಸ್ಯರು ಕರ್ನಾಟಕ ಕೂಡಾ ಪಂಜಾಬ್‌ನಂತೆ ಊಡ್ತಾ ಕರ್ನಾಟಕ ಆಗಲಿದೆ ಎಂದು ಆತಂಕ ವ್ಯಕ್ತಪಡಿಸಿದ್ದರು. ಸರ್ಕಾರವು ಡ್ರಗ್ಸ್ ಮುಕ್ತ ಕರ್ನಾಟಕ ನಿರ್ಮಾಣದ ಘೋಷಣೆ ಮಾಡಿದೆ' ಎಂದರು.

ರಾಜ್ಯ ಸರ್ಕಾರ ಅಸ್ಥಿರಗೊಳಿಸಲು 'ಇ.ಡಿ' ಅಸ್ತ್ರ

ಒಂದನೇ ಪುಟದಿಂದ...

'ರಾಜ್ಯದಲ್ಲಿ ದುರ್ಬಲವಾಗಿರುವ ಬಿಜೆಪಿ ನಾಯಕರು ವಾಮಮಾರ್ಗದಲ್ಲಿ ಮತ್ತೆ ಅಧಿಕಾರ ಕಬಳಿಸಲು ಯತ್ನಿಸುತ್ತಿದ್ದಾರೆ. ಸಿಬಿಐ ಹಾಗೂ ಆದಾಯ ತೆರಿಗೆ ಇಲಾಖೆಗಳನ್ನು ವಿರೋಧ ಪಕ್ಷಗಳ ವಿರುದ್ಧ 'ಸರ್ಜಿಕಲ್ ಸ್ಟ್ರೈಕ್' ರೀತಿ ಬಳಕೆ ಮಾಡಲಾಗುತ್ತಿದೆ. 2008, 2019ರಂತೆ ಈಗಿನ ಪರಿಸ್ಥಿತಿಯಲ್ಲಿ ಆಪರೇಷನ್ ಕಮಲ ಅಸಾಧ್ಯವೆಂದು ಮನಗಂಡು ಸರ್ಕಾರವನ್ನೇ ಉರುಳಿಸಲು ಸಂಚು ರೂಪಿಸಿದ್ದಾರೆ' ಎಂದರು.

'ಬಿಜೆಪಿಗೆ ಎಲ್ಲಿ ಚುನಾವಣೆ ಗೆಲ್ಲಲು ಸಾಧ್ಯವಿಲ್ಲವೋ, ಅಲ್ಲೆಲ್ಲಾ ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ಆಡಳಿತ ಪಕ್ಷಗಳ ಮೇಲೆ ದಾಳಿ ಮಾಡುವುದು ವಾಡಿಕೆಯಾಗಿದೆ. ಬಿಜೆಪಿಯ ಇಂತಹ ನೀಚ ನಡೆಗಳಿಗೆ ಮಹಾರಾಷ್ಟ್ರ ಸೇರಿದಂತೆ ಹಲವೆಡೆ ಬಿಜೆಪಿಯೇತರ ಪಕ್ಷಗಳ ಸರ್ಕಾರಗಳು ಪತನವಾಗಿವೆ. 444 ಶಾಸಕರನ್ನು ಖರೀದಿಸಲಾಗಿದೆ. ಯುಪಿಎ ಇದ್ದಾಗ ಶೇ 47ರಷ್ಟು ಪ್ರಕರಣಗಳಲ್ಲಿ ಕಾಂಗ್ರೆಸ್ ಹಾಗೂ ಮಿತ್ರ ಪಕ್ಷಗಳ ನಾಯಕರ ಮೇಲೂ ದಾಖಲಾಗಿದ್ದವು ಎಂದು ಹೇಳಿದರು.

ಮುಖ್ಯಮಂತ್ರಿ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಉಪಸ್ಥಿತರಿದ್ದರು.

'ಬಿಜೆಪಿ ಸೇರಿದರೆ ಕಾನೂನು ಕುಣಿಕೆ ಸಡಿಲ'


ಆರೋಪ ಎದುರಿಸುತ್ತಿರುವ ರಾಜಕೀಯ ನಾಯಕರು ಬಿಜೆಪಿ ಸೇರಿದರೆ ಕಾನೂನು ಕುಣಿಕೆಯಿಂದ ಪಾರಾಗುತ್ತಾರೆ. ತನಿಖಾ ಸಂಸ್ಥೆಗಳು ದೇಶದ 121 ಪ್ರಮುಖ ರಾಜಕೀಯ ನಾಯಕರ ಮೇಲೆ ದಾಳಿ ಮಾಡಿವೆ. ಅವರಲ್ಲಿ 115 ವಿರೋಧ ಪಕ್ಷದವರು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಇದುವರೆಗೆ ಮೂರು ಸಾವಿರಕ್ಕೂ ಹೆಚ್ಚು ಇ.ಡಿ, ಐಟಿ, ಸಿಬಿಐ ದಾಳಿಗಳಾಗಿವೆ. ಶೇ 25ರಷ್ಟು ಪ್ರಕರಣಗಳಲ್ಲಿ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿದೆ. ಉಳಿದ ಪ್ರಕರಣಗಳು ಹಳ್ಳ ಹಿಡಿದಿವೆ ಎಂದರು.

ಈ ಹಿಂದೆ ಬಿಜೆಪಿ ಅಧಿಕಾರದಲ್ಲಿ ಇದ್ದಾಗ ಕೋವಿಡ್ ಹಗರಣ, ದೇವರಾಜ ಅರಸು ಟ್ರಕ್ ಟರ್ಮಿನಲ್ ಹಗರಣ ಸೇರಿದಂತೆ ಹಲವು ನಿಗಮ–ಮಂಡಳಿಗಳಲ್ಲೂ ಹಗರಣ ನಡೆದಿವೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮೇಲೆ ಅಕ್ರಮ ಆಸ್ತಿ ಗಳಿಕೆ ಪ್ರಕರಣ ಇದೆ. ವಿಜಯೇಂದ್ರ ಪದೇಪದೇ ದುಬೈಗೆ ಹೋಗುತ್ತಾರೆ ಎಂದು ಅವರ ಪಕ್ಷದ ಶಾಸಕರೇ ಆರೋಪಿಸುತ್ತಿದ್ದಾರೆ. ಈ ಕುರಿತು ಏಕೆ ತನಿಖೆ ಮಾಡುತ್ತಿಲ್ಲ ಎಂದು ಪ್ರಶ್ನಿಸಿದರು.

'ಆಸ್ತಿಗಳ ನಗದೀಕರಣ ಪ್ರಸ್ತಾವ ಇಲ್ಲ'

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಗ್ಯಾರಂಟಿ ಯೋಜನೆಗಳಿಗಾಗಿ ಸಂಪನ್ಮೂಲ ಕ್ರೋಡೀಕರಣ ಹಾಗೂ ಹೆಚ್ಚು ಆದಾಯ ಬರುವ ಕಾರ್ಯಕ್ರಮಗಳಿಗೆ ಒತ್ತು ನೀಡಲಾಗುತ್ತಿದೆ. ಆಸ್ತಿಗಳ ನಗದೀಕರಣದ ಯಾವುದೇ ಪ್ರಸ್ತಾವ ಇಲ್ಲ' ಎಂದು ವಿಧಾನ ಪರಿಷತ್ ಸಭಾ ನಾಯಕ ಎನ್.ಎಸ್. ಬೋಸರಾಜು ಸ್ಪಷ್ಟಪಡಿಸಿದರು.

ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ ಅವರ ಪ್ರಶ್ನೆಗೆ ಮುಖ್ಯಮಂತ್ರಿ ಪರವಾಗಿ ಉತ್ತರಿಸಿದ ಅವರು, 'ಆರ್ಥಿಕ ಇಲಾಖೆಯು ವಿವಿಧ ಇಲಾಖೆಗಳು ಮತ್ತು ಅವುಗಳ ಅಧೀನದ ನಿಗಮ, ಮಂಡಳಿ, ಪ್ರಾಧಿಕಾರಗಳ ಆಸ್ತಿಗಳ ಮಾಹಿತಿಯ ಸಂಗ್ರಹಿಸಲು ಸಮಗ್ರ ಪಟ್ಟಿ ಸಿದ್ಧಪಡಿಸುವಂತೆ ಆಂತರಿಕ ಸುತ್ತೋಲೆ ಕಳುಹಿಸಿದೆ. ಎಲ್ಲ ಸರ್ಕಾರಗಳ ಅವಧಿಯಲ್ಲಿ ನಡೆಯುವ ಸಾಮಾನ್ಯ ಪ್ರಕ್ರಿಯೆಯಿದು' ಎಂದರು. 'ಒಂದೊಮ್ಮೆ ಆಸ್ತಿಗಳ ನಗದೀಕರಣ ಮಾಡುವುದಾದರೆ, ಸಂಪುಟ ಸಭೆಯಲ್ಲಿ ಆ ವಿಚಾರವನ್ನು ಚರ್ಚಿಸಿ ನಿರ್ಧಾರ ಕೈಗೊಳ್ಳಬೇಕಾಗುತ್ತದೆ' ಎಂದೂ ಹೇಳಿದರು.

'ಗ್ಯಾರಂಟಿ'ಗಳಿಗೆ 2024–25ನೇ ಸಾಲಿನಲ್ಲಿ ಒದಗಿಸಿದ ಮತ್ತು ವೆಚ್ಚವಾದ ಅನುದಾನ

ಗ್ಯಾರಂಟಿಗಳು	ಮೀಸಲಿಟ್ಟ ಹಣ	ಈವರೆಗೆ ವೆಚ್ಚ
	(₹ ಕೋಟಿಗಳಲ್ಲಿ)	
ಗೃಹ ಲಕ್ಷ್ಮಿ	28,608	6,133
ಗೃಹ ಜ್ಯೋತಿ	9,657	3,000
ಅನ್ನ ಭಾಗ್ಯ	8,079	1,327
ಯುವನಿಧಿ	650	38
ಶಕ್ತಿ	5,015	1,254
ಒಟ್ಟು	52,009	11,752

15 ದಿನಗಳ ಒಳಗೆ ರಾಜ್ಯದ ಹಿತ ಕಾಪಾಡದೇ ಇದ್ದರೆ ರಾಜ್ಯದಾದ್ಯಂತ ಹೋರಾಟ: ಕರವೇ ಎಚ್ಚರಿಕೆ

ಕನ್ನಡಿಗರಿಗೆ ಮೀಸಲಾತಿ: ಸರ್ಕಾರದ 'ಯೂ ಟರ್ನ್'ಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಖಾಸಗಿ ಉದ್ಯಮಗಳ ಉದ್ಯೋಗದಲ್ಲಿ ಕನ್ನಡಿಗರಿಗೆ ಮೀಸಲಾತಿ ನೀಡುವ ಮಸೂದೆಯನ್ನು ಮಂಡಿಸಿ ಜಾರಿ ಮಾಡಲು ಹೊರಟಿದ್ದ ರಾಜ್ಯ ಸರ್ಕಾರವು ಒಂದೇ ದಿನದಲ್ಲಿ 'ಯೂ ಟರ್ನ್' ತೆಗೆದುಕೊಂಡು ಮಸೂದೆ ತಡೆ ಹಿಡಿದಿರುವುದನ್ನು ಹಲವು ಸಂಘಟನೆಗಳು ಖಂಡಿಸಿವೆ. ಕನ್ನಡಿಗರ ಹಿತ ಕಾಪಾಡಲು ಆಗ್ರಹಿಸಿವೆ.

ಕರವೇ: ಮಸೂದೆ ತಡೆಹಿಡಿದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯರ ಕ್ರಮವನ್ನು ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡ ವಿರೋಧಿಸಿದ್ದಾರೆ. 15 ದಿನಗಳ ಒಳಗೆ ಸಚಿವ ಸಂಪುಟ ಸಭೆ ನಡೆಸಿ ಕನ್ನಡಿಗರ ಪರ ನಿರ್ಧಾರ ಕೈಗೊಳ್ಳದೇ ಹೋದರೆ ರಾಜ್ಯದಾದ್ಯಂತ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದ್ದಾರೆ.

ಈ ಬಗ್ಗೆ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಖಾಸಗಿ ಕೈಗಾರಿಕೆಗಳು ಮತ್ತು ಇತರೆ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಆಡಳಿತಾತ್ಮಕ ಹುದ್ದೆಗಳಿಗೆ ಶೇ 50 ಹಾಗೂ ಆಡಳಿತಾತ್ಮಕವಲ್ಲದ ಹುದ್ದೆಗಳಿಗೆ ಶೇ 75ರಷ್ಟು ಮೀಸಲಾತಿ ನಿಗದಿಪಡಿಸಿದ್ದ ಮಸೂದೆಗೆ ಸೋಮವಾರ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿತ್ತು. ಬಳಿಕ ಕಾರ್ಪೊರೇಟ್‌ಗಳ ಒತ್ತಡಕ್ಕೆ ಮಣಿದ ಸರ್ಕಾರವು ಮಸೂದೆಯನ್ನು ತಡೆಹಿಡಿಯುವ ಆತ್ಮಘಾತುಕ ನಿರ್ಧಾರ ಮಾಡಿದೆ' ಎಂದು ಟೀಕಿಸಿದ್ದಾರೆ.

'ಮಸೂದೆ ವಿರೋಧಿಸುವ ನೆಪದಲ್ಲಿ ಉದ್ಯಮಿ ಮೋಹನ್‌ದಾಸ್ ಪೈ ಸೇರಿದಂತೆ ಕೆಲವು ಉದ್ಯಮಿಗಳು ಕನ್ನಡಿಗರಿಗೆ ಕೌಶಲ ಇಲ್ಲ, ಅರ್ಹತೆ ಇಲ್ಲ ಎಂದೆಲ್ಲ ಹೇಳಿಕೆ ನೀಡುತ್ತಿದ್ದಾರೆ. ಕನ್ನಡಿಗರ ಅವಹೇಳನ ಮುಂದುವರಿಸಿದರೆ ಅವರಿಗೆ ಪಾಠ ಕಲಿಸಬೇಕಾಗುತ್ತದೆ' ಎಂದು ಎಚ್ಚರಿಸಿದರು.

ವಿಕಾಸ ರಂಗ: ಕೇರಳ, ತಮಿಳುನಾಡು, ಪಂಜಾಬ್, ಮಹಾರಾಷ್ಟ್ರ, ಗುಜರಾತ್, ಆಂಧ್ರಪ್ರದೇಶಗಳಲ್ಲಿ ಖಾಸಗಿ ಸಂಸ್ಥೆಗಳಲ್ಲಿ ಸ್ಥಳೀಯರಿಗೆ ಮೀಸಲಾತಿ ಇದೆ. ಕರ್ನಾಟಕದಲ್ಲಿ ಖಾಸಗಿ ಸಂಸ್ಥೆಗಳ ಮಾಲೀಕರು ಸರ್ಕಾರಕ್ಕೆ ಬೆದರಿಕೆ ಒಡ್ಡುತ್ತಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕನ್ನಡಿಗರ ಪರ ಬರೀ ಮಾತನಾಡಿದರೆ ಸಾಲದು. ಮಸೂದೆ ಅಂಗೀಕರಿಸಿ ಅನುಷ್ಠಾನಕ್ಕೆ ತರಬೇಕು ಎಂದು ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ ಆಗ್ರಹಿಸಿದ್ದಾರೆ.

ನಿರ್ಧಾರ ಸರಿಯಲ್ಲ: ಖಾಸಗಿ ಕಂಪನಿಗಳಿಗೆ ಕನ್ನಡಿಗರಿಗೆ ಉದ್ಯೋಗ ಮೀಸಲಾತಿ ವಿಚಾರದಲ್ಲಿ ರಾಜ್ಯ ಸರ್ಕಾರದ ಯೂ-ಟರ್ನ್ ನಡೆ ಸರಿಯಲ್ಲ ಎಂದು ಎಎಪಿ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು ಟೀಕಿಸಿದ್ದಾರೆ.

ರಿಯಲ್ ಎಸ್ಟೇಟ್ ಮಾಫಿಯಾದ ಕಪಿಮುಷ್ಠಿಯಲ್ಲಿರುವ ರಾಜ್ಯ ಸರ್ಕಾರವು ಬೆಂಗಳೂರು ವಿಸ್ತರಣೆಯಲ್ಲೇ ಕಾಲ ಕಳೆಯುತ್ತಿದೆ. ದೆಹಲಿ ಮಾದರಿಯ ಶಿಕ್ಷಣವನ್ನು ಅಳವಡಿಸಿಕೊಳ್ಳುವ ಮೂಲಕ ರಾಜ್ಯದಲ್ಲಿ ಉದ್ಯೋಗ ದಾತರನ್ನು ಸೃಷ್ಟಿ ಮಾಡಬೇಕಿದೆ ಎಂದು ತಿಳಿಸಿದ್ದಾರೆ.

'ಮಹಿಷಿ ವರದಿ ಅನುಷ್ಠಾನಗೊಳಿಸಿ'



ಪುರುಷೋತ್ತಮ ಬಿಳಿಮಲೆ

'ಕನ್ನಡಿಗರಿಗೆ ಖಾಸಗಿ ವಲಯದಲ್ಲಿ ಉದ್ಯೋಗಾವಕಾಶ ಒದಗಿಸುವ ಸಂಬಂಧ ಸರೋಜಿನಿ ಮಹಿಷಿ ವರದಿಯನ್ನು ಅನುಷ್ಠಾನಗೊಳಿಸಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಮನವಿ ಮಾಡಿದ್ದಾರೆ.

'ರಾಜ್ಯದಲ್ಲಿ ಕೇಂದ್ರೋದ್ಯಮಗಳು, ಸಾರ್ವಜನಿಕ ಹಾಗೂ ಖಾಸಗಿ ಉದ್ಯಮಗಳಿದ್ದರೂ ಕನ್ನಡಿಗರಿಗೆ ಸೂಕ್ತ ಪ್ರಮಾಣದಲ್ಲಿ ಉದ್ಯೋಗಾವಕಾಶ ದೊರೆಯುತ್ತಿಲ್ಲ. ಕನ್ನಡಿಗರಿಗೆ ಉದ್ಯೋಗದಲ್ಲಿ ಅವಕಾಶ ಸಿಗುವಂತೆ ಮಾಡಲು ಸರ್ಕಾರವು 1981ರಿಂದಲೂ ಪ್ರಯತ್ನ ನಡೆಸಿದೆ. ಅಂದಿನ ಸರ್ಕಾರ ಸರೋಜಿನಿ ಮಹಿಷಿ ನೇತೃತ್ವದಲ್ಲಿ ಸಮಿತಿ ರಚನೆ ಮಾಡಿತ್ತು.

'ಸ್ಥಳೀಯರಿಗೆ ಉದ್ಯೋಗ' ಶಿಫಾರಸು ಇರುವ ಸಮಿತಿ ವರದಿಯನ್ನು ನೀಡಿತ್ತು. ಈ ವರದಿಯನ್ನು ಗಮನಿಸಿ ಬೇರೆ ರಾಜ್ಯಗಳು ಕಾನೂನು ರಚಿಸಿವೆ. ರಾಜ್ಯದಲ್ಲಿ ಮಹಿಷಿ ವರದಿಯನ್ನು ಜಾರಿ ಮಾಡಬೇಕು' ಎಂದು ಒತ್ತಾಯಿಸಿದ್ದಾರೆ.

'ಪೂರ್ಣ ಚರ್ಚೆ ಆಗದ ಕಾರಣ ಮಸೂದೆಗೆ ತಡೆ'

ಬೆಂಗಳೂರು: 'ಖಾಸಗಿ ಕಂಪನಿಗಳ ಉದ್ಯೋಗಗಳಲ್ಲಿ ಕನ್ನಡಿಗರಿಗೆ ಮೀಸಲಾತಿ ನೀಡುವ ಸಂಬಂಧ ಸಚಿವ ಸಂಪುಟ ಸಭೆಯಲ್ಲಿ ಪೂರ್ಣ ಪ್ರಮಾಣದಲ್ಲಿ ಚರ್ಚೆ ಮಾಡದಿರುವ ಕಾರಣ ಮಸೂದೆಗೆ ತಡೆ ನೀಡಲಾಯಿತು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮಜಾಯಿಷಿ ನೀಡಿದರು.

ವಿಧಾನಸಭೆಯಲ್ಲಿ ವಿರೋಧಪಕ್ಷದ ನಾಯಕ ಆರ್. ಅಶೋಕ ಅವರ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ, 'ಕೆಲವು ಗೊಂದಲಗಳು ಇವೆ. ಪೂರ್ಣ ಪ್ರಮಾಣದಲ್ಲಿ ಚರ್ಚೆ ಆಗಬೇಕಿದೆ. ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಗೊಂದಲಗಳನ್ನು ನಿವಾರಣೆ ಮಾಡಿ, ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತೇವೆ' ಎಂದು ಹೇಳಿದರು.

'ಇದು ತುಘಲಕ್ ಆಡಳಿತ ಅಲ್ಲ, ಸಿದ್ದರಾಮಯ್ಯನ ಆಡಳಿತ' ಎಂದು ಅವರು ಅಶೋಕಗೆ ತಿರುಗೇಟು ನೀಡಿದರು.

ಅಶೋಕ ಅವರು 'ಪ್ರಜಾವಾಣಿ' ವರದಿಯನ್ನು ಉಲ್ಲೇಖಿಸಿ ಈ ವಿಷಯ ಪ್ರಸ್ತಾಪಿಸಿದರು.

'ಖಾಸಗಿ ಕಂಪನಿಗಳ ಉದ್ಯೋಗದಲ್ಲಿ ಕನ್ನಡಿಗರಿಗೆ ಮೀಸಲಾತಿ ನೀಡುವ ಸಂಬಂಧ ಸಿದ್ದರಾಮಣ್ಣ 'ಎಕ್ಸ್' ಮೂಲಕ ಮೂರು ಬಾರಿ ಪೋಸ್ಟ್ ಮಾಡಿದ್ದಾರೆ. ಮೊದಲು ಶೇ 100 ಮೀಸಲಾತಿ ಎಂದು ಪೋಸ್ಟ್ ಮಾಡಿದರು. ಅದನ್ನು ಅಳಿಸಿ ಹಾಕಿ ಮತ್ತೊಂದು ಪೋಸ್ಟ್ ಮಾಡಿ ಶೇ 70, ಶೇ 50 ಮೀಸಲಾತಿ ನೀಡುತ್ತೇವೆ ಎಂದರು. ಕೊನೆಗೆ ಆ ಪೋಸ್ಟ್ ಹಿಂದಕ್ಕೆ ಪಡೆದು ಮಸೂದೆಗೆ ತಡೆ ನೀಡಿದರು' ಎಂದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲೇ ಸ್ಪಷ್ಟತೆ ಇಲ್ಲ. ಅವರಲ್ಲೇ ಗೊಂದಲ ಇದೆ. ಇಂತಹ ಬೆಳವಣಿಗೆಗಳು ಒಳ್ಳೆಯದ್ದಲ್ಲ. ತುಘಲಕ್ ದರ್ಬಾರ್ ಆಗಿದೆ. ಕನ್ನಡಿಗರಿಗೆ ಸ್ಪಷ್ಟ ಸಂದೇಶ ನೀಡಿ' ಎಂದು ಅಶೋಕ ಆಗ್ರಹಿಸಿದರು.

ಹಗರಣದ ಚರ್ಚೆ: ಕಾಂಗ್ರೆಸ್‌ಗೆ 'ಯತ್ನಾಳ್ ಅಸ್ತ್ರ'

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ಗುರುವಾರವೂ ವಿಧಾನ ಪರಿಷತ್‌ನಲ್ಲಿ ಪ್ರತಿಧ್ವನಿಸಿತು.

ಬಿಜೆಪಿಯ ಎನ್.ರವಿಕುಮಾರ್ ಮಂಡಿಸಿದ ನಿಲುವಳಿ ಸೂಚನೆ ಮೇಲಿನ ಚರ್ಚೆಯಲ್ಲಿ ಮಾತನಾಡಿದ ವಿರೋಧ ಪಕ್ಷದ ಕೆ.ಎಸ್. ನವೀನ್, ಡಿ.ಎಸ್. ಅರುಣ್, ಭಾರತಿಶೆಟ್ಟಿ, ಹೇಮಲತಾ ನಾಯಕ್, ಕೆ.ಎ. ತಿಪ್ಪೇಸ್ವಾಮಿ, ಪಿ.ಎಚ್. ಪೂಜಾರ್, ಗೋವಿಂದರಾಜು, ಎಸ್.ವಿ. ಸಂಕನೂರ, ಪ್ರತಾಪಸಿಂಹ ನಾಯಕ್ ಅವರು ಪ್ರಕರಣವನ್ನು ಸಿಬಿಐಗೆ ವಹಿಸಬೇಕು, ಮುಖ್ಯಮಂತ್ರಿ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ವಿರೋಧ ಪಕ್ಷಗಳ ಟೀಕೆಗಳಿಗೆ ಪ್ರತ್ಯುತ್ತರ ನೀಡಿದ ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್, ಐವನ್ ಡಿಸೋಜ ಅವರು, ಬಿಜೆಪಿ ಭ್ರಷ್ಟಾಚಾರ ಕುರಿತು ಹಿಂದೆ ಹೇಳಿಕೆ ನೀಡಿದ್ದ ಅವರದೇ ಪಕ್ಷದ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಹೇಳಿಕೆಗಳನ್ನು ಅಸ್ತ್ರವಾಗಿ ಬಳಸಿಕೊಂಡರು. ಬಿಜೆಪಿಯಲ್ಲಿ ಮುಖ್ಯಮಂತ್ರಿಯಾಗಲು ₹2,500 ಕೋಟಿ ನೀಡಬೇಕು ಎಂಬ ಯತ್ನಾಳ್ ಹೇಳಿಕೆಗಳ ಪತ್ರಿಕಾ ತುಣುಕುಗಳನ್ನು ಪ್ರದರ್ಶಿಸಿದರು.

ಆಡಳಿತ ಹಾಗೂ ವಿರೋಧ ಪಕ್ಷದ ಸದಸ್ಯರ ವಾಗ್ವಾದ ಮುಂದುವರಿದಿತ್ತು. ಸಭಾಪತಿ ಬಸವರಾಜ ಹೊರಟ್ಟಿ ಸದನದ ಕಲಾಪವನ್ನು ಶುಕ್ರವಾರಕ್ಕೆ ಮುಂದೂಡಿದರು.

ಅಧಿಕಾರಿ ಮೇಲೆ ಕ್ರಮ ಏಕಿಲ್ಲ: 'ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ಕುರಿತು ಪೊಲೀಸ್ ಠಾಣೆಗೆ ದೂರು ನೀಡುವಾಗ, 'ಸರ್ಕಾರಕ್ಕೆ ಮುಜುಗರ ಆಗದಂತೆ ಕ್ರಮ ವಹಿಸಿ' ಎಂದು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸೂಚಿಸಿದ್ದಾರೆ. ಆ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳಬೇಕು' ಎಂದು ಜೆಡಿಎಸ್‌ನ ಎಸ್.ಎಲ್. ಬೋಜೇಗೌಡ ಆಗ್ರಹಿಸಿದರು.

ವಿಧಾನ ಪರಿಷತ್ತಿನಲ್ಲಿ ನಡೆದ ಚರ್ಚೆಯ ವೇಳೆ ಮಾತನಾಡಿದ ಅವರು, 'ನಿಗಮದಲ್ಲಿ ಭ್ರಷ್ಟಾಚಾರ ನಡೆದೇ ಇಲ್ಲ ಎಂದು ಸರ್ಕಾರಕ್ಕೆ ತಾಕತ್ತಿದ್ದರೆ ಹೇಳಲಿ. ಸರ್ಕಾರ ಕಲ್ಲಿನಂತೆ ಕೂರಬಾರದು. ತಪ್ಪಾಗಿದ್ದರೆ ತಪ್ಪಾಗಿದೆ ಎಂದು ಹೇಳಲಿ. ಸರ್ಕಾರದ ಪರವಾಗಿ ವರದಿ ಕೊಡುವಂತೆ ಯಾವ ಅಧಿಕಾರಿ ಸೂಚಿಸಿದ್ದರು? ಅವರ ವಿರುದ್ಧ ಏಕೆ ಕ್ರಮ ಜರುಗಿಸಿಲ್ಲ' ಎಂದು ಕಿಡಿಕಾರಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ನಕಾರಾತ್ಮಕ ಮನೋಭಾವದ ವ್ಯಕ್ತಿಗಳು ನಿಮ್ಮ ಶಕ್ತಿಗುಂದಿಸುತ್ತಾರೆ. ನಿಮ್ಮ ಸುತ್ತ ಅಂತಹ ವಾತಾವರಣ ಇಲ್ಲದಂತೆ ನೋಡಿಕೊಳ್ಳಿ.

–ದೀಪಕ್ ಚೋಪ್ರಾ

ಪಶ್ಚಿಮಘಟ್ಟಗಳಲ್ಲಿ ಭೂಕುಸಿತ ತಜ್ಞರ ಎಚ್ಚರಿಕೆಗೆ ಕಿವಿಗೊಡಿ

ಅಭಿವೃದ್ಧಿಯ ದಾಪುಗಾಲು ಅದೆಷ್ಟು ಅವಸರದ್ದೆಂದರೆ ಅದು ಗುಡ್ಡಬೆಟ್ಟಗಳೇ ಕುಸಿಯುವಂತೆ ಮಾಡುತ್ತಿದೆ. ನೈಸರ್ಗಿಕ ವಿಕೋಪಗಳನ್ನು ಮೀರಿಸಿದ ಹೆಜ್ಜೆಗುರುತುಗಳನ್ನು ಮೂಡಿಸತೊಡಗಿದೆ. ಮೊನ್ನೆ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಶಿರೂರಿನಲ್ಲಿ ಗುಡ್ಡ ಕುಸಿತದಿಂದ ಜನ-ಮನೆಗಳಷ್ಟೇ ಅಲ್ಲ, ಹೆದ್ದಾರಿಯಲ್ಲಿ ಸಾಗುತ್ತಿದ್ದ ಅನಿಲದ ಟ್ಯಾಂಕರ್‌ಗಳೂ ನದಿಗೆ ಬಿದ್ದು ಆತಂಕವನ್ನು ನೂರ್ಮಡಿ ಹೆಚ್ಚಿಸಿದ್ದವು. ಸಂತ್ರಸ್ತರ ನೆರವಿಗೆ ಧಾವಿಸಬೇಕಾದವರನ್ನೇ ಅನಿಲ ಸೋರಿಕೆಯ ಭಯದಿಂದಾಗಿ ದೂರ ಸಾಗಿಸಬೇಕಾದ ವಿಲಕ್ಷಣ ಪರಿಸ್ಥಿತಿ ಉದ್ಭವಿಸಿತ್ತು. ಅತಿವೃಷ್ಟಿಯಿಂದಾಗಿ ಅದಾಗಲೇ ತುಂಬಿ ಹರಿಯುತ್ತಿದ್ದ ಗಂಗಾವಳಿ ನದಿ ಹಠಾತ್ ಗುಡ್ಡ ಕುಸಿತದಿಂದ ಆಳೆತ್ತರದ ಅಲೆಗಳನ್ನು ಎಬ್ಬಿಸಿ ಕಂಗಾಲುಗೊಳಿಸಿತ್ತು. ಪಶ್ಚಿಮ ಘಟ್ಟಗಳೆಂದರೆ ಭಾರತದ ಅತ್ಯಂತ ಪುರಾತನ ಶಿಲಾಶ್ರೇಣಿಯಾಗಿದ್ದು, ಕಡಿದಾದ ಶಿಥಿಲ ಗುಡ್ಡಬೆಟ್ಟಗಳಿಂದ ಕೂಡಿದೆ. ಸಾಲದ್ದಕ್ಕೆ ಭಾರಿ ಮಳೆಗಾಲ ಮತ್ತು ಸಮುದ್ರದಂಚಿನ ಬಿರುಗಾಳಿಗೆ ಮೈಯೊಡ್ಡಿಕೊಂಡ ಅತಿ ಸೂಕ್ಷ್ಮ ಭೂಪರಿಸರ ಇದರದ್ದಾಗಿದೆ. ದಕ್ಷಿಣ ಭಾರತದ ಇತರ ಭೂಭಾಗಗಳಿಗೆ ಹೋಲಿಸಿದರೆ ಇಲ್ಲಿನ ಅಸ್ಥಿರ ಬೆಟ್ಟಗುಡ್ಡಗಳಲ್ಲಿ ಪ್ರಾಕೃತಿಕ ಸ್ಥಿತ್ಯಂತರಗಳ ಪ್ರಮಾಣ ಸಹಜವಾಗಿಯೇ ಹೆಚ್ಚಾಗಿ ಇರುತ್ತದೆ. ಹೆಚ್ಚುತ್ತಿರುವ ಜನಸಾಂದ್ರತೆ ಮತ್ತು ವ್ಯಾಪಾರ-ವಹಿವಾಟುಗಳಿಗೆ ತಕ್ಕಂತೆ ಕಳೆದ ಎರಡು ದಶಕಗಳಿಂದ ಈ ಘಟ್ಟಸಾಲಿನ ಉದ್ದಕ್ಕೂ ಅಭಿವೃದ್ಧಿಯ ಮಹಾ ಅಭಿಯಾನ ನಡೆದಿದೆ. ಸಮುದ್ರತೀರಕ್ಕೆ ಸಮಾನಾಂತರವಾಗಿ ಹೆದ್ದಾರಿ, ರೈಲು ಮಾರ್ಗ, ಸುರಂಗ, ಸೇತುವೆಗಳ ನಿರ್ಮಾಣ ನಿರಂತರ ನಡೆಯುತ್ತಲೇ ಇದೆ. ಹಿಂದೆಂದೂ ಕಂಡಿರದಷ್ಟು ದೊಡ್ಡ ಪ್ರಮಾಣದಲ್ಲಿ ಎಲ್ಲೆಂದರಲ್ಲಿ ಬೃಹತ್ ಯಂತ್ರೋಪಕರಣಗಳು ಭೂಸ್ವರೂಪವನ್ನು ಬದಲಿಸುವಲ್ಲಿ ತೊಡಗಿವೆ. ನಗರ ನಿರ್ಮಾಣ, ಪ್ರವಾಸಿಧಾಮ ಮತ್ತು ವಿರಾಮಧಾಮಗಳ ನಿರ್ಮಾಣ, ಗಣಿಗಾರಿಕೆ, ವಿದ್ಯುತ್ ಮಾರ್ಗ, ನೀರಾವರಿ ಕಾಲುವೆ, ಅತಿಕ್ರಮ ಸಾಗುವಳಿಯಂತಹ ಚಟುವಟಿಕೆಗಳು ಎಗ್ಗಿಲ್ಲದೆ ಸಾಗಿವೆ. ಇದೇ ಸಂದರ್ಭದಲ್ಲಿ ಹವಾಮಾನ ವೈಪರೀತ್ಯಗಳೂ ಹೆಚ್ಚುತ್ತಿವೆ. ಇವೆಲ್ಲವುಗಳ ಒಟ್ಟಾರೆ ಪರಿಣಾಮ ನಮಗೆ ಮತ್ತೆ ಮತ್ತೆ ಕಾಣುತ್ತಿದೆ. 2019ರ ಆಗಸ್ಟ್ ತಿಂಗಳಲ್ಲಿ ಸಕಲೇಶಪುರ-ಸುಬ್ರಹ್ಮಣ್ಯದಲ್ಲಿ ರೈಲ್ವೆ ಹಳಿಗುಂಟ 35ಕ್ಕೂ ಹೆಚ್ಚು ಸ್ಥಳಗಳಲ್ಲಿ ಸರಣಿ ಭೂಕುಸಿತ ಸಂಭವಿಸಿತ್ತು. 2018ರ ಆಗಸ್ಟ್ ತಿಂಗಳಲ್ಲಿ ಕೇರಳ, ಕೊಡಗು ಮತ್ತು ಚಿಕ್ಕಮಗಳೂರಿನ ಗುಡ್ಡ-ಬೆಟ್ಟಗಳ ಕುಸಿತದಿಂದಾಗಿ 350ಕ್ಕೂ ಹೆಚ್ಚು ಮಂದಿ ಜೀವ ಕಳೆದುಕೊಂಡು, ಅನೇಕ ಹಳ್ಳಿಗಳು ಅಕ್ಷರಶಃ ನಾಪತ್ತೆಯಾದ ದುರಂತಗಳ ಸರಮಾಲೆಗೆ ಪಶ್ಚಿಮ ಘಟ್ಟಗಳು ಸಾಕ್ಷಿಯಾಗಿದ್ದವು. ತಲಕಾವೇರಿ ಮತ್ತು ಕೊಡಸಳ್ಳಿಯ ಭೂಕುಸಿತಗಳನ್ನಂತೂ ಮರೆಯುವಂತೆಯೇ ಇಲ್ಲ. ಈ ವರ್ಷ ಆಗಸ್ಟ್‌ಗೆ ಮೊದಲೇ ಭಾರಿ ಅಬ್ಬರದ ಮಳೆ ಬಿದ್ದಿದೆ.



ಇಂಥ ಪ್ರದೇಶಗಳಲ್ಲಿ ದುರಂತ ಸಂಭವಿಸಿದಾಗ, ಸಂತ್ರಸ್ತರಿಗೆ ಸರ್ಕಾರ ನೀಡುವ ಪರಿಹಾರದ ಜೊತೆಗೆ ಅದಕ್ಕೆ ಸಮನಾದ ಮೊತ್ತವನ್ನು ಗುತ್ತಿಗೆದಾರ ಕಂಪನಿಗಳಿಂದಲೂ ಕೊಡಿಸಬೇಕೆಂಬ ನಿಯಮವನ್ನು ಸೇರಿಸಬೇಕು

ಹವಾಮಾನ ಇಲಾಖೆಯೇನೋ ತಕ್ಕಮಟ್ಟಿಗೆ ಖಚಿತವಾಗಿ ಮಳೆಗಾಳಿಯ ಮುನ್ಸೂಚನೆಯನ್ನು ನೀಡುತ್ತಿದೆ. ಆದರೆ ಭೂಕಂಪನ, ಭೂಕುಸಿತಗಳ ಮುನ್ನೆಚ್ಚರಿಕೆಯನ್ನು ಅಷ್ಟೇ ನಿಖರವಾಗಿ ಕೊಡುವಷ್ಟು ತಂತ್ರಜ್ಞಾನ ಸುಧಾರಿಸಿಲ್ಲ. ಈ ಘಟ್ಟ ಪ್ರದೇಶಗಳ ಒಂದೊಂದು ಗುಡ್ಡ, ಒಂದೊಂದು ಕಣಿವೆಯ ಶಿಲಾರಚನೆ ಮತ್ತು ಮೇಲ್ಮಣ್ಣಿನ ರಚನೆ ವಿಭಿನ್ನವಾಗಿದ್ದು, ಗಿಡಮರಗಳ ದಟ್ಟಣೆ ಹಾಗೂ ನೀರನ್ನು ಹಿಡಿದಿಡುವ ಸಾಮರ್ಥ್ಯವೂ ಏಕರೂಪವಾಗಿಲ್ಲ. ಆದರೆ ಇಂಥ ಸೂಕ್ಷ್ಮ ಪ್ರದೇಶಗಳಲ್ಲಿ ನಿರ್ಮಾಣ ಕಾರ್ಯ ಕೈಗೊಳ್ಳುವಾಗ ಏನೆಲ್ಲ ಭದ್ರತಾ ಕ್ರಮಗಳನ್ನು ಕೈಗೊಳ್ಳಬೇಕು, ಎಲ್ಲೆಲ್ಲಿ ಮನುಷ್ಯನ ಹಸ್ತಕ್ಷೇಪ ಇರಲೇಬಾರದು ಎಂಬ ಬಗ್ಗೆ ಬಹಳಷ್ಟು ಮಾರ್ಗಸೂಚಿಗಳು [illegible] ಇವೆ. ಪಶ್ಚಿಮಘಟ್ಟಗಳಲ್ಲಿ ಎಂಥದ್ದೇ ಕಾಮಗಾರಿಗೂ ಮುಂಚೆ ಗಮನಿಸಬೇಕಾದ 'ಸಂಭವನೀಯ ಭೂಕುಸಿತದ ನಕ್ಷೆ'ಯನ್ನು ಭಾರತೀಯ ಭೂವಿಜ್ಞಾನ ಸರ್ವೇಕ್ಷಣಾ ಇಲಾಖೆ ಸಿದ್ಧಪಡಿಸಿದೆ. ಬದಲಾಗುತ್ತಿರುವ ಹವಾಮಾನ ವೈಪರೀತ್ಯವನ್ನು ಹೇಗೆ ಎದುರಿಸಬೇಕೆಂಬ ಬಗ್ಗೆ ಕರ್ನಾಟಕ ರಾಜ್ಯ ಸಿದ್ಧಪಡಿಸಿರುವ ಕ್ರಿಯಾಯೋಜನೆಯ ವರದಿಯಲ್ಲೂ ಗುಡ್ಡ ಕುಸಿತಗಳ ಬಗ್ಗೆ ಎಚ್ಚರಿಕೆಯ ಮಾತುಗಳಿವೆ. ಈ ಎಚ್ಚರಿಕೆಗಳು [illegible] ಕಾಮಗಾರಿಗಳು ನಡೆಯುತ್ತಿವೆ. [illegible] ಗುತ್ತಿಗೆದಾರ ಏಜೆನ್ಸಿಗಳು [illegible] 45 ಡಿಗ್ರಿಗಳಷ್ಟು ಓರೆಯಾಗಿ ಕತ್ತರಿಸಬೇಕೆಂಬ ನಿಯಮಗಳಿದ್ದರೂ 60, 80, 90 ಡಿಗ್ರಿಗಳಷ್ಟು ಕಡಿದಾಗಿ ಗೋಡೆಯಂತೆ ಕತ್ತರಿಸುವುದು ಅಲ್ಲಲ್ಲಿ ಕಾಣುತ್ತದೆ. ನೀರು ಬಸಿದು ಹೋಗಲು ಕಾಲುವೆಗಳ [illegible]; ತಡೆಗೋಡೆಗಳು ನೆಪಮಾತ್ರಕ್ಕಿರುತ್ತವೆ. [illegible] ಎಂಜಿನಿಯರಿಂಗ್ ಕೆಲಸಗಳು ನಡೆಯುತ್ತಿವೆ. [illegible] ನಿಸರ್ಗದ ಮಹಾನ್ ಶಕ್ತಿಗೆ ತಲೆಬಾಗುವ ತಾಳ್ಮೆ ಈ ಯಂತ್ರಯುಗದ ಎಂಜಿನಿಯರುಗಳಿಗೆ [illegible] ಅದಕ್ಕೆ ಮುಗ್ಧಜೀವಿಗಳು ತಲೆದಂಡ ತೆರಬೇಕಾಗಿ ಬಂದಿರುವುದು ದುರದೃಷ್ಟಕರ.

ದಿನದ ಟ್ವೀಟ್


ಜಾಗ್ರತೆ ಅಗತ್ಯ



ಸಿ.ಎ. ಮತ್ತು ಪ್ರವಾಸಿ ಕಂಟೆಂಟ್ ಕ್ರಿಯೇಟರ್ ಆಗಿದ್ದ ಯುವತಿ ಅನ್ವಿ ಇದೇ 16ರಂದು ರಾಯಗಡ ಜಿಲ್ಲೆಯ ಜಲಪಾತವೊಂದರ ಬಳಿ ರೀಲ್ಸ್ ಮಾಡುವಾಗ 300 ಅಡಿ ಪ್ರಪಾತಕ್ಕೆ ಬಿದ್ದು ಮೃತಪಟ್ಟಿದ್ದಾಳೆ. ಇತ್ತೀಚಿನ ವಾರಗಳಲ್ಲಿ ಇಂತಹ ಹಲವು ಅಪಘಾತಗಳು ವರದಿಯಾಗಿವೆ. ನಿಮ್ಮ ಜೀವನ ಮುಖ್ಯವಾದುದು. ದಯವಿಟ್ಟು ಜಾಗರೂಕರಾಗಿರಿ ಮತ್ತು ಅಪಾಯವನ್ನು ಮೈಮೇಲೆ ಎಳೆದುಕೊಳ್ಳದಿರಿ! ಕಣಿವೆ ಪ್ರದೇಶಗಳು, ಅಸುರಕ್ಷಿತ ಜಲಪಾತಗಳ ಬಳಿ ತೆರಳುವ ಮಳೆಗಾಲ ಸುರಕ್ಷಿತವಲ್ಲ.

ಆರ್ಯಾಂಶ್, ಲೇಖಕ

ಕಿಡಿನುಡಿ



ರಾಜಕೀಯದ ಥೀಮ್ ಇರಿಸಿಕೊಂಡು ಸಿನಿಮಾ, ನಾಟಕಗಳ ಮೂಲಕ ಏನೆಲ್ಲ ತೋರಿಸಬಹುದಿತ್ತೋ ಅದೆಲ್ಲವನ್ನೂ ರಾಜಕಾರಣಿಗಳೇ ನೈಜವಾಗಿ ತೋರಿಸು-ತ್ತಿದ್ದಾರೆ. ನಟರಿಗಿಂತ ತಾವೇನೂ ಕಡಿಮೆ ಇಲ್ಲವೆಂಬಂತೆ ನಟಿಸುತ್ತಿದ್ದಾರೆ. ಭ್ರಷ್ಟಾಚಾರ, ಅನಾಚಾರ, ಅತ್ಯಾಚಾರ, ದೌರ್ಜನ್ಯದಲ್ಲಿ ತೊಡಗಿದ್ದಾರೆ...

ಕೆ.ವಿ.ನಾಗರಾಜ ಮೂರ್ತಿ, ಅಧ್ಯಕ್ಷ, ಕರ್ನಾಟಕ ನಾಟಕ ಅಕಾಡೆಮಿ

25 ವರ್ಷಗಳ ಹಿಂದೆ

ಸೋಮವಾರ, 19-7-1999

- **ವಿಮಾನ ದುರಂತ: ಪತ್ನಿಸಮೇತ ಕೆನಡಿ ಪುತ್ರ ಸಾವು?**

ಹಿಯಾನಿಸ್ಪೋರ್ಟ್ (ಮೆಸಾಚುಸೆಟ್ಸ್) ಜುಲೈ 18 (ರಾಯಿಟರ್ಸ್)– ಹತ್ಯೆಗೊಳಗಾದ ಅಮೆರಿಕದ ಅಧ್ಯಕ್ಷ ಜಾನ್ ಎಫ್ ಕೆನಡಿ ಅವರ ಪುತ್ರ ಜಾನ್ ಎಫ್ ಕೆನಡಿ (ಜೂನಿಯರ್) (38) ಅವರ ವಿಮಾನ ಅಪಘಾತಕ್ಕೀಡಾಗಿದ್ದು, ಅವರು ಪತ್ನಿ ಹಾಗೂ ಅತ್ತಿಗೆಯ ಜತೆ ಸಾವಿಗೀಡಾಗಿದ್ದಾರೆ ಎಂದು ಶಂಕಿಸಲಾಗಿದೆ.

ಕುಟುಂಬದ ವಿವಾಹ ಸಮಾರಂಭದಲ್ಲಿ ಭಾಗವಹಿಸಲು ಇವರು ಹೋಗುತ್ತಿದ್ದರು.

- **ಬಿಜೆಪಿ ಸಖ್ಯ ಬಿಡಲು ಹೆಗಡೆ, ಜಾರ್ಜ್‌ಗೆ ದಳ ಷರತ್ತು**

ನವದೆಹಲಿ, ಜುಲೈ 18– ಭಾರತೀಯ ಜನತಾ ಪಕ್ಷದ ಬಾಂಧವ್ಯವನ್ನು ಕಳಚಿಕೊಂಡು ಬರುವುದಾದರೆ ಮಾತ್ರ ಲೋಕಶಕ್ತಿ ಮತ್ತು ಸಮತಾ ಪಕ್ಷಗಳ ಜತೆ ಚುನಾವಣೆ ಹೊಂದಾಣಿಕೆ ಮಾಡಿಕೊಳ್ಳುವ ಸಂಬಂಧ ಈ ಎರಡು ಪಕ್ಷಗಳ ನಾಯಕರ ಜತೆ ಮಾತನಾಡಲು ಜನತಾದಳದ ರಾಜಕೀಯ ವ್ಯವಹಾರಗಳ ಸಮಿತಿಯು ಪಕ್ಷದ ಅಧ್ಯಕ್ಷ ಶರದ್ ಯಾದವ್ ಅವರಿಗೆ ಇಂದು ಇಲ್ಲಿ ಅಧಿಕಾರ ನೀಡಿತು.

50 ವರ್ಷಗಳ ಹಿಂದೆ

ಶುಕ್ರವಾರ, 19-7-1974

- **ಕಪ್ಪುಹಣದ ವಿರುದ್ಧ ಉಗ್ರಕ್ರಮ ಕೃಷಿರಂಗದ ಸಂಪನ್ಮೂಲ ಶೇಖರಣೆ**

ನವದೆಹಲಿ, ಜುಲೈ 18– ಪ್ರಸಕ್ತ ಆರ್ಥಿಕ ಬಿಕ್ಕಟ್ಟಿನಿಂದ ರಾಷ್ಟ್ರವನ್ನು ಪಾರು ಮಾಡಲು ಕಪ್ಪುಹಣದ ವಿರುದ್ಧ ಕ್ರಮ, ಕೃಷಿರಂಗದಿಂದ ಸಾಕಷ್ಟು ಸಂಪನ್ಮೂಲ ಶೇಖರಣೆ ಮತ್ತು ಅನಗತ್ಯವಾದ ವೆಚ್ಚ ಕಡಿತ– ಈ ಕ್ರಮಗಳನ್ನು ಕಾಂಗ್ರೆಸ್ಸಿಗರ ಸಮಾವೇಶವೊಂದು ಇಂದು ಸೂಚಿಸಿತು.

ಹಣದುಬ್ಬರದ ಪರಿಸ್ಥಿತಿ ಎದುರಿಸಲು ಸಿನಿಕತನದಿಂದ ಕೂಡಿದ, ಸೋಲಿನ ಮನೋಭಾವದ ಧೋರಣೆ ತಳೆಯುವುದು ಸಮರ್ಥನೀಯವಲ್ಲ ಎಂದೂ ಸಿದ್ಧಾಂತವಾದಿಗಳು ಮತ್ತು ಸಕ್ರಿಯ ರಾಜಕಾರಣಿಗಳ ಎರಡು ದಿನಗಳ ಈ ರಾಷ್ಟ್ರೀಯ ಸಮಾವೇಶದಲ್ಲಿ ಘೋಷಿಸಲಾಯಿತು.

- **ಗಂಟೆಗೊಂದು ಕೊಲೆ, ಪಿಸ್ತೂಲು ಕೊಳ್ಳಲು ಕ್ಯೂ**

ನ್ಯೂಯಾರ್ಕ್, ಜುಲೈ 18– ಗಂಟೆಗೆ ಒಬ್ಬರಂತೆ, ಪಿಸ್ತೂಲಿನಿಂದ ಅಮೆರಿಕದಲ್ಲಿ ಕೊಲೆಗಳಾಗುತ್ತಿದ್ದು, 12 ಸೆಕೆಂಡಿಗೆ ಒಂದರಂತೆ ಪಿಸ್ತೂಲು ಮಾರಾಟವಾಗುತ್ತಿದೆ.

ಏರುತ್ತಿದ್ದ ಅಪರಾಧಗಳ ಪರಿಸ್ಥಿತಿ ಹಾಗೂ ಆತ್ಮರಕ್ಷಣೆಗಾಗಿ ಶಸ್ತ್ರಾಸ್ತ್ರ ಕೊಳ್ಳಲು ನೂಕುನುಗ್ಗಲನ್ನು ವಾಷಿಂಗ್ಟನ್ ಪತ್ರಿಕೆಯೊಂದು ಮೇಲಿನ ಅಂಕಿಅಂಶವಿತ್ತು ವರದಿ ಮಾಡಿದೆ.

ಭಾರತದ ಜೀವಿವೈವಿಧ್ಯ ದಾಖಲಾತಿಯ ಪರಿಶೀಲನಾ ಪಟ್ಟಿ ನಮ್ಮನ್ನು ಎಚ್ಚರಿಸುವಂತಿದೆ

ಜೀವಿವೈವಿಧ್ಯ: ಕಳೆದೀತು ಸಂಪತ್ತು



ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ಭಾರತೀಯ ಪ್ರಾಣಿಶಾಸ್ತ್ರ ಸರ್ವೇಕ್ಷಣಾ ಸಂಸ್ಥೆಯು ತನ್ನ ವಾರ್ಷಿಕೋತ್ಸವದ ಸಂದರ್ಭದಲ್ಲಿ ಇತ್ತೀಚೆಗೆ ದೇಶದ ಜೀವಿವೈವಿಧ್ಯ ದಾಖಲಾತಿಯ ಪರಿಶೀಲನಾ ಪಟ್ಟಿಯನ್ನು ಬಿಡುಗಡೆ ಮಾಡಿತು. ಜಗತ್ತಿನಲ್ಲೇ ಇಂತಹ ಪ್ರಯತ್ನ ಮಾಡಿದ ಮೊದಲ ದೇಶ ಭಾರತ ಎಂದು ಕೇಂದ್ರ ಪರಿಸರ ಸಚಿವರು ಈ ಸಂದರ್ಭದಲ್ಲಿ ಸಾರಿದರು. ಒಟ್ಟು 1,04,561 ಪ್ರಭೇದಗಳ ಸಮಗ್ರ ದಾಖಲಾತಿಯನ್ನು ಹೊಂದಿದ ಈ ಪಟ್ಟಿಯು ನಮ್ಮ ಜೀವಿವೈವಿಧ್ಯವನ್ನು ಉಳಿಸುವಲ್ಲಿ ನಿಶ್ಚಿತವಾಗಿ ಸಹಕಾರಿಯಾಗಬಹುದು ಎಂಬ ಆಶಾಭಾವ ಹೊಂದೋಣ.

ಸಂಶೋಧಕರು, ವರ್ಗೀಕರಣ ಶಾಸ್ತ್ರಜ್ಞರು, ಶಿಕ್ಷಣ ತಜ್ಞರು, ಸಂರಕ್ಷಣಾ ನಿರ್ವಾಹಕರು ಹಾಗೂ ನೀತಿ ನಿರೂಪಕರಿಗೆ ಈ ಪಟ್ಟಿಯಿಂದ ಅನುಕೂಲವಾಗಲಿದೆ. ಈ ಪಟ್ಟಿಯ ಪ್ರಕಾರ, ಭಾರತದಲ್ಲಿ 455 ಸ್ತನಿ ಪ್ರಾಣಿಗಳು ಕಂಡುಬಂದಿವೆ. ಅತಿಹೆಚ್ಚು ಸ್ತನಿ ವೈವಿಧ್ಯವನ್ನು ಮೇಘಾಲಯ (169) ಹೊಂದಿದೆ. ಭಾರತದಲ್ಲಿ ಮಾತ್ರ ಕಂಡುಬರುವ 52 ಸ್ತನಿ ಪ್ರಭೇದಗಳಲ್ಲಿ 19 ಪ್ರಭೇದಗಳು ಕರ್ನಾಟಕದಲ್ಲಿ ಇವೆ ಎಂಬುದು ಸಂರಕ್ಷಣೆಯ ದೃಷ್ಟಿಯಿಂದ ಬಹಳ ಮಹತ್ವದ ಅಂಶವಾಗಿದೆ. 1,358 ಪಕ್ಷಿ ಪ್ರಭೇದಗಳ ಪೈಕಿ 79 ಪ್ರಭೇದಗಳು ಭಾರತಕ್ಕೆ ಮಾತ್ರ ಸೀಮಿತವಾಗಿದ್ದು, ಇವುಗಳಲ್ಲಿ 28 ಪ್ರಭೇದಗಳು ಪಶ್ಚಿಮಘಟ್ಟ ಪ್ರದೇಶದಲ್ಲಿ ಮಾತ್ರ ಕಂಡುಬರುತ್ತವೆ.

150ಕ್ಕೂ ಹೆಚ್ಚು ವಿಜ್ಞಾನಿಗಳ ಎರಡು ವರ್ಷಗಳ ಸತತ ಪರಿಶ್ರಮದಿಂದ ಈ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಈ ಅವಧಿಯಲ್ಲಿ ವಿಜ್ಞಾನಿಗಳು ದೇಶದಾದ್ಯಂತ ಇರುವ 641 ಹೊಸ ಪ್ರಾಣಿ ಪ್ರಭೇದಗಳನ್ನು ಪತ್ತೆ ಮಾಡಿದ್ದಾರೆ. ಅತಿಹೆಚ್ಚು ಹೊಸ ಪ್ರಭೇದಗಳು ದಾಖಲಾಗಿರುವುದು ಪಶ್ಚಿಮಘಟ್ಟದ ಕೇರಳ ಭಾಗದಲ್ಲಿ ಎಂಬುದು ಗಮನಾರ್ಹ.


ಪ್ರಪಂಚದಲ್ಲಿ ಅತಿಹೆಚ್ಚು ಜೀವಿವೈವಿಧ್ಯವನ್ನು ಹೊಂದಿರುವ 17 ದೇಶಗಳಲ್ಲಿ ಭಾರತವೂ ಒಂದಾಗಿದೆ. ಶೇಕಡ 8ರಷ್ಟು ಜೀವಿವೈವಿಧ್ಯ ಸಂಪತ್ತು ನಮ್ಮಲ್ಲಿದೆ. ಇರುವೆ, ಜೇನು, ಕಣಜ, ಜೇಡ, ಚೇಳು, ಗೆದ್ದಲು ಮತ್ತು ಉಣ್ಣೆಗಳ ಹೊಸ ಪ್ರಭೇದಗಳು ಪತ್ತೆಯಾಗಿವೆ. ಜೊತೆಗೆ 47 ಜಾತಿಯ ಮೀನುಗಳು, 20 ಹೊಸ ಸರೀಸೃಪ ಪ್ರಭೇದಗಳ ಜೊತೆಗೆ ಎರಡು ಸ್ತನಿ ಪ್ರಭೇದಗಳು ಪಟ್ಟಿಗೆ ಸೇರ್ಪಡೆಯಾಗಿವೆ.

ವಿಶೇಷವಾಗಿ, ಮೇಕೆ ಜಾತಿಗೆ ಸೇರಿದ ಎರಡು ಸ್ತನಿ ಪ್ರಭೇದಗಳು ಹಿಮಾಚಲಪ್ರದೇಶ ಹಾಗೂ ಲಡಾಖ್‌ನಲ್ಲಿ, ಹೊಸ ಪ್ರಭೇದದ ಬಾವಲಿಯೊಂದು ಕರ್ನಾಟಕದ ಕೊಡಗು ಜಿಲ್ಲೆಯಲ್ಲಿ ಪತ್ತೆಯಾಗಿವೆ. ಕೇರಳದಲ್ಲಿ 101, ಪಶ್ಚಿಮ ಬಂಗಾಳ 72, ತಮಿಳುನಾಡು 62, ಕರ್ನಾಟಕ ಮತ್ತು ಅರುಣಾಚಲ ಪ್ರದೇಶದಲ್ಲಿ ತಲಾ 45 ಹೊಸ ಪ್ರಭೇದಗಳನ್ನು ಪತ್ತೆ ಮಾಡಲಾಗಿದೆ.

ಚಿಕ್ಕ ಇರುವೆಯಿಂದ ಹಿಡಿದು ಬೃಹತ್ ಆನೆಯವರೆಗಿನ ಎಲ್ಲಾ ವಿವರಗಳನ್ನು 1750ರಿಂದಲೇ ಕಲೆ ಹಾಕಲಾಗುತ್ತಿತ್ತು. ಸ್ಥಾನಿಕ ಪ್ರಭೇದಗಳು, ಅಪಾಯದ ಅಂಚಿನಲ್ಲಿರುವ ಪ್ರಭೇದಗಳು, ಅತಿ ಮುಖ್ಯ ಎಂದು ಪರಿಗಣಿತವಾದ ಪ್ರಭೇದಗಳನ್ನು ಕಾಲಕಾಲಕ್ಕೆ ನವೀಕರಿಸಿ ದಾಖಲಿಸಲಾಗುತ್ತದೆ. ವೈಜ್ಞಾನಿಕವಾಗಿ ರಚಿಸಿರುವ ಹೊಸ ಜೀವಿವೈವಿಧ್ಯ ಪಟ್ಟಿಯು ಸಂರಕ್ಷಣೆ ಮತ್ತು ನಿರ್ವಹಣೆ ದೃಷ್ಟಿಯಿಂದ ಬಹಳ ಮಹತ್ವದ ಮೈಲಿಗಲ್ಲು ಎಂದು ಬಣ್ಣಿಸಲಾಗುತ್ತಿದೆ.

ಪ್ರಧಾನಿ ನರೇಂದ್ರ ಮೋದಿ ಅವರು 2021ರಲ್ಲೇ 'ಪರಿಸರಕ್ಕಾಗಿ ಜೀವನಶೈಲಿ' (ಲೈಫ್‌ಸ್ಟೈಲ್ ಫಾರ್ ಎನ್ವಿರಾನ್‌ಮೆಂಟ್) ಎಂಬ ಘೋಷವಾಕ್ಯದ ರಾಯಭಾರಿಯಾಗಿದ್ದರು. ಭೂಗ್ರಹದ ಒಟ್ಟಾರೆ ಆರೋಗ್ಯವನ್ನು ಕಾಪಿಡಲು ಇದು ಸಹಕಾರಿಯಾಗಲಿದೆ ಹಾಗೂ ಪ್ರತಿಯೊಬ್ಬರೂ ಪರಿಸರಸ್ನೇಹಿ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದ್ದರು. ಅವರ ಮತ್ತೊಂದು ಮಹತ್ವಾಕಾಂಕ್ಷೆಯ ಘೋಷಣೆಯೆಂದರೆ 'ತಾಯಿಗಾಗಿ ಒಂದು ಮರ' ಎಂಬ ಘೋಷವಾಕ್ಯ. ಇದು ಕೂಡ ಪರಿಸರವನ್ನು ಉಳಿಸುವ ದಿಸೆಯಲ್ಲಿ ಒಂದು ಉಪಕ್ರಮ. ಪ್ರತಿ ಪ್ರಜೆಯೂ ತನ್ನ ತಾಯಿಯ ಹೆಸರಿನಲ್ಲಿ ಒಂದು ಗಿಡವನ್ನು ನೆಟ್ಟು ಪೋಷಿಸಬೇಕು ಎಂಬುದು ಇದರ ಹಿಂದಿರುವ ಕಾಳಜಿ. ಪ್ರಧಾನಿಯವರ ಆಶಯ ನೆರವೇರಿತೇ ಎಂಬ ಚರ್ಚೆ ಇಲ್ಲಿ ಬೇಡ. ಆದರೆ, ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಸರ್ಕಾರವು ಈ ಹಿಂದಿನ ಎರಡು ಅವಧಿಗಳಲ್ಲಿ ವಾಸ್ತವವಾಗಿ ಎಷ್ಟರ ಮಟ್ಟಿಗೆ ಪರಿಸರಸ್ನೇಹಿಯಾಗಿತ್ತು ಎಂಬುದನ್ನು ಕೆಲವು ಉದಾಹರಣೆಗಳೊಂದಿಗೆ ನೋಡೋಣ.

ಸರ್ಕಾರ ತೆಗೆದುಕೊಂಡ ಹಲವು ನಿರ್ಧಾರಗಳು ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ಕೆಟ್ಟ ಪರಿಣಾಮ ಬೀರುವಂತೆ ಇದ್ದವು. ವನ್ಯಜೀವಿ ಸಂರಕ್ಷಣಾ ಕಾಯ್ದೆ-1972ಕ್ಕೆ 2022ರಲ್ಲಿ ತಿದ್ದುಪಡಿ ತರಲಾಯಿತು. ತಿದ್ದುಪಡಿಗೆ ಮೊದಲು ಯಾವುದೇ ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಆನೆಗಳನ್ನು ಸಾಗಿಸಲು ನಿಯಮಗಳು ಬಹಳ ಬಿಗಿಯಾಗಿದ್ದವು. ಆಯಾ ರಾಜ್ಯದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಒಪ್ಪಿಗೆ ಕೊಟ್ಟ ನಂತರದಲ್ಲಷ್ಟೇ ಇದಕ್ಕೆ ಅವಕಾಶ ಇತ್ತು. ಕರ್ನಾಟಕದಿಂದ ಗುಜರಾತಿಗೆ ಸಾಕಾನೆಗಳನ್ನು ಸಾಗಿಸುವುದಾದಲ್ಲಿ, ಕರ್ನಾಟಕ ಅರಣ್ಯ ಇಲಾಖೆಯ ಮುಖ್ಯಸ್ಥರು ಹಾಗೂ ಯಾವ ರಾಜ್ಯಗಳನ್ನು ಹಾದು ಹೋಗಬೇಕಾಗಿದೆಯೋ ಆ ರಾಜ್ಯಗಳ ಅರಣ್ಯ ಇಲಾಖೆಯ ಮುಖ್ಯಸ್ಥರು ಮತ್ತು ಆನೆಗಳನ್ನು ಪಡೆದುಕೊಳ್ಳುವ ರಾಜ್ಯದ ಅರಣ್ಯ ಇಲಾಖೆಯ ಮುಖ್ಯಸ್ಥರ ಒಪ್ಪಿಗೆ ಕಡ್ಡಾಯವಾಗಿತ್ತು. ಸಾಕಾನೆಗಳ ಯದ್ವಾತದ್ವಾ ಸಾಗಾಣಿಕೆಗೆ ಈ ಕಾನೂನು ತಡೆಯೊಡ್ಡುತ್ತಿತ್ತು. ತಿದ್ದುಪಡಿ ಮೂಲಕ ಈ ಅಂಶ ತೆಗೆದುಹಾಕಲಾಗಿದ್ದು, ಧಾರ್ಮಿಕ ಮತ್ತು ಇನ್ನಿತರ ಉದ್ದೇಶಗಳಿಗೆ ಸಾಕಾನೆಗಳನ್ನು ಯಾವುದೇ ವ್ಯಕ್ತಿಗೆ, ಸಂಸ್ಥೆಗೆ ಅಥವಾ ಬೇರೆ ರಾಜ್ಯಗಳಿಗೆ ನೀಡುವುದಕ್ಕೆ ಈ ಬಗೆಯ ನಿರ್ಬಂಧ ಇರುವುದಿಲ್ಲ. ಇದರಿಂದ, ಸಾಕಾನೆಗಳಿಗೆ ಅಥವಾ ಪಳಗಿಸಿದ ಆನೆಗಳಿಗೆ ಬೇಡಿಕೆ ಹೆಚ್ಚಲಿದ್ದು, ಇನ್ನಷ್ಟು, ಮತ್ತಷ್ಟು ಕಾಡಾನೆಗಳನ್ನು ಹಿಡಿದು ಪಳಗಿಸುವ ಪ್ರವೃತ್ತಿ ಹೆಚ್ಚಾಗಲಿದೆ ಎಂದು ಪರಿಸರ ತಜ್ಞರು ಎಚ್ಚರಿಸಿದ್ದಾರೆ.




ಕೇಂದ್ರ ಪರಿಸರ ಸಚಿವಾಲಯವು ನದಿ ಜೋಡಣೆ ಯೋಜನೆಗೆ 2021ರ ಡಿಸೆಂಬರ್‌ನಲ್ಲಿ ಅನುಮತಿ ನೀಡಿದೆ. ಮಧ್ಯಪ್ರದೇಶದ ಬುಂದೇಲ್‌ಖಂಡ ವ್ಯಾಪ್ತಿಯ ಕೆನ್ ಮತ್ತು ಬೆತ್ವಾ ನದಿಗಳ ಜೋಡಣೆಗಾಗಿ ₹ 44,605 ಕೋಟಿ ಮಂಜೂರಾಗಿದೆ. ಈ ನದಿ ಜೋಡಣೆಗಾಗಿ ಪನ್ನಾ ಹುಲಿ ಸಂರಕ್ಷಣಾ ಪ್ರದೇಶದ 27 ಲಕ್ಷ ಬಲಿತ ಮರಗಳ ಹನನವಾಗಲಿದೆ. ಇಷ್ಟು ಸಂಖ್ಯೆಯ ಮರಗಳ ಹನನವು ನದಿಯ ಹರಿವಿನ ಮೇಲೆ ನೇರ ಪರಿಣಾಮ ಬೀರಲಿದೆ ಎಂದು ಜಲತಜ್ಞರು ಎಚ್ಚರಿಸಿದ್ದಾರೆ. ಈಗಾಗಲೇ ನೀರಿನ ಅಭಾವ ಎದುರಿಸುತ್ತಿರುವ ಬುಂದೇಲ್‌ಖಂಡ ಪ್ರದೇಶವು ಈ ಯೋಜನೆಯ ನಂತರದಲ್ಲಿ ಇನ್ನಷ್ಟು ಜಲ ಸಂಕಷ್ಟಕ್ಕೆ ಸಿಲುಕಲಿದೆ ಎಂಬುದು ತಜ್ಞರ ಸ್ಪಷ್ಟ ಅಭಿಪ್ರಾಯ.

ಜೀವಿವೈವಿಧ್ಯದ ಆಗರವಾದ ನಿಕೋಬಾರ್ ದ್ವೀಪ ಸಮೂಹವನ್ನು ಅಭಿವೃದ್ಧಿಪಡಿಸುವ ಸಲುವಾಗಿ ₹ 72 ಸಾವಿರ ಕೋಟಿ ಅಂದಾಜು ಮೊತ್ತದ ಯೋಜನೆಯನ್ನು ಸಿದ್ಧಪಡಿಸಿ, ಅದಕ್ಕೆ ತರಾತುರಿಯಲ್ಲಿ ಅನುಮತಿ ನೀಡಲಾಗಿದೆ. ಈ ಯೋಜನೆಯಿಂದ ಅಲ್ಲಿ ಎಂಟೂವರೆ ಲಕ್ಷ ಮರಗಳ ಹನನವಾಗಲಿದೆ. ಶೋಂಪೆನ್ ಹಾಗೂ ನಿಕೋಬಾರಿ ಸಮುದಾಯಗಳ 1,700 ಮಂದಿ ಶಾಶ್ವತವಾಗಿ ನೆಲೆ ಕಳೆದುಕೊಳ್ಳಲಿದ್ದಾರೆ. ನಿಕೋಬಾರ್‌ಗೆ ಮಾತ್ರ ಸೀಮಿತವಾಗಿರುವ ನಿಕೋಬಾರ್ ಮೆಗಾಪೋಡ್ ಎಂಬ ವಿಶಿಷ್ಟ ಪಕ್ಷಿಯು ಶಾಶ್ವತವಾಗಿ ತನ್ನ ನೆಲೆ ಕಳೆದುಕೊಳ್ಳಲಿದೆ. ಸಾಮಾನ್ಯ ಕಾರಿನಷ್ಟು ದೊಡ್ಡದಾದ ಲೆದರ್‌ಬ್ಯಾಕ್ ಆಮೆಗಳು ನಿಯಮಿತವಾಗಿ ಮೊಟ್ಟೆಯಿಡುವ ಪ್ರದೇಶವೂ ಅಭಿವೃದ್ಧಿಯ ಹೆಸರಿನಲ್ಲಿ ಕಳೆದುಹೋಗಲಿದೆ.

ದೇಶದ ಭೌಗೋಳಿಕ ಪ್ರದೇಶದಲ್ಲಿ ಕನಿಷ್ಠ ಶೇ 33ರಷ್ಟು ಅರಣ್ಯ ಇರಬೇಕು, ಗುಡ್ಡಗಾಡು ಪ್ರದೇಶದಲ್ಲಿ ಈ ಪ್ರಮಾಣ ಶೇ 66ರಷ್ಟು ಇರಬೇಕು ಎಂದು ರಾಷ್ಟ್ರೀಯ ಅರಣ್ಯ ನೀತಿ– 1988 ಹೇಳುತ್ತದೆ. ವಾಸ್ತವಿಕವಾಗಿ ಈ ಪ್ರಮಾಣ ಶೇ 21ಕ್ಕೆ ಇಳಿದಿದೆ ಎಂದು ಕೇಂದ್ರ ಪರಿಸರ ಇಲಾಖೆಯೇ ಹೇಳುತ್ತದೆ. ಅರಣ್ಯ ನೀತಿ ಹೇಳಿರುವಷ್ಟು ಪ್ರಮಾಣದ ಅರಣ್ಯ ಪ್ರದೇಶವು ದೇಶದಲ್ಲಿ ಬೆಳವಣಿಗೆ ಆಗುವವರೆಗೆ ಯಾವುದೇ ಅರಣ್ಯ ಅಥವಾ ಪರಿಭಾವಿತ (ಡೀಮ್ಡ್) ಅರಣ್ಯ ಪ್ರದೇಶಗಳನ್ನು ಅರಣ್ಯೇತರ ಉದ್ದೇಶಕ್ಕೆ ಬಳಸಬಾರದು ಎಂಬ ನಿಯಮ ಜಾರಿಗೆ ತಂದಾಗ ಮಾತ್ರ ಜೀವಿವೈವಿಧ್ಯ ಸಮೃದ್ಧವಾಗಬಲ್ಲದು.

ಆಕರ್ಷಕ ಹಾಗೂ ಎದ್ದುಕಾಣುವ ಅಂಕಿ-ಅಂಶಗಳಷ್ಟೇ ನಮಗೆ ಮುಖ್ಯವಾಗಿವೆ. ನೆಲಮಟ್ಟದಲ್ಲಿ ನಾವು ಸಂರಕ್ಷಣೆ ಮಾಡಿದ್ದಕ್ಕಿಂತ ಕಳೆದುಕೊಳ್ಳುತ್ತಿರುವುದೇ ಹೆಚ್ಚು ಎಂಬ ಸತ್ಯವನ್ನು ನಾವೀಗ ಒಪ್ಪಿಕೊಳ್ಳಬೇಕಾಗಿದೆ. ಜೀವಿವೈವಿಧ್ಯ ಸಂಪತ್ತನ್ನು ಬರೀ ಅಂಕಿ-ಅಂಶವನ್ನು ಬಳಸಿಕೊಂಡು ಉಳಿಸಲು ಸಾಧ್ಯವಿಲ್ಲ ಎಂಬುದನ್ನು ಸರ್ಕಾರಗಳು ಮನಗಾಣಲಿ.

ಚುರುಮುರಿ



ಭರ್ಜರಿ ಮದುವೆ!

● ಬಿ.ಎನ್.ಮಲ್ಲೇಶ್

'**ಇನ್ಮುಂದೆ** ಈ ರಾಜಕಾರಣಿಗಳು, ಸಿನಿಮಾ ಮಂದಿ ಜತಿ ಫೋಟೊ ಹೊಡೆಸ್ಕಾಬಾರ್ದು ಕಣ್ರಲೆ...' ಎಂದ ಗುಡ್ಡೆ.

'ಯಾಕೆ?' ದುಬ್ಬೀರ ಕೇಳಿದ.

'ಅವ್ರು ಏನೇನೋ ಭ್ರಷ್ಟಾಚಾರ, ಭಾನಗಡಿ ಮಾಡಿರ್ತಾರೆ, ಅವರ ಜತಿ ಫೋಟೊದಲ್ಲಿ ನಾವಿದ್ರೆ, ಈ ಪಕ್ಕದಲ್ಲಿರೋನು ಯಾರು, ಎಲ್ಲದಾನೆ, ಏನು ವ್ಯವಹಾರ ಅವುಂದು, ಅವ್ನಿಗೂ ಇವ್ನಿಗೂ ಏನ್ ಸಂಬಂಧ? ನೋಟಿಸ್ ಕೊಡ್ರಿ, ಎಳ್ಕಂಡ್ ಬರ್ರಿ ಅಂತಾರೆ. ಯಾವನಿಗೆ ಬೇಕು ಆ ತಲೆನೋವು'.

'ಅಷ್ಟೇ ಅಲ್ಲಲೆ, ನಾವು ಈ ಸನ್ಮಾನ, ಪ್ರಶಸ್ತಿ ತಗಾಬೇಕಾದ್ರೆ ಕೊಡೋವ್ರು ಯಾರು ಅಂತನೂ ಯೋಚನಿ ಮಾಡಿ ತಗಾಬೇಕು. ನಮಿಗೆ ಪ್ರಶಸ್ತಿ ಕೊಟ್ಟೋನು ಮುಂದೆ ರೊಕ್ಕ ಹೊಡೆದೋ ಕೊಲೆ ಮಾಡಿನೋ ಜೈಲಿಗೆ ಹೋದ್ರೆ ಅವನು ಪ್ರಶಸ್ತಿ ಕೊಟ್ಟ ಫೋಟೊನ ನಮ್ಮನಿ ಗೋಡೆ ಮ್ಯಾಲ ಹೆಂಗೆ ಹಾಕ್ಕೊಳ್ಳೋದು?' ತೆಪರೇಸಿ ಪಾಯಿಂಟ್.

'ಕರೆಕ್ಟ್, ಅದು ನಿಂಗೆ ಪ್ರಶಸ್ತಿ ಬಂದಾಗ ನೋಡಾಣ, ಈಗ ಅಂಬಾನಿ ಮಗನ ಮದುವಿಗೆ ಐದು ಸಾವಿರ ಕೋಟಿ ಖರ್ಚಾತಂತೆ. ನಿಂದೂ ಪಮ್ಮಿ ಮದುವಿ ಹೆಂಗಾಗಿತ್ತೋ ತೆಪರ?' ಮಂಜಮ್ಮ ಕೇಳಿದಳು.

'ನಂದಾ? ಸರ್ಜರಿ ಅಂಡ್ ಭರ್ಜರಿ ಮದುವಿ, ಇಡೀ ಊರಿಗೆ ಊರೇ ನಿಂತು ನೋಡಿತ್ತು. ಪೊಲೀಸ್ರು, ಪೇಪರ್‌ನೋರು ಎಲ್ಲ ಬಂದಿದ್ರು'.

'ಹೌದಾ? ಅದೆಂಥ ಮದುವಿನೋ ಅದು?'

'ಅದ್ನ ನಾ ಹೇಳ್ತೀನಿ. ಹತ್ತು ವರ್ಷದ ಹಿಂದೆ ವ್ಯಾಲೆಂಟೈನ್ಸ್ ಡೇ ದಿನ ಈ ತೆಪರ ಬಸ್‌ಸ್ಟಾಪ್‌ನಾಗೆ ನಿಂತಿದ್ನಂತೆ. ಯಾವುದೋ ಹುಡುಗಿ ಇವನನ್ನ ಟೈಮೆಷ್ಟು ಅಂತ ಕೇಳ್ತಂತೆ. ಅಷ್ಟಕ್ಕೇ ಅದ್ಯಾರೋ ಸೇನೆಯವರಂತೆ, ಇವ್ರನ್ನ ಪ್ರೇಮಿಗಳು ಅನ್ಕಂಡು ಗಪ್ಪಂತ ಹಿಡಿದು, ಪಟ್ ಅಂತ ಅಲ್ಲೇ ತಾಳಿ ಕಟ್ಟಿಸೇಬಿಟ್ರಂತೆ...' ಗುಡ್ಡೆ ಕಿಸಕ್ಕೆಂದ.

'ಅಲೆ ಇವ್ನ, ಹೌದಾ? ಹಂಗಾರೆ ನಯಾಪೈಸೆ ಖರ್ಚಿಲ್ಲ?'

'ಯಾಕಿಲ್ಲ? ಐವತ್ತು ಕೋಟಿ ಖರ್ಚಾತು'.

'ಐವತ್ತು ಕೋಟಿನಾ?'

'ಆರು ಸೊನ್ನಿ ಕಮ್ಮಿ!' ಗುಡ್ಡೆ ಕೀಟಲೆಗೆ ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಸಾಮರಸ್ಯದ ಬಾಳ್ವೆ ಕಲಿಸೋಣ ಬನ್ನಿ

ಮಕ್ಕಳ ಮೇಲಿನ ಅತಿನಿರೀಕ್ಷೆಗಳ ಸಂಕೋಲೆಗಳನ್ನು ಸಡಿಲಿಸಿ, ಮುಕ್ತರಾಗಲು ಬಿಟ್ಟಾಗಷ್ಟೇ ಅವರಲ್ಲಿ ಅರಿವಿನ ದಾರಿ ತೆರೆದುಕೊಳ್ಳಲು ಸಾಧ್ಯ

● ಸತೀಶ್ ಜಿ.ಕೆ. ತೀರ್ಥಹಳ್ಳಿ


ನಿನ್ನೆಮೊನ್ನೆಯವರೆಗೂ ಶಾಲೆಯಿಂದ ಬಂದು ಬ್ಯಾಗು ಎಸೆಯುವಷ್ಟರಲ್ಲಿ ಮಕ್ಕಳನ್ನು ಸರಕ್ಕನೆ ಸೆಳೆಯುತ್ತಿದ್ದುದು ಟಿ.ವಿ., ಮೊಬೈಲು. ಮಾತು ಕೇಳದೆ, ರಚ್ಚೆ ಹಿಡಿದು ಕೂತವರಿಗೆ ಇಂಟರ್‌ನೆಟ್ಟು, ಮೊಬೈಲು-ರೀಲ್ಸು, ಟಿ.ವಿ-ಕಾರ್ಟೂನುಗಳದ್ದೇ ಖಯಾಲು. ಓದು, ಬರವಣಿಗೆಯಲ್ಲಿನ ಮಕ್ಕಳ ನಿರಾಸಕ್ತಿ ಮತ್ತು ಮನೆ-ಮಂದಿಯೊಟ್ಟಿಗೆ ಮುಕ್ತವಾಗಿ ಒಡನಾಡುವಲ್ಲಿನ ನಿರುತ್ಸಾಹದ ಕುರಿತು ಹೆತ್ತವರಿಗೆ ನಿತ್ಯ ದಿಗಿಲು...

ಇಂದಿನ ವಿದ್ಯುನ್ಮಾನ ಯುಗದ, ಕೃತಕ ಬುದ್ಧಿಮತ್ತೆ ಕಾಲದ ಮಕ್ಕಳು ತಮ್ಮ ತರಗತಿ-ಪಠ್ಯದ ಕಲಿಕೆಯಲ್ಲಿ ಹೀಗೇಲ್ಲಾ ನಿರಾಸಕ್ತರಾಗಲು ಕಾರಣವೇನು? ಪೋಷಕರ ಅತಿಯಾದ ಒತ್ತಡವೇ, ಅಸಂಬದ್ಧವೆನಿಸುವ ಅಪರಿಚಿತ, ರುಚಿರಹಿತ ಪಠ್ಯವೇ, ಉತ್ಸಾಹಿ ಮನಸುಗಳನ್ನು ಮರಗಟ್ಟಿಸುವ ಏಕತಾನತೆಯೇ...? ಕಾರಣ ಹುಡುಕುವುದೇನೂ ಕಷ್ಟವಲ್ಲ.

ಅಂದು ಮನೆಗೊಬ್ಬ ಅತಿಥಿ ಪ್ರವೇಶಿಸುತ್ತಿದ್ದಂತೆ ಮಕ್ಕಳ ದಿನಚರಿಯೇ ಬದಲು. ಮುದ್ದಾದ ನಾಯಿ ಮರಿಯ ಸಲುಗೆ, ತುಂಟಾಟ, ಪ್ರೀತಿ, ಕಕ್ಕುಲಾತಿಯಲ್ಲಿ ಮಕ್ಕಳ ಹಳೆಯ ರಗಳೆಗಳು ಮಾಯವಾದವು. ಟಿ.ವಿ.ಗೆ ಅಂಟಿಯೋ ಮೊಬೈಲು ಹಿಡಿದೋ ಮನೆಯ ಮೂಲೆ ಸೇರುವ ಬದಲು ಸಾಕುಪ್ರಾಣಿಯೊಂದಿಗೆ ಹೊರಗಿನ ಗಾಳಿಯಲ್ಲಿ ನಲಿದಾಡುವ ಉಮೇದು ಮಕ್ಕಳಿಗೆ. ಶಾಲೆಯ ಆಯಾಸ, ಒತ್ತಡವನ್ನು ಮರೆತು ಮೈದಾನದಲ್ಲಿ ಆಟವಾಡಿ ಹಗುರಾಗಿ ಬಂದವರಿಗೆ ಓದು, ಹೋಂವರ್ಕೂ ಈಗ ಸಲೀಸು. ಬರಬರುತ್ತಾ ಮಕ್ಕಳ ಆಸಕ್ತಿ, ಅಭಿರುಚಿ, ವರ್ತನೆಗಳಲ್ಲಿಯೂ ಕೊಂಚ ಸುಧಾರಣೆ ಸಾಧ್ಯವಾಯಿತು. ಮನೆಯ ವಾತಾವರಣ-ದಲ್ಲಿನ ಸಣ್ಣ ಬದಲಾವಣೆಯೂ ಮಕ್ಕಳ ಮನಃಪರಿ-ವರ್ತನೆಯಲ್ಲಿ ದೊಡ್ಡ ಪರಿಣಾಮವನ್ನು ತರಬಲ್ಲದು ಎಂಬುದು ಅರ್ಥವಾಯಿತು. ಬರೀ ಶಿಕ್ಷೆಯಿಂದ ಶಿಕ್ಷಣವನ್ನು ನೀಡಲಾಗದು, ಪೂರಕ ಸನ್ನಿವೇಶವನ್ನು ಒದಗಿಸಿಯೂ ಶಿಕ್ಷಣದ ಮೂಲ ಆಶಯವಾದ 'ವರ್ತನೆಯಲ್ಲಿನ ಬದಲಾವಣೆ'ಯನ್ನು ತರಲು ಸಾಧ್ಯ.

ಹೌದು, ಮಕ್ಕಳಿರುವುದೇ ಹಾಗೆ. ಅವರೆಂದಿಗೂ ಉತ್ಸಾಹದ ಬುಗ್ಗೆ. ಅವರ ಪಾಲಿಗೆ ಆಟದ ಬಯಲೇ ವಿಶ್ವ-ವಿದ್ಯಾಲಯ. ಅವರ ಪ್ರತಿ ನಡೆಯಲ್ಲಿಯೂ ಕಲಿಕೆಯಿದೆ, ಅನುಕರಣೆ-ಸ್ವಂತಿಕೆ ಮೇಳೈಸಿದ ಸೃಜನಶೀಲ ಕಲೆಯಿದೆ. ಯಾವುದೂ ಅವರಿಗೆ ಅಸ್ಪೃಶ್ಯವಲ್ಲ, ಹಿಂಜರಿಕೆ ಎಂಬುದಿಲ್ಲ, ಭೇದಭಾವದ ಹಂಗಿಲ್ಲ, ಮೋಸ ಗೊತ್ತಿಲ್ಲ, ಅದಕ್ಕೇ ಅವರು ನಡೆದಾಡುವ ದೇವರು. ಪೂರಕ ವಾತಾವರಣದಲ್ಲಿ ಬೆಳೆದರೆ ಅವರೆಂದಿಗೂ ವರ, ಭವಿಷ್ಯದ ಸಂಪನ್ಮೂಲ. ಆದರೆ ಇತ್ತೀಚಿನ ಕೆಲವು ನಿದರ್ಶನಗಳು ಹೇಳುವ ಕತೆಯೇ ಬೇರೆ. ಸಾವಿರಾರು ಕೋಟಿ ವಹಿವಾಟಿನ ಉದ್ಯಮಿಯ ಶವಸಂಸ್ಕಾರಕ್ಕೆ ವಿದೇಶದಲ್ಲಿದ್ದ ಹೆತ್ತಮಕ್ಕಳೇ ಗೈರಾಗಿದ್ದು, ಒಂಟಿಯಾಗಿ ವಾಸಿಸುತ್ತಿದ್ದ ತಾಯಿಜೀವವೊಂದರ ಅಸ್ಥಿಪಂಜರವು ಎರಡು ವರ್ಷಗಳ ನಂತರ ಮನೆಯಲ್ಲಿ ಸಿಕ್ಕಿದ್ದು, ಅಸಂಖ್ಯ ಹೆತ್ತ ಜೀವಗಳುಬೆಳೆದುನಿಂತ ಮಕ್ಕಳ ಕಾಳಜಿಯಿಂದ ದೂರವಾಗಿರುವುದು... ಹೀಗೆ. ಬೆಳೆಯುತ್ತಿದ್ದಂತೆ ಮಕ್ಕಳೇಕೆ ಕಾಳಜಿ, ಜವಾಬ್ದಾರಿ ಮರೆತು ಸಂವೇದನಾ ಶೂನ್ಯರಾಗುತ್ತಿದ್ದಾರೆ, ಭಾವಹೀನರಾಗುತ್ತಿದ್ದಾರೆ... ಯೋಚಿಸಬೇಕಿದೆ.

ಕುಟುಂಬ ಕಿರಿದಾದಷ್ಟೂ ಬೆಳೆಯುವ ಮಗುವಿನ ಒತ್ತಡಗಳು ಹೆಚ್ಚುತ್ತವೆ. ತುಂಬು ಕುಟುಂಬದಲ್ಲಿ ಮಗು ಸಹಸದಸ್ಯರೊಂದಿಗೆ ಕಲೆತು, ಬೆರೆತು ಕಲಿಯುವುದು ಬಹಳಷ್ಟು. ಅವರಲ್ಲೊಂದು ಭದ್ರತಾ ಭಾವ ಬೆಳೆಸುವ ಅವಕಾಶ ಅಲ್ಲಿರುತ್ತದೆ. ಮಕ್ಕಳಿಗೆ ಮನೆಯ ಹಿತ್ತಲಲ್ಲಿ ಹೂಗಿಡಗಳನ್ನು ಬೆಳೆಯುವ ಹವ್ಯಾಸ ರೂಢಿಯಾದರೆ ಗಿಡದ ಪಾಲನೆ, ಪೋಷಣೆಯೊಟ್ಟಿಗೆ ಪ್ರಕೃತಿಯ ಪಾಠವೂ ದೊರಕುತ್ತದೆ. ಸಾಕುಪ್ರಾಣಿಗಳೂ ಬದುಕಿನ ಆರ್ದ್ರತೆಯನ್ನು ಆರದಂತೆ ಕಾಯ್ದಿಡಲು ಸಹಕಾರಿ. ಈಗೆಲ್ಲಾ ಪಟ್ಟಣದಲ್ಲಿ ಬಹುತೇಕರಿಗೆ ಮರಗಿಡಗಳ ಸಂಗವೂ ಕಷ್ಟ. ಅಂತಹ ಸಂದರ್ಭದಲ್ಲಿ ಮಕ್ಕಳನ್ನು ಸಮೀಪದ ಮೈದಾನ, ಉದ್ಯಾನ, ಗದ್ದೆ-ತೋಟ, ನದಿದಂಡೆಯ ನಡಿಗೆಗಾದರೂ ಕರೆದೊಯ್ಯುವುದು ಸೂಕ್ತ ಮತ್ತು ಅಗತ್ಯ. ಬಂಧುಮಿತ್ರರೊಂದಿಗೆ ಕುಟುಂಬದ ಸದಸ್ಯರು ಆಗಾಗ ಸೇರುವುದು ಮತ್ತು ಮನೆಗಳಿಗೆ ಅವರನ್ನು ಆಹ್ವಾನಿಸುವುದೂ ಇವತ್ತಿನ ಧಾವಂತದ ಬದುಕಿನ ಶುಷ್ಕ ವಾತಾವರಣವನ್ನು ನೀಗಲು ಅತ್ಯವಶ್ಯಕ.



ಮನೆಯಲ್ಲಿ ಹಿರಿಯರಿಲ್ಲ. ಬಿಡುವಿರದ ಅಮ್ಮನಿಗೆ ದಣಿದುಬಂದ ಮಗುವನ್ನು ಓದುವ ರೂಮಿಗಟ್ಟುವ ಅವಸರ. ಕಾರ್ಯದೊತ್ತಡ ಮತ್ತು ಸಮಯಾಭಾವದ ನೆಪವೊಡ್ಡಿ ಮಕ್ಕಳೊಂದಿಗೆ ಮುಕ್ತವಾಗಿ ಮಾತಾಡದೆ ತನ್ನಪಾಡಿಗೆ ತಾನು ಮುಗುಮ್ಮಾಗುವ ಅಪ್ಪನದ್ದು ಮಾನಸಿಕವಾಗಿ ದೂರವಿರುವ ಅಸ್ಪಷ್ಟ ಪಾತ್ರ. ಹಾಗಾಗಿ, ಮೊದಲು ಬದಲಾಗಬೇಕಿರುವುದು ಬದಲಾವಣೆ ಬಯಸುವ ಹಿರಿಯರೇ ವಿನಾ ಮಕ್ಕಳಲ್ಲ. ತಾವು ಕೈಯಲ್ಲಿ ಮೊಬೈಲು, ಟಿ.ವಿ. ರಿಮೋಟ್‌ಗಳನ್ನು ಹಿಡಿದು, ಮಕ್ಕಳು ಮಾತ್ರ ಪುಸ್ತಕ ಹಿಡಿದಿರಬೇಕೆಂದು ಹಲುಬುವುದು ಸರಿಯಲ್ಲ. ಪೋಷಕರೇ ಅವರಿಷ್ಟದ ದಾರಿಯ ಮೊದಲ ಪಯಣಿಗರಾಗಬೇಕು. ಕಾರ್ಯದೊತ್ತಡದ ನಡುವೆ ಬಾಂಧವ್ಯ ಬೆಳೆಸುವ, ಮನಸು ಅರಳಿಸುವ ಹವ್ಯಾಸ-ಗಳನ್ನು ಜೊತೆಜೊತೆಯಾಗಿ ಕೈಗೊಳ್ಳಬೇಕು. ಮಕ್ಕಳು ಹಿಂಬಾಲಿಸುತ್ತಾರಷ್ಟೇ.

ಕವಿ ಟ್ಯಾಗೋರರು ಹೇಳುವಂತೆ, 'ಬರೀ ಮಾಹಿತಿ ನೀಡುವುದೇ ಶಿಕ್ಷಣವಲ್ಲ, ನಮ್ಮ ಸುತ್ತಮುತ್ತಲಿನ ಎಲ್ಲದರ ಜತೆ ಸಾಮರಸ್ಯದಿಂದ ಬಾಳ್ವೆ ನಡೆಸುವುದನ್ನು ಕಲಿಸುವುದೇ ಮಹೋನ್ನತ ಶಿಕ್ಷಣ'. ತಾಜಾ ಹರಿಯುವ ನದಿಯಂತೆ ಮಗುವಿನ ಮನಸ್ಸೂ ಒತ್ತಡಮುಕ್ತ ನಿರಾಳ ಬದುಕಿಗೆ ಹಂಬಲಿಸುತ್ತದೆ. ಸುತ್ತಲಿನ ಗಾಳಿ-ಬೆಳಕನ್ನು ಹೀರಿ ತಿಳಿಯಾಗುತ್ತದೆ. ಅತಿನಿರೀಕ್ಷೆಗಳ ಸಂಕೋಲೆಗಳನ್ನು ಸಡಿಲಿಸಿ, ತಲೆಭಾರವನ್ನು ಇಳಿಸಿ ಮಗುವನ್ನು ಮುಕ್ತವಾಗಲು ಬಿಟ್ಟಾಗಷ್ಟೇ ಅದಕ್ಕೆ ಅರಿವಿನ ದಾರಿ ತೆರೆದುಕೊಳ್ಳುತ್ತದೆ.

ವಾಚಕರ ವಾಣಿ

ಉದ್ಯೋಗ ಮೀಸಲಾತಿ: ಮುಂಜಾಗ್ರತೆ ಅಗತ್ಯ

ರಾಜ್ಯದ ಖಾಸಗಿ ಕಂಪನಿಗಳಲ್ಲಿ ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ನೀಡುವ ಸರ್ಕಾರದ ನಡೆಗೆ ಸಂಬಂಧಿಸಿದಂತೆ ಉದ್ಯಮ ವಲಯದ ಕೆಲವರು ವ್ಯಕ್ತಪಡಿಸಿದ ಅಭಿಪ್ರಾಯ ಕಂಡು ಸಖೇದಾಶ್ಚರ್ಯವಾಯಿತು. ಕನ್ನಡಿಗರಲ್ಲಿ ಬುದ್ಧಿವಂತರಿಲ್ಲ, ಅವರಿಗೆ ವೃತ್ತಿಪರ ತರಬೇತಿ ನೀಡಿ ಎನ್ನುವವರೊಬ್ಬರು, ಕನ್ನಡಿಗರಲ್ಲಿ ಪ್ರತಿಭಾನ್ವಿತರಿಲ್ಲ ಎನ್ನುವವರು ಮತ್ತೊಬ್ಬರು... ಹಾಗಿದ್ದರೆ ಮತ್ತೇಕೆ ಇಲ್ಲಿ ಬಂದು ತಮ್ಮ 'ಕಂಪನಿ' ತೆರೆದದ್ದು ಎಂದು ಕೇಳಬೇಕಾದೀತು. ಕರ್ನಾಟಕದಲ್ಲಿ ಇವೆಲ್ಲವೂ ಒದಗುತ್ತವೆಂದು ಬಂದರೋ ಅಥವಾ ಇಲ್ಲಿನ ಜನ ದಡ್ಡರೆಂದು ಬಂದರೋ ಸ್ಪಷ್ಟಪಡಿಸುವರೇ? ಇಲ್ಲಿನ ನೆಲ, ಜಲ, ವಿದ್ಯುತ್‌ನಂತಹವುಗಳ ಉಪಯೋಗ ಪಡೆಯುತ್ತಾ ನಮ್ಮನ್ನೇ ದಡ್ಡರೆಂದು ಬಹಿರಂಗವಾಗಿ ಹೀಯಾಳಿಸುವವರಲ್ಲಿ ಕನ್ನಡಿಗರೂ ಇರುವುದು ದುರಂತದ ಪರಮಾವಧಿಯೇ ಸೈ.

ಸರ್ಕಾರ ಈ ಬಗ್ಗೆ ಕಠಿಣ ನಿಲುವು ಪ್ರದರ್ಶಿಸಬೇಕು. ಈ ಉದ್ದೇಶಿತ ಕಾನೂನಿಗೆ ಸಂಬಂಧಿಸಿದಂತೆ 'ಕಂಪನಿ'ಗಳು ಕೋರ್ಟ್‌ಗೆ ಹೋಗದಂತೆ, ಹೋದರೂ ಅದರಲ್ಲಿ ಸರ್ಕಾರದ ನಿಲುವಿಗೆ ಸೋಲುಂಟಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಈಗಿನಿಂದಲೇ ಪ್ರಾರಂಭಿಸಬೇಕು. ಕೈಗಾರಿಕಾ ಹಾಗೂ ಕಾರ್ಮಿಕ ಸಚಿವರು ಈ ಕುರಿತು ದೃಢ ಹೆಜ್ಜೆಗಳನ್ನು ಇಡಬೇಕು.

ಚಂದ್ರಶೇಖರ್ ಎನ್. ಸಿರಿವಂತೆ, ಸಾಗರ

ಮಳೆಯನ್ನು ಶಪಿಸುವುದು ಮೂರ್ಖತನ

ಕರಾವಳಿ ಭಾಗದ ಅನೇಕ ಕಡೆಗಳಲ್ಲಿ ವರುಣನ ಆರ್ಭಟದಿಂದ ಗುಡ್ಡ ಕುಸಿತ, ನೆರೆಹಾವಳಿ, ಭತ್ತದ ಗದ್ದೆಗಳ ನಾಶ, ಭೂಕುಸಿತ, ಮನೆಯೊಳಗೆ ನೀರು ಬರುವುದು, ಸೇತುವೆ ಧ್ವಂಸದಂತಹ ಹತ್ತು ಹಲವು ದುರಂತಗಳು ದಿನನಿತ್ಯ ವರದಿ-ಯಾಗುತ್ತಿವೆ. ವಾಸ್ತವದಲ್ಲಿ ಇದಕ್ಕೆಲ್ಲಾ ವರುಣನೊಬ್ಬನೇ ಕಾರಣನೇ ಅಥವಾ ಬೇರೆ ಕಾರಣಗಳು ಇವೆಯೇ ಎಂಬುದನ್ನು ಅವಲೋಕಿಸಬೇಕಲ್ಲವೇ? ರಸ್ತೆ ವಿಸ್ತರಣೆಗೆ ಸಂಬಂಧಿಸಿದಂತೆ ಅವೈಜ್ಞಾನಿಕ ಕಾಮಗಾರಿಗಳು, ಸಾವಿರಾರು ಎಕರೆ ಅರಣ್ಯ ನಾಶ, ಒಂದಿಂಚು ಜಾಗವನ್ನೂ ಬಿಡದೆ ಮನೆ ಕಟ್ಟುವುದು, ಒಳಚರಂಡಿ ನಿರ್ವಹಣೆ ಕೊರತೆಯಂತಹ ಮುಂಜಾಗ್ರತಾ ಕ್ರಮಗಳ ವೈಫಲ್ಯದ ಫಲ ಇದಾಗಿದೆ. ಅದನ್ನೆಲ್ಲ ಪರಿಗಣಿಸದೆ, ಎಲ್ಲದಕ್ಕೂ ಮಳೆಯನ್ನು ಶಪಿಸುವುದು ಮೂರ್ಖತನ. ಹಿಂದಿನ ದಶಕಕ್ಕೆ ಹೋಲಿಸಿದರೆ ಈಗ ಕರಾವಳಿಯಲ್ಲಿ ಮೊದಲಿನಷ್ಟು ಮಳೆಯಿಲ್ಲ. ಆದರೆ ಮೊದಲಿಗಿಂತಲೂ ಹೆಚ್ಚು ಸಮಸ್ಯೆಗಳು ಕಂಡುಬರುತ್ತಿವೆ. ಹಿಂದಿನ ಹಲವು ವರ್ಷಗಳಿಂದ ಉತ್ತರ ಭಾರತದ ಕಣಿವೆ ರಾಜ್ಯಗಳಲ್ಲಿ ಸಂಭವಿಸುತ್ತಿದ್ದ ಭೂಕುಸಿತದಂತಹ ಪ್ರಕರಣಗಳು ಈಗ ಇಲ್ಲಿ ಘಟಿಸುತ್ತಿವೆ. ಅಭಿವೃದ್ಧಿಯ ಹೆಸರಿನಲ್ಲಿ ಪ್ರಕೃತಿ ನಾಶ ಮಾಡುವುದನ್ನು ಇನ್ನಾದರೂ ಬಿಡದಿದ್ದರೆ, ಇಂತಹ ಪ್ರಕರಣಗಳು ಮರುಕಳಿಸುತ್ತಲೇ ಇರುತ್ತವೆ.

ಸುರೇಂದ್ರ ಪೈ, ಭಟ್ಕಳ

ಆಡಂಬರದ ಮದುವೆ: ವಿವಿಧ ಆಯಾಮ

ಇತ್ತೀಚೆಗೆ ನಡೆದ ಮುಕೇಶ್ ಅಂಬಾನಿ ಅವರ ಪುತ್ರನ ವೈಭವೋಪೇತ ಮದುವೆಗೆ ಸಾವಿರಾರು ಕೋಟಿ ರೂಪಾಯಿ ಖರ್ಚಾಗಿದೆ ಎಂಬ ಮಾತು ಕೇಳಿಬರುತ್ತಿದೆ. ಈ ಬಗ್ಗೆ ಪರ, ವಿರೋಧದ ಚರ್ಚೆಗಳು ಜೋರಾಗಿ ನಡೆಯುತ್ತಿವೆ. ಎಲ್ಲರಿಗೂ ತಮ್ಮ ಜೀವನದಲ್ಲಿ ಸಾರ್ವಜನಿಕವಾಗಿ ಆಚರಿಸಬಹುದಾದ ಕಾರ್ಯಕ್ರಮಗಳು ಬರುವುದು ಮದುವೆ, ಮುಂಜಿ, ಗೃಹಪ್ರವೇಶದಂತಹ ಬೆರಳೆಣಿಕೆಯಷ್ಟು ಸಂದರ್ಭಗಳಲ್ಲಿ ಮಾತ್ರ. ಅವರವರ ಸಾಮರ್ಥ್ಯಕ್ಕೆ ಅನುಗುಣವಾಗಿ ಎಲ್ಲರೂ ಆಚರಿಸುತ್ತಾರೆ. ಸರಳವಾಗಿ ಆಚರಿಸಿಕೊಳ್ಳುವ ಚಿಂತನೆಯ ಜೊತೆಗೆ ಮತ್ತೊಂದು ಮಗ್ಗುಲಲ್ಲಿ ಸಹ ಇದನ್ನು ನೋಡಬೇಕು. ಅಂಬಾನಿ ಅವರು ಸಾವಿರಾರು ಕೋಟಿ ಖರ್ಚು ಮಾಡಿದ್ದರಿಂದ ಅಡುಗೆಯವರು, ಬಟ್ಟೆಯವರು, ಅಲಂಕಾರ ಮಾಡುವವರು, ವಿಡಿಯೊದವರು, ವಸತಿಗೃಹಗಳವರು ಸೇರಿದಂತೆ ಸಾವಿರಾರು ಜನರಿಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಕೆಲಸ ದೊರಕಿದೆ. ತೆರಿಗೆ ರೂಪದಲ್ಲಿ ಸರ್ಕಾರದ ಖಜಾನೆಗೂ ಹಣ ಸೇರಿದೆ. ಹಣ ಎಂಬುದು ಚಲಾವಣೆಗೆ ಬಂದರಷ್ಟೇ ಅದಕ್ಕೂ ಬೆಲೆ. ಹಾಗಾಗಿ, ಅಂಬಾನಿ ವ್ಯಯಿಸಿದ್ದು ಸರಿಯಿದೆ. ಹಾಗೆಂದು ಸಾಮರ್ಥ್ಯ ಇಲ್ಲದವರು ಸಹ ಮೈತುಂಬ ಸಾಲ ಮಾಡಿಕೊಂಡು ಆಡಂಬರಕ್ಕೆ ಮೊರೆ ಹೋಗಬಾರದು. ಹಾಸಿಗೆ ಇದ್ದಷ್ಟೇ ಕಾಲು ಚಾಚಬೇಕು. ಅಂಬಾನಿ ಹಾಸಿಗೆ ಉದ್ದವಿದ್ದು ಕಾಲು ಚಾಚಿದ್ದಾರೆ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ರಕ್ತಸಂಬಂಧ ಮೀರಿದ ಮಾನವೀಯ ನಡೆ

ಪ್ರತಿಭಾವಂತ ನಿರ್ಮಾಪಕ, ನಿರ್ದೇಶಕ ಹಾಗೂ ರಂಗಕರ್ಮಿ ಸದಾನಂದ ಸುವರ್ಣ ತೀರಿಕೊಂಡಿದ್ದಾರೆ. ಕಡೆಯ ದಿನಗಳಲ್ಲಿ ವೃದ್ಧಾಶ್ರಮಕ್ಕೆ ಸೇರಿಸುವ ಕೆಲವು ವರ್ಷಗಳ ಮೊದಲು ಅವರನ್ನು ಸರಿಸುಮಾರು 12 ವರ್ಷಗಳ ಕಾಲ ಜತನದಿಂದ ನೋಡಿಕೊಂಡ ಒಂದು ಕುಟುಂಬದ ಕುರಿತು ಇಲ್ಲಿ ಸ್ಮರಿಸಿಕೊಳ್ಳದಿದ್ದರೆ, ಕಾಲಗರ್ಭದಲ್ಲಿ ಈ ಸಂಗತಿ ಹಾಗೆಯೇ ಉಳಿದುಹೋಗಿ ಬಿಡಬಹುದು. ಅವಿವಾಹಿತರಾಗಿಯೇ ಉಳಿದಿದ್ದ ಸುವರ್ಣ ಅವರನ್ನು ನೋಡಿಕೊಳ್ಳಲು ಅವರ ನೆರವಿಗೆ ಯಾರೂ ಇರಲಿಲ್ಲ. ಆಗ ಮಂಗಳೂರಿನ ಕೊಟ್ಟಾರ ಚೌಕಿಯ ಅವರಿದ್ದ ಮನೆಯ ಮೊದಲ ಅಂತಸ್ತಿನ ಮನೆಗೆ ಹಿರಿಯ ಕವಿಗಳೂ ಜಾನಪದ ವಿದ್ವಾಂಸರೂ ಆದ ವಿ.ಗಾ.ನಾಯಕರು ಬಾಡಿಗೆಗೆ ಬಂದಿದ್ದರು. ನಾಯಕರ ಏಕೈಕ ಪುತ್ರಿ ಡಾ. ಸೀತಾಲಕ್ಷ್ಮಿ ಕರ್ಕಿಕೋಡಿ ಅವರು ಸುವರ್ಣ ಅವರ ಪಾಲಿಗೆ ತಾಯಿಯಾಗಿ, ಮಗಳಾಗಿ ಅವರ ಸೇವೆಗೆ ನಿಂತರು. ಲೇಖಕಿ ಹಾಗೂ ಪತ್ರಕರ್ತೆಯಾಗಿ ಅವಿರತ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಸೀತಾ ತಮ್ಮ ವಯೋವೃದ್ಧ ತಾಯಿತಂದೆಯೊಂದಿಗೆ ಸುವರ್ಣ ಅವರನ್ನೂ ನೋಡಿಕೊಂಡರು. ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ಪ್ರತಿದಿನವೂ ಅವರ ಊಟೋಪಚಾರ, ಔಷಧೋಪಚಾರವನ್ನು ಮಾಡುತ್ತಿದ್ದರು.

ಮುಂದೊಂದು ದಿನ ಸೀತಾ ಅನಿರೀಕ್ಷಿತವಾಗಿ ಅನಾರೋಗ್ಯಕ್ಕೆ ಈಡಾಗಿ, ಕೆಲವೇ ದಿನಗಳಲ್ಲಿ ಮೆದುಳಿನ ಕ್ಯಾನ್ಸರ್‌ನಿಂದ ತೀರಿಕೊಂಡರು. ಸುವರ್ಣ ಹಾಗೂ ನಾಯಕ ದಂಪತಿಗೆ ಈ ಆಘಾತದಿಂದ ಚೇತರಿಸಿಕೊಳ್ಳಲು ಆಗಲಿಲ್ಲ. ಮನೆಯ ತುಂಬಾ ಓಡಾಡಿಕೊಂಡಿದ್ದ ಮುದ್ದುಮಗಳನ್ನು ಕಳೆದುಕೊಂಡ ನೋವಿನಲ್ಲಿ ಅವರು ಅಕ್ಷರಶಃ ವಿಲವಿಲ ಒದ್ದಾಡಿದರು. ಮಗಳ ನೆನಪಿನ ಹಿಂಸೆಯನ್ನು ಸಹಿಸಿಕೊಳ್ಳಲಾರದೆ ನಾಯಕ ದಂಪತಿ ಅಲ್ಲಿನ ಮನೆ ಬಿಟ್ಟು ಹೊರಟಾಗ ಸುವರ್ಣ ಅವರು 'ನನ್ನನ್ನು ಒಬ್ಬಂಟಿಯಾಗಿ ಬಿಟ್ಟು ಹೋಗಬೇಡಿ' ಎಂದು ಅವರನ್ನು ಕೋರಿಕೊಂಡು ಕಣ್ಣೀರಿಟ್ಟರಂತೆ. ಆದರೆ ಅವರು ಅಲ್ಲಿಂದ ಹೊರಡುವುದು ಅನಿವಾರ್ಯವಾಗಿತ್ತು. ಸಾವಿನ ಕೊನೆಯ ದಿನಗಳಲ್ಲಿ ಹಾಸಿಗೆ ಹಿಡಿದಿದ್ದ ಸುವರ್ಣ ಅವರನ್ನು ನೋಡಲು ಯಾರೇ ಹೋದರೂ 'ನೀವು ನನ್ನ ಮಗಳು ಸೀತಾಲಕ್ಷ್ಮಿನಾ?' ಎಂದು ಕೇಳುತ್ತಿದ್ದರಂತೆ. ಆತ್ಮೀಯರಾಗಿದ್ದ ವಿ.ಗ. ನಾಯಕರನ್ನು ಕಾಣಲು ನಾನು ಆಗಾಗ ಸುವರ್ಣ ಅವರ ಮನೆಗೆ ಹೋಗುತ್ತಿದ್ದೆ. ಅವರ ಸಾವಿನಿಂದ ನಾಯಕ ದಂಪತಿ ಮತ್ತಷ್ಟು ಕುಸಿದುಹೋಗಿದ್ದಾರೆ. ಪ್ರೀತಿ, ವಿಶ್ವಾಸ, ಮಾನವೀಯತೆಯ ದ್ಯೋತಕವಾಗಿ ಈ ಪ್ರಕರಣ ಮಾದರಿಯಾಗಿ ಉಳಿಯುತ್ತದೆ.

ಸರ್ಫ್ರಾಜ್ ಚಂದ್ರಗುತ್ತಿ, ಸಾಗರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್: ಕಾಲಮಿತಿ ಸಡಿಲಿಕೆಗೆ ಶಿಫಾರಸು

ರಾಜ್ಯಗಳ ಬೊಕ್ಕಸಕ್ಕೆ ಹೊರೆ?

ಜಿಎಸ್‌ಟಿ ವಂಚನೆ ಪ್ರಕರಣಗಳು (2023ರ ಡಿಸೆಂಬರ್ ಅಂತ್ಯಕ್ಕೆ)

ರಾಜ್ಯ	ಪ್ರಕರಣಗಳು
ಮಹಾರಾಷ್ಟ್ರ	2,716
ಗುಜರಾತ್	2,589
ಹರಿಯಾಣ	1,123
ಪಶ್ಚಿಮ ಬಂಗಾಳ	1,098
ತಮಿಳುನಾಡು	715
ಕರ್ನಾಟಕ	673
ರಾಜಸ್ಥಾನ	655
ಉತ್ತರ ಪ್ರದೇಶ	616
ಮಧ್ಯಪ್ರದೇಶ	530
ತೆಲಂಗಾಣ	501
ಕೇರಳ	467
ಅಸ್ಸಾಂ	413
ದೆಹಲಿ	407
ಛತ್ತೀಸಗಢ	351
ಜಾರ್ಖಂಡ್	340
ಬಿಹಾರ	210
ಆಂಧ್ರಪ್ರದೇಶ	184
ಪಂಜಾಬ್	138
ಒಡಿಶಾ	130
ಅರುಣಾಚಲ ಪ್ರದೇಶ	125
ಜಮ್ಮು ಮತ್ತು ಕಾಶ್ಮೀರ	104
ಹಿಮಾಚಲ ಪ್ರದೇಶ	83
ಮೇಘಾಲಯ	65
ತ್ರಿಪುರಾ	76
ಗೋವಾ	70
ಉತ್ತರಾಖಂಡ	42
ನಾಗಾಲ್ಯಾಂಡ್	42
ಪುದುಚೇರಿ	32
ಚಂಡೀಗಢ	30
ದಮನ್, ದಿಯು	26
ಸಿಕ್ಕಿಂ	16
ಮಣಿಪುರ	15
ಮಿಜೋರಾಂ	5
ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು	0
ಲಡಾಖ್	0
ಲಕ್ಷದ್ವೀಪ	0

• ಕೆ.ಎಚ್. ಓಬಳೇಶ್

ಜಿಎಸ್‌ಟಿ ಮಂಡಳಿಯು ತನ್ನ 53ನೇ ಸಭೆಯಲ್ಲಿ ವರ್ತಕರು ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಪಡೆಯುವ ಕಾಲಮಿತಿಯ ಸಡಿಲಿಕೆಗೆ ಶಿಫಾರಸು ಮಾಡಿದೆ. ತಯಾರಕರು, ವ್ಯಾಪಾರಿಗಳು ಮತ್ತು ಸೇವಾ ಪೂರೈಕೆದಾರರಿಗೆ ಅನುಕೂಲ ಕಲ್ಪಿಸಲು ಜಿಎಸ್‌ಟಿ ಕಾಯ್ದೆ 2017ರ ಸೆಕ್ಷನ್ 16(4)ಕ್ಕೆ ತಿದ್ದುಪಡಿಯನ್ನೂ ಪ್ರಸ್ತಾಪಿಸಿದೆ. ಆದರೆ, ಈ ಶಿಫಾರಸು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಬೊಕ್ಕಸಕ್ಕೆ ಹೊರೆಯಾಗಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ...



ದೇಶದ ಪರೋಕ್ಷ ತೆರಿಗೆ ವ್ಯವಸ್ಥೆಯನ್ನು 'ವ್ಯಾಪಾರಿ ಸ್ನೇಹಿ'ಗೊಳಿಸಲು 2017ರ ಜುಲೈ 1ರಂದು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಜಾರಿಗೆ ಬಂದಿತು. ದೇಶೀಯ ತೆರಿಗೆಗಳ ಸರಳೀಕರಣ ಮತ್ತು ಏಕರೂಪಗೊಳಿಸುವುದು ಇದರ ಮೂಲ ಉದ್ದೇಶ. ತೆರಿಗೆ ಆದಾಯ ಹೆಚ್ಚಿಸುವ ಜೊತೆಗೆ, ಆರ್ಥಿಕತೆಯಲ್ಲಿನ ನ್ಯೂನತೆ ಸರಿಪಡಿಸುವ ಬಹುದೊಡ್ಡ ನಿರೀಕ್ಷೆಯನ್ನೂ ಹೊಂದಲಾಗಿತ್ತು.

ಏಳು ವರ್ಷಗಳ ಅವಧಿಯಲ್ಲಿ ತೆರಿಗೆ ಸಂಗ್ರಹದಲ್ಲಿ ಶೇ 0.72ರಿಂದ (ಜಿಎಸ್‌ಟಿ ಪೂರ್ವ) ಶೇ 1.22ರಷ್ಟು (2018-2023) ಹೆಚ್ಚಳವಾಗಿದೆ. ಜಿಎಸ್‌ಟಿ ಪರಿಹಾರ ಮೊತ್ತದ ಹೊರತಾಗಿ ರಾಜ್ಯಗಳ ಆದಾಯದಲ್ಲಿ ಶೇ 1.15ರಷ್ಟು ಏರಿಕೆಯಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಜಿಎಸ್‌ಟಿ ಬಹುಹಂತದ ತೆರಿಗೆ ವ್ಯವಸ್ಥೆ. ಪ್ರತಿ ಮೌಲ್ಯ ಸೇರ್ಪಡೆಯ ಮೇಲೆ ಹಾಗೂ ಮಾರಾಟದ ಪ್ರತಿ ಹಂತದಲ್ಲಿ ತೆರಿಗೆ ವಿಧಿಸಲಾಗುತ್ತದೆ. ಕಚ್ಚಾ ಸಾಮಗ್ರಿಗಳ ಖರೀದಿಯಿಂದ ಹಿಡಿದು ಉತ್ಪಾದನೆ, ತಯಾರಾದ ಸರಕುಗಳ ದಾಸ್ತಾನು, ಸಗಟು ಮತ್ತು ಚಿಲ್ಲರೆ ಮಾರಾಟದ ಮೂಲಕ ಯಾವುದೇ ಸರಕು ಗ್ರಾಹಕರ ಕೈ ಸೇರುವವರೆಗೂ ವಿತ್ತೀಯ ಮೌಲ್ಯ ಸೇರ್ಪಡೆಯಾಗುತ್ತದೆ.

ಉದಾಹರಣೆಗೆ ಕಂಪನಿಯೊಂದು ಬಿಸ್ಕತ್ ತಯಾರಿಸುತ್ತದೆ ಎಂದಿಟ್ಟುಕೊಳ್ಳಿ. ಇದಕ್ಕಾಗಿ ಸಕ್ಕರೆ, ಹಿಟ್ಟು ಮತ್ತು ಇತರೆ ಪದಾರ್ಥಗಳನ್ನು ಖರೀದಿಸುತ್ತದೆ. ಹಿಟ್ಟು ಮತ್ತು ಸಕ್ಕರೆ ಬೆರೆಸಿ ಬಿಸ್ಕತ್‌ಗಳನ್ನು ತಯಾರಿಸುವಾಗ ಒಳಹರಿವಿನ ಮೌಲ್ಯ ಏರಿಕೆಯಾಗುತ್ತದೆ. ಅವುಗಳನ್ನು ದಾಸ್ತಾನು ಏಜೆಂಟ್‌ಗೆ ಮಾರಾಟ ಮಾಡಲಾಗುತ್ತದೆ. ಆತ ಅವುಗಳನ್ನು ದೊಡ್ಡ ಬಾಕ್ಸ್‌ಗಳಲ್ಲಿ ಪ್ಯಾಕಿಂಗ್ ಮಾಡಿ ಲೇಬಲ್ ಅಂಟಿಸುತ್ತಾನೆ. ಆಗ ಬಿಸ್ಕತ್‌ಗಳಿಗೆ ಮತ್ತೊಂದು ಮೌಲ್ಯ ಸೇರ್ಪಡೆಯಾಗುತ್ತದೆ.

ಬಳಿಕ, ಆ ಏಜೆಂಟ್ ಚಿಲ್ಲರೆ ವ್ಯಾಪಾರಿಗಳಿಗೆ ಮಾರಾಟ ಮಾಡುತ್ತಾನೆ. ಆ ವ್ಯಾಪಾರಿಗಳು ಸಣ್ಣ ಪ್ರಮಾಣದ ಪ್ಯಾಕ್‌ಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಿ ಅದರ ಮೌಲ್ಯ ಹೆಚ್ಚಿಸುತ್ತಾರೆ. ಈ ಮೌಲ್ಯದ ಸೇರ್ಪಡೆ ಮೇಲೆ ಜಿಎಸ್‌ಟಿ ವಿಧಿಸಲಾಗುತ್ತದೆ. ಸರಕು ಮತ್ತು ಸೇವೆಗಳ ಈ ವರ್ಗೀಕರಣ, ಮರುವರ್ಗೀಕರಣದಂತಹ ಸಂಕೀರ್ಣತೆಯು ಗೋಜಲಾಗಿದೆ. ಆದರೆ, ತೆರಿಗೆ ನೆಲೆಯ ವಿಸ್ತರಣೆಯಲ್ಲಿ ಜಿಎಸ್‌ಟಿ ಸಹಕಾರಿಯಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ.

ಏನಿದು ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್?

ವರ್ತಕರು ತೆರಿಗೆ ಪಾವತಿಸಿದ ಬಳಿಕ ಉತ್ಪನ್ನ ಖರೀದಿಸುತ್ತಾರೆ. ಅದನ್ನು ವಹಿವಾಟು ಮಾಡುವಾಗ ತೆರಿಗೆ ಪಾವತಿಸಿದರೆ ಹಿಂದಿನ ತೆರಿಗೆ ಮೊತ್ತವನ್ನು ಕ್ಲೇಮು ಮಾಡಿಕೊಳ್ಳಲು ಅವಕಾಶವಿದೆ. ಇದಕ್ಕೆ ಹೂಡುವಳಿ ತೆರಿಗೆ ಜಮೆ (ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್) ಎಂದು ಕರೆಯಲಾಗುತ್ತದೆ. ಒಂದೇ ಉತ್ಪನ್ನಕ್ಕೆ ಎರಡು ಬಾರಿ ತೆರಿಗೆ ಪಾವತಿಸಬಾರದು ಎಂಬುದು ಸರ್ಕಾರದ ಉದ್ದೇಶ.

ಪ್ರತಿ ಹಂತದಲ್ಲೂ ಹೂಡುವಳಿ ತೆರಿಗೆ ಜಮೆಗೆ ಅವಕಾಶ ಸಿಗಲಿದೆ ಎಂದು ಜಿಎಸ್‌ಟಿ ಜಾರಿಯ ಆರಂಭದಲ್ಲಿ ಹೇಳಲಾಗಿತ್ತು. ಸರಕು ಮತ್ತು ಸೇವೆಗಳು ಅಗ್ಗವಾಗಲಿವೆ ಎಂದು ಸರ್ಕಾರವು ಜನರಿಗೆ ಪರೋಕ್ಷವಾಗಿ ತಿಳಿವಳಿಕೆ ನೀಡಿತ್ತು. ಅಂತಹ ಚಮತ್ಕಾರವೇನೂ ನಡೆದಿಲ್ಲ. ಅಂದ ಹಾಗೆ, ಸರಕು ಮತ್ತು ಸೇವೆಗಳ ಬೆಲೆ ಎಂದಿಗೂ ಕಡಿಮೆಯಾಗಿಲ್ಲ. ತಯಾರಕರು, ವ್ಯಾಪಾರಿಗಳು ಮತ್ತು ಸೇವಾ ಪೂರೈಕೆದಾರರ ಜೇಬಿಗೆ ಹೂಡುವಳಿ ತೆರಿಗೆ ಜಮೆಯಾಗುತ್ತಿದೆ ಅಷ್ಟೇ.

ಶ್ರೀಮಂತರಿಗೆ ಹೋಲಿಸಿದರೆ ಬಡವರು ಮತ್ತು ಕೆಳ ಮಧ್ಯಮ ವರ್ಗದ ಜನರು ಹೆಚ್ಚಿನ ಪ್ರಮಾಣದಲ್ಲಿ ಪರೋಕ್ಷ ತೆರಿಗೆ ಪಾವತಿಸುತ್ತಾರೆ. ಸಿರಿವಂತರು ಪ್ರತಿದಿನದ ಬಳಕೆಗಾಗಿ ತಾವು ಗಳಿಸಿದ ಒಟ್ಟು ಆದಾಯದಲ್ಲಿ ಸಣ್ಣ ಭಾಗವನ್ನಷ್ಟೇ ಸರಕು ಮತ್ತು ಸೇವೆಗೆ ವಿನಿಯೋಗಿಸುತ್ತಾರೆ. ಬಡವರದ್ದು ಇದಕ್ಕೆ ತದ್ವಿರುದ್ಧ ಸ್ಥಿತಿ. ಅವರ ಬಹುತೇಕ ಆದಾಯವು ಜಿಎಸ್‌ಟಿ ಒಳಗೊಂಡಿರುವ ಸರಕು ಮತ್ತು ಸೇವೆಯ ಮೇಲೆ ವಿನಿಯೋಗವಾಗುತ್ತದೆ. ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಅವರ ಮೇಲೆಯೇ ಜಿಎಸ್‌ಟಿಯ 'ಹೊಣೆ-ಹೊರೆ' ಹೆಚ್ಚು.

ಅವಾಂತರ ಸೃಷ್ಟಿಸಿದ ಶಿಫಾರಸು

ಪರೋಕ್ಷ ತೆರಿಗೆಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಸುಧಾರಣಾ ಕ್ರಮಗಳನ್ನು ಕೈಗೊಳ್ಳುವುದು ಜಿಎಸ್‌ಟಿ ಮಂಡಳಿಯ ಜವಾಬ್ದಾರಿ. ಇದಕ್ಕೆ ಅನುಗುಣವಾಗಿ ಸರ್ಕಾರಕ್ಕೆ ಶಿಫಾರಸುಗಳನ್ನು ಮಾಡುತ್ತದೆ. ಕೇಂದ್ರ ಹಣಕಾಸು ಸಚಿವರು ಮಂಡಳಿಯ ಅಧ್ಯಕ್ಷರಾಗಿದ್ದರೆ, ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಸೇರಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಹಣಕಾಸು ಸಚಿವರು ಸದಸ್ಯರಾಗಿರುತ್ತಾರೆ.

ಎಂಟು ತಿಂಗಳ ಬಳಿಕ ಇತ್ತೀಚೆಗೆ ಮಂಡಳಿಯ 53ನೇ ಸಭೆ ನಡೆಯಿತು. 2017-18, 2018-19, 2019-20 ಹಾಗೂ 2020-21ನೇ ಆರ್ಥಿಕ ವರ್ಷಗಳಿಗೆ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಪಡೆಯುವ ಕಾಲಮಿತಿಯ ಸಡಿಲಿಕೆಗೆ ಮಂಡಳಿಯು ಶಿಫಾರಸು ಮಾಡಿದೆ. ತಯಾರಕರು, ವ್ಯಾಪಾರಿಗಳು ಮತ್ತು ಸೇವಾ ಪೂರೈಕೆದಾರರಿಗೆ ಅನುಕೂಲ ಕಲ್ಪಿಸಲು ಕೇಂದ್ರ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ 2017ರ ಸೆಕ್ಷನ್ 16(4)ಕ್ಕೆ ತಿದ್ದುಪಡಿಯನ್ನೂ ಪ್ರಸ್ತಾಪಿಸಿದೆ. ಆದರೆ, ಈ ಶಿಫಾರಸು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಬೊಕ್ಕಸಕ್ಕೆ ಭಾರಿ ಪೆಟ್ಟು ನೀಡಲಿದೆ ಎಂದು ಹಣಕಾಸು ತಜ್ಞರು ಹೇಳುತ್ತಾರೆ.

ರಾಜಸ್ವ ಸಂಗ್ರಹಕ್ಕೆ ತೊಡಕಾಗುವ ಮಂಡಳಿಯ ಈ ಶಿಫಾರಸು ಕುರಿತು ಸಭೆಯಲ್ಲಿ ಪಾಲ್ಗೊಂಡಿದ್ದ ರಾಜ್ಯಗಳ ಹಣಕಾಸು ಸಚಿವರು ಚಕಾರ ಎತ್ತಿಲ್ಲ. ಒಂದು ವೇಳೆ ಶಿಫಾರಸು ಅನುಷ್ಠಾನಗೊಂಡರೆ ಸೂಚಿಸಿರುವ ಈ ಆರ್ಥಿಕ ವರ್ಷಗಳಿಗೆ ಸಂಬಂಧಿಸಿದಂತೆ ತೆರಿಗೆ ಮರುಪಾವತಿ (ರೀಫಂಡ್) ಮಾಡುವುದು ರಾಜ್ಯಗಳಿಗೆ ದೊಡ್ಡ ಆರ್ಥಿಕ ಹೊರೆಯಾಗಲಿದೆ. ಅದರಲ್ಲೂ ಸಣ್ಣ ರಾಜ್ಯಗಳ ಹಣಕಾಸಿನ ಸ್ಥಿತಿ ಅಯೋಮಯವಾಗಲಿದೆ.

ರಾಜ್ಯಮಟ್ಟದಲ್ಲಿ ವಾಣಿಜ್ಯ ತೆರಿಗೆ ಅಧಿಕಾರಿಗಳು ಆಡಿಟ್ ವೇಳೆ ತೆರಿಗೆ ವ್ಯತ್ಯಾಸವನ್ನು ಪತ್ತೆ ಹಚ್ಚಿ ಸಂಬಂಧಪಟ್ಟ ಕಂಪನಿಗಳು, ಸಂಸ್ಥೆಗಳು, ವ್ಯಾಪಾರಿಗಳಿಗೆ ನೋಟಿಸ್ ನೀಡಿದ್ದಾರೆ. ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ವಂಚನೆಯನ್ನೂ ಬಯಲಿಗೆ ಎಳೆದು ತಪ್ಪಿತಸ್ಥರಿಂದ ತೆರಿಗೆ ವಸೂಲಿ ಮಾಡಿ, ರಾಜ್ಯಗಳ ಬೊಕ್ಕಸಕ್ಕೆ ರಾಜಸ್ವವನ್ನು ತುಂಬಿಸಿದ್ದಾರೆ.

ತೆರಿಗೆ ವ್ಯತ್ಯಾಸ ಸಂಬಂಧ ನೋಟಿಸ್ ಪಡೆದವರು ಜಿಎಸ್‌ಟಿ ಮೇಲ್ಮನವಿ ನ್ಯಾಯಮಂಡಳಿ ಮತ್ತು ನ್ಯಾಯಾಲಯಗಳಿಗೆ ಮೇಲ್ಮನವಿ ಸಲ್ಲಿಸುತ್ತಾರೆ. ಇಂತಹ ಸಾವಿರಾರು ಪ್ರಕರಣಗಳು ವಿವಿಧ ಹಂತದಲ್ಲಿ ವಿಚಾರಣೆಗೆ ಬಾಕಿ ಉಳಿದಿವೆ.

'ಹಾಗಾಗಿ, ಶಿಫಾರಸು ಜಾರಿಗೊಂಡರೆ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಕೋರಿ ಲಕ್ಷಾಂತರ ಅರ್ಜಿಗಳು ಸಲ್ಲಿಕೆಯಾಗಬಹುದು. ಈಗಾಗಲೇ, ಇಲಾಖೆ ತಿರಸ್ಕರಿಸಿರುವ ಅರ್ಜಿದಾರರು ಮತ್ತೆ ಅರ್ಜಿ ಸಲ್ಲಿಸುವ ಸಾಧ್ಯತೆಯಿದೆ. ಮರುಪಾವತಿ ಮಾಡದಿದ್ದರೆ ಅವರೆಲ್ಲರೂ ನ್ಯಾಯಾಲಯಗಳ ಮೆಟ್ಟಿಲೇರುತ್ತಾರೆ. ಇವುಗಳನ್ನು ಆಡಿಟ್ ಮಾಡಿ ಮರುಪಾವತಿ ಮಾಡುವುದರಲ್ಲಿಯೇ ತೆರಿಗೆ ಅಧಿಕಾರಿಗಳ ಕೆಲಸ ಮುಗಿದು ಹೋಗಲಿದೆ. ಸಿಬ್ಬಂದಿ ಕೊರತೆಯಿಂದ ಬಳಲುತ್ತಿರುವ ಇಲಾಖೆಗೆ ಇದು ಸವಾಲಾಗಲಿದೆ. ಜೊತೆಗೆ, ಮಾಸಿಕವಾರು ತೆರಿಗೆ ಸಂಗ್ರಹದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದ್ದು, ರಾಜ್ಯ ಖಜಾನೆಯು ಬಿಕ್ಕಟ್ಟಿಗೆ ಸಿಲುಕಲಿದೆ' ಎಂಬುದು ಆರ್ಥಿಕ ತಜ್ಞರ ಅಭಿಪ್ರಾಯ.

ಮತ್ತೊಂದೆಡೆ, ಸರ್ಕಾರಗಳು ಬೊಕ್ಕಸದಿಂದ ಸಾವಿರಾರು ಕೋಟಿ ರೂಪಾಯಿಗಳನ್ನು ವರ್ತಕರಿಗೆ ಮರುಪಾವತಿ ಮಾಡಬೇಕಿರುವುದರಿಂದ ಸಾರ್ವಜನಿಕ ವೆಚ್ಚದ ಪ್ರಮಾಣವೂ ಕಡಿಮೆಯಾಗಲಿದೆ. ಇದು ಅಭಿವೃದ್ಧಿಗೆ ಕಂಟಕವಾಗಲಿದ್ದು, ರಾಜ್ಯಗಳ ಜಿಡಿಪಿ ಬೆಳವಣಿಗೆಗೂ ತೊಡಕಾಗಲಿದೆ ಎಂದು ಹೇಳುತ್ತಾರೆ.

ಸದ್ಯ, ನಕಲಿ ಇನ್‌ವಾಯ್ಸ್‌ಗಳನ್ನು ಪತ್ತೆ ಹಚ್ಚುವುದೇ ಕೇಂದ್ರ ಮತ್ತು ರಾಜ್ಯಗಳಿಗೆ ಸವಾಲಾಗಿದೆ. 2023ರ ಡಿಸೆಂಬರ್ ಅಂತ್ಯಕ್ಕೆ ಜಿಎಸ್‌ಟಿ ಗುಪ್ತಚರ ಮಹಾನಿರ್ದೇಶನಾಲಯವು (ಡಿಜಿಜಿಐ) ದೇಶದಲ್ಲಿ ಒಟ್ಟು 14,597 ವಂಚನೆ ಪ್ರಕರಣಗಳನ್ನು ಪತ್ತೆ ಹಚ್ಚಿದೆ. ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ವಂಚನೆಯ ಮೊತ್ತ ₹1.98 ಲಕ್ಷ ಕೋಟಿ ಆಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯದ ವರದಿ ಹೇಳಿದೆ.

ಆಧಾರ: ಪಿಟಿಐ, ಕೇಂದ್ರ ಹಣಕಾಸು ಸಚಿವಾಲಯದ ವರದಿ, ಜಿಎಸ್‌ಟಿ ಗುಪ್ತಚರ ಮಹಾನಿರ್ದೇಶನಾಲಯ, ಲೋಕಸಭೆಯಲ್ಲಿ ಸಚಿವರ ಹೇಳಿಕೆ

ಸೆಕ್ಷನ್ 16(4) ಹೇಳುವುದೇನು?


ಕೇಂದ್ರ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ 2017ರ ಸೆಕ್ಷನ್ 16(4) ಅಡಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಪ್ರಯೋಜನ ಪಡೆಯಲು ಕಾಲಮಿತಿ ನಿಗದಿಪಡಿಸಲಾಗಿದೆ. 2017-18ರಿಂದ 2020-21ನೇ ಸಾಲಿಗೆ ಈ ಪ್ರಯೋಜನ ಪಡೆಯಲು ಆಯಾ ವರ್ಷದ ಸೆಪ್ಟೆಂಬರ್ 30 ಅಂತಿಮ ದಿನವಾಗಿತ್ತು. ಸರ್ಕಾರವು 2022ರಲ್ಲಿ ಇದಕ್ಕೆ ತಿದ್ದುಪಡಿ ತಂದು ನವೆಂಬರ್ 30ರ ಅಂತಿಮ ಗಡುವು ನಿಗದಿಪಡಿಸಿದೆ.

ಇನ್‌ವಾಯ್ಸ್ ಅಥವಾ ಡೆಬಿಟ್ ನೋಟ್‌ಗೆ ಸಂಬಂಧಿಸಿದಂತೆ ಅಥವಾ ವಾರ್ಷಿಕ ರಿಟರ್ನ್ಸ್ ಸಲ್ಲಿಸಿದ ಬಳಿಕ ಈ ನಿಗದಿಪಡಿಸಿದ ಅವಧಿ ಮೀರಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಪಡೆಯಲು ಈ ಸೆಕ್ಷನ್‌ನಡಿ ನಿರ್ಬಂಧ ಹೇರಲಾಗಿದೆ.

ಕಾಯ್ದೆ ಜಾರಿಯ ಆರಂಭದಿಂದಲೂ ಸೆಕ್ಷನ್ 16(4)ರ ಸಾಂವಿಧಾನಿಕ ಸಿಂಧುತ್ವವು ಚರ್ಚಾಸ್ಪದ ವಿಷಯವಾಗಿದೆ. ಈ ನಿಬಂಧನೆಯು ಸಂವಿಧಾನದ 19(1)(ಜಿ) (ವ್ಯಾಪಾರ, ವೃತ್ತಿ ಮತ್ತು ಉದ್ಯೋಗ ಸ್ವಾತಂತ್ರ್ಯದ ಹಕ್ಕು) ಹಾಗೂ 300(ಎ) ವಿಧಿಯ (ವ್ಯಕ್ತಿಯ ಖಾಸಗಿ ಆಸ್ತಿ ಕಸಿದುಕೊಳ್ಳಲು ರಾಜ್ಯವು ಸರಿಯಾದ ಕಾರ್ಯ ವಿಧಾನ ಹಾಗೂ ಕಾನೂನಿನ ಅಧಿಕಾರ ಅನುಸರಿಸಬೇಕು) ಉಲ್ಲಂಘನೆಯಾಗಿದೆ ಎಂಬುದು ವರ್ತಕರ ವಲಯದ ಗಂಭೀರ ಆರೋಪ.

ಹಲವು ವರ್ತಕರು 2021ರಲ್ಲಿ ಇದನ್ನು ಪ್ರಶ್ನಿಸಿ ಪಟ್ನಾ ಹೈಕೋರ್ಟ್‌ನ ಮೆಟ್ಟಿಲೇರಿದ್ದರು. ಇದನ್ನು ಕಡ್ಡಾಯಗೊಳಿಸಬಾರದು ಎಂದು ಕೋರಿದ್ದರು. 2023ರಲ್ಲಿ ಈ ಅರ್ಜಿಗಳ ಅಂತಿಮ ವಿಚಾರಣೆ ನಡೆಸಿದ ಹೈಕೋರ್ಟ್‌ನ ವಿಭಾಗೀಯ ಪೀಠವು, ಈ ಸೆಕ್ಷನ್‌ನ ಸಾಂವಿಧಾನಿಕ ಸಿಂಧುತ್ವವನ್ನು ಎತ್ತಿ ಹಿಡಿದಿದೆ.

ಜಿಎಸ್‌ಟಿ ವಂಚನೆ: ಯಾವ ವರ್ಷ ಎಷ್ಟು?



* ಡಿಸೆಂಬರ್‌ವರೆಗೆ

ರಾಜ್ಯಕ್ಕೆ ₹ 5,000 ಕೋಟಿ ಖೋತಾ?



ದೇಶದಲ್ಲಿಯೇ ಅತಿಹೆಚ್ಚು ಜಿಎಸ್‌ಟಿ ಸಂಗ್ರಹವಾಗುವ ರಾಜ್ಯಗಳ ಪೈಕಿ ಕರ್ನಾಟಕವು ಎರಡನೇ ಸ್ಥಾನದಲ್ಲಿದೆ. ಸರ್ಕಾರದ ಬಿಗಿಯಾದ ಕ್ರಮ ಮತ್ತು ವಾಣಿಜ್ಯ ತೆರಿಗೆ ಅಧಿಕಾರಿಗಳ ಶ್ರಮದಿಂದಾಗಿ ಮಾಸಿಕವಾರು ನಿರೀಕ್ಷಿತ ಗುರಿ ಸಾಧನೆಯಾಗುತ್ತಿದೆ. ಜಿಎಸ್‌ಟಿ ಮಂಡಳಿಯ ಶಿಫಾರಸು ಅನುಷ್ಠಾನಗೊಂಡರೆ ರಾಜ್ಯದ ಬೊಕ್ಕಸಕ್ಕೆ ಭಾರಿ ಪೆಟ್ಟು ಬೀಳುವ ಸಾಧ್ಯತೆಯಿದೆ.

2017-18ರಿಂದ 2020-21ರ ವರೆಗೆ ಸುಮಾರು ₹5 ಸಾವಿರ ಕೋಟಿಯನ್ನು ಮರುಪಾವತಿ ಮಾಡಬೇಕಾಗುತ್ತದೆ. ಈಗಾಗಲೇ, ವಿವಿಧ ಯೋಜನೆಗಳಿಗೆ ಹಣಕಾಸಿನ ಕೊರತೆ ಎದುರಿಸುತ್ತಿರುವ ಸರ್ಕಾರವು, ಮತ್ತಷ್ಟು ಆರ್ಥಿಕ ಮುಗ್ಗಟ್ಟಿಗೆ ಸಿಲುಕಲಿದೆ ಎಂದು ಹಣಕಾಸು ತಜ್ಞರು ಹೇಳುತ್ತಾರೆ.

ಸಿನಿ ಬಿಟ್ಸ್

ಆರು ಸಿನಿಮಾಗಳ ಧಮಾಕ!



ಮನಸ್ವಿ

ಈ ವಾರ ತೆರೆಗೆ

• ವಿದ್ಯಾರ್ಥಿ ವಿದ್ಯಾರ್ಥಿನಿಯರೇ

ಚಂದನ್ ಶೆಟ್ಟಿ ಪ್ರಮುಖ ಪಾತ್ರದಲ್ಲಿ ನಟಿಸಿರುವ 'ವಿದ್ಯಾರ್ಥಿ ವಿದ್ಯಾರ್ಥಿನಿಯರೇ' ಚಿತ್ರ ಇಂದು (ಜು.19) ತೆರೆ ಕಾಣುತ್ತಿದೆ. ಈಗಿನ ಯುವ ಸಮೂಹದ ಕುರಿತ ಕಥೆ ಹೊಂದಿರುವ ಚಿತ್ರವನ್ನು ಅರುಣ್ ಅಮುಕ್ತ ನಿರ್ದೇಶಿದ್ದಾರೆ.

ಸುಬ್ರಮಣ್ಯ ಕುಕ್ಕೆ ಮತ್ತು ಎ.ಸಿ ಶಿವಲಿಂಗೇಗೌಡ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ವಿಜೇತ್ ಕೃಷ್ಣ, ವಾಸು ದೀಕ್ಷಿತ್ ಸಂಗೀತ ನಿರ್ದೇಶನ, ಕುಮಾರ್ ಗೌಡ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಅಮರ್, ಭಾವನಾ, ಮಾನಸಿ, ವಿವಾನ್, ಭವ್ಯ, ರಘು ರಾಮನಕೊಪ್ಪ ಮುಂತಾದವರು ನಟಿಸಿದ್ದಾರೆ. ಬೆಂಗಳೂರು, ಮೈಸೂರು, ಮಂಗಳೂರು, ಚಿಕ್ಕಮಗಳೂರು ಮುಂತಾದೆಡೆಗಳಲ್ಲಿ ಚಿತ್ರೀಕರಣಗೊಂಡಿದೆ.

• ಹೆಜ್ಜಾರು

ಕಿರುತೆರೆ ಹೆಸರಾಂತ ನಿರ್ದೇಶಕ ಕೆ.ಎಸ್.ರಾಮಜಿ ಗಗನ ಎಂಟರ್‌ಪ್ರೈಸಸ್ ಮೂಲಕ ನಿರ್ಮಿಸಿ, ಗೀತ ಸಾಹಿತಿ ಹರ್ಷಪ್ರಿಯ ನಿರ್ದೇಶಿಸಿರುವ 'ಹೆಜ್ಜಾರು' ಚಿತ್ರ ಈ ವಾರ ತೆರೆಗೆ ಬರುತ್ತಿದೆ. ಭಗತ್ ಆಳ್ವಾ ಚಿತ್ರದ ನಾಯಕ. ನಾಯಕಿಯಾಗಿ ಶ್ವೇತ ಲೀಯೊನಿಲ್ಲಾ ಡಿಸೋಜಾ ಹಾಗೂ ಮೊದಲ ಬಾರಿಗೆ ನವೀನ್ ಕೃಷ್ಣ ಅವರು ವಿಲನ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಗೋಪಾಲಕೃಷ್ಣ ದೇಶಪಾಂಡೆ, ಅರುಣಾ ಬಾಲರಾಜ್, ಮುನಿರಾಜ್ ಮೊದಲಾದವರು ಚಿತ್ರದಲ್ಲಿದ್ದಾರೆ. ಅಪ್ಪ-ಮಗನ ಕಥೆಯನ್ನು ಹೊಂದಿರುವ ಸಿನಿಮಾದಲ್ಲಿ ಕಥೆ ಎರಡು ಟ್ರ್ಯಾಕ್‌ಗಳಲ್ಲಿ ಸಾಗುತ್ತದೆ ಎಂಬುದನ್ನು ಟ್ರೇಲರ್ ಹೇಳುತ್ತಿದೆ. ಮೇಲ್ನೋಟಕ್ಕೆ ಗೋಪಾಲಕೃಷ್ಣ ದೇಶಪಾಂಡೆ ಕಥೆಗೆ ತಿರುವು ನೀಡುವ ಪ್ರಬಲ ಪಾತ್ರದಲ್ಲಿ ಕಾಣಿಸಿಕೊಂಡಂತೆ ತೋರುತ್ತಿದೆ. 'ಲೂಸಿಯಾ' ಖ್ಯಾತಿಯ ಪೂರ್ಣಚಂದ್ರ ತೇಜಸ್ವಿ ಸಂಗೀತ, ಅಮರ್ ಗೌಡ ಕ್ಯಾಮೆರಾ ಕೈಚಳಕವಿದೆ. ಮಂಗಳೂರು, ಉಪ್ಪಿನಂಗಡಿ, ಗುರುವಾಯನಕೆರೆ ಹಾಗೂ ಮಲೆನಾಡಿನಲ್ಲಿ ಚಿತ್ರೀಕರಣ ಮಾಡಲಾಗಿದೆ.

• ನಾಟ್ ಔಟ್

ರಾಷ್ಟ್ರಕೂಟ ಪಿಕ್ಚರ್ಸ್ ಲಾಂಛನದಲ್ಲಿ ವಿ.ರವಿಕುಮಾರ್ ಹಾಗೂ ಶಂಶುದ್ದೀನ್.ಎ ನಿರ್ಮಿಸಿರುವ, ಅಂಬರೀಶ್ ಎಂ ನಿರ್ದೇಶನದ 'ನಾಟ್ ಔಟ್' ಚಿತ್ರ ಈ ವಾರ ಬಿಡುಗಡೆಯಾಗುತ್ತಿದೆ.ಅಜಯ್ ಪೃಥ್ವಿಗೆ ರಚನಾ ಇಂದರ್ ಜೋಡಿಯಾಗಿದ್ದಾರೆ. ರವಿಶಂಕರ್, ಕಾಕ್ರೋಜ್ ಸುಧಿ, ಗೋಪಾಲಕೃಷ್ಣ ದೇಶಪಾಂಡೆ, ಪ್ರಶಾಂತ್ ಸಿದ್ದಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಜ್ಯೂಡಾ ಸ್ಯಾಂಡಿ ಸಂಗೀತ ನಿರ್ದೇಶನ, ಹಾಲೇಶ್ ಛಾಯಾಚಿತ್ರಗ್ರಹಣ ಹಾಗೂ ಕೆ.ಎಂ.ಪ್ರಕಾಶ್ ಸಂಕಲನವಿದೆ.

• ಕಡಲೂರ ಕಣ್ಮಣಿ

ಪ್ರೇಮಕಥಾ ಹಂದರ ಹೊಂದಿರುವ 'ಕಡಲೂರ ಕಣ್ಮಣಿ' ಚಿತ್ರ ತೆರೆ ಕಾಣುತ್ತಿದೆ. ರಾಮ್ ಪ್ರಸನ್ನ ಹುಣಸೂರು ಕಥೆ ಬರೆದು ನಿರ್ದೇಶಿಸಿದ್ದಾರೆ. ಅರ್ಜುನ್ ನಗರಕರ್ ಚಿತ್ರದ ನಾಯಕ. ಕೊಳ ಶೈಲೇಶ್ ಆರ್ ಪೂಜಾರಿ, ಬಸವರಾಜ್ ಗಚ್ಚಿ ಬಂಡವಾಳ ಹೂಡಿದ್ದಾರೆ. ಮನೋಹರ್ ಅವರ ಛಾಯಾಚಿತ್ರಗ್ರಹಣವಿದೆ.

• ಬ್ಯಾಕ್ ಬೆಂಚರ್ಸ್

ಕಾಲೇಜು ಜೀವನದ ಕಥೆ ಹೊಂದಿರುವ ಮತ್ತೊಂದು ಚಿತ್ರ 'ಬ್ಯಾಕ್ ಬೆಂಚರ್ಸ್' ಕೂಡ ಇಂದೇ ತೆರೆಗೆ ಬರುತ್ತಿದೆ. ಬಿ.ಆರ್ ರಾಜಶೇಖರ್ ನಿರ್ದೇಶನ, ನಿರ್ಮಾಣದಲ್ಲಿ ಮೂಡಿ ಬಂದಿರುವ ಚಿತ್ರ. ರಂಜನ್, ಜತಿನ್ ಆರ್ಯನ್, ಆಕಾಶ್ ಎಂ.ಪಿ, ಶಶಾಂಕ್ ಸಿಂಹ, ಸುಚೇಂದ್ರ ಪ್ರಸಾದ್, ಅರವಿಂದ್ ಕುಪ್ಳೀಕರ್, ಮಾನ್ಯ ಗೌಡ, ಕುಂಕುಮ್ ಹೆಚ್ ಮುಂತಾದವರ ತಾರಾಗಣವಿದೆ. ನಕುಲ್ ಅಭಯಂಕರ್ ಸಂಗೀತ ನಿರ್ದೇಶನ, ಮನೋಹರ್ ಜೋಶಿ ಛಾಯಾಚಿತ್ರಗ್ರಹಣ, ರಂಜನ್ ಮತ್ತು ಅಮರ್ ಗೌಡ ಸಂಕಲನ ಈ ಚಿತ್ರಕ್ಕಿದೆ.

• ಹಿರಣ್ಯ

ರಾಜವರ್ಧನ್, ರಿಹಾನಾ ಜೋಡಿಯಾಗಿರುವ 'ಹಿರಣ್ಯ' ಚಿತ್ರ ಇಂದು ತೆರೆ ಕಾಣುತ್ತಿದೆ. ಪ್ರವೀಣ್ ಅವ್ಯುಕ್ತ್ ಈ ಚಿತ್ರ ನಿರ್ದೇಶಕರು. ಆ್ಯಕ್ಷನ್-ಥ್ರಿಲ್ಲರ್ ಜೊತೆಗೆ ತಾಯಿ ಸೆಂಟಿಮೆಂಟ್ ಕಥಾಹಂದರ ಹೊಂದಿರುವ ಸಿನಿಮಾದಲ್ಲಿ ಬಿಗ್ ಬಾಸ್ ಖ್ಯಾತಿಯ ದಿವ್ಯಾ ಸುರೇಶ್ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಹುಲಿ ಕಾರ್ತಿಕ್, ಅರವಿಂದ ರಾವ್, ದಿಲೀಪ್ ಶೆಟ್ಟಿ ಮುಂತಾದವರು ಸಿನಿಮಾದ ಇತರ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ವೇದಾಸ್ ಇನ್ಫಿನಿಟಿ ಪಿಕ್ಚರ್ ನಿರ್ಮಿಸುತ್ತಿರುವ ಈ ಸಿನಿಮಾಕ್ಕೆ ಯೋಗೇಶ್ವರನ್ ಆರ್. ಛಾಯಾಚಿತ್ರಗ್ರಹಣವಿದೆ. ಚಿತ್ರದ ಹಾಡುಗಳಿಗೆ ಜ್ಯೂಡಾ ಸ್ಯಾಂಡಿ ಸಂಗೀತ ಸಂಯೋಜನೆಯಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net


ಗುಂಡಣ್ಣ



ಛೆ, ಅದೇ ಚಪಾತಿ, ಅದೇ ಆಲೂಗೆಡ್ಡೆ

ನುಡಿ ಬೆಳಗು





ಪ್ರೊ.ಎಂ. ಕೃಷ್ಣೇಗೌಡ

ಅವನೊಬ್ಬ ಹೊಸದಾಗಿ ಕೆಲಸಕ್ಕೆ ಸೇರಿದ್ದ ಕಾಲೇಜ್ ಮೇಷ್ಟ್ರು. ಆ ಕಾಲೇಜು ಊರ ಹೊರಗಿದ್ದುದರಿಂದ ಎಲ್ಲ ಮೇಷ್ಟ್ರುಗಳೂ ಮಧ್ಯಾಹ್ನದ ಊಟವನ್ನು ಮನೆಯಿಂದಲೇ ತರುತ್ತಿದ್ದರು. ಊಟದ ವಿರಾಮದಲ್ಲಿ ಎಲ್ಲರೂ ಸ್ಟಾಫ್ ರೂಮಿನಲ್ಲೇ ಡಬ್ಬಿ ಬಿಚ್ಚಿ ಊಟ ಮಾಡುತ್ತಿದ್ದರು.
ಈ ಡಬ್ಬಿ ಊಟದ ಬಳಗಕ್ಕೆ ಸಹಜವಾಗೇ ಈ ಹೊಸ ಮೇಷ್ಟ್ರೂ ಸೇರಿಕೊಂಡ.

ಹೀಗೇ ಮೂರ್ನಾಲ್ಕು ದಿನ ಆದಮೇಲೆ ಒಂದು ದಿನ ಮೇಷ್ಟ್ರು ಡಬ್ಬಿ ಬಿಚ್ಚಿದ. 'ಛೆ, ಈವತ್ತೂ ಅದೇ ಚಪಾತಿ, ಅದೇ ಆಲೂಗೆಡ್ಡೆ ಪಲ್ಯ...' ಅಂತ ಡಬ್ಬಿಯನ್ನೊಮ್ಮೆ ಕುಕ್ಕಿದ. ಆಮೇಲೆ ಅದನ್ನು ಸುಮ್ಮನೆ ತಿಂದ.

ಮರುದಿನ ಮತ್ತೆ ಸ್ಟಾಫ್ ರೂಮಿನಲ್ಲಿ ಡಬ್ಬಿ ಬಿಚ್ಚಿದ. ಆಶ್ಚರ್ಯ... ಮತ್ತೆ ಅದೇ ಉದ್ಗಾರ. 'ಛೆ, ಈವತ್ತೂ ಅದೇ ಚಪಾತಿ, ಅದೇ ಆಲೂಗೆಡ್ಡೆ ಪಲ್ಯ' ಅಂತ ಡಬ್ಬಿಯನ್ನು ಕುಕ್ಕಿದ. ಮತ್ತೆ ತಿಂದ.

ಮತ್ತೆ ಅದರ ಮಾರನೆಯ ದಿನ ಕೂಡಾ ಅದೇ ಪುನರಾವರ್ತನೆ ಆಯಿತು. ಅವನು ಡಬ್ಬಿ ಬಿಚ್ಚಿ 'ಛೆ, ಈವತ್ತೂ ಅದೇ ಚಪಾತಿ, ಅದೇ ಆಲೂಗೆಡ್ಡೆ ಪಲ್ಯ' ಅಂತ ಡಬ್ಬಿಯನ್ನು ಕುಕ್ಕಿದ. ಪಕ್ಕದಲ್ಲೇ ಕೂತಿದ್ದವನಿಗೆ ರೇಗಿಹೋಯಿತು.

ಅವನು ಹೇಳಿದ- 'ಏಯ್ ಅವಿವೇಕಿ, ನಿನಗೆ ಚಪಾತಿ, ಆಲೂಗೆಡ್ಡೆ ಪಲ್ಯ ಇಷ್ಟ ಇಲ್ಲ ಅಂದ್ರೆ ನಿನ್ನ ಹೆಂಡ್ತಿಗೆ ಬೇರೆ ಏನಾದರೂ ಮಾಡೋದಕ್ಕೆ ಹೇಳು. ಇಲ್ಲಿ ಬಂದು ಡಬ್ಬಿ ಕುಕ್ಕೋದು ತಪ್ಪುತ್ತೆ'.

ಹೊಸ ಮೇಷ್ಟ್ರು ಹೇಳಿದ- 'ಹೆಂಡ್ತಿ... ಯಾವ ಹೆಂಡ್ತಿ? ಯಾರ ಹೆಂಡ್ತಿ?'

'ಇನ್ನ್ಯಾರು ನಿನ್ನ ಹೆಂಡ್ತಿಗೇ ಹೇಳು, ಊಟಕ್ಕೆ ಬೇರೇನಾದರೂ ಮಾಡು ಅಂತ'.

ಅದಕ್ಕೆ ಆ ಮೇಷ್ಟ್ರು ಹೇಳಿದ- 'ಅಲ್ಲಯ್ಯಾ, ನನಗೆ ಮದುವೇನೇ ಆಗಿಲ್ಲ, ಹೇಳೂದಕ್ಕೆ ಹೆಂಡ್ತೀನ ಎಲ್ಲಿಂದ ತರಲಿ?'

'ಹಾಗಾದರೆ ನಿನ್ನ ಮನೆಯಲ್ಲಿ ಅಡುಗೆ ಮಾಡೋದು ಯಾರು?
'ಇನ್ನ್ಯಾರು? ನಾನೇ, ನಾನೇ ನನ್ನ ಮನೆಯಲ್ಲಿ ಅಡುಗೆ ಮಾಡೋದು...'

ಇದೇ ನಮ್ಮ ಬದುಕು. ನಾವೇ ಮಾಡೋದು, ನಾವೇ ತಿನ್ನೋದು. ಸುಮ್ಮನೆ ಪಾತ್ರೆ ಕುಕ್ಕುತ್ತೇವೆ, ತಲೆ ಚಚ್ಚಿಕೊಳ್ಳೇವೆ, ಅಷ್ಟೆ.

ಓಶೋ ಹೇಳುತ್ತಾರೆ- ನಿಮ್ಮ ಬದುಕಿನಲ್ಲಿ ನೀವು ಸದಾ ಗೋಳಾಡುತ್ತಿದ್ದರೆ ಅದೇ ನಿಮ್ಮ ಆಯ್ಕೆ. ನೀವು ಸಂತೋಷವಾಗಿ, ಆನಂದವಾಗಿ ಇರಬೇಕೆಂದರೂ ಅದು ನಿಮ್ಮ ಆಯ್ಕೆಯೇ. ನೀವು ಏನು ಮಾಡಿದ್ದೀರೋ, ಏನು ಮಾಡುತ್ತಿದ್ದೀರೋ, ಅದನ್ನೇ ನೀವೀಗ ಅನುಭವಿಸುತ್ತಿದ್ದೀರಿ. ಡಬ್ಬಿ ಕುಕ್ಕಿದರೆ ಏನೂ ಬದಲಾಗುವುದಿಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಜುಲೈ 19, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ತ್ರಯೋದಶಿ ಗಂ. 19-42 ನಕ್ಷತ್ರ: ಮೂಲ ಗಂ. 26-55 ಯೋಗ: ಐಂದ್ರ ಗಂ. 26-41 ಕರಣ: ಕೌಲವ ಗಂ. 08-19, ಕರ್ಕಾಟಕ ಮಾಸದ 03 ನೇ ದಿನ, ಮಳೆನಕ್ಷತ್ರ: ಪುನರ್ವಸು 4.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-16 ಸೂರ್ಯಾಸ್ತ : 06-57
ಮುಸ್ಲಿಂ ದಿನಾಂಕ : 12 ಮೊಹರಮ್
ಅದೃಷ್ಟ ಸಂಖ್ಯೆ : 2, 1

ಮೇಷ: ಕೌಟುಂಬಿಕ ವಿಷಯಗಳತ್ತ, ಅದರಲ್ಲೂ ಮಡದಿಯ ಆರೋಗ್ಯದ ವಿಚಾರದಲ್ಲಿ ಹೆಚ್ಚು ಗಮನಹರಿಸಿ. ವೃತ್ತಿಪರ ಸಾಧನೆಗಳಿಂದಾಗಿ ಸೂಕ್ತ ಸ್ಥಾನಮಾನ ತಾನಾಗಿಯೇ ಒದಗಿ ಬರಲಿದೆ.

ವೃಷಭ: ಮಾನಸಿಕವಾಗಿ ಕುಗ್ಗದೇ ಧೈರ್ಯದಿಂದ ಇರುವುದು ಮೂಲಮಂತ್ರವಾಗಿರಲಿ. ನೂತನ ವಾಹನ ಕೊಳ್ಳುವ ಆಲೋಚನೆಗಳು ಎದುರಾಗುವುದು. ಸ್ಥಳ ಬದಲಾದ ಕಾರಣ ನೀರಿನಿಂದ ಸೋಂಕು ಉಂಟಾಗಬಹುದು.

ಮಿಥುನ: ಪ್ರಿಯ ವ್ಯಕ್ತಿಯೊಂದಿಗೆ ವಿಚಾರ ವಿನಿಮಯ ಮಾಡಿಕೊಳ್ಳಲು ಸೂಕ್ತ ರೀತಿಯಲ್ಲಿ ಅವಕಾಶ ಸಿಗುವುದು. ಸಣ್ಣ ಕೈಗಾರಿಕೋದ್ಯಮದವರಿಗೆ ಸಹಕಾರ ದೊರೆಯಲಿದೆ. ಪವಿತ್ರ ವಸ್ತುಗಳನ್ನು ಗೌರವದಿಂದ ಕಾಣಿ.

ಕರ್ಕಾಟಕ: ಸಹೋದರರಲ್ಲಿನ ಕೋರ್ಟು ವ್ಯವಹಾರಗಳನ್ನು ರಾಜಿ ಅಥವಾ ಸಂಧಾನ ಮೂಲಕ ಬಗೆ ಹರಿಸಿಕೊಳ್ಳುವ ಪ್ರಯತ್ನ ಮಾಡಿ. ಒಂದು ಕೆಲಸವನ್ನು ಆಸಕ್ತಿಯಿಂದ ನಿರ್ವಹಿಸಿ.

ಸಿಂಹ: ಕೆಲಸಗಳನ್ನು ಇತರರು ಅತ್ಯಂತ ಅಚ್ಚುಕಟ್ಟಾಗಿ ಮಾಡುವುದರಿಂದಾಗಿ ಅವಲಂಬನೆ ಕಡಿಮೆಯಾಗುವುದು. ಬ್ಯಾಂಕಿನ ಸಾಲಗಳು ತೀರಿ ಮನೆಯಲ್ಲಿ ನೆಮ್ಮದಿಯ ಪರಿಸರ ಮೂಡಲಿದೆ.

ಕನ್ಯಾ: ಕಾರ್ಯರಂಗದಲ್ಲಿ ಮುನ್ನಡೆಗೆ ಸಹೋದ್ಯೋಗಿಗಳ ನಿರ್ಧಾರಗಳಿಂದ ಸಮಸ್ಯೆ ಇರುತ್ತದೆ. ಯೋಚಿಸಿ ಸ್ವಂತ ನಿರ್ಧಾರ ತೆಗೆದುಕೊಳ್ಳುವುದು ಒಳ್ಳೆಯದು. ಸರ್ಕಾರಿ ಉದ್ಯೋಗಸ್ಥರಿಗೆ ವರ್ಗಾವಣೆ ಸಂಭವವಿದೆ.

ತುಲಾ: ಸಹೋದರನಲ್ಲಿ ಮತ್ತು ನೆರೆಹೊರೆಯವರೊಂದಿಗೆ ಸೌಹಾರ್ದದಿಂದ ವರ್ತಿಸುವುದರಿಂದ ಸಂಬಂಧ ಉತ್ತಮಗೊಳ್ಳುವುದು. ಮಗನ ತಾಂತ್ರಿಕ ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಪ್ರಗತಿ ಕಂಡು ಮನೆಯವರಿಗೆ ಸಂತಸ.

ವೃಶ್ಚಿಕ: ಹೊಸ ವೃತ್ತಿಯ ವಿಚಾರವಾಗಿ ಉತ್ತಮ ಅವಕಾಶಗಳು ಬರಲಿವೆ. ಅದನ್ನು ಪ್ರಯೋಜನಾಕಾರಿಯಾಗಿ ಉಪಯೋಗಿಸಿಕೊಳ್ಳಿ. ಚಿನ್ನ ಮೊದಲಾದ ದುಬಾರಿ ಲೋಹಗಳಿಗೆ ಹಣ ವಿನಿಯೋಗ ಮಾಡುವಿರಿ.

ಧನು: ಕೆಲಸಗಳು ನಿಧಾನಗತಿಯಲ್ಲಿ ಸಾಗುವುದಕ್ಕೆ ಮನಸ್ಸಿಗೆ ಬೇಸರ ಉಂಟಾಗುವುದು. ಸುತ್ತಮುತ್ತಲಿನ ವಾತಾವರಣದಲ್ಲಿನ ಬದಲಾವಣೆಯ ಲಕ್ಷಣಗಳು ಕಣ್ಣಿಗೆ ಬೀಳಲಿದೆ. ಸಂತೋಷದಿಂದ ದಿನ ಕಳೆಯುವಿರಿ.

ಮಕರ: ಹಣಕಾಸಿನ ವ್ಯವಹಾರ ನಡೆಸುವವರು ತಮ್ಮ ನೂತನ ಯೋಜನೆಗಳನ್ನು ಇನ್ನೂ ಕೆಲವು ಕಡೆಯಲ್ಲಿ ವಿಸ್ತರಿಸಬಹುದು. ಗೆಳೆತನಕ್ಕೆ ಸಂಬಂಧಿಸಿದ ಒಂದು ಗುಪ್ತವಾದ ವಿಚಾರವು ಸೋರಿಕೆಯಾಗಬಹುದು.

ಕುಂಭ: ವಿದ್ಯಾರ್ಥಿಗಳಿಗೆ ಓದು ಅಥವಾ ಉದ್ಯೋಗದ ಆಯ್ಕೆ ವಿಚಾರದಲ್ಲಿ ಸ್ನೇಹಿತರಿಂದ ಸೂಕ್ತ ಸಲಹೆ ದೊರೆಯಲಿದೆ. ಸಹನಾಶೀಲರಾಗಿ ವರ್ತಿಸಿದಲ್ಲಿ ಪ್ರಯತ್ನಬಲಕ್ಕೆ ಸರಿಯಾದಂಥ ಯಶಸ್ಸು ಸಿಗುತ್ತದೆ.


ಮೀನ: ಅಧಿಕಾರಿಗಳ ಭೇಟಿಯಿಂದ ಕೆಲಸ ಕಾರ್ಯಗಳು ಏರು-ಪೇರಾಗುವುದು. ಹೊಸ ಬದುಕನ್ನು ಆರಂಭಿಸಲು ಅವಕಾಶದ ಬಾಗಿಲು ತೆರೆದಿದೆ. ಆತಂಕವು ದೂರವಾಗುತ್ತದೆ.

ಪದಬಂಧ 5746

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮಾದಕ ವಸ್ತು ಸೇವನೆಯಿಂದಾಗುವ ಜೊಂಪು (2)
3.ಕನ್ನಡಿಗರ ನಾಡು (4)
5.ಕುದುರೆಯನ್ನೇರುವ ಬಳೆ (3)
7.ಆಸ್ಪತ್ರೆಯನ್ನು ಹೀಗೂ ಹೇಳುವರು (4)
9.ಅಗ್ರಗಣ್ಯರೆಲ್ಲಾ ಪ್ರವೇಶಿದ ಕಾಡು (3)
10.ಹೆಚ್ಚಳವಾದುದನ್ನು ಹೀಗೆನ್ನಿ (3)
11.ನರಕಾಧಿಪತಿಯ ಕಿಂಕರ (4)
13.ಪಟಿಕ ಹಿಡಿದಿರುವ ಮೋಸಗಾರ (3)
15.ರಸಿಕತೆ ಇಲ್ಲದವನು (4)
16.ದುರಾಚಾರಿ ಇಲ್ಲಿದ್ದಾನೆ (2)

ಮೇಲಿಂದ ಕೆಳಕ್ಕೆ
2.ಹಳೆ ಸಾಮಾನುಗಳನ್ನು ಮಾರುವ ಅಂಗಡಿ (3)
3.ಕದಕ್ಕೆ ತಾಕಿಸಿರುವ ಕೆನ್ನೆ (3)
4.ಗುರುಗುಟ್ಟುತ್ತಿರುವ ಗಂಡು ಕುರಿ (3)
6.ಕಾರು ಇದ್ದರಷ್ಟೇ ಈ ದಯೆ! (3)
8.ಯಮನ ಹತ್ತಿರವಿರುವ ಜೋಡಿ (3)
9.ದಶಮ ಗ್ರಹ ಎನಿಸಿಕೊಂಡವನು! (3)
10.ಸ್ಲೇಟಿನ ಮೇಲೆ ಬರೆಯುವ ಸಾಧನ (3)
12.ಭಾಸ್ಕರ ಹುಟ್ಟಿರುವಾಗ ಕಳ್ಳ ಕಾಣಿಸಿದನಲ್ಲಾ! (3)
13.ಕಲೆಸಿದ ಗೋಧಿ ಹಿಟ್ಟು (3)
14.ಬಿಸಿಲು ಬಿದ್ದಾಗ ಕಾಣಿಸಿದ ಸಣ್ಣ ಕೊಂಬೆ (3)



5745ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅನುಪಮ 3.ಅಸುರ
4.ರಮಡೋಲು 6.ಸರ
8.ಮಂಡೂಕ 9.ವನಪಾಲಕ
11.ಕದನ 13.ನೆಪ
15.ಕ್ಷಮಾದಾನ
17.ದಡಾರ 18.ಗುಡಿಕಾರ

ಮೇಲಿಂದ ಕೆಳಕ್ಕೆ:
1.ಅರಸ 2.ಮರ
3.ಅಲ್ಪಜ್ಞ 5.ಲುಬ್ಧಕ 7.ರಸನ
8.ಮಂಠ 9.ವನ
10.ಲಲನೆ 11.ಕಟಾಕ್ಷ
12.ಕಮ್ಮಾರ 14.ಪದರ 16.ನಗು

ಸುಡೊಕು 6131

9			3		8		2	
8		6				5		
	5		4		6		7	
			1		2		4	
		9		3				
6			8		9	2		5
	8		6		1		9	
7		2		8		3		1
	6		2		3		5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ

6130 ಸುಡೊಕು

2	9	4	1	5	6	7	8	3
6	1	7	3	8	4	5	2	9
8	5	3	7	2	9	4	1	6
3	2	9	5	4	1	6	7	8
7	6	8	2	9	3	1	4	5
5	4	1	6	7	8	9	3	2
1	7	6	8	3	5	2	9	4
4	3	5	9	1	2	8	6	7
9	8	2	4	6	7	3	5	1

81 ಸಾವಿರ ದಾಟಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ಐ.ಟಿ, ತೈಲ ಮತ್ತು ಅನಿಲ, ಎಫ್‌ಎಂಸಿಜಿ ಷೇರುಗಳ ಖರೀದಿ ಹೆಚ್ಚಳದಿಂದಾಗಿ ಸೂಚ್ಯಂಕಗಳು ಏರಿಕೆ ದಾಖಲಿಸಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 626 ಅಂಶ ಏರಿಕೆ ಕಂಡು 81,343ರಲ್ಲಿ ಸ್ಥಿರಗೊಂಡಿತು. ವಹಿವಾಟಿನ ಒಂದು ಹಂತದಲ್ಲಿ 81,522 ಅಂಶ ತಲುಪಿ ಹೊಸ ಎತ್ತರಕ್ಕೇರಿತ್ತು.


ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 187 ಅಂಶ ಹೆಚ್ಚಳವಾಗಿ 24,800ರಲ್ಲಿ ವಹಿವಾಟು ಸ್ಥಿರವಾಯಿತು.

‘ದೇಶದ ಪ್ರಮುಖ ಐ.ಟಿ ಕಂಪನಿಗಳ ಜೂನ್ ತ್ರೈಮಾಸಿಕದ ಫಲಿತಾಂಶಗಳು ಹೂಡಿಕೆದಾರರಲ್ಲಿ ಉತ್ಸಾಹ ಹೆಚ್ಚಿಸಿವೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ (ಸಂಶೋಧನಾ ವಿಭಾಗ) ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ ಷೇರಿನ ಮೌಲ್ಯದಲ್ಲಿ ಶೇ 3.3ರಷ್ಟು ಏರಿಕೆಯಾಗಿದೆ. ಬಜಾಜ್ ಫಿನ್‌ಸರ್ವ್, ಇನ್ಫೊಸಿಸ್, ಮಹೀಂದ್ರ ಆ್ಯಂಡ್ ಮಹೀಂದ್ರ, ಟೆಕ್ ಮಹೀಂದ್ರ, ಹಿಂದುಸ್ತಾನ್ ಯೂನಿಲಿವರ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಎಚ್‌ಸಿಎಲ್ ಟೆಕ್ನಾಲಜೀಸ್ ಕಂಪನಿಗಳು ಹೆಚ್ಚು ಗಳಿಕೆ ಕಂಡಿವೆ.

ಏಷ್ಯನ್ ಪೇಂಟ್ಸ್, ಜೆಎಸ್‌ಡಬ್ಲ್ಯು ಸ್ಟೀಲ್, ಎನ್‌ಟಿಪಿಸಿ ಮತ್ತು ಅದಾನಿ ಪೋರ್ಟ್ಸ್ ಷೇರಿನ ಮೌಲ್ಯ ಇಳಿಕೆಯಾಗಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,613
ಇಂದಿನ ಅಂತ್ಯ	24,800
▲	187
ದಿನದ ಗರಿಷ್ಠ	24,837


ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಅರಸೀಕೆರೆ	₹10000-10000
ದಾವಣಗೆರೆ	₹7300-7300
ತಿಪಟೂರು	₹9100-9800
ತುರುವೇಕೆರೆ	₹7900-9580

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹570
12 ಕ್ಕೆ	₹75
ಮೈಸೂರು	
100ಕ್ಕೆ	₹573

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹225-439

ದ್ವಿತಳಿ (ಬಿ.ವಿ) ₹255-602

ಈ ವರ್ಷ ಶೇ 3.7ರಷ್ಟು ಪ್ರಗತಿ: ಫಿಕ್ಕಿ ಅಂದಾಜು

ಕೃಷಿ ಚಟುವಟಿಕೆ ಸದೃಢ

ಪ್ರಜಾವಾಣಿ ವಾರ್ತೆ



ನವದೆಹಲಿ: ಕಳೆದ ವರ್ಷ ದೇಶದ ಕೃಷಿ ವಲಯದ ಬೆಳವಣಿಗೆಯು ಶೇ 1.4ರಷ್ಟು ಕುಗ್ಗಿತ್ತು. ಪ್ರಸಕ್ತ ವರ್ಷ ಎಲ್‌ನಿನೊ ಪರಿಣಾಮ ತಗ್ಗಿದ್ದು, ವಾಡಿಕೆ ಪ್ರಮಾಣದಲ್ಲಿ ಮುಂಗಾರು ಮಳೆ ಸುರಿಯುವ ನಿರೀಕ್ಷೆಯಿದೆ. ಹಾಗಾಗಿ, ಈ ವರ್ಷ ಕೃಷಿ ವಲಯವು ಶೇ 3.7ರಷ್ಟು ಬೆಳವಣಿಗೆ ದಾಖಲಿಸಲಿದೆ ಎಂದು ಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಘ (ಫಿಕ್ಕಿ) ಅಂದಾಜಿಸಿದೆ.

2024–25ನೇ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಬೆಳವಣಿಗೆಯು ಶೇ 6.8ರಷ್ಟು ಹಾಗೂ ಎರಡನೇ ತ್ರೈಮಾಸಿಕದಲ್ಲಿ ಶೇ 7.2ರಷ್ಟು ಪ್ರಗತಿ ಕಾಣುವ ನಿರೀಕ್ಷೆಯಿದೆ. ಪೂರ್ಣ ವರ್ಷದಲ್ಲಿ ಶೇ 7ರಷ್ಟು ಬೆಳವಣಿಗೆ ದಾಖಲಿಸಲಿದೆ ಎಂದು ಗುರುವಾರ ಬಿಡುಗಡೆಯಾಗಿರುವ ಆರ್ಥಿಕ ಮುನ್ನೋಟದ ವರದಿ ತಿಳಿಸಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸೇವಾ ವಲಯವು ಶೇ 7.4ರಷ್ಟು ಹಾಗೂ ಕೈಗಾರಿಕಾ ವಲಯವು ಶೇ 6.7ರಷ್ಟು ಬೆಳವಣಿಗೆ ಕಾಣಲಿದೆ ಎಂದು ಹೇಳಿದೆ.

ಪ್ರಮುಖ ಕೈಗಾರಿಕೆಗಳು, ಬ್ಯಾಂಕಿಂಗ್ ಮತ್ತು ಹಣಕಾಸು ವಲಯದ ಅರ್ಥಶಾಸ್ತ್ರಜ್ಞರ ಅಭಿಪ್ರಾಯ ಆಧಾರದ ಮೇಲೆ ಈ ಸಮೀಕ್ಷಾ ವರದಿಯನ್ನು ಸಿದ್ಧಪಡಿಸಲಾಗಿದೆ.

2023–24ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಜಿಡಿಪಿಯು ಶೇ 8.2ರಷ್ಟು ದಾಖಲಾಗಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿ ಮತ್ತು ಏಷ್ಯಾ ಅಭಿವೃದ್ಧಿ ಬ್ಯಾಂಕ್, ಪ್ರಸಕ್ತ ಹಣಕಾಸು ವರ್ಷದಲ್ಲಿ ಭಾರತದ ಜಿಡಿಪಿಯು ಶೇ 7ರಷ್ಟು ಪ್ರಗತಿ ಕಾಣಲಿದೆ ಎಂದು ಅಂದಾಜಿಸಿವೆ.

ರೆಪೊ ದರ ಶೇ 0.50ರಷ್ಟು ಕಡಿತ?

ಪ್ರಸ್ತುತ ಭಾರತೀಯ ರಿಸರ್ವ್ ಬ್ಯಾಂಕ್‌ನ ರೆಪೊ ದರ ಶೇ 6.5ರಷ್ಟಿದೆ. ಪ್ರಸಕ್ತ ಹಣಕಾಸು ವರ್ಷದ ಅಂತ್ಯಕ್ಕೆ ಆರ್‌ಬಿಐ ರೆಪೊ ದರದಲ್ಲಿ ಶೇ 0.50ರಷ್ಟು ಕಡಿತಗೊಳಿಸುವ ಸಾಧ್ಯತೆಯಿದೆ ಎಂದು ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದ ಅರ್ಥಶಾಸ್ತ್ರಜ್ಞರು ಹೇಳಿರುವುದಾಗಿ ವರದಿ ತಿಳಿಸಿದೆ.

ಹಣದುಬ್ಬರದ ಏರಿಕೆ ಮೇಲೆ ಆರ್‌ಬಿಐ ನಿಗಾವಹಿಸಿದೆ. ನಿಗದಿತ ಮಿತಿಗೆ ತಲುಪಿದರೆ ರೆಪೊ ದರ ಇಳಿಸಲು ಮುಂದಾಗಲಿದೆ. ಹಾಗಾಗಿ, ಈ ಆರ್ಥಿಕ ವರ್ಷದ ದ್ವಿತೀಯಾರ್ಧದ ಬಳಿಕವಷ್ಟೇ ಈ ನಿಟ್ಟಿನಲ್ಲಿ ಕ್ರಮಕೈಗೊಳ್ಳುವ ಸಾಧ್ಯತೆಯಿದೆ ಎಂದು ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ.

ಹಣದುಬ್ಬರ ಶೇ 5ರಷ್ಟು ದಾಖಲು

ಪ್ರಸಕ್ತ ಹಣಕಾಸು ವರ್ಷದಲ್ಲಿ ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ (ಸಿಪಿಐ) ಚಿಲ್ಲರೆ ಹಣದುಬ್ಬರವು ಶೇ 4.4ರಿಂದ ಶೇ 5ರಷ್ಟು ದಾಖಲಾಗಲಿದೆ ಎಂದು ಫಿಕ್ಕಿ ವರದಿ ಹೇಳಿದೆ.

ಹಣದುಬ್ಬರದ ಮಧ್ಯಮಾವಧಿ ಪ್ರಮಾಣವನ್ನು ಶೇ 4.5ರಷ್ಟಕ್ಕೆ ನಿಗದಿಪಡಿಸಿದೆ.

ಹಣದುಬ್ಬರದ ಏರಿಕೆಯಲ್ಲಿ ಆಹಾರ ಪದಾರ್ಥಗಳ ಬೆಲೆ ಏರಿಕೆಯು ಪಾಲು ಹೆಚ್ಚಲಿದೆ. ಎರಡನೇ ತ್ರೈಮಾಸಿಕದ ವೇಳೆಗೆ ಮುಂಗಾರು ಆವಧಿಯಲ್ಲಿ ಬಿತ್ತನೆ ಯಾಗಿರುವ ಆಹಾರ ಪದಾರ್ಥಗಳು ಮಾರುಕಟ್ಟೆಗೆ ಪೂರೈಕೆಯಾಗಲಿವೆ. ಆಗ ಬೇಳೆಕಾಳು, ಹಣ್ಣುಗಳು, ಹಾಲಿನ ಬೆಲೆಯು ಇಳಿಕೆಯಾಗಲಿದೆ ಎಂದು ತಿಳಿಸಿದೆ.

ಮಿಲ್ಲಿಂಗ್ ಕೊಬ್ಬರಿ: ಮತ್ತೆ 7,500 ಟನ್ ಖರೀದಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ (ಎಂಎಸ್‌ಪಿ) ಮತ್ತೆ 7,500 ಟನ್ ಮಿಲ್ಲಿಂಗ್ ಕೊಬ್ಬರಿ (ಚೆಕ್ಕ ಚೆಕ್ಕ ತುಂಡು) ಖರೀದಿಸಲು ಕೇಂದ್ರ ಕೃಷಿ ಹಾಗೂ ರೈತರ ಕಲ್ಯಾಣ ಸಚಿವಾಲಯ ಗುರುವಾರ ಒಪ್ಪಿಗೆ ನೀಡಿದೆ.

ಪ್ರಸಕ್ತ ಋತುವಿನಡಿ ರಾಜ್ಯದಲ್ಲಿ ಮಿಲ್ಲಿಂಗ್ ಕೊಬ್ಬರಿಯ ಇಳುವರಿ 11,995 ಟನ್ ಆಗಿದೆ. ಪ್ರತಿ ಕ್ವಿಂಟಲ್‌ಗೆ ₹11,160 ಬೆಂಬಲ ಬೆಲೆ ನಿಗದಿಪಡಿಸಲಾಗಿದೆ. ಈ ಪೈಕಿ 2,999 ಟನ್ ಖರೀದಿಗೆ ಕೇಂದ್ರ ಸರ್ಕಾರ ಮಾರ್ಚ್‌ನಲ್ಲಿ ಒಪ್ಪಿಗೆ ನೀಡಿತ್ತು. ರಾಜ್ಯ ಸರ್ಕಾರವು ಈ ಸೌಲಭ್ಯವನ್ನು ಹಾಸನ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಿಗೆ ವಿಸ್ತರಿಸಿತ್ತು. ಅತಿ ಹೆಚ್ಚು ಕೊಬ್ಬರಿ ಬೆಳೆಯುವ ಜಿಲ್ಲೆಗಳಾದ ತುಮಕೂರು, ರಾಮನಗರ ಹಾಗೂ ಮಂಡ್ಯ ಈ ಸೌಲಭ್ಯದಿಂದ ವಂಚಿತವಾಗಿದ್ದವು.

ರೈಲ್ವೆ ಹಾಗೂ ಜಲಶಕ್ತಿ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರು ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ಹೊಸ ಪ್ರಸ್ತಾವ ಕಳುಹಿಸುವಂತೆ ತಿಳಿಸಿದ್ದರು. ತುಮಕೂರು, ಮಂಡ್ಯ, ರಾಮನಗರ, ಚಿತ್ರದುರ್ಗ, ಮೈಸೂರು, ಚಿಕ್ಕಮಗಳೂರು ಹಾಗೂ ಚಾಮರಾಜನಗರ ಜಿಲ್ಲೆಗಳಿಗೆ ಈ ಸೌಲಭ್ಯ ವಿಸ್ತರಿಸುವ ಸಲುವಾಗಿ ಖರೀದಿ ಮಿತಿಯನ್ನು 10 ಸಾವಿರ ಟನ್‌ಗೆ ಏರಿಸುವಂತೆ ರಾಜ್ಯ ಸರ್ಕಾರ ಜುಲೈ 10ರಂದು ಪ್ರಸ್ತಾವ ಸಲ್ಲಿಸಿತು. ರಾಜ್ಯದ ಪ್ರಸ್ತಾವನೆಗೆ ಕೂಡಲೇ ಅನುಮತಿ ನೀಡುವಂತೆ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರೊಂದಿಗೆ ಸೋಮಣ್ಣ ಮನವಿ ಮಾಡಿದರು. ಇದೀಗ ಕೇಂದ್ರ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಿದೆ. ‘ರಾಜ್ಯದ ರೈತರ ಹಿತಾಸಕ್ತಿಗೆ ಪೂರಕವಾಗಿ ಶೀಘ್ರವಾಗಿ ಕೇಂದ್ರ ಸರ್ಕಾರ ತ್ವರಿತಗತಿಯಲ್ಲಿ ತೀರ್ಮಾನ ಕೈಗೊಂಡಿದೆ’ ಎಂದು ಸೋಮಣ್ಣ ತಿಳಿಸಿದ್ದಾರೆ.



ವಿ.ಸೋಮಣ್ಣ

ಇನ್ಫೊಸಿಸ್‌ಗೆ ₹6,368 ಕೋಟಿ ಲಾಭ

ಬೆಂಗಳೂರು (ಪಿಟಿಐ/ಎಎಫ್‌ಪಿ): ದೇಶದ ಪ್ರಮುಖ ಐ.ಟಿ ಕಂಪನಿ ‘ಇನ್ಫೊಸಿಸ್’ 2024–25ನೇ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ₹6,368 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ₹5,945 ಕೋಟಿ ಲಾಭ ದಾಖಲಿಸಿತ್ತು. ಇದಕ್ಕೆ ಹೋಲಿಸಿದರೆ ಶೇ 7.1ರಷ್ಟು ಏರಿಕೆಯಾಗಿದೆ. ಶೇ 80ರಷ್ಟು ಹೆಚ್ಚು ಗಳಿಕೆಯು ವಿದೇಶಿ ಮಾರುಕಟ್ಟೆಯಿಂದ ಬಂದಿದೆ ಎಂದು ಕಂಪನಿಯು ಗುರುವಾರ ಷೇರುಪೇಟೆಗೆ ತಿಳಿಸಿದೆ.

2022–23ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹7,969 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಜೂನ್ ತ್ರೈಮಾಸಿಕದ ಲಾಭದಲ್ಲಿ ಶೇ 20ರಷ್ಟು ಕುಸಿದಿದೆ.

ಕಂಪನಿಯ ಬೆಳವಣಿಗೆಯ ಆಧಾರದ ಮೇಲೆ ಈ ವರ್ಷದಲ್ಲಿ ಹೊಸದಾಗಿ 20 ಸಾವಿರ ಪ್ರತಿಭಾವಂತರನ್ನು ನೇಮಕ ಮಾಡಿಕೊಳ್ಳಲಾಗುವುದು ಎಂದು ತಿಳಿಸಿದೆ.

ಈ ತ್ರೈಮಾಸಿಕದಲ್ಲಿ ಕಂಪನಿ 34 ಒಪ್ಪಂದಗಳನ್ನು ಮಾಡಿಕೊಂಡಿದ್ದು, ಇದರ ಮೌಲ್ಯ ₹34,288 ಕೋಟಿ ಆಗಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಕಾರ್ಯಾಚರಣೆ ಲಾಭದಲ್ಲಿ ಶೇ 22ರಷ್ಟು ಏರಿಕೆಯಾಗಲಿದೆ ಎಂದು ಅಂದಾಜಿಸಿದೆ.

ಕಳೆದ ವರ್ಷದ ಜೂನ್ ಅಂತ್ಯಕ್ಕೆ ಕಂಪನಿಯಲ್ಲಿ ಒಟ್ಟು 3.36 ಲಕ್ಷ ಉದ್ಯೋಗಿಗಳಿದ್ದರು. ಸದ್ಯ 3.15 ಲಕ್ಷಕ್ಕೆ ಇಳಿಕೆಯಾಗಿದೆ. ಕೆಲ ಹೊಸಬರಿಗೆ ಸಿಬ್ಬಂದಿ ಸ್ಥಳಾಂತರ ಸೂಚಿಸಿದ್ದರಿಂದ ಉದ್ಯೋಗಿಗಳು ಕಂಪನಿ ತೊರೆದಿದ್ದಾರೆ.

ಕನ್ನಡಿಗರಿಗೆ ಉದ್ಯೋಗ ನೀಡಲು ಬದ್ಧ: ಸಲೀಲ್

‘ಕರ್ನಾಟಕದಲ್ಲಿರುವ ಖಾಸಗಿ ಕಂಪನಿಗಳಲ್ಲಿ ಕನ್ನಡಿಗರಿಗೆ ಉದ್ಯೋಗದ ಮೀಸಲಾತಿ ನೀಡುವ ಸಂಬಂಧ ರಾಜ್ಯ ಸರ್ಕಾರ ರೂಪಿಸುವ ನಿಯಮಾವಳಿಗಳನ್ನು ಪಾಲಿಸಲು ಕಂಪನಿ ಸಿದ್ಧವಿದೆ’ ಎಂದು ಇನ್ಫೊಸಿಸ್‌ನ ಸಿಇಒ ಸಲೀಲ್ ಪರೇಖ್ ಹೇಳಿದ್ದಾರೆ.

ತ್ರೈಮಾಸಿಕ ಫಲಿತಾಂಶದ ಕುರಿತು ಬಿಡುಗಡೆಯ ಬಳಿಕ ಮಾತನಾಡಿದ ಅವರು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯಾವುದೇ ನಿರ್ಧಾರ ಕೈಗೊಂಡರೂ ಅದಕ್ಕೆ ಬೆಂಬಲ ನೀಡುವ ಮೂಲಕ ಕಂಪನಿಯು ಕಾರ್ಯ ನಿರ್ವಹಿಸಲಿದೆ ಎಂದರು.

ಕಂಪನಿಯು ರಾಜ್ಯ ಮತ್ತು ಕೇಂದ್ರ ಸರ್ಕಾರದ ನಿಯಮಾವಳಿಗಳ ಅನ್ವಯ ಕಾರ್ಯ ನಿರ್ವಹಣೆಗೆ ಯೋಜನೆ ರೂಪಿಸುತ್ತಿದೆ. ಕರ್ನಾಟಕ ರಾಜ್ಯ ಸರ್ಕಾರ ಯಾವ ನಿರ್ಧಾರ ಕೈಗೊಳ್ಳಲಿದೆ ಎಂಬುದನ್ನು ಎದುರು ನೋಡುತ್ತಿದ್ದೇವೆ. ಸರ್ಕಾರಗಳು ರೂಪಿಸುವ ಕಾಯ್ದೆ ಮತ್ತು ಮಾರ್ಗಸೂಚಿಗಳನ್ನು ಪಾಲಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

ಉದ್ಯಮಗಳ ಸೆಳೆಯಲು ಕೇರಳ ಹುನ್ನಾರ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಖಾಸಗಿ ಸಂಸ್ಥೆಗಳ ಉದ್ಯೋಗಗಳಲ್ಲೂ ಕನ್ನಡಿಗರಿಗೆ ಮೀಸಲಾತಿ ನಿಗದಿಪಡಿಸುವ ಕರ್ನಾಟಕದ ಸರ್ಕಾರದ ನಿರ್ಧಾರದ ಹಿನ್ನೆಲೆಯಲ್ಲಿ, ಖಾಸಗಿ ಹೂಡಿಕೆದಾರರನ್ನು ಸೆಳೆಯಲು ಕೇರಳ ಸರ್ಕಾರ ಮುಂದಾಗಿದೆ.

ಕೇರಳದ ಕೈಗಾರಿಕಾ ಸಚಿವ ಪಿ.ರಾಜೀವ್ ಅವರು ಸಾಮಾಜಿಕ ಜಾಲತಾಣದಲ್ಲಿ ಸಂದೇಶ ಪೋಸ್ಟ್ ಮಾಡಿದ್ದು, ‘ಕೇರಳದಲ್ಲಿ ಹೂಡಿಕೆ ಮಾಡಿ. ನೇಮಕಾತಿಗೆ ಪ್ರತಿಭೆ ಮತ್ತು ಅರ್ಹತೆಯಷ್ಟೇ ಮಾನದಂಡ’ ಎಂದು ಹೇಳಿದ್ದಾರೆ.

ಕೇರಳದಲ್ಲಿ ಹೂಡಿಕೆಗೆ ಇರುವ ಅವಕಾಶ ಗಳನ್ನು ಗುರುತಿಸಿ, ಬಳಸಿಕೊಳ್ಳಲು ಇದು ಸಕಾಲ. ಕೌಶಲಯುಕ್ತ ಪ್ರತಿಭೆಗಳು, ಉತ್ತಮ ಹವಾಮಾನ, ತೊಡಕುರಹಿತ ಸೇವೆಯ ಅವಕಾಶಗಳು ಇವೆ ಎಂದು ಹೇಳಿದ್ದಾರೆ. ‘#ಕೇರಳಕಾಲಿಂಗ್’ ಹ್ಯಾಶ್‌ಟ್ಯಾಗ್ ಜೊತೆ ಸಂದೇಶ ಹಂಚಿಕೊಂಡಿದ್ದಾರೆ.

ಕರ್ನಾಟಕದ ನಿರ್ಧಾರದ ಹಿನ್ನೆಲೆಯಲ್ಲಿ ಹೂಡಿಕೆದಾರರನ್ನು ಸೆಳೆಯುವ ಉದ್ದೇಶ ಇದಾಗಿದೆ ಎಂದು ಈ ಬೆಳವಣಿಗೆಯನ್ನು ವಿಶ್ಲೇಷಿಸಲಾಗಿದೆ. ಆಂಧ್ರಪ್ರದೇಶ ಸರ್ಕಾರ ಕೂಡಾ ಇದೇ ನಿಟ್ಟಿನಲ್ಲಿ ಪ್ರಯತ್ನ ನಡೆಸಿದ್ದು, ಹೂಡಿಕೆದಾರರ ಸೆಳೆಯಲು ಮುಂದಾಗಿದೆ.

ಮೂಲಸೌಕರ್ಯಗಳ ಲಭ್ಯತೆ ಹೂಡಿಕೆಗೆ ಕಾರಣವಾಗಿದೆ. ರಫ್ತಿನಿಂದ ಕೇರಳ ವಾರ್ಷಿಕ ವರಮಾನ ₹20 ಸಾವಿರ ಕೋಟಿ ಇದ್ದರೆ, ಕರ್ನಾಟಕದ ವಾರ್ಷಿಕ ವರಮಾನ ಸುಮಾರು ₹3 ಲಕ್ಷ ಕೋಟಿ ಆಗಿದೆ.

ಸುದ್ದಿ 2 ನಿಮಿಷ

ಸುಸ್ಥಿರ ಅಭಿವೃದ್ಧಿ: ಸ್ಥಳೀಯ ಸರ್ಕಾರದ ಪಾತ್ರ ಹಿರಿದು– ಸಿಇಎ

ರಾಜ್‌ಕೋಟ್ (ಪಿಟಿಐ): ‘ಸುಸ್ಥಿರ ಅಭಿವೃದ್ಧಿ ಗುರಿ (ಎಸ್‌ಡಿಜಿ) ಸಾಧಿಸಲು ಸ್ಥಳೀಯ ಸರ್ಕಾರಗಳ ಬಲವರ್ಧನೆಗೊಳಿಸಬೇಕಿದೆ’ ಎಂದು ಮಹಾ ಲೆಕ್ಕಪರಿಶೋಧಕ ಮತ್ತು ಮಹಾಲೇಖಪಾಲ (ಸಿಎಜಿ) ಗಿರೀಶ್ ಚಂದ್ರ ಮುರ್ಮು ಪ್ರತಿಪಾದಿಸಿದ್ದಾರೆ.

ಗುರುವಾರ ಇಲ್ಲಿ ಸ್ಥಳೀಯ ಆಡಳಿತದ ಲೆಕ್ಕ ಪರಿಶೋಧನೆಗಾಗಿ ಆರಂಭಿಸಿರುವ ಅಂತರರಾಷ್ಟ್ರೀಯ ಕೇಂದ್ರದ (ಐಸಿಎಎಲ್) ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಜಾಗತಿಕ ಮಾನದಂಡಕ್ಕೆ ಅನುಗುಣವಾಗಿ ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಗೆ ಪೂರಕವಾದ ನೀತಿಗಳನ್ನು ತಳಮಟ್ಟದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಸ್ಥಳೀಯ ಸರ್ಕಾರಗಳ ಪಾತ್ರ ಹೆಚ್ಚಿದೆ ಎಂದರು.

ಈ ಸರ್ಕಾರಗಳು ಹವಾಮಾನ ಬದಲಾವಣೆಯಂತಹ ಜಾಗತಿಕ ಸವಾಲುಗಳನ್ನು ಎದುರಿಸಿ ದೇಶದ ಆರ್ಥಿಕತೆ ಬೆಳವಣಿಗೆಗೆ ಒತ್ತು ನೀಡುತ್ತಿವೆ. ಸಮುದ್ರದ ಸಂಪನ್ಮೂಲಗಳ ಸಂರಕ್ಷಣೆಯಲ್ಲಿ ಇವುಗಳ ಪಾತ್ರ ಹಿರಿದು ಎಂದರು.

ಸರ್ಕಾರದ ನೀತಿ ನಿರೂಪಕರು, ಆಡಳಿತಗಾರರು ಮತ್ತು ಲೆಕ್ಕಪರಿಶೋಧಕರು ಸ್ಥಳೀಯ ಸರ್ಕಾರಗಳಲ್ಲಿ ಭಾಗಿಯಾಗಲು ಈ ಕೇಂದ್ರವು ವೇದಿಕೆ ಕಲ್ಪಿಸಲಿದೆ ಎಂದು ಹೇಳಿದರು.

ಜನಪ್ರತಿನಿಧಿಗಳು, ಕಾರ್ಯ ನಿರ್ವಾಹಕ ಅಧಿಕಾರಿಗಳು, ಸ್ಥಳೀಯ ಸರ್ಕಾರಗಳ ಲೆಕ್ಕ ಪರಿಶೋಧಕರು, ಪ್ರಮುಖ ಆಡಿಟ್ ಸಂಸ್ಥೆಗಳು ಈ ಕೇಂದ್ರದಲ್ಲಿ ಸಕ್ರಿಯರಾಗಿರುತ್ತಾರೆ. ಇದರಿಂದ ತಳಮಟ್ಟದಲ್ಲಿ ಆಡಳಿತ ಹೊಣೆಗಾರಿಕೆಯ ಸುಧಾರಣೆಗೆ ಸಹಕಾರಿಯಾಗಲಿದೆ ಎಂದು ತಿಳಿಸಿದರು. ದೇಶದಲ್ಲಿ 2.5 ಲಕ್ಷಕ್ಕೂ ಹೆಚ್ಚು ಗ್ರಾಮ ಪಂಚಾಯಿತಿಗಳು ಮತ್ತು 7 ಸಾವಿರಕ್ಕೂ ಹೆಚ್ಚು ಪುರಸಭೆಗಳಿವೆ.



ತ್ವರಿತ ವಿಚಾರಣೆಗೆ ಬೈಜುಸ್ ಕೋರಿಕೆ

ನವದೆಹಲಿ (ಪಿಟಿಐ): ಕಾರ್ಪೊರೇಟ್ ದಿವಾಳಿ ಪ್ರಕ್ರಿಯೆ ಆರಂಭಿಸುವ ಸಂಬಂಧ ಸಲ್ಲಿಕೆಯಾಗಿರುವ ಅರ್ಜಿಯ ವಿಚಾರಣೆಯನ್ನು ತ್ವರಿತವಾಗಿ ಆರಂಭಿಸುವಂತೆ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ (ಎನ್‌ಸಿಎಲ್‌ಟಿ) ಬೆಂಗಳೂರು ಶಾಖೆಗೆ, ಗುರುವಾರ ಬೈಜುಸ್ ಕಂಪನಿ ಅರ್ಜಿ ಸಲ್ಲಿಸಿದೆ.

ಭಾರತ ಕ್ರಿಕೆಟ್ ತಂಡದ ಪ್ರಾಯೋಜಕತ್ವಕ್ಕೆ ಸಂಬಂಧಿಸಿದಂತೆ ಬೈಜುಸ್ ₹158 ಕೋಟಿಯನ್ನು ಬಾಕಿ ಉಳಿಸಿಕೊಂಡಿದೆ. ಹಾಗಾಗಿ, ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ದಿವಾಳಿ ಪ್ರಕ್ರಿಯೆ ಆರಂಭಿಸಲು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮಂಡಳಿಯು ಅಂಗೀಕರಿಸಿದೆ.

ನ್ಯಾಯಮಂಡಳಿಯು ಆಡಳಿತ ಮಂಡಳಿಯ ನಿರ್ದೇಶಕರನ್ನು ಅಮಾನತುಗೊಳಿಸಿದೆ. ಹಾಗಾಗಿ, ಈ ಅರ್ಜಿಯ ವಿಚಾರಣೆಯನ್ನು ತ್ವರಿತವಾಗಿ ಕೈಗೆತ್ತಿಕೊಳ್ಳುವಂತೆ ಕೋರಿದೆ ಎಂದು ಮೂಲಗಳು ತಿಳಿಸಿವೆ. ಆದರೆ, ಈ ಬಗ್ಗೆ ಬೈಜುಸ್ ಯಾವುದೇ ಅಧಿಕೃತ ಮಾಹಿತಿ ನೀಡಿಲ್ಲ.

ಸ್ಪರ್ಧೆ ಮರುಪರಿಶೀಲಿಸುವಂತೆ ಬೈಡನ್‌ಗೆ ಸ್ವಪಕ್ಷೀಯರ ಸಲಹೆ

ಮಿಲ್ವಾಕೀ (ಎಪಿ): ಅಮೆರಿಕ ಅಧ್ಯಕ್ಷ ಸ್ಥಾನಕ್ಕೆ ನವೆಂಬರ್‌ನಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಸ್ಪರ್ಧಿಸುವ ಕುರಿತು ಮತ್ತೊಮ್ಮೆ ಯೋಚಿಸುವಂತೆ ಡೆಮಾಕ್ರಟ್ ಪಕ್ಷದ ಕಾರ್ಯಕರ್ತರು ಹಾಗೂ ಬೆಂಬಲಿಗರು ಹಾಲಿ ಅಧ್ಯಕ್ಷ ಜೋ ಬೈಡನ್ ಅವರಿಗೆ ಮನವಿ ಮಾಡಿದ್ದಾರೆ.



ಜೋ ಬೈಡನ್

ಅದರಲ್ಲೂ, ಈಗ ಅವರಿಗೆ ಕೋವಿಡ್–19 ದೃಢಪಟ್ಟಿದೆ. ಹೀಗಾಗಿ, ಚುನಾವಣೆಯಲ್ಲಿ ಸ್ಪರ್ಧಿಸುವ ನಿರ್ಧಾರವನ್ನು ಮರುಪರಿಶೀಲಿಸುವುದು ಉತ್ತಮ ಎಂಬ ಸಲಹೆಯನ್ನು ನೀಡುತ್ತಿದ್ದಾರೆ.

ಸ್ಪರ್ಧೆಯಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದಿರುವ ಬೈಡನ್, ಈ ಬಾರಿಯೂ ರಿಪಬ್ಲಿಕನ್ ಪಕ್ಷದ ಹುರಿಯಾಳು ಡೊನಾಲ್ಡ್ ಟ್ರಂಪ್ ಅವರನ್ನು ಸೋಲಿಸುವುದಾಗಿ ಹೇಳುತ್ತಿದ್ದಾರೆ.

ಬೈಡನ್ ಅವರು ಚುನಾವಣೆಯಲ್ಲಿ ಸ್ಪರ್ಧಿಸುವ ಕುರಿತಂತೆ ಡೆಮಾಕ್ರಟ್ ಪಕ್ಷದ ಪ್ರಮುಖ ನಾಯಕರು ಖಾಸಗಿಯಾಗಿ ಆತಂಕ ವ್ಯಕ್ತಪಡಿಸುತ್ತಿದ್ದರೆ, ಕೆಲವರು ಬಹಿರಂಗವಾಗಿಯೇ ಕಳವಳ ವ್ಯಕ್ತಪಡಿಸಿದ್ದಾರೆ. ಅಧ್ಯಕ್ಷೀಯ ಚುನಾವಣೆಯ ಕಣಕ್ಕಿಳಿಯಬೇಕೇ ಬೇಡವೇ ಎಂಬುದರ ಕುರಿತು ಬೈಡನ್ ಅವರು ಬರುವ ದಿನಗಳಲ್ಲಿ ಆಲೋಚನೆ ಮಾಡಲಿದ್ದಾರೆ ಎಂದು ಇನ್ನೂ ಕೆಲ ನಾಯಕರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪಕ್ಷದ ಸಂಸದರಾದ ಚುಕ್ ಶೂಮರ್ ಹಾಗೂ ಹಕೀಮ್ ಜೆಫ್ರೀಸ್ ಅವರು ಇತ್ತೀಚೆಗೆ ಬೈಡನ್ ಅವರಿಗೆ ಪ್ರತ್ಯೇಕವಾಗಿ ಮಾತುಕತೆ ನಡೆಸಿ, ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೆ ಸಂಬಂಧಿಸಿ ಪಕ್ಷದ ಕಾರ್ಯಕರ್ತರು ಹಾಗೂ ಬೆಂಬಲಿಗರಲ್ಲಿನ ಆತಂಕವನ್ನು ವಿವರಿಸಿದ್ದಾರೆ.

ಪಕ್ಷದ ಚುನಾವಣಾ ಸಮಿತಿ ಅಧ್ಯಕ್ಷರಾದ ಸುಜಾನ್ ಡೆಲ್‌ಬೆನ್ ಅವರು ಸಹ, ಚುನಾವಣೆಗೆ ಸಂಬಂಧಿಸಿದ ದತ್ತಾಂಶಗಳು, ಪಕ್ಷದ ವೇದಿಕೆಯಲ್ಲಿ ವ್ಯಕ್ತವಾದ ಅಭಿಪ್ರಾಯಗಳನ್ನು ಬೈಡನ್ ಅವರಿಗೆ ವಿವರಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಮೀಸಲಾತಿ ವಿರೋಧಿಸಿ ಪ್ರತಿಭಟನೆ: ಸೇನೆ ನಿಯೋಜನೆ, ಮಾತುಕತೆಗೆ ಆಹ್ವಾನ ನೀಡಿದ ಸರ್ಕಾರ

ಬಾಂಗ್ಲಾದೇಶ: ನಿಲ್ಲದ ಹಿಂಸಾಚಾರ, 25 ಜನ ಸಾವು

ಢಾಕಾ (ಪಿಟಿಐ/ಎಎಫ್‌ಪಿ/ರಾಯಿಟರ್ಸ್): ಸರ್ಕಾರಿ ನೇಮಕಾತಿಗಳಲ್ಲಿ ಮೀಸಲಾತಿ ವಿರೋಧಿಸಿ ನಡೆಯುತ್ತಿರುವ ಪ್ರತಿಭಟನೆ ಮುಂದುವರಿದಿದ್ದು, ಗುರುವಾರ ಢಾಕಾ ಸೇರಿ ದೇಶದ ವಿವಿಧೆಡೆ ಸಂಭವಿಸಿದ ಹಿಂಸಾಚಾರದಲ್ಲಿ 25 ಮಂದಿ ಮೃತಪಟ್ಟಿದ್ದಾರೆ. ನೂರಾರು ಮಂದಿ ಗಾಯಗೊಂಡಿದ್ದಾರೆ.

ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ರಾಜಧಾನಿ ಸೇರಿದಂತೆ ದೇಶದಾದ್ಯಂತ ಗಡಿ ಭದ್ರತಾ ಪಡೆಗಳನ್ನು ನಿಯೋಜಿಸಲಾಗಿದೆ.

ಕೆಲವು ದಿನಗಳಿಂದ ನಡೆಯುತ್ತಿರುವ ಈ ಪ್ರತಿಭಟನೆಯಲ್ಲಿ ಮೃತಪಟ್ಟವರ ಸಂಖ್ಯೆ 32ಕ್ಕೆ ಏರಿಕೆಯಾಗಿದೆ. ಹಿಂಸಾಚಾರ ತೀವ್ರಗೊಂಡ ಬೆನ್ನಲ್ಲೇ ಪ್ರತಿಭಟನಾನಿರತ ವಿದ್ಯಾರ್ಥಿಗಳ ಜತೆಗೆ ಮಾತುಕತೆಗೆ ಸಿದ್ಧ ಎಂದು ಬಾಂಗ್ಲಾದೇಶದ ಸರ್ಕಾರ ತಿಳಿಸಿದೆ.

ಪ್ರತಿಭಟನೆಗಳನ್ನು ನಿಯಂತ್ರಿಸಲು ಬಾಂಗ್ಲಾದೇಶದ ಹಲವೆಡೆ ಮೊಬೈಲ್ ಇಂಟರ್‌ನೆಟ್ ಸೇವೆಗಳನ್ನು ಕಡಿತಗೊಳಿಸಲಾಗಿತ್ತು. ಇದರಿಂದ ಆಕ್ರೋಶಗೊಂಡ ವಿದ್ಯಾರ್ಥಿಗಳು ಢಾಕಾದಲ್ಲಿ ಕೋಲು, ದೊಣ್ಣೆ ಮತ್ತು ಕಲ್ಲುಗಳೊಂದಿಗೆ ರಸ್ತೆಗಿಳಿದು ಹೆದ್ದಾರಿಗಳನ್ನು ತಡೆದರು. ಸರ್ಕಾರಿ ಕಟ್ಟಡಗಳನ್ನು ಹಾನಿಗೊಳಿಸಿ, ಸಶಸ್ತ್ರ ಪೊಲೀಸರ ಜತೆ ಘರ್ಷಣೆಗಿಳಿದರು. ಪ್ರತಿಭಟನಾಕಾರರು ಬಾಂಗ್ಲಾದೇಶದ ಸರ್ಕಾರಿ ವಾಹಿನಿ ಪ್ರಧಾನ ಕಚೇರಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು. ಇದರಿಂದ ಕಚೇರಿಯೊಳಗೆ ಹಲವರು ಸಿಕ್ಕಿಬಿದ್ದು, ತೊಂದರೆ ಅನುಭವಿಸಿದರು. ಏಕಾಏಕಿ ನೂರಾರು ಪ್ರತಿಭಟನಾಕಾರರು ಕಚೇರಿಯ ಆವರಣದೊಳಗೆ ನುಗ್ಗಿ ಕನಿಷ್ಠ 60ಕ್ಕೂ ಹೆಚ್ಚು ವಾಹನಗಳು ಮತ್ತು ಕಚೇರಿಯ ಕಟ್ಟಡಕ್ಕೆ ಬೆಂಕಿ ಹಚ್ಚಿದರು.



ಢಾಕಾದಲ್ಲಿ ಗುರುವಾರ ನಡೆದ ವಿದ್ಯಾರ್ಥಿಗಳ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿತು –ಎಎಫ್‌ಪಿ ಚಿತ್ರ

ರಬ್ಬರ್ ಬುಲೆಟ್, ಅಶ್ರುವಾಯು: ಢಾಕಾ ವಿಶ್ವವಿದ್ಯಾಲಯದ ಆವರಣ ಸೇರಿದಂತೆ ವಿವಿಧೆಡೆ ಪ್ರತಿಭಟನಾನಿರತರನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದರು. ರಬ್ಬರ್ ಬುಲೆಟ್‌ಗಳು, ಅಶ್ರುವಾಯುಗಳನ್ನೂ ಸಿಡಿಸಿದರು. ಇದರ ಪರಿಣಾಮ ಹಲವರು ಗಾಯಗೊಂಡರು.

ಪ್ರತಿಭಟನೆ ಪರಿಣಾಮ ಪ್ರಮುಖ ನಗರಗಳಲ್ಲಿನ ಶಾಪಿಂಗ್ ಮಾಲ್‌ಗಳು ಮತ್ತು ಅಂಗಡಿ ಮುಂಗಟ್ಟುಗಳನ್ನು ಮುಚ್ಚಲಾಗಿತ್ತು. ಢಾಕಾದಲ್ಲಿನ ಅಮೆರಿಕ ರಾಯಭಾರಿ ಕಚೇರಿ ಸೇರಿದಂತೆ ವಿವಿಧ ದೇಶಗಳ ರಾಯಭಾರಿ ಕಚೇರಿಗಳು ಮುಚ್ಚಿದ್ದವು.

ವಿದ್ಯಾರ್ಥಿಗಳ ಪ್ರತಿಭಟನೆ ತೀವ್ರಗೊಂಡ ಬೆನ್ನಲ್ಲೇ ಗುರುವಾರ ಸುದ್ದಿಗೋಷ್ಠಿ ನಡೆಸಿದ ಕಾನೂನು ಸಚಿವ ಅನಿಸುಲ್ ಹಕ್, ‘ಮೀಸಲು ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಭಟನೆ ನಡೆಸುತ್ತಿರುವ ವಿದ್ಯಾರ್ಥಿಗಳ ಜತೆ ಮಾತುಕತೆ ನಡೆಸಲು ಸರ್ಕಾರ ನಿರ್ಧರಿಸಿದೆ. ಈ ಕಾರ್ಯಕ್ಕಾಗಿ ಸರ್ಕಾರ ನನ್ನನ್ನು ಮತ್ತು ಶಿಕ್ಷಣ ಸಚಿವ ಮೊಹಿಬುಲ್ ಹಸನ್ ಚೌಧರಿ ಅವರನ್ನು ನಿಯೋಜಿಸಿದೆ’ ಎಂದು ತಿಳಿಸಿದರು.

ಉತ್ತರ ಪ್ರದೇಶದ ಗೊಂಡಾ ಜಿಲ್ಲೆಯಲ್ಲಿ ಅಪಘಾತ • 33 ಜನರಿಗೆ ಗಾಯ, ಆರು ಮಂದಿ ಸ್ಥಿತಿ ಗಂಭೀರ

ಹಳಿ ತಪ್ಪಿದ ಎಕ್ಸ್‌ಪ್ರೆಸ್ ರೈಲು: ಮೂರು ಸಾವು

ಪ್ರಜಾವಾಣಿ ವಾರ್ತೆ/ಪಿಟಿಐ

ಗೊಂಡಾ/ನವದೆಹಲಿ/ಲಖನೌ: ಉತ್ತರ ಪ್ರದೇಶದ ಗೊಂಡಾ ಜಿಲ್ಲೆಯಲ್ಲಿ ಚಂಡೀಗಢ-ದಿಬ್ರೂಗಢ ಎಕ್ಸ್‌ಪ್ರೆಸ್ ರೈಲು ಗುರುವಾರ ಹಳಿ ತಪ್ಪಿದ ಪರಿಣಾಮ ಮೂವರು ಮೃತಪಟ್ಟು, ಇತರ 33 ಮಂದಿ ಗಾಯಗೊಂಡಿದ್ದಾರೆ.

ಗಾಯಾಳುಗಳ ಪೈಕಿ ಆರು ಮಂದಿ ಸ್ಥಿತಿ ಗಂಭೀರವಾಗಿದೆ ಎಂದು ವೈದ್ಯರು ಹೇಳಿದ್ದಾರೆ.

ಗೊಂಡಾ- ಗೋರಖಪುರ ಸೆಕ್ಷನ್‌ನ ಝಿಲಾಯಿ ರೈಲು ನಿಲ್ದಾಣ ಸಮೀಪ ಮಧ್ಯಾಹ್ನ 3ರ ವೇಳೆಗೆ ಈ ಅಪಘಾತ ಸಂಭವಿಸಿದೆ.

ಎ.ಸಿ ಕೋಚ್‌ಗಳು ಸೇರಿದಂತೆ 12 ಕೋಚ್‌ಗಳು ಹಳಿ ತಪ್ಪಿದ್ದು, ಗಾಯಾಳುಗಳನ್ನು ಗೊಂಡಾ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಗೊಂಡಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿನೀತ್ ಜೈಸ್ವಾಲ್ ಹೇಳಿದ್ದಾರೆ.

ರಕ್ಷಣಾ ಕಾರ್ಯಕ್ಕಾಗಿ ವೈದ್ಯರ ತಂಡ, ಆಂಬುಲೆನ್ಸ್‌ಗಳು, ಪರಿಹಾರ ಕಾರ್ಯಕ್ಕೆ ನೆರವಾಗುವ ರೈಲನ್ನು ಘಟನಾ ಸ್ಥಳಕ್ಕೆ ಕಳುಹಿಸಲಾಗಿತ್ತು. ರಕ್ಷಣಾ ಕಾರ್ಯಕ್ಕೆ ಗ್ರಾಮಸ್ಥರು ಕೈಜೋಡಿಸಿದ್ದು, ಎಸ್‌ಡಿಆರ್‌ಎಫ್‌ನ ತಂಡವೊಂದನ್ನು ಕೂಡ ಘಟನಾ ಸ್ಥಳಕ್ಕೆ ಕಳುಹಿಸಲಾಗಿತ್ತು.

ರೈಲು, ಚಂಡೀಗಢ ನಿಲ್ದಾಣದಿಂದ ಬುಧವಾರ ರಾತ್ರಿ 11.40ಕ್ಕೆ ನಿರ್ಗಮಿಸಿತ್ತು. ರೈಲಿನ ಬೋಗಿಗಳು ಹಳಿ ತಪ್ಪಿದ ನಂತರ ಕೆಲ ಪ್ರಯಾಣಿಕರು ತಮ್ಮ ಲಗೇಜುಗಳೊಂದಿಗೆ ಹಳಿಗಳ ಉದ್ದಕ್ಕೂ ನಡೆದು ಸಾಗುತ್ತಿದ್ದ ದೃಶ್ಯಗಳಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ. ಪ್ರಯಾಣಿಕರು, ಹಳಿ ತಪ್ಪಿದ ಕೋಚ್‌ಗಳಿಂದ ಹೊರಬರಲು ಯತ್ನಿಸುತ್ತಿದ್ದ ದೃಶ್ಯಗಳೂ ವಿಡಿಯೊದಲ್ಲಿವೆ.

'ಕೋಚ್‌ಗಳಲ್ಲಿ ಹಲವು ಪ್ರಯಾಣಿಕರು ಸಿಲುಕಿದ್ದರು. ಹಳಿ ತಪ್ಪಿದ ನಂತರ ಕನಿಷ್ಠ ನಾಲ್ಕು ಕೋಚ್‌ಗಳು ಉರುಳಿ ಬಿದ್ದವು' ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದ್ದಾರೆ. ಅಪಘಾತ ಕುರಿತು ಮಾಹಿತಿ ಪಡೆದಿರುವ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಗಾಯಾಳುಗಳಿಗೆ ಸಮರ್ಪಕ ಚಿಕಿತ್ಸೆ ಒದಗಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ವಿದೇಶಾಂಗ ಖಾತೆ ರಾಜ್ಯ ಸಚಿವ ಕೀರ್ತಿವರ್ಧನ ಸಿಂಗ್ ಸ್ಥಳಕ್ಕೆ ಭೇಟಿ ನೀಡಿ, ಪರಿಹಾರ ಕಾರ್ಯ ಕುರಿತು ಮಾಹಿತಿ ಪಡೆದರು.

ಪ್ರಯಾಣಿಕರ ಅನುಕೂಲಕ್ಕಾಗಿ ಅಯೋಧ್ಯೆಯಿಂದ ವಿಶೇಷ ರೈಲಿನ ವ್ಯವಸ್ಥೆ ಮಾಡಲಾಗಿತ್ತು ಎಂದು ಸಚಿವ ಸಿಂಗ್ ಹೇಳಿದ್ದಾರೆ.

ಉನ್ನತ ಮಟ್ಟದ ತನಿಖೆಗೆ ಆದೇಶ: ಚಂಡೀಗಢ-ದಿಬ್ರೂಗಢ ಎಕ್ಸ್‌ಪ್ರೆಸ್ ರೈಲು ಹಳಿ ತಪ್ಪಿದ ಘಟನೆ ಕುರಿತು ರೈಲ್ವೆಯು ಉನ್ನತ ಮಟ್ಟದ ತನಿಖೆಗೆ ಆದೇಶಿಸಿದೆ.

'ಕೋಚ್‌ಗಳು ಹಳಿ ತಪ್ಪುವುದಕ್ಕೂ ಮೊದಲು ಜೋರಾದ ಶಬ್ದ ಕೇಳಿತು ಎಂದು ಲೋಕೊ ಪೈಲಟ್‌ಗಳು ತಿಳಿಸಿದ್ದಾರೆ. ತನಿಖೆ ನಂತರ ಅವಘಡಕ್ಕೆ ಕಾರಣ ಗೊತ್ತಾಗಲಿದೆ' ಎಂದು ಈಶಾನ್ಯ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಪಂಕಜಕುಮಾರ್ ಹೇಳಿದ್ದಾರೆ.



ಉತ್ತರ ಪ್ರದೇಶದ ಗೊಂಡಾ ಜಿಲ್ಲೆಯ ಝಿಲಾಯಿ ರೈಲು ನಿಲ್ದಾಣ ಸಮೀಪ ಗುರುವಾರ ಹಳಿ ತಪ್ಪಿದ ಚಂಡೀಗಢ–ದಿಬ್ರೂಗಢ ಎಕ್ಸ್‌ಪ್ರೆಸ್ ರೈಲಿನ ಕೋಚ್‌ವೊಂದರ ಬಳಿ ಪ್ರಯಾಣಿಕರು ಹಾಗೂ ಸ್ಥಳೀಯರು ನಿಂತಿದ್ದರು —ಪಿಟಿಐ ಚಿತ್ರ

ಅಪಘಾತ: ಪ್ರಮುಖ ಅಂಶಗಳು

- ಮೃತರ ಕುಟುಂಬಗಳಿಗೆ ತಲಾ ₹10 ಲಕ್ಷ ಹಾಗೂ ಗಂಭೀರವಾಗಿ ಗಾಯಗೊಂಡವರಿಗೆ ತಲಾ ₹2.5 ಲಕ್ಷ ಪರಿಹಾರವನ್ನು ರೈಲ್ವೆ ಘೋಷಿಸಿದೆ.
- ಎ.ಸಿ ಕೋಚ್‌ಗಳಲ್ಲಿ ಪ್ರಯಾಣಿಸುತ್ತಿದ್ದವರೇ ಹೆಚ್ಚಿನ ಸಂಖ್ಯೆಯಲ್ಲಿ ಗಾಯಗೊಂಡಿದ್ದಾರೆ
- ಗ್ಯಾಸ್ ಕಟರ್ ಬಳಸಿ, ಹಳಿ ತಪ್ಪಿದ ಕೋಚ್‌ಗಳಲ್ಲಿ ಸಿಲುಕಿದ್ದವರನ್ನು ಹೊರಕ್ಕೆ ತರಲಾಯಿತು
- ಹತ್ತಿರದ ಊರುಗಳಿಗೆ ತೆರಳಬೇಕಿದ್ದ ಪ್ರಯಾಣಿಕರಿಗೆ ರೈಲ್ವೆ ಬಸ್‌ಗಳ ವ್ಯವಸ್ಥೆ ಮಾಡಿತ್ತು
- 10ಕ್ಕೂ ಅಧಿಕ ರೈಲುಗಳ ಮಾರ್ಗ ಬದಲಾಯಿಸಲಾಗಿತ್ತು
- ದುರಂತ ನಡೆಯುವ ಮುನ್ನ ದೊಡ್ಡ ಸ್ಫೋಟದಂತಹ ಶಬ್ದ ಕೇಳಿದ್ದಾಗಿ ಹೇಳಿದ ಲೋಕೊ ಪೈಲಟ್

ಕೋಚ್ ಆವರಿಸಿದ್ದ ದೂಳು... ಮಕ್ಕಳ ಚೀರಾಟ

ಗೊಂಡಾ(ಪಿಟಿಐ): 'ನಾನು ಪ್ರಯಾಣಿಸುತ್ತಿದ್ದ ಕೋಚ್‌ನಲ್ಲಿ ದೂಳು ಆವರಿಸಿತ್ತು. ಮತ್ತೊಂದೆಡೆ, ಹತ್ತಿರದ ಸೀಟಿನಲ್ಲಿ ಕುಳಿತಿದ್ದ ಬಾಲಕನೊಬ್ಬ ಜೋರಾಗಿ ಚೀರಲು ಆರಂಭಿಸಿದ್ದ. ಕೆಲ ಕ್ಷಣ ಏನಾಗುತ್ತಿದೆ ಎಂಬುದೇ ನನಗೆ ಗೊತ್ತಾಗಲಿಲ್ಲ. ಕೆಲ ಪ್ರಯಾಣಿಕರು ನನ್ನ ಕೈಹಿಡಿದು ಎಳೆದು, ಕಿಟಕಿ ಮೂಲಕ ಹೊರಗೆ ಬರಲು ನೆರವಾದರು...'

ಚಂಡೀಗಢ-ದಿಬ್ರೂಗಢ ಎಕ್ಸ್‌ಪ್ರೆಸ್ ರೈಲಿನ 12 ಕೋಚ್‌ಗಳು ಹಳಿ ತಪ್ಪಿ ಸಂಭವಿಸಿದ ಅಪಘಾತ ಕುರಿತು ಸಂದೀಪ್ ಕುಮಾರ್ ಎಂಬ ಪ್ರಯಾಣಿಕರೊಬ್ಬರು ಹೇಳಿದ ಮಾತುಗಳಿವು.

'ಕಿಟಕಿ ಪಕ್ಕ ಕುಳಿತಿದ್ದೆ. ಜೋರಾದ ಶಬ್ದ ಕೇಳಿಸಿತು. ಅದರ ಬೆನ್ನಲ್ಲೇ ನೂಕಿದ ಅನುಭವವಾಯಿತು. ಅದರ ರಭಸಕ್ಕೆ ನಾನು ಕೋಚ್‌ನ ಚಾವಣಿಯತ್ತ ಎಸೆಯಲ್ಪಟ್ಟೆ' ಎಂದು ಮತ್ತೊಬ್ಬ ಪ್ರಯಾಣಿಕ ಮನೀಷ್ ತಿವಾರಿ ಆ ಭಯಾನಕ ಕ್ಷಣಗಳನ್ನು ವಿವರಿಸಿದರು.

ಈ ಅವಘಡದಲ್ಲಿ ಪಾರಾದ ಬಹುತೇಕ ಪ್ರಯಾಣಿಕರು ತಾವು ಎದುರಿಸಿದ ಆತಂಕ-ದುಗುಡವನ್ನು ವಿವರಿಸಿದ್ದಾರೆ.

'ಪ್ರಧಾನಿ, ರೈಲ್ವೆ ಸಚಿವ ಹೊಣೆ ಹೊರಲಿ'

ನವದೆಹಲಿ(ಪಿಟಿಐ): ಚಂಡೀಗಢ-ದಿಬ್ರೂಗಢ ಎಕ್ಸ್‌ಪ್ರೆಸ್ ರೈಲಿನ ಕೆಲ ಕೋಚ್‌ಗಳು ಹಳಿ ತಪ್ಪಿ ಸಂಭವಿಸಿದ ಅವಘಡಕ್ಕೆ ಸಂಬಂಧಪಟ್ಟ ಲೋಪದ ಹೊಣೆಯನ್ನು ಪ್ರಧಾನಿ ನರೇಂದ್ರ ಮೋದಿ ಹಾಗೂ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೊತ್ತುಕೊಳ್ಳಬೇಕು ಎಂದು ಕಾಂಗ್ರೆಸ್ ಆಗ್ರಹಿಸಿದೆ.

'ಡಿಕ್ಕಿ ನಿರೋಧಕ ವ್ಯವಸ್ಥೆ 'ಕವಚ್' ಅನ್ನು ದೇಶದ ಎಲ್ಲ ರೈಲು ಮಾರ್ಗಗಳಲ್ಲಿ ತ್ವರಿತವಾಗಿ ಅಳವಡಿಸಬೇಕು' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಒತ್ತಾಯಿಸಿದ್ದಾರೆ. 'ಮೋದಿ ನೇತೃತ್ವದ ಸರ್ಕಾರ ರೈಲ್ವೆ ಸುರಕ್ಷತೆಯನ್ನು ವ್ಯವಸ್ಥಿತವಾಗಿ ಹೇಗೆ ಅಪಾಯಕ್ಕೆ ನೂಕಿದೆ ಎಂಬುದಕ್ಕೆ ಚಂಡೀಗಢ-ದಿಬ್ರೂಗಢ ಎಕ್ಸ್‌ಪ್ರೆಸ್ ಹಳಿ ತಪ್ಪಿರುವುದೇ ಸಾಕ್ಷಿ' ಎಂದು ಟೀಕಿಸಿದ್ದಾರೆ.

ಇಬ್ಬರು ಯೋಧರಿಗೆ ಗಾಯ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಡೋಡಾ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಉಗ್ರರು ಮತ್ತು ಸೇನಾ ಸಿಬ್ಬಂದಿ ನಡುವಿನ ಗುಂಡಿನ ಚಕಮಕಿಯಲ್ಲಿ ಇಬ್ಬರು ಯೋಧರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕ್ಯಾಪ್ಟನ್ ಸೇರಿ ನಾಲ್ವರು ಯೋಧರು ಹುತಾತ್ಮರಾದ ಘಟನೆ ಬಳಿಕ ಉಗ್ರರ ವಿರುದ್ಧದ ಕಾರ್ಯಾಚರಣೆಗಾಗಿ ಕಾಸ್ತೀಗಢದಲ್ಲಿರುವ ಸರ್ಕಾರಿ ಶಾಲೆಯೊಂದರಲ್ಲಿ ಯೋಧರ ತಾತ್ಕಾಲಿಕ ಭದ್ರತಾ ಶಿಬಿರ ಸ್ಥಾಪಿಸಲಾಗಿದೆ. ಈ ಶಿಬಿರವನ್ನು ಗುರಿಯಾಗಿಸಿಕೊಂಡು ಗುರುವಾರ ನಸುಕಿನಲ್ಲಿ ಭಯೋತ್ಪಾದಕರು ಗುಂಡಿನ ದಾಳಿ ನಡೆಸಿದ್ದಾರೆ. ಈ ವೇಳೆ ಉಗ್ರರನ್ನು ಗುರಿಯಾಗಿಸಿ, ಯೋಧರು ಪ್ರತಿದಾಳಿ ನಡೆಸಿದರು. ಉಗ್ರರು ಮತ್ತು ಯೋಧರ ಮಧ್ಯೆ ಒಂದು ಗಂಟೆಗೂ ಹೆಚ್ಚು ಹೊತ್ತು ಗುಂಡಿನ ದಾಳಿ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಘಟನೆಯಲ್ಲಿ ಇಬ್ಬರು ಯೋಧರು ಸಣ್ಣ-ಪುಟ್ಟ ಗಾಯಗಳಿಗೆ ತುತ್ತಾಗಿದ್ದಾರೆ. ಉಗ್ರರನ್ನು ಸದೆಬಡೆಯಲು ಕಾರ್ಯಾಚರಣೆ ಮುಂದುವರಿದಿದೆ ಎಂದು ಹೇಳಿದ್ದಾರೆ.

ಇತ್ತೀಚೆಗೆ ಉಗ್ರರ ದಾಳಿಯಲ್ಲಿ ಕ್ಯಾಪ್ಟನ್ ಸೇರಿದಂತೆ ನಾಲ್ವರು ಯೋಧರು ಹುತಾತ್ಮರಾದ ಬಳಿಕ ಈ ಪ್ರದೇಶದಲ್ಲಿರುವ ಭಯೋತ್ಪಾದಕರನ್ನು ಹುಡುಕಿ ಸಂಹಾರ ಮಾಡಲು ಸುತ್ತಮುತ್ತಲ ಅರಣ್ಯ ಪ್ರದೇಶಗಳಲ್ಲಿ ಶೋಧ ಕಾರ್ಯಾಚರಣೆ ಮುಂದುವರಿಸಲಾಗಿದೆ. ಈ ವರ್ಷದ ಆರಂಭದಿಂದ ಈವರೆಗೆ ಜಮ್ಮು ಪ್ರಾಂತ್ಯದ ಆರು ಜಿಲ್ಲೆಗಳಲ್ಲಿ ನಡೆದ ಹಲವು ಭಯೋತ್ಪಾದಕ ದಾಳಿಗಳಲ್ಲಿ 11 ಭದ್ರತಾ ಸಿಬ್ಬಂದಿ ಹಾಗೂ ಐವರು ಭಯೋತ್ಪಾದಕರು ಸೇರಿದಂತೆ ಒಟ್ಟಾರೆ 27 ಮಂದಿ ಮೃತಪಟ್ಟಿದ್ದಾರೆ. ಇದರಲ್ಲಿ ಏಳು ಮಂದಿ ಯಾತ್ರಿಕರು ಸೇರಿದ್ದಾರೆ.

ನುಸುಳುವಿಕೆಗೆ ಯತ್ನ: ಇಬ್ಬರು ಉಗ್ರರ ಹತ್ಯೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕುಪ್ವಾಡ ಜಿಲ್ಲೆಯಲ್ಲಿನ ಗಡಿ ನಿಯಂತ್ರಣ ರೇಖೆಯ ಬಳಿ ಒಳ ನುಸುಳಲು ಯತ್ನಿಸುತ್ತಿದ್ದ ಇಬ್ಬರು ಭಯೋತ್ಪಾದಕರನ್ನು ಭದ್ರತಾ ಪಡೆಗಳು ಗುರುವಾರ ಹೊಡೆದುರುಳಿಸಿವೆ.

ಕುಪ್ವಾಡ ಜಿಲ್ಲೆಯ ಕೆರನ್ ಸೆಕ್ಟರ್‌ನಲ್ಲಿ ಈ ಘಟನೆ ನಡೆದಿದ್ದು, ಇಬ್ಬರು ಉಗ್ರರನ್ನು ಯೋಧರು ಹತ್ಯೆ ಮಾಡಿದ್ದಾರೆ. ಉಗ್ರರ ಶೋಧ ಕಾರ್ಯಾಚರಣೆ ಮುಂದುವರಿದಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಆರ್ಮ್‌ಸ್ಟ್ರಾಂಗ್ ಹತ್ಯೆ: ಮೂವರ ಬಂಧನ

ಚೆನ್ನೈ (ಪಿಟಿಐ): ಬಿಎಸ್‌ಪಿ ನಾಯಕ ಕೆ.ಆರ್ಮ್‌ಸ್ಟ್ರಾಂಗ್ ಕೊಲೆ ಪ್ರಕರಣದ ಸಂಬಂಧ ಪೊಲೀಸರು, ವಕೀಲೆ ಸೇರಿದಂತೆ ಮೂವರು ಶಂಕಿತರನ್ನು ಬಂಧಿಸಿದ್ದಾರೆ.

'ಈಗಾಗಲೇ ಬಂಧಿಸಿರುವ ಆರೋಪಿಗಳ ತಪ್ಪೊಪ್ಪಿಗೆ ಮತ್ತು ದೂರವಾಣಿ ಕರೆ ವಿವರ, ಹಣಕಾಸು ವಹಿವಾಟು ಆಧರಿಸಿ ಈಗ ಮೂವರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಕೊಲೆ ಪ್ರಕರಣದ ಸಂಬಂಧ ಇದುವರೆಗೆ 11 ಜನರನ್ನು ಬಂಧಿಸಲಾಗಿದೆ. ಆರ್ಮ್‌ಸ್ಟ್ರಾಂಗ್ ಹತ್ಯೆಗೆ ಬಳಸಿದ್ದ ಮಾರಕಾಸ್ತ್ರವನ್ನು ವಶಕ್ಕೆ ಪಡೆಯಲು ಸ್ಥಳಪರಿಶೀಲನೆಗೆ ಹೋಗಿದ್ದಾಗ, ಪೊಲೀಸರ ಮೇಲೆಯೇ ಹಲ್ಲೆಗೆ ಮುಂದಾಗಿದ್ದ ಮುಖ್ಯ ಆರೋಪಿ ತಿರುವೆಂಗಡಂ, ಬಳಿಕ ಪೊಲೀಸರ ಗುಂಡೇಟಿಗೆ ಬಲಿಯಾಗಿದ್ದ.

ನೀಟ್– ಯುಜಿ: 'ನಾಳೆಯೊಳಗೇ ಕೇಂದ್ರವಾರು ಫಲಿತಾಂಶ ಪ್ರಕಟಿಸಿ'

ಒಂದನೇ ಪುಟದಿಂದ...

ಪೀಠ ಹೇಳಿದ್ದೇನು?:

- ಪರೀಕ್ಷೆಯ ಸಂಪೂರ್ಣ ಪ್ರಕ್ರಿಯೆಯ ಪಾವಿತ್ರ್ಯಕ್ಕೆ ಧಕ್ಕೆಯಾಗಿದೆ ಎಂಬುದು ದೃಢಪಟ್ಟರೆ ಮಾತ್ರ ಮರು ಪರೀಕ್ಷೆಗೆ ಆದೇಶಿಸಬಹುದು
- ಪ್ರಶ್ನೆಪತ್ರಿಕೆ ಸೋರಿಕೆ ವ್ಯವಸ್ಥಿತವಾಗಿ ನಡೆದಿದೆಯೇ? ಇದರಿಂದ ಸಂಪೂರ್ಣ ಪರೀಕ್ಷೆಯ ಮೇಲೆ ಪರಿಣಾಮ ಬೀರಿದೆಯೇ? ಇಡೀ ಪರೀಕ್ಷೆಯ ಪಾವಿತ್ರ್ಯಕ್ಕೆ ಧಕ್ಕೆಯಾಗಿದೆಯೇ ಎಂಬುದು ಖಾತರಿಯಾಗಬೇಕು
- ಪರೀಕ್ಷಾ ನಿರ್ವಹಣೆಯಲ್ಲಿನ ಅಕ್ರಮಗಳ ಬಗ್ಗೆ ಸ್ಪಷ್ಟ ಮತ್ತು ನಿಖರವಾಗಿ ವಾದ ಮಂಡಿಸುವ ಮೂಲಕ ಪರೀಕ್ಷೆ ರದ್ದು ಮತ್ತು ಮರು ಪರೀಕ್ಷೆಗೆ ಸಂಬಂಧಿಸಿದಂತೆ ಹಕ್ಕುಗಳನ್ನು ಮಂಡಿಸಿ (ಅರ್ಜಿದಾರರ ಪರ ವಕೀಲರಿಗೆ ಸೂಚನೆ)
- ಮೇಲ್ನೋಟಕ್ಕೆ ಪ್ರಶ್ನೆಪತ್ರಿಕೆ ಸೋರಿಕೆ ಪಟ್ನಾ ಮತ್ತು ಹಜಾರಿಬಾಗ್‌ನಲ್ಲಿ ನಡೆದಿದೆ. ಇದು ಆ ಕೇಂದ್ರಗಳಿಗಷ್ಟೇ ಸೀಮಿತವಾಗಿದೆಯೋ ಅಥವಾ ವ್ಯಾಪಕವಾಗಿದೆಯೋ ಎಂಬುದನ್ನು ಖಚಿತಪಡಿಸಿಕೊಳ್ಳಬೇಕಿದೆ. ಇದಕ್ಕೂ ಗುಜರಾತ್‌ನ ಗೋಧ್ರಾದ ಪ್ರಕರಣಕ್ಕೂ ಸಂಬಂಧ ಕಾಣುತ್ತಿಲ್ಲ. ಗೋಧ್ರಾದಲ್ಲಿ ವ್ಯಕ್ತಿಯೊಬ್ಬರು ಕೆಲ ಅಭ್ಯರ್ಥಿಗಳ ಒಎಂಆರ್ ಶೀಟ್‌ಗಳನ್ನು ಭರ್ತಿ ಮಾಡಲು ಹಣ ಪಡೆದುಕೊಂಡಿರುವ ಆರೋಪಗಳಿವೆ
- ಯಾರೋ ಹಣಕ್ಕಾಗಿ ಈ ಕೆಲಸ ಮಾಡಿದಂತಿದೆಯೇ ಹೊರತು ದೇಶಕ್ಕೆ ಮತ್ತು ಪರೀಕ್ಷೆಗೆ ಅಪಕೀರ್ತಿ ತರುವ ಉದ್ದೇಶ ಇದ್ದಂತಿಲ್ಲ. ದೊಡ್ಡ ಪ್ರಮಾಣದಲ್ಲಿ ಪ್ರಶ್ನೆಪತ್ರಿಕೆ ಸೋರಿಕೆಯಾಗಲು, ವಿವಿಧ ನಗರಗಳಲ್ಲಿ ದೊಡ್ಡ ಮಟ್ಟದಲ್ಲಿ ಸಂಪರ್ಕಗಳು ಬೇಕಾಗುತ್ತವೆ ಎಂಬುದು ನೆನಪಿನಲ್ಲಿಟ್ಟುಕೊಳ್ಳಿ
- ಸಿಬಿಐ ತನಿಖೆ ಮುಂದುವರಿದಿದ್ದು, ಅದು ಪೀಠಕ್ಕೆ ತಿಳಿಸಿರುವ ಮಾಹಿತಿ ಬಹಿರಂಗವಾದರೆ ತನಿಖೆಯ ಮೇಲೆ ಪರಿಣಾಮ ಬೀರುತ್ತದೆ ಮತ್ತು ಭಾಗಿಯಾಗಿರುವವರು ಜಾಗೃತರಾಗುತ್ತಾರೆ

ಏನಿದು ಪ್ರಕರಣ?

ಒಂದನೇ ಪುಟದಿಂದ...

ಜುಲೈ 8ರ ವಿಚಾರಣೆ ವೇಳೆ ಪೀಠವು, 'ನೀಟ್-ಯುಜಿ' ಪರೀಕ್ಷೆಯ ಪಾವಿತ್ರ್ಯವು ಉಲ್ಲಂಘನೆಯಾಗಿದೆ ಎಂಬುದನ್ನು ಗಮನಿಸಿತ್ತು. ಇದು ಇಡೀ ಪರೀಕ್ಷಾ ಪ್ರಕ್ರಿಯೆಯ ಮೇಲೆ ಪರಿಣಾಮ ಬೀರಿದ್ದರೆ ಮರು ಪರೀಕ್ಷೆಗೆ ಆದೇಶಿಸಬಹುದು ಎಂದೂ ಪೀಠ ಹೇಳಿತ್ತು.

'ಪರೀಕ್ಷೆಯನ್ನು ರದ್ದುಪಡಿಸುವುದು ತರ್ಕಬದ್ಧ ಕ್ರಮವಲ್ಲ. ಹೀಗೆ ಮಾಡಿದರೆ ಪ್ರಾಮಾಣಿಕವಾಗಿ ಪರೀಕ್ಷೆ ಬರೆದ ಲಕ್ಷಾಂತರ ಅಭ್ಯರ್ಥಿಗಳ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಅಲ್ಲದೆ ದೊಡ್ಡ ಪ್ರಮಾಣದಲ್ಲಿ ಗೋಪ್ಯತೆ ಉಲ್ಲಂಘನೆ ಆಗಿರುವ ಕುರಿತು ಯಾವುದೇ ಪುರಾವೆಗಳಿಲ್ಲದ ಕಾರಣ ಪರೀಕ್ಷೆ ಮತ್ತು ಈಗಾಗಲೇ ಘೋಷಿಸಿರುವ ಫಲಿತಾಂಶವನ್ನು ರದ್ದುಪಡಿಸುವುದು ಸೂಕ್ತವಲ್ಲ' ಎಂದು ಕೇಂದ್ರ ಶಿಕ್ಷಣ ಸಚಿವಾಲಯ ಮತ್ತು ಎನ್‌ಟಿಎ ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದ್ದವು.

ನೀಟ್ ಫಲಿತಾಂಶಗಳ ದತ್ತಾಂಶ ವಿಶ್ಲೇಷಣೆಯನ್ನು ಐಐಟಿ ಮದ್ರಾಸ್ ನಡೆಸಿದ್ದು, ಯಾವುದೇ 'ಸಾಮೂಹಿಕ ದುಷ್ಕೃತ್ಯ' ಅಥವಾ ನಿರ್ದಿಷ್ಟ ಸಂಖ್ಯೆಯ ಅಭ್ಯರ್ಥಿಗಳು ಲಾಭ ಪಡೆದಿರುವುದು ಕಂಡುಬಂದಿಲ್ಲ ಎಂದು ಪ್ರಮಾಣಪತ್ರದಲ್ಲಿ ಉಲ್ಲೇಖಿಸಲಾಗಿತ್ತು.

ನಾಲ್ವರು ವಿದ್ಯಾರ್ಥಿಗಳ ವಿಚಾರಣೆ

ನವದೆಹಲಿ (ಪಿಟಿಐ): 'ನೀಟ್-ಯುಜಿ' ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ, ಪಟ್ನಾ ಏಮ್ಸ್‌ನ ನಾಲ್ವರು ವಿದ್ಯಾರ್ಥಿಗಳನ್ನು ವಿಚಾರಣೆಗೆ ಒಳಪಡಿಸಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಎಂಬಿಬಿಎಸ್ ಪದವಿಯ ಮೂರನೇ ವರ್ಷದ ಮೂವರು ಮತ್ತು ಎರಡನೇ ವರ್ಷದ ಒಬ್ಬ ವಿದ್ಯಾರ್ಥಿಯನ್ನು ಸಿಬಿಐ ಕಚೇರಿಗೆ ವಿಚಾರಣೆಗೆಂದು ಕರೆದೊಯ್ಯಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಹಿರಿಯ ಅಧ್ಯಾಪಕರ ಸಮ್ಮುಖದಲ್ಲಿ ಹಾಸ್ಟೆಲ್ ಕೊಠಡಿಗಳಿಂದ ಅವರನ್ನು ಕರೆದೊಯ್ಯಲಾಯಿತು. ಹಾಸ್ಟೆಲ್‌ನಲ್ಲಿನ ಅವರ ಕೊಠಡಿಗಳನ್ನು ಸೀಲ್ ಮಾಡಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

'ಮೂರನೇ ವರ್ಷದ ಎಂಬಿಬಿಎಸ್‌ನ ಚಂದನ್ ಸಿಂಗ್, ರಾಹುಲ್ ಅನಂತ್ ಮತ್ತು ಕುಮಾರ್ ಶಾನು ಹಾಗೂ ಎರಡನೇ ವರ್ಷದ ಕರಣ್ ಜೈನ್ ಎಂಬ ವಿದ್ಯಾರ್ಥಿಗಳನ್ನು ಸಿಬಿಐ ಕರೆದುಕೊಂಡು ಹೋಗಿದೆ' ಎಂದು ಪಟ್ನಾ ಏಮ್ಸ್‌ನ ನಿರ್ದೇಶಕ ಜಿ.ಕೆ.ಪಾಲ್ ವಿವರಿಸಿದ್ದಾರೆ.

ಉದಯನಿಧಿಗೆ ಡಿಸಿಎಂ ಪಟ್ಟ?

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ತಮ್ಮ ಪುತ್ರ, ಕ್ರೀಡಾ ಸಚಿವ ಉದಯನಿಧಿ ಅವರನ್ನು ಉಪಮುಖ್ಯಮಂತ್ರಿಯಾಗಿ ಮಾಡುವ ಸಾಧ್ಯತೆಯಿದೆ.



ಉದಯನಿಧಿ

ಉದಯನಿಧಿ ಅವರು ಉಪ ಮುಖ್ಯಮಂತ್ರಿಯಾಗುವುದು ಬಹುತೇಕ ಖಚಿತ ಎಂದು ಡಿಎಂಕೆ ಮುಖಂಡರು ಹೇಳಿದ್ದಾರೆ. ಆದರೆ 'ಬಡ್ತಿ' ಯಾವಾಗ ಸಿಗಲಿದೆ ಎಂಬುದು ಖಚಿತವಾಗಿಲ್ಲ. ಸ್ಟಾಲಿನ್ ಅವರು ಆ.22 ರಂದು ಅಮೆರಿಕ ಪ್ರವಾಸಕ್ಕೆ ತೆರಳಲಿದ್ದಾರೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

'ಉದಯನಿಧಿ ಅವರನ್ನು ಅವರ ತಂದೆಗೆ ಡೆಪ್ಯುಟಿಯನ್ನಾಗಿ (ಡಿಸಿಎಂ) ಮಾಡುವುದರಲ್ಲಿ ಯಾವುದೇ ಅನುಮಾನವಿಲ್ಲ. ಆದರೆ ಅದು ಯಾವಾಗ ನಡೆಯುತ್ತದೆ ಎಂಬುದು ಮಾತ್ರ ನಮ್ಮ ಮುಂದಿರುವ ಪ್ರಶ್ನೆ. ಸ್ಟಾಲಿನ್ ಅವರ ಅಮೆರಿಕ ಭೇಟಿಗೆ ಮುನ್ನವೇ ನಡೆಯಲಿದೆಯೇ ಅಥವಾ ಅಮೆರಿಕದಿಂದ ಮರಳಿದ ಬಳಿಕ ನಡೆಯಲಿದೆಯೇ ಎಂಬುದು ಖಚಿತವಾಗಿಲ್ಲ' ಎಂದು ಡಿಎಂಕೆ ಮುಖಂಡರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಛತ್ತೀಸಗಢ: ನಕ್ಸಲರಿಂದ ಕಚ್ಚಾಬಾಂಬ್ ದಾಳಿ

ಇಬ್ಬರು ಪೊಲೀಸರು ಹುತಾತ್ಮ

ಬಿಜಾಪುರ (ಪಿಟಿಐ): ಛತ್ತೀಸಗಢದ ಬಿಜಾಪುರ ಜಿಲ್ಲೆಯಲ್ಲಿ ನಕ್ಸಲರು ನಡೆಸಿದ ಕಚ್ಚಾಬಾಂಬ್ ದಾಳಿಯಲ್ಲಿ ವಿಶೇಷ ಕಾರ್ಯಪಡೆಯ (ಎಸ್‌ಟಿಎಫ್) ಇಬ್ಬರು ಸಿಬ್ಬಂದಿ ಹುತಾತ್ಮರಾಗಿದ್ದಾರೆ. ಈ ಘಟನೆಯಲ್ಲಿ ಇತರ ನಾಲ್ವರು ಸಿಬ್ಬಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ.

ಗಾಯಗೊಂಡ ನಾಲ್ವರು ಸಿಬ್ಬಂದಿಯನ್ನು ಮೊದಲು ಬಿಜಾಪುರದ ಜಿಲ್ಲಾ ಆಸ್ಪತ್ರೆಗೆ ರವಾನಿಸಿ ಚಿಕಿತ್ಸೆ ಕೊಡಿಸಲಾಯಿತು. ಆ ಬಳಿಕ ಹೆಚ್ಚಿನ ವೈದ್ಯಕೀಯ ಚಿಕಿತ್ಸೆಗಾಗಿ ರಾಜಧಾನಿ ರಾಯಪುರಕ್ಕೆ ವಿಮಾನದ ಮೂಲಕ ಕರೆದೊಯ್ಯಲಾಯಿತು ಎಂದು ಹೇಳಿದ್ದಾರೆ.

'ನಕ್ಸಲರನ್ನು ಸಂಪೂರ್ಣವಾಗಿ ಸದೆಬಡೆಯಲು ರಾಜ್ಯ ಸರ್ಕಾರ ಕಾರ್ಯಾಚರಣೆ ತೀವ್ರಗೊಳಿಸಿದೆ. ಹೀಗಾಗಿ ನಕ್ಸಲರು ಹತಾಶೆಗೊಂಡಿದ್ದಾರೆ. ಇದೇ ಕಾರಣಕ್ಕಾಗಿ ನಕ್ಸಲರು ಈ ಕೃತ್ಯವೆಸಗಿದ್ದಾರೆ. ವೀರ ಯೋಧರ ಈ ಬಲಿದಾನಕ್ಕೆ ಪ್ರತೀಕಾರ ತೀರಿಸಿಕೊಳ್ಳಲಾಗುವುದು. ಈ ಕೃತ್ಯವೆಸಗಿದ ನಕ್ಸಲರನ್ನು ಸದೆಬಡೆಯುವವರೆಗೆ ಈ ಹೋರಾಟ ನಿಲ್ಲುವುದಿಲ್ಲ' ಎಂದು ಮುಖ್ಯಮಂತ್ರಿ ವಿಷ್ಣುದೇವ್ ಸಾಯ್ ತಿಳಿಸಿದ್ದಾರೆ.

ನಕ್ಸಲ್ ಚಟುವಟಿಕೆಯಿಂದ ಗಢಚಿರೋಲಿ ಮುಕ್ತ (ಮುಂಬೈ ವರದಿ): ಮಹಾರಾಷ್ಟ್ರ–ಛತ್ತೀಸಗಢದ ಗಡಿ ಭಾಗದಲ್ಲಿ ಬುಧವಾರ ಪೊಲೀಸರು ಮತ್ತು 'ಸಿ-60' ಕಮಾಂಡೊಗಳಿಂದ ಹತ್ಯೆಗೀಡಾದ 12 ನಕ್ಸಲರ ತಲೆಗೆ ಒಟ್ಟಾರೆ ₹86 ಲಕ್ಷ ಇನಾಮು ಘೋಷಿಸಲಾಗಿತ್ತು ಎಂದು ತಿಳಿದುಬಂದಿದೆ.

ಯಶಸ್ವಿ ಕಾರ್ಯಾಚರಣೆಯಿಂದಾಗಿ ಗಢಚಿರೋಲಿಯ ಕೊರ್ಚಿ-ಟಿಪಾಗಡ ಮತ್ತು ಛಟಗಾಂವ್-ಕಸನ್ಸೂರ್ ವ್ಯಾಪ್ತಿಯಲ್ಲಿ ಶಸ್ತ್ರಸಜ್ಜಿತರಾಗಿದ್ದ ಎಲ್ಲ ಮಾವೋವಾದಿಗಳನ್ನು ಹೊಡೆದುರುಳಿಸಿದಂತಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ನೀಲೋತ್ಪಲ್ ತಿಳಿಸಿದ್ದಾರೆ.

ನಕ್ಸಲ್ ವಿರೋಧಿ ಕಾರ್ಯಾಚರಣೆ ಪ್ರದೇಶದಲ್ಲಿ ಮೂರು ಎಕೆ47, ಎರಡು ಇನ್ಸಾಸ್ ರೈಫಲ್‌ಗಳನ್ನು ವಶಕ್ಕೆ ಪಡೆಯಲಾಗಿದೆ ಎಂದಿದ್ದಾರೆ.



ಛತ್ತೀಸಗಢದ ಬಿಜಾಪುರ ಜಿಲ್ಲೆಯಲ್ಲಿ ನಕ್ಸಲರು ಎಸಗಿದ ಕಚ್ಚಾಬಾಂಬ್ ದಾಳಿಯಲ್ಲಿ ಗಾಯಗೊಂಡ ನಾಲ್ವರು ಸಿಬ್ಬಂದಿಗೆ ಚಿಕಿತ್ಸೆ ನೀಡಲಾಯಿತು —ಪಿಟಿಐ ಚಿತ್ರ

ಎನ್‌ಕೌಂಟರ್: ನಕ್ಸಲ್ ಮಹಿಳೆ ಹತ್ಯೆ

ದಾಂತೇವಾಡ: ಛತ್ತೀಸಗಢದ ದಾಂತೇವಾಡ ಜಿಲ್ಲೆಯಲ್ಲಿ ಭದ್ರತಾ ಸಿಬ್ಬಂದಿ ನಡೆಸಿದ ಎನ್‌ಕೌಂಟರ್‌ಗೆ ನಕ್ಸಲ್ ಮಹಿಳೆಯೊಬ್ಬರು ಬಲಿಯಾಗಿದ್ದಾರೆ ಎಂದು ಪೊಲೀಸರು ಗುರುವಾರ ಹೇಳಿದ್ದಾರೆ.ಕಿರಂದೂಲ್ ಪೊಲೀಸ್ ಠಾಣಾ ವ್ಯಾಪ್ತಿಯ ಅರಣ್ಯ ಪ್ರದೇಶದಲ್ಲಿ ನಕ್ಸಲ್ ನಿಗ್ರಹ ದಳದ ಕಾರ್ಯಾಚರಣೆ ವೇಳೆ ಗುಂಡಿನ ಚಕಮಕಿ ನಡೆದಿದೆ.

'ಗೋಮಾಂಸ ಸೇವಿಸೋರು ಶಿವನ ಚಿತ್ರ ತೋರಿಸ್ತಾರೆ'

ಜೈಪುರ (ಪಿಟಿಐ): 'ಗೋಮಾಂಸ ಸೇವಿಸೋರು ಸಂಸತ್ತಿನಲ್ಲಿ ಶಿವನ ಚಿತ್ರ ತೋರಿಸ್ತಾರೆ' ಎಂದು ರಾಜಸ್ಥಾನದ ಬಿಜೆಪಿ ಮುಖ್ಯಸ್ಥ ಸಿ ಪಿ ಜೋಶಿ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಬುಧವಾರ ದೌಸಾದಲ್ಲಿ ನಡೆದ ಪಕ್ಷದ ಸಭೆಯಲ್ಲಿ ಜೋಶಿ ಈ ಮಾತನ್ನು ಹೇಳಿದ್ದು, ಅವರ ಭಾಷಣದ ತುಣುಕು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ. 'ಭಾರತ-ಚೀನಾದ ಅಂತರಾಷ್ಟ್ರೀಯ ಗಡಿಯಲ್ಲಿ ಉದ್ವಿಗ್ನತೆ ಉಂಟಾಗಿದೆ. ಚೀನಾ ರಾಯಭಾರಿ ಜೊತೆ ಕುಳಿತು ಗೋಮಾಂಸ ಸೇವಿಸುವ ರಾಹುಲ್ ಗಾಂಧಿ, ಸಂಸತ್ತಿಗೆ ಮಹಾದೇವನ ಚಿತ್ರವನ್ನು ತರುತ್ತಾರೆ. ಇದನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ' ಎಂದು ಜೋಶಿ ಹೇಳಿದರು.

'ಯಾರಾದರೂ ಹಿಂದೂಗಳನ್ನು ಭಯೋತ್ಪಾದಕರು, ಹಿಂಸೆ ಮಾಡುವವರು ಎಂದು ಕರೆದರೆ ಮತ್ತು ರಾಮಮಂದಿರವನ್ನು ವಿರೋಧಿಸಿದರೆ ನಾವು ಮೌನವಾಗಿರುತ್ತೇವೆಯೇ? ನಾವು ಮೂಕ ಪ್ರೇಕ್ಷಕರಂತೆ ಇದ್ದಲ್ಲಿ, ಚರ್ಮದ ಬಣ್ಣಕ್ಕಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಅಪಹಾಸ್ಯ ಮಾಡುವುದು ಮುಂದುವರಿಸುತ್ತಲೇ ಇರುತ್ತಾರೆ' ಎಂದರು ಅವರು ಹೇಳಿದರು.

ಜುಲೈ 1 ರಂದು, ರಾಷ್ಟ್ರಪತಿಗಳ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಮಾತನಾಡುವಾಗ, ರಾಹುಲ್ ಗಾಂಧಿ ಅವರು ಎಲ್ಲ ಧರ್ಮಗಳನ್ನು ಸಂಕೇತಿಸುವಂತೆ ಶಿವ, ಗುರುನಾನಕ್ ಮತ್ತು ಕ್ರಿಸ್ತರ ಚಿತ್ರಗಳನ್ನು ಹಿಡಿದಿದ್ದರು.

'100 ಶಾಸಕರ ಕರೆತನ್ನಿ, ಸರ್ಕಾರ ರಚಿಸಿ'

ಪ್ರಜಾವಾಣಿ ವಾರ್ತೆ

ಲಖನೌ: ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಹಿನ್ನಡೆಯಾದ ಬಳಿಕ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಗುರಿಯಾಗಿರಿಸಿ, 'ಸರ್ಕಾರವು ಪಕ್ಷಕ್ಕಿಂತ ದೊಡ್ಡದಲ್ಲ' ಎಂದು ಉತ್ತರ ಪ್ರದೇಶ ಉಪಮುಖ್ಯಮಂತ್ರಿ ಕೇಶವ್ ಪ್ರಸಾದ್ ಮೌರ್ಯ ಅವರು ತಮ್ಮ 'ಎಕ್ಸ್' ಖಾತೆಯಲ್ಲಿ ಕೆಣಕಿದ್ದರು. ಇಬ್ಬರ ನಡುವಿನ ಮುಸುಕಿನ ಗುದ್ದಾಟದ ಬೆನ್ನಲ್ಲೇ, ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಡಿಸಿಎಂಗೆ ಭರ್ಜರಿ ಆಫರ್ ನೀಡಿದ್ದಾರೆ.

'ಮಾನ್ಸೂನ್ ಕೊಡುಗೆ; 100 ಶಾಸಕರನ್ನು ಕರೆತನ್ನಿ, ಸರ್ಕಾರ ರಚಿಸಿ' ಎಂದು 'ಎಕ್ಸ್' ಖಾತೆಯಲ್ಲಿ ಬರೆದುಕೊಂಡಿದ್ದಾರೆ.

ಈ ಹಿಂದೆ ಮಾಧ್ಯಮಗಳ ಜೊತೆ ಮಾತನಾಡಿದ್ದ ಅಖಿಲೇಶ್ ಯಾದವ್, 'ಕೇಶವ್ ಪ್ರಸಾದ್ ಮೌರ್ಯ ಅವರು ಯೋಗಿ ಆದಿತ್ಯನಾಥ ವಿಷಯದಲ್ಲಿ ಅಸಮಾಧಾನ ಹೊಂದಿರುವುದು ಎಲ್ಲರಿಗೂ ತಿಳಿದ ವಿಚಾರ. ನೂರು ಶಾಸಕರನ್ನು ಕರೆತಂದರೆ, ಸರ್ಕಾರ ರಚನೆಗೆ ಬೆಂಬಲಿಸಲು ಸಿದ್ಧ' ಎಂದು ಹೇಳಿದರು.



ಅಖಿಲೇಶ್ ಯಾದವ್

ಯೋಗಿ ಆದಿತ್ಯನಾಥ ವಿರುದ್ಧ ದೂರು ನೀಡಲು ಪ್ರಧಾನಮಂತ್ರಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಲು ಕೇಶವ್ ಪ್ರಸಾದ್ ಮೌರ್ಯ ದೆಹಲಿಗೆ ತೆರಳಿದ್ದರೂ ಭೇಟಿಗೆ ಅವಕಾಶ ಸಿಗದೇ ಮರಳಿದ್ದರು.

ಈ ಬೆಳವಣಿಗೆ ಬೆನ್ನಲ್ಲೇ, 'ಯಾವುದೇ ಯಶಸ್ಸು ಇಲ್ಲದೇ ಮರಳಿ ಮನೆಗೆ' ಎಂದು 'ಎಕ್ಸ್'ನಲ್ಲಿ ಸಂದೇಶ ಹಾಕುವ ಮೂಲಕ ಮೌರ್ಯ ಅವರನ್ನು ಕುರಿತು ಅಖಿಲೇಶ್ ಯಾದವ್ ಈ ಹಿಂದೆ ವ್ಯಂಗ್ಯವಾಡಿದ್ದರು.

'ಸಂಘಟನೆಗಿಂತಲೂ ಸರ್ಕಾರವೇ ಮುಖ್ಯ' ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಹೇಳಿಕೆ ನೀಡಿದ್ದರು. ಪಕ್ಷದ ಕಾರ್ಯಕಾರಿಣಿಯಲ್ಲಿ ತಿರುಗೇಟು ನೀಡಿದ್ದ ಡಿಸಿಎಂ ಕೇಶವ್ ಪ್ರಸಾದ್ ಮೌರ್ಯ ಅವರು 'ಸರ್ಕಾರವು ಪಕ್ಷಕ್ಕಿಂತ ದೊಡ್ಡದಲ್ಲ' ಎಂದು ತಿಳಿಸಿದ್ದರು.

ಇದಾದ ಬಳಿಕ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಭೇಟಿಯಾಗಿದ್ದ ಮೌರ್ಯ,'ರಾಜ್ಯದಲ್ಲಿ ಪಕ್ಷದ ಸಾಮಾನ್ಯ ಕಾರ್ಯಕರ್ತರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ' ಎಂದು ದೂರು ನೀಡಿದ್ದರು

ಪೂಜಾ ತಾಯಿ ಬಂಧನ

ಪುಣೆ (ಪಿಟಿಐ): ವಿವಾದಕ್ಕೆ ಗುರಿಯಾಗಿರುವ ಐಎಎಸ್ ಪ್ರೊಬೇಷನರಿ ಅಧಿಕಾರಿ ಪೂಜಾ ಖೇಡ್ಕರ್ ಅವರ ತಾಯಿ ಮನೋರಮಾ ಖೇಡ್ಕರ್ ಅವರನ್ನು ಪೊಲೀಸರು ಬಂಧಿಸಿದ್ದಾರೆ. ಜಮೀನು ವಿವಾದವೊಂದರಲ್ಲಿ ಕೆಲವರಿಗೆ ಬಂದೂಕು ತೋರಿಸಿ ಬೆದರಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಪೊಲೀಸರು ಈ ಕ್ರಮ ಕೈಗೊಂಡಿದ್ದಾರೆ.

ಮನೋರಮಾ ಅವರನ್ನು ಸ್ಥಳೀಯ ನ್ಯಾಯಾಲಯವೊಂದು ಜುಲೈ 20ರವರೆಗೆ ಪೊಲೀಸ್ ವಶಕ್ಕೆ ಒಪ್ಪಿಸಿದೆ.

ಮಹಾರಾಷ್ಟ್ರದ ರಾಯಗಢ ಜಿಲ್ಲೆಯ ಮಹಾಡ್‌ನಲ್ಲಿನ ಅತಿಥಿ ಗೃಹದಲ್ಲಿ ಅಡಗಿದ್ದ ಮನೋರಮಾ ಅವರನ್ನು ವಶಕ್ಕೆ ಪಡೆಯಲಾಯಿತು ಎಂದು ಪುಣೆ ಪೊಲೀಸರು ತಿಳಿಸಿದ್ದಾರೆ. ಜಮೀನು ವಿವಾದವೊಂದಕ್ಕೆ ಸಂಬಂಧಿಸಿದಂತೆ ಮನೋರಮಾ ಅವರು ಕೆಲವರಿಗೆ ಬಂದೂಕು ತೋರಿಸಿ ಬೆದರಿಸುತ್ತಿದ್ದ ವಿಡಿಯೊ ಒಂದು ಬಹಿರಂಗವಾದ ನಂತರ ಪೊಲೀಸರು ಮನೋರಮಾ ಹಾಗೂ ಅವರ ಪತಿ ದಿಲೀಪ್ ಖೇಡ್ಕರ್ ಅವರ ಪತ್ತೆಗೆ ಮುಂದಾಗಿದ್ದರು.

'ಮನೋರಮಾ ಅವರನ್ನು ವಶಕ್ಕೆ ಪಡೆಯಲಾಗಿದೆ, ಕಾನೂನು ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದ ನಂತರ ಅವರನ್ನು ಬಂಧಿಸಲಾಯಿತು' ಎಂದು ಪುಣೆ ಗ್ರಾಮಾಂತರ ಎಸ್‌ಪಿ ಪಂಕಜ್ ದೇಶಮುಖ್ ತಿಳಿಸಿದ್ದಾರೆ.

ಕಾಂವಡ್ ಯಾತ್ರೆ: ಮಳಿಗೆ ಮಾಲೀಕರಿಗೆ ಆದೇಶ

ಹೆಸರು ಪ್ರದರ್ಶಿಸಲು ಸೂಚನೆ

• ಸಂಜಯ್ ಪಾಂಡೆ

ಲಖನೌ: ಉತ್ತರ ಪ್ರದೇಶದಲ್ಲಿ ಕೋಮು ಸೂಕ್ಷ್ಮ ಪ್ರದೇಶ ಎಂದೇ ಗುರುತಿಸಲಾಗುವ ಮುಜಫ್ಫರ್‌ನಗರ ಜಿಲ್ಲೆಯ 'ಕಾಂವಡ್ ಯಾತ್ರೆ ಮಾರ್ಗದಲ್ಲಿನ' ತಿಂಡಿ-ತಿನಿಸುಗಳ ಮಳಿಗೆಗಳ ಮಾಲೀಕರು ತಮ್ಮ ಹೆಸರನ್ನು ಮಳಿಗೆಗಳ ಮುಂದೆ ಉಲ್ಲೇಖಿಸಬೇಕು ಎಂದು ಪೊಲೀಸರು ಸೂಚಿಸಿದ್ದಾರೆ. ಹೀಗೆ ಮಾಡುವುದರಿಂದ, ಯಾತ್ರಿಕರಿಗೆ ಗೊಂದಲ ಉಂಟಾಗುವುದು ತಪ್ಪುತ್ತದೆ ಎಂದು ಪೊಲೀಸರು ಹೇಳಿದ್ದಾರೆ.

ವಿವಾದಗಳು ಹಾಗೂ ಉದ್ವಿಗ್ನತೆಯನ್ನು ತಡೆಯುವ ಉದ್ದೇಶದಿಂದ ಈ ಸೂಚನೆ ನೀಡಲಾಗಿದೆ ಎಂದು ಪೊಲೀಸರು ಹೇಳಿದ್ದಾರಾದರೂ, ಮುಸ್ಲಿಂ ವ್ಯಾಪಾರಿಗಳನ್ನು ಗುರಿಯಾಗಿಸಿಕೊಂಡು ಅವರು ಈ ಸೂಚನೆ ನೀಡಿದ್ದಾರೆ ಎಂದು ಹಲವರು ಭಾವಿಸಿದ್ದಾರೆ.

ಕಾಂವಡ್ ಯಾತ್ರೆಯ ಮಾರ್ಗದಲ್ಲಿ ಇರುವ ಹಲವು ಮಳಿಗೆಗಳು ಹಿಂದೂ ದೇವರ ಹೆಸರು ಹೊಂದಿದ್ದರೂ, ಅವುಗಳನ್ನು ನಿರ್ವಹಿಸುತ್ತಿರುವವರು ಮುಸ್ಲಿಮರು ಎಂದು ಬಿಜೆಪಿಯ ಶಾಸಕರಾದ ಕಪಿಲ್ ದೇವ್ ಅಗರ್ವಾಲ್ ಮತ್ತು ನಂದಕಿಶೋರ್ ಗುಜ್ಜರ್ ಅವರು ಈ ಹಿಂದೆ ದೂರಿದ್ದರು. ಇಂತಹ ಮಳಿಗೆಗಳನ್ನು ಮುಚ್ಚಬೇಕು ಅಥವಾ ಅವುಗಳ ಮಾಲೀಕರ ಹೆಸರನ್ನು ಮಳಿಗೆಗಳ ಮುಂದೆ ಉಲ್ಲೇಖಿಸುವಂತೆ ಸೂಚಿಸಬೇಕು ಎಂದು ಅವರು ಆಗ್ರಹಿಸಿದ್ದರು.

'ಸೂಚನೆಯು ಹೋಟೆಲ್‌ಗಳು, ಢಾಬಾಗಳು ಮತ್ತು ರಸ್ತೆಬದಿಯ ತಿಂಡಿ-ತಿನಿಸುಗಳ ಮಳಿಗೆಗಳಿಗೆ ಅನ್ವಯವಾಗುತ್ತದೆ' ಎಂದು ಮುಜಫ್ಫರ್‌ನಗರದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಇವುಗಳ ಮಾಲೀಕರ ನಿಜ ಗುರುತನ್ನು ಮರೆಮಾಚುವುದು ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆಯನ್ನು ಸೃಷ್ಟಿಸುವ ಸಾಧ್ಯತೆ ಇದೆ ಎಂದು ಪೊಲೀಸ್ ಮೂಲಗಳು ಹೇಳಿವೆ. ಯಾತ್ರಿಕರು ಈ ಮಾರ್ಗದಲ್ಲಿ ನಿಂತು ಊಟ, ತಿಂಡಿ ಸೇವಿಸುತ್ತಾರೆ.

ರಾಜಸ್ಥಾನ, ದೆಹಲಿ, ಹರಿಯಾಣ ಮತ್ತು ಉತ್ತರ ಪ್ರದೇಶದ ಬೇರೆ ಬೇರೆ ಭಾಗಗಳಿಂದ ಬರುವ ಯಾತ್ರಿಕರು ಮುಜಫ್ಫರ್‌ನಗರದ ಮೂಲಕ ಸಾಗುತ್ತಾರೆ.

ಪೊಲೀಸರ ಸೂಚನೆಗೆ ಕಾಂಗ್ರೆಸ್ ಕಿಡಿ

ನವದೆಹಲಿ (ಪಿಟಿಐ): ಮುಜಫ್ಫರ್‌ನಗರ ಪೊಲೀಸರ ಸೂಚನೆಯನ್ನು ಭಾರತೀಯ ಸಂಸ್ಕೃತಿಯ ಮೇಲಿನ ಹಲ್ಲೆ ಎಂದು ಕಾಂಗ್ರೆಸ್ ಕಿಡಿಕಾರಿದೆ.

ಯಾರು ಏನನ್ನು ಸೇವಿಸಬೇಕು ಎಂಬುದನ್ನು ತೀರ್ಮಾನಿಸಲು ಬಯಸಿದ್ದವರು ಯಾರು ಯಾರಿಂದ ಏನನ್ನು ಖರೀದಿಸಬೇಕು ಎಂಬುದನ್ನೂ ಇನ್ನು ಮುಂದೆ ತೀರ್ಮಾನಿಸಲಿದ್ದಾರೆ ಎಂದು ಕಾಂಗ್ರೆಸ್ ಆಕ್ರೋಶ ವ್ಯಕ್ತಪಡಿಸಿದೆ.

ಮುಸ್ಲಿಮರನ್ನು ಗುರಿಯಾಗಿಸಿಕೊಂಡು ಆರ್ಥಿಕ ಬಹಿಷ್ಕಾರ ಹೇರುವುದನ್ನು ಸಹಜವಾಗಿಸುವ ಉದ್ದೇಶವು ಇಂತಹ ಸೂಚನೆಗಳ ಹಿಂದೆ ಇರುತ್ತದೆ ಎಂದಿದೆ.

ಪೊಲೀಸರ ಸೂಚನೆಯ ಹಿಂದಿನ ಉದ್ದೇಶವು ಯಾರು ಮುಸ್ಲಿಂ, ಯಾರು ಹಿಂದೂ ಎಂಬುದನ್ನು ಗುರುತಿಸುವುದಾಗಿದೆ ಎಂದು ಕಾಂಗ್ರೆಸ್ಸಿನ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಹೇಳಿದ್ದಾರೆ.

ತಮಟೆ ಬಾರಿಸಲು ದೇಗುಲಕ್ಕೆ ಬಾರದ ಹಿನ್ನೆಲೆ

ದಲಿತ ಕುಟುಂಬಗಳಿಗೆ ಬಹಿಷ್ಕಾರ

ಗೋಪೇಶ್ವರ (ಉತ್ತರಾಖಂಡ) (ಪಿಟಿಐ): ಚಮೋಲಿ ಜಿಲ್ಲೆಯ ಹಳ್ಳಿಯೊಂದರ ದಲಿತ ಕುಟುಂಬಗಳಿಗೆ ಬಹಿಷ್ಕಾರ ಹಾಕಲಾಗಿದೆ. ದಲಿತ ಸಮುದಾಯದ ವ್ಯಕ್ತಿಯೊಬ್ಬರು ಅನಾರೋಗ್ಯದ ಕಾರಣಕ್ಕೆ ದೇವಸ್ಥಾನದಲ್ಲಿ ತಮಟೆ ಬಾರಿಸಲು ಬಂದಿರಲಿಲ್ಲ ಎಂಬ ಕಾರಣಕ್ಕೆ ಈ ಕ್ರಮ ಕೈಗೊಳ್ಳಲಾಗಿದೆ.

ಭಾರತ-ಚೀನಾ ಗಡಿಗೆ ಸನಿಹದಲ್ಲಿ ಇರುವ ಸುಭಾಇ ಗ್ರಾಮದ ಪಂಚಾಯಿತಿಯವರು ಈ ಬಹಿಷ್ಕಾರವನ್ನು ಭಾನುವಾರ ಪ್ರಕಟಿಸಿದ್ದಾರೆ. ಈ ಗ್ರಾಮದಲ್ಲಿ ನಡೆಯುವ ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳಲ್ಲಿ ತಮಟೆ ಬಾರಿಸುವ ಕೆಲಸವನ್ನು ತಲೆಮಾರುಗಳಿಂದ ಮಾಡುತ್ತ ಬಂದಿರುವ, ಪರಿಶಿಷ್ಟ ಜಾತಿಗೆ ಸೇರಿದ ಸರಿಸುಮಾರು ಆರು ಕುಟುಂಬಗಳು ಇಲ್ಲಿವೆ. ಆದರೆ, ಪರಿಶಿಷ್ಟ ಜಾತಿಗೆ ಸೇರಿದ ಪುಷ್ಕರ್ ಲಾಲ್ ಎನ್ನುವವರು ಅನಾರೋಗ್ಯದ ಕಾರಣದಿಂದಾಗಿ ತಮಟೆ ಬಾರಿಸಲು ಬರದಿದ್ದುದರ ಕಾರಣಕ್ಕೆ ಪಂಚಾಯಿತಿಯು ಇಡೀ ಸಮುದಾಯಕ್ಕೆ ಸಾಮಾಜಿಕ ಬಹಿಷ್ಕಾರ ಹಾಕಿದೆ.

ದಲಿತ ಕುಟುಂಬಗಳಿಗೆ ಬಹಿಷ್ಕಾರ ಹಾಕಿರುವುದನ್ನು ಹಾಗೂ ಬಹಿಷ್ಕಾರದ ಆದೇಶವನ್ನು ಪಾಲಿಸದೆ ಇದ್ದರೆ ಗ್ರಾಮದ ಇತರರಿಗೂ ಇದೇ ಪರಿಸ್ಥಿತಿ ಎದುರಾಗುತ್ತದೆ ಎಂಬುದರ ಘೋಷಣೆಯನ್ನು ಪಂಚಾಯತಿ ಸದಸ್ಯರೊಬ್ಬರು ಮಾಡುತ್ತಿರುವುದು ವಿಡಿಯೊ ಒಂದರಲ್ಲಿ ಸೆರೆಯಾಗಿದೆ.

ಪಂಚಾಯಿತಿಯ ಆದೇಶದ ಅನ್ವಯ, ಪರಿಶಿಷ್ಟ ಜಾತಿಗೆ ಸೇರಿದ ಕುಟುಂಬಗಳು ಗ್ರಾಮದ ಅರಣ್ಯ ಸಂಪನ್ಮೂಲ ಬಳಸುವಂತಿಲ್ಲ, ನೀರು ಬಳಸುವಂತಿಲ್ಲ, ಅಂಗಡಿಗಳಿಂದ ಅಗತ್ಯ ವಸ್ತುಗಳನ್ನು ಖರೀದಿಸುವಂತಿಲ್ಲ, ವಾಹನಗಳಲ್ಲಿ ಸಂಚರಿಸುವಂತಿಲ್ಲ ಮತ್ತು ದೇವಸ್ಥಾನಕ್ಕೆ ಬರುವಂತಿಲ್ಲ.

ಸಂತ್ರಸ್ತ ಕುಟುಂಬಗಳು ಜೋಶಿಮಠ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿವೆ. ರಾಮಕೃಷ್ಣ ಖಂಡ್ವಾಲ್ ಮತ್ತು ಯಶ್ವೀರ್ ಸಿಂಗ್ ಎನ್ನುವವರು ಬಹಿಷ್ಕಾರ ಆದೇಶದ ಸೂತ್ರಧಾರರು ಎಂದು ದೂರಿನಲ್ಲಿ ಹೇಳಲಾಗಿದೆ.

ಮುಖ್ಯಾಂಶಗಳು

- ತಲೆಮಾರುಗಳಿಂದಲೂ ತಮಟೆ ಬಾರಿಸುತ್ತಿರುವ ದಲಿತ ಕುಟುಂಬಗಳು
- ಬಹಿಷ್ಕಾರದ ಆದೇಶ ಪಾಲಿಸದಿದ್ದರೆ ಇತರರಿಗೂ ಬಹಿಷ್ಕಾರದ ಭೀತಿ

ಮಲಗುಂಡಿ ಸ್ವಚ್ಛತೆ ವೇಳೆ ನಾಲ್ಕು ಕಾರ್ಮಿಕರ ಸಾವು

ಮೋತಿಹಾರಿ (ಬಿಹಾರ) (ಪಿಟಿಐ): ಮಲಗುಂಡಿಯನ್ನು ಸ್ವಚ್ಛಗೊಳಿಸುತ್ತಿದ್ದ ವೇಳೆ ವಿಷಕಾರಿ ಅನಿಲ ಸೇವಿಸಿ 18ರಿಂದ 50 ವರ್ಷ ವಯಸ್ಸಿನ ನಾಲ್ಕು ಕಾರ್ಮಿಕರು ಗುರುವಾರ ಮೃತಪಟ್ಟಿದ್ದಾರೆ. ಘಟನೆಯು ಬಿಹಾರದ ಪಶ್ಚಿಮ ಚಂಪಾರಣ್ ಜಿಲ್ಲೆಯ ಮೋತಿಹಾರಿಯಲ್ಲಿ ನಡೆದಿದೆ.

ಇದರಿಂದ ಉದ್ರಿಕ್ತಗೊಂಡ ಗುಂಪೊಂದು ಖಾಸಗಿ ಕ್ಲಿನಿಕ್‌ವೊಂದನ್ನು ಧ್ವಂಸಗೊಳಿಸಿದೆ. ಆ್ಯಂಬುಲೆನ್ಸ್‌ಗೆ ಬೆಂಕಿ ಹಚ್ಚಲಾಗಿದೆ ಹಾಗೂ ಪೊಲೀಸರ ಮೇಲೂ ದಾಳಿ ನಡೆಸಲಾಗಿದೆ. ಈ ವೇಳೆ ಇಬ್ಬರು ಪೊಲೀಸರಿಗೆ ಗಾಯಗಳಾಗಿವೆ. 'ಮಲಗುಂಡಿ ಸ್ವಚ್ಛತೆಗಾಗಿ ಐವರು ಕಾರ್ಮಿಕರನ್ನು ಗುಂಡಿಗೆ ಇಳಿಸಲಾಗಿತ್ತು. ಇವರಲ್ಲಿ ಒಬ್ಬರು ಬದುಕುಳಿದಿದ್ದಾರೆ.

ಕನ್ನಡಿಗ ರಾಹುಲ್‌ಗೆ ಏಕದಿನ ಕ್ರಿಕೆಟ್ ತಂಡದಲ್ಲಿ ಸ್ಥಾನ; ಗಿಲ್ ಉಪನಾಯಕ

ಟಿ20 ತಂಡಕ್ಕೆ ಸೂರ್ಯ ಸಾರಥ್ಯ

ನವದೆಹಲಿ (ಪಿಟಿಐ): ಬ್ಯಾಟರ್ ಸೂರ್ಯಕುಮಾರ್ ಯಾದವ್ ಅವರನ್ನು ಭಾರತ ಟಿ20 ಕ್ರಿಕೆಟ್ ತಂಡದ ನಾಯಕರನ್ನಾಗಿ ಗುರುವಾರ ನೇಮಕ ಮಾಡಲಾಗಿದೆ.

ಇದೇ ತಿಂಗಳು ನಡೆಯಲಿರುವ ಶ್ರೀಲಂಕಾ ಎದುರಿನ 3 ಟಿ20 ಪಂದ್ಯಗಳ ಸರಣಿಯಲ್ಲಿ ಅವರು ತಂಡವನ್ನು ಮುನ್ನಡೆಸುವರು. ಏಕದಿನ ಕ್ರಿಕೆಟ್ ತಂಡಕ್ಕೆ ರೋಹಿತ್ ಶರ್ಮಾ ಅವರು ನಾಯಕರಾಗಿದ್ದಾರೆ. ಅವರು ಮತ್ತು ವಿರಾಟ್ ಕೊಹ್ಲಿ ಶ್ರೀಲಂಕಾ ಎದುರಿನ ಏಕದಿನ ಕ್ರಿಕೆಟ್ ಸರಣಿಯಲ್ಲಿ ಆಡಲಿದ್ದಾರೆ. ಕನ್ನಡಿಗ ಕೆ.ಎಲ್.ರಾಹುಲ್ ಅವರು ವಿಕೆಟ್‌ಕೀಪರ್ ಆಗಿ ಸ್ಥಾನ ಪಡೆದಿದ್ದಾರೆ.

ಎರಡೂ ಮಾದರಿಗಳ ತಂಡಗಳಿಗೆ ಶುಭಮನ್ ಗಿಲ್ ಅವರನ್ನು ಉಪನಾಯಕರನ್ನಾಗಿ ಮಾಡಲಾಗಿದೆ. ತಂಡವು ಮುಂದಿನ ವಾರ ಶ್ರೀಲಂಕಾಗೆ ಪ್ರಯಾಣಿಸಲಿದೆ. ಜುಲೈ 27, 28 ಮತ್ತು 30ರಂದು ಪಂದ್ಯಗಳು ನಡೆಯಲಿವೆ. ಈ ಸರಣಿಯೊಂದಿಗೆ ನೂತನ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರು ಕಾರ್ಯಾರಂಭ ಮಾಡಲಿದ್ದಾರೆ.

ಕಳೆದ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಏಳು ಅರ್ಧಶತಕ ಗಳಿಸಿದ್ದ ರಿಯಾನ್ ಪರಾಗ್ ಮತ್ತು ದೆಹಲಿಯ ವೇಗಿ ಹರ್ಷಿತ್ ರಾಣಾ ಅವರು ಏಕದಿನ ತಂಡಕ್ಕೆ ಸೇರ್ಪಡೆಯಾಗಿರುವ ಹೊಸ ಪ್ರತಿಭೆಗಳು.

ಟಿ20 ವಿಶ್ವಕಪ್ ಜಯಿಸಿದ ನಂತರ ರೋಹಿತ್ ಮತ್ತು ಕೊಹ್ಲಿ ಅವರೊಂದಿಗೆ ಚುಟುಕು ಕ್ರಿಕೆಟ್‌ಗೆ ವಿದಾಯ ಹೇಳಿದ್ದ ಆಲ್‌ರೌಂಡರ್ ರವೀಂದ್ರ ಜಡೇಜ ಅವರಿಗೆ ಏಕದಿನ ತಂಡದಲ್ಲಿ ಸ್ಥಾನ ನೀಡಿಲ್ಲ. ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ವಿಶ್ರಾಂತಿ ಪಡೆದಿದ್ದಾರೆ.


ಸೂರ್ಯಕುಮಾರ್ ಯಾದವ್ ಮತ್ತು ಶುಭಮನ್ ಗಿಲ್ —ಎಪಿ/ಪಿಟಿಐ ಚಿತ್ರ


ಕೆ.ಎಲ್. ರಾಹುಲ್

ಏಕದಿನ ಪಂದ್ಯಗಳು ಆಗಸ್ಟ್ 2, 4 ಮತ್ತು 7ರಂದು ಕೊಲಂಬೊದ ಆರ್. ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆಯಲಿವೆ.

ವಿಶ್ವಕಪ್ ಟೂರ್ನಿಯಲ್ಲಿ ಉಪನಾಯಕರಾಗಿದ್ದ ಹಾರ್ದಿಕ್ ಪಾಂಡ್ಯ ಅವರಿಗೆ ಟಿ20 ತಂಡದ ನಾಯಕತ್ವ ನೀಡುವ ಕುರಿತು ವರದಿಯಾಗಿತ್ತು. ಆದರೆ, ಕೋಚ್ ಗಂಭೀರ್ ಮತ್ತು ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಆಗರ್ಕರ್ ಅವರ ಮಾತುಕತೆಯ ನಂತರದ ಬೆಳವಣಿಗೆಯಲ್ಲಿ ಸೂರ್ಯ ಅವರನ್ನು ನಾಯಕರನ್ನಾಗಿ ನೇಮಕ ಮಾಡಲಾಗಿದೆ.

ಸೂರ್ಯ ಅವರು ಹೋದ ವರ್ಷದ ನವೆಂಬರ್‌ನಲ್ಲಿ ನಡೆದಿದ್ದ ಆಸ್ಟ್ರೇಲಿಯಾ ವಿರುದ್ಧದ ಟಿ20 ಸರಣಿಯಲ್ಲಿ ಭಾರತ ತಂಡವನ್ನು ಮುನ್ನಡೆಸಿದ್ದರು. ಆಗ ತಂಡವು 4–1ರಿಂದ ಸರಣಿ ಗೆದ್ದಿತ್ತು. ನಂತರ ನಡೆದಿದ್ದ ದಕ್ಷಿಣ ಆಫ್ರಿಕಾ ಎದುರಿನ ಸರಣಿಯಲ್ಲಿಯೂ ಸೂರ್ಯ ನಾಯಕತ್ವದ ತಂಡವು 1–1ರ ಸಮಬಲ ಸಾಧಿಸಿತ್ತು.

ದೇಶಿ ಕ್ರಿಕೆಟ್‌ನಲ್ಲಿ ಆಡುವ ಬಿಸಿಸಿಐ ಸೂಚನೆಯನ್ನು ಪಾಲಿಸದ ಕಾರಣಕ್ಕೆ ಶ್ರೇಯಸ್ ಅಯ್ಯರ್ ಅವರನ್ನು ಬಿಸಿಸಿಐ ಗುತ್ತಿಗೆಯಿಂದ ಕೈಬಿಡಲಾಗಿತ್ತು. ಇದೀಗ ಮತ್ತೆ ಅವರು ಏಕದಿನ ತಂಡಕ್ಕೆ ಮರಳಿದ್ದಾರೆ. ಈಚೆಗೆ ನಡೆದ ಐಪಿಎಲ್‌ನಲ್ಲಿ ಶ್ರೇಯಸದದ ನಾಯಕತ್ವದ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಚಾಂಪಿಯನ್ ಆಗಿತ್ತು. ಆ ತಂಡಕ್ಕೆ ಗಂಭೀರ್ ಮೆಂಟರ್ ಆಗಿದ್ದರು.

ತಂಡ ಇಂತಿವೆ

ಟಿ20 : ಸೂರ್ಯಕುಮಾರ್ ಯಾದವ್ (ನಾಯಕ), ಶುಭಮನ್ ಗಿಲ್ (ಉಪನಾಯಕ), ಯಶಸ್ವಿ ಜೈಸ್ವಾಲ್, ರಿಂಕು ಸಿಂಗ್, ರಿಯಾನ್ ಪರಾಗ್, ರಿಷಭ್ ಪಂತ್ , ಸಂಜು ಸ್ಯಾಮ್ಸನ್ (ಇಬ್ಬರೂ ವಿಕೆಟ್‌ಕೀಪರ್), ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ರವಿ ಬಿಷ್ಣೋಯಿ, ಅರ್ಷದೀಪ್ ಸಿಂಗ್, ಖಲೀಲ್ ಅಹಮದ್, ಮೊಹಮ್ಮದ್ ಸಿರಾಜ್.

ಏಕದಿನ : ರೋಹಿತ್ ಶರ್ಮಾ (ನಾಯಕ), ಶುಭಮನ್ ಗಿಲ್ (ಉಪನಾಯಕ), ವಿರಾಟ್ ಕೊಹ್ಲಿ, ಕೆ.ಎಲ್. ರಾಹುಲ್ , ರಿಷಭ್ ಪಂತ್ (ಇಬ್ಬರೂ ವಿಕೆಟ್‌ಕೀಪರ್), ಶ್ರೇಯಸ್ ಅಯ್ಯರ್, ಶಿವಂ ದುಬೆ, ಕುಲದೀಪ್ ಯಾದವ್, ಮೊಹಮ್ಮದ್ ಸಿರಾಜ್, ವಾಷಿಂಗ್ಟನ್ ಸುಂದರ್, ಅರ್ಷದೀಪ್ ಸಿಂಗ್, ರಿಯಾನ್ ಪರಾಗ್, ಅಕ್ಷರ್ ಪಟೇಲ್, ಖಲೀಲ್ ಅಹಮದ್, ಹರ್ಷಿತ್ ರಾಣಾ.

ಹರ್ಮನ್ ಬಳಗಕ್ಕೆ ಪಾಕ್ ಸವಾಲು

ಮಹಿಳೆಯರ ಏಷ್ಯಾ ಕಪ್ ಟಿ20 ಕ್ರಿಕೆಟ್: ಭಾರತಕ್ಕೆ ಗೆಲುವಿನ ವಿಶ್ವಾಸ

ದಂಬುಲಾ (ಪಿಟಿಐ): ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ತಂಡವು ಶುಕ್ರವಾರ ಇಲ್ಲಿ ಆರಂಭವಾಗಲಿರುವ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಬದ್ಧ ಎದುರಾಳಿ ಪಾಕಿಸ್ತಾನ ತಂಡವನ್ನು ಎದುರಿಸಲಿದೆ.

ಈ ಟೂರ್ನಿಯು ಏಷ್ಯಾದ ತಂಡಗಳಿಗೆ ಇದೇ ಅಕ್ಟೋಬರ್‌ನಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯ ಪೂರ್ವಭಾವಿ ಸಿದ್ಧತೆಯ ವೇದಿಕೆಯೂ ಹೌದು. ಆದ್ದರಿಂದ ಹೆಚ್ಚು ಮಹತ್ವ ಪಡೆದುಕೊಂಡಿದೆ.

ಹಾಲಿ ಚಾಂಪಿಯನ್ ಭಾರತ ತಂಡವು ಒಟ್ಟು ನಾಲ್ಕು ಟೂರ್ನಿಗಳ ಪೈಕಿ 3 ಸಲ ಚಾಂಪಿಯನ್ ಆಗಿದೆ. ಏಕದಿನ ಮಾದರಿಯಲ್ಲಿಯೂ ಎಲ್ಲ ನಾಲ್ಕು ಸಲವೂ ಪ್ರಶಸ್ತಿ ಗೆದ್ದ ಹೆಗ್ಗಳಿಕೆ ಭಾರತ ತಂಡದ್ದು. ಆದ್ದರಿಂದ ಈ ಬಾರಿಯೂ ಪ್ರಶಸ್ತಿ ಜಯಿಸುವ ನೆಚ್ಚಿನ ತಂಡವಾಗಿಯೇ ಕಣಕ್ಕಿಳಿಯುತ್ತಿದೆ.

ಭಾರತದ ವನಿತೆಯರ ತಂಡವು ಏಷ್ಯಾ ಕಪ್ ಟಿ20 ಟೂರ್ನಿಯ ಇತಿಹಾಸದಲ್ಲಿ ಅತ್ಯಂತ ಯಶಸ್ವಿ ತಂಡವಾಗಿದೆ. ಒಟ್ಟು 20 ಪಂದ್ಯಗಳಲ್ಲಿ 17ರಲ್ಲಿ ಜಯ ಸಾಧಿಸಿದೆ. ಎರಡು ವರ್ಷಗಳ ಹಿಂದೆ ನಡೆದಿದ್ದ ಟೂರ್ನಿಯ ಫೈನಲ್‌ನಲ್ಲಿ ಬಾಂಗ್ಲಾದೇಶ ವಿರುದ್ಧ ಜಯಿಸಿತ್ತು.

ಟಿ20 ಮಾದರಿಯಲ್ಲಿ ಪಾಕಿಸ್ತಾನ ತಂಡದ ವಿರುದ್ಧವೂ ಗೆಲುವಿನ ಉತ್ತಮ ದಾಖಲೆಯೂ ಭಾರತಕ್ಕಿದೆ. ಉಭಯ ತಂಡಗಳು 14 ಪಂದ್ಯಗಳಲ್ಲಿ ಮುಖಾಮುಖಿಯಾಗಿರುವ ಪಂದ್ಯಗಳಲ್ಲಿ 11ರಲ್ಲಿ ಭಾರತ ಜಯಿಸಿದೆ. 3ರಲ್ಲಿ ಸೋತಿದೆ. ಈ ಟೂರ್ನಿಯಲ್ಲಿ ಎ ಗುಂಪಿನಲ್ಲಿ ಎರಡೂ ತಂಡಗಳು ಆಡುತ್ತಿವೆ.

ಈಚೆಗೆ ಭಾರತ ತಂಡವು ದಕ್ಷಿಣ ಆಫ್ರಿಕಾ ಎದುರು ನಡೆದಿದ್ದ ಟಿ20 ಸರಣಿಯಲ್ಲಿ 1–1ರಿಂದ ಸಮಬಲ ಸಾಧಿಸಿತ್ತು. ಒಂದು ಪಂದ್ಯ ಮಳೆಯಿಂದಾಗಿ ರದ್ದಾಗಿತ್ತು.

ಕಳೆದ ಮೇ ತಿಂಗಳಿನಲ್ಲಿ ಪಾಕಿಸ್ತಾನ ತಂಡವು 0–3ರಿಂದ ಇಂಗ್ಲೆಂಡ್ ಎದುರು ಸೋತಿತ್ತು. ಈ ಋತುವಿನಲ್ಲಿ ಹೆಚ್ಚು ಪಂದ್ಯಗಳನ್ನು ಆಡುವ ಅವಕಾಶವೂ ತಂಡಕ್ಕೆ ಒದಗಿಬಂದಿಲ್ಲ. ಆದ್ದರಿಂದ ಪಾಕ್ ಆಟಗಾರ್ತಿಯರಲ್ಲಿ ಆತ್ಮವಿಶ್ವಾಸದ ಕೊರತೆ ಕಾಣುತ್ತಿದೆ.

ಆದರೆ ಭಾರತ ತಂಡದ ಆಟಗಾರ್ತಿಯರು ಭರ್ತಿ ಆತ್ಮವಿಶ್ವಾಸದಲ್ಲಿದ್ದಾರೆ. ಸ್ಮೃತಿ ಮಂದಾನ, ಶಫಾಲಿ ವರ್ಮಾ ಅವರಿಗೆ ಬಿರುಸಿನ ಆರಂಭ ನೀಡುವ ಲಯ ಇದೆ. ಆಲ್‌ರೌಂಡರ್ ಪೂಜಾ ವಸ್ತ್ರಕರ್, ರಾಧಾ ಯಾದವ್, ದೀಪ್ತಿ ಶರ್ಮಾ ಮತ್ತು ಕನ್ನಡದ ಹುಡುಗಿ ಶ್ರೇಯಾಂಕಾ ಪಾಟೀಲ ಅವರು ಪಂದ್ಯದ ಫಲಿತಾಂಶವನ್ನು ತಮ್ಮ ತಂಡದತ್ತ ಒಲಿಸಿಕೊಳ್ಳುವ ಸಮರ್ಥರಾಗಿದ್ದಾರೆ.

ನಿದಾ ಧಾರ್ ನಾಯಕತ್ವದ ಪಾಕ್ ತಂಡದಲ್ಲಿರುವ ಇರಂ ಜಾವೇದ್, ಒಮೈಮಾ ಸೊಹೈಲ್, ಸಯಿದಾ ಅರೂಬ್ ಶಾ ಅವರು ಕಳೆದ ಒಂದು ವರ್ಷದಲ್ಲಿ ಯಾವುದೇ ಪಂದ್ಯಗಳಲ್ಲಿ ಆಡಿಲ್ಲ. ತಸ್ಮೀಯಾ ಪದಾರ್ಪಣೆ ಮಾಡಲಿದ್ದಾರೆ.



ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಮತ್ತು ಸ್ಮೃತಿ ಮಂದಾನ ಫೀಲ್ಡಿಂಗ್ ಅಭ್ಯಾಸ —ಪಿಟಿಐ ಚಿತ್ರ

ಇಂದಿನ ಪಂದ್ಯಗಳು

ನೇಪಾಳ Vs ಯುಎಇ	ಮಧ್ಯಾಹ್ನ 2
ಭಾರತ Vs ಪಾಕಿಸ್ತಾನ	ರಾತ್ರಿ 7

ಲೈವ್ ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಡಿಸ್ನಿ ಹಾಟ್‌ಸ್ಟಾರ್


ಪಾಕಿಸ್ತಾನ ತಂಡದ ನಿದಾ ಧಾರ್

ಪಾಂಡ್ಯ ದಂಪತಿ ವಿಚ್ಛೇದನ


ಹಾರ್ದಿಕ್ ಪಾಂಡ್ಯ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಮತ್ತು ಪತ್ನಿ ನತಾಶಾ ಸ್ಟಾಂಕೋವಿಚ್ ಅವರಿಬ್ಬರೂ ತಮ್ಮ ವಿಚ್ಛೇದನವನ್ನು ಗುರುವಾರ ಖಚಿತಪಡಿಸಿದ್ದಾರೆ.

ನಾಲ್ಕು ವರ್ಷಗಳ ಸಂಬಂಧದಿಂದ ದೂರವಾಗುತ್ತಿರುವುದಾಗಿ ಅವರು ತಮ್ಮ ಅಧಿಕೃತ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಬಹಿರಂಗಪಡಿಸಿದ್ದಾರೆ.

2020ರಲ್ಲಿ ಪಾಂಡ್ಯ ಮತ್ತು ನತಾಶಾ ದಾಂಪತ್ಯ ಜೀವನಕ್ಕೆ ಕಾಲಿರಿಸಿದ್ದರು. ದಂಪತಿಗೆ ಗಂಡು ಮಗು ಇದೆ.

‘ನಾಲ್ಕು ವರ್ಷಗಳ ಕಾಲ ಒಟ್ಟಿಗೆ ಇದ್ದ ನಾವು ಪರಸ್ಪರ ಬೇರೆಯಾಗಲು ನಿರ್ಧರಿಸಿದ್ದೇವೆ. ಒಟ್ಟಾಗಿ ಇರಲು ಸಾಧ್ಯವಾದಷ್ಟು ಪ್ರಯತ್ನಿಸಿದ್ದೇವೆ. ಇಬ್ಬರ ಹಿತದೃಷ್ಟಿಯಿಂದ ದೂರವಾಗುತ್ತಿದ್ದು, ಇದು ನಮಗೆ ಕಠಿಣ ನಿರ್ಧಾರವಾಗಿದೆ’ ಎಂದು ಪಾಂಡ್ಯ ಬರೆದುಕೊಂಡಿದ್ದಾರೆ.

ಸರ್ಬಿಯಾ ಮೂಲದ ಸ್ಟಾಂಕೋವಿಚ್ ಅವರು ರೂಪದರ್ಶಿ ಮತ್ತು ನಟಿ ಆಗಿದ್ದಾರೆ. ಪ್ರಕಾಶ್ ಝಾ ನಿರ್ದೇಶನದ ‘ಸತ್ಯಾಗ್ರಹ’ ಚಿತ್ರದ ಮೂಲಕ ಬಾಲಿವುಡ್‌ಗೆ ಪದಾರ್ಪಣೆ ಮಾಡಿದ್ದರು.

ಒಲಿಂಪಿಕ್ಸ್‌ನಲ್ಲಿ ಬೆಳ್ಳಿ, ಕಂಚು ಗೆದ್ದಿರುವ ಭಾರತದ ಬ್ಯಾಡ್ಮಿಂಟನ್ ತಾರೆ

ಸಿಂಧುಗೆ ಹ್ಯಾಟ್ರಿಕ್ ಸಾಧನೆಯ ಛಲ

ನವದೆಹಲಿ: ಹಿಂದಿನ ಎರಡು ಒಲಿಂಪಿಕ್ಸ್‌ಗಳಲ್ಲೂ ಪದಕಗಳನ್ನು ಗೆದ್ದಿರುವ ಭಾರತದ ಬ್ಯಾಡ್ಮಿಂಟನ್ ತಾರೆ ಪಿ.ವಿ. ಸಿಂಧು ಅವರು ಪ್ಯಾರಿಸ್ ಒಲಿಂಪಿಕ್ಸ್‌ಗೆ ಸಜ್ಜಾಗುತ್ತಿದ್ದು, ಈ ಬಾರಿ ಚಿನ್ನ ಗೆಲ್ಲುವ ಸರ್ವಪ್ರಯತ್ನದ ಛಲದಲ್ಲಿದ್ದಾರೆ.

29 ವರ್ಷದ ಸಿಂಧು ಅವರು ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ 2016ರ ರಿಯೋ ಕ್ರೀಡಾಕೂಟದಲ್ಲಿ ಬೆಳ್ಳಿ ಮತ್ತು 2020ರ ಟೋಕಿಯೊ ಕೂಟದಲ್ಲಿ ಕಂಚು ಗೆದ್ದು ಐತಿಹಾಸಿಕ ಸಾಧನೆ ಮಾಡಿದ್ದಾರೆ. ಈ ಹಿಂದಿನ ಕೂಟಗಳ ಅನುಭವಗಳೊಂದಿಗೆ ಈ ಬಾರಿ ‘ಹ್ಯಾಟ್ರಿಕ್’ ಪದಕದ ಕನಸು ಕಾಣುತ್ತಿದ್ದಾರೆ.

‘ಪ್ಯಾರಿಸ್‌ನಲ್ಲಿ ಮೂರನೇ ಪದಕ ಗೆಲ್ಲುವುದು ನನ್ನ ಆದ್ಯತೆಯಾಗಿದೆ. ಅದರಲ್ಲೂ ಚಿನ್ನದ ಪದಕವನ್ನು ಗೆಲ್ಲಲು ಶೇ 200ರಷ್ಟು ಪ್ರಯತ್ನ ನಡೆಸುತ್ತೇನೆ. ಆದರೆ, ಅತಿಯಾದ ಆತ್ಮವಿಶ್ವಾಸ ಹೊಂದಲು ಬಯಸುವುದಿಲ್ಲ’ ಎಂದು ಜಿಯೊ ಸಿನಿಮಾದ ‘ದಿ ಡ್ರೀಮರ್ಸ್’ ವಿಶೇಷ ಸಂವಾದದಲ್ಲಿ ಅವರು ಹೇಳಿದ್ದಾರೆ.

‘ದೇಶವು ನನ್ನಿಂದ ಏನು ನಿರೀಕ್ಷೆ ಮಾಡುತ್ತಿದೆ ಎಂಬುದು ಗೊತ್ತಿದೆ. ಆದರೆ, ಒಲಿಂಪಿಕ್ಸ್‌ನಲ್ಲಿ ಸತತ ಮೂರು ಪದಕಗಳನ್ನು ಗೆಲ್ಲುವುದು ತಮಾಷೆಯಲ್ಲ. ಆದರೂ ನನ್ನ ಮನಸ್ಸು ಚಿನ್ನ ಗೆಲ್ಲುವತ್ತ ಕೇಂದ್ರೀಕೃತವಾಗಿದೆ. ಈ ನಿಟ್ಟಿನಲ್ಲೇ ಕಠಿಣ ತರಬೇತಿ, ಸಿದ್ಧತೆಗಳು ನಡೆಯುತ್ತಿವೆ’ ಎಂದಿದ್ದಾರೆ.

‘ಒಲಿಂಪಿಕ್ಸ್‌ನಲ್ಲಿ ಸ್ಪರ್ಧೆಗಳು ಅತ್ಯಂತ ಕಠಿಣವಾಗಿರುತ್ತದೆ. ಅಗ್ರ 15ರೊಳಗಿನ ಆಟಗಾರ್ತಿಯರು ಒಂದೇ ಲಯದಲ್ಲಿ ಆಡುತ್ತಾರೆ. ಅಲ್ಲಿ ಅಂಕಗಳನ್ನು ಗಳಿಸುವುದು ಸುಲಭವಲ್ಲ. ಎದುರಾಳಿಯ ವಿರುದ್ಧ ಗಳಿಸುವ ಪ್ರತಿಯೊಂದು ಅಂಕಕ್ಕೂ ಕಠಿಣ ಹೋರಾಟ ನಡೆಸಬೇಕು. ಒಲಿಂಪಿಕ್ಸ್‌ನಲ್ಲಿ ಏನು ಬೇಕಾದರೂ ಆಗಬಹುದು. ಒಂದು ಸಣ್ಣ ತಪ್ಪು ಎಲ್ಲವನ್ನೂ ಬದಲಾಯಿಸಬಹುದು’ ಎಂದು ಹೇಳಿದರು.

ಇದೇ ವೇಳೆ ಬ್ಯಾಡ್ಮಿಂಟನ್ ದಂತಕಥೆ ಪ್ರಕಾಶ್ ಪಡುಕೋಣೆ ಕುರಿತು ಮಾತನಾಡಿದ ಸಿಂಧು, ‘1980ರ ಆಲ್ ಇಂಗ್ಲೆಂಡ್ ಚಾಂಪಿಯನ್ ಜೊತೆಗೆ ಪ್ಯಾರಿಸ್‌ಗೆ ಪ್ರಯಾಣಿಸುತ್ತಿರುವುದು ನಮ್ಮ ಅದೃಷ್ಟ. ಅವರ ಮಾರ್ಗದರ್ಶನ ಮತ್ತು ಬೆಂಬಲವು ಪದಕ ಗೆಲ್ಲಲು ಸಹಾಯಕವಾಗಲಿದೆ’ ಎಂದು ಹೇಳಿದರು. ಪ್ರಕಾಶ್ ಅವರು ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವ ಭಾರತ ಬ್ಯಾಡ್ಮಿಂಟನ್ ತಂಡಕ್ಕೆ ಮೆಂಟರ್ ಆಗಿದ್ದಾರೆ.

‘ಪ್ರಕಾಶ್ (ಪಡುಕೋಣೆ) ಸರ್ ಮತ್ತು ಕೋಚ್ ಆಗಸ್ (ದ್ವಿ ಸಂಟೋಸೊ) ಅವರನ್ನು ಒಳಗೊಂಡ ಹೊಸ ತಂಡವನ್ನು ನಾವು ಹೊಂದಿದ್ದೇವೆ. ನಮ್ಮ ಅಭ್ಯಾಸವು ಪರಿಪೂರ್ಣವಾಗಿ ನಡೆದಿದ್ದು, ನಮ್ಮ ಗಮನವು ಗುರಿಯತ್ತ ಕೇಂದ್ರೀಕೃತವಾಗಿದೆ’ ಎಂದು ಸಿಂಧು ಹೇಳಿದರು.

ಪ್ರಸ್ತುತ ವಿಶ್ವ ರ‍್ಯಾಂಕಿಂಗ್‌ನಲ್ಲಿ 13ನೇ ಸ್ಥಾನದಲ್ಲಿರುವ ಸಿಂಧು, ಬಿಡಬ್ಲ್ಯುಎಫ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಸೇರಿದಂತೆ ದಾಖಲೆಯ ಐದು ಪದಕಗಳನ್ನು ಗೆದ್ದಿದ್ದಾರೆ. ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಮೂರು ವೈಯಕ್ತಿಕ ಪದಕ ಮತ್ತು ತಂಡ ವಿಭಾಗದಲ್ಲಿ ಎರಡು ಪದಕ ಗೆದ್ದಿರುವ ಸಿಂಧು, ಏಷ್ಯನ್ ಕ್ರೀಡಾಕೂಟದಲ್ಲೂ ಎರಡು ಪದಕ ಜಯಿಸಿದ್ದಾರೆ.


ಭಾರತದ ಬ್ಯಾಡ್ಮಿಂಟನ್ ತಾರೆ ಪಿ.ವಿ. ಸಿಂಧು —ಪಿಟಿಐ ಚಿತ್ರ

ಕ್ರೀಡಾಗ್ರಾಮದಲ್ಲಿ 14 ಸಾವಿರಕ್ಕೂ ಹೆಚ್ಚು ಮಂದಿಗೆ ಅವಕಾಶ

ಪ್ಯಾರಿಸ್ (ಎಎಫ್‌ಪಿ): ಪ್ಯಾರಿಸ್ ಒಲಿಂಪಿಕ್ಸ್ ಮತ್ತು ಪ್ಯಾರಾಲಿಂಪಿಕ್ಸ್‌ಗಾಗಿ ಕ್ರೀಡಾಗ್ರಾಮವನ್ನು ಗುರುವಾರ ಅಧಿಕೃತವಾಗಿ ತೆರೆಯಲಾಯಿತು.

ಪ್ಯಾರಿಸ್ ಉತ್ತರ ಭಾಗದಲ್ಲಿರುವ ಕ್ರೀಡಾಗ್ರಾಮವು 9 ಸಾವಿರ ಕ್ರೀಡಾಪಟುಗಳು ಸೇರಿದಂತೆ ಸುಮಾರು 14,500 ಮಂದಿಗೆ ವಸತಿ ವ್ಯವಸ್ಥೆ ಕಲ್ಪಿಸುವಷ್ಟು ಸಾಮರ್ಥ್ಯವನ್ನು ಹೊಂದಿದೆ.

ಒಲಿಂಪಿಕ್ಸ್ ಉದ್ಘಾಟನಾ ಸಮಾರಂಭಕ್ಕೆ ಎಂಟು ದಿನ ಬಾಕಿ ಉಳಿದಿದ್ದು, ಈಗಾಗಲೇ ಆಸ್ಟ್ರೇಲಿಯಾ ಮತ್ತು ಬ್ರೆಜಿಲ್‌ನಿಂದ ಬಂದ ಮೊದಲ ತಂಡದ ಸದಸ್ಯರನ್ನು ಕ್ರೀಡಾಗ್ರಾಮಕ್ಕೆ ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು.

‘ನಾವು ಸಿದ್ಧರಾಗಿದ್ದೇವೆ’ ಎಂದು ಕ್ರೀಡಾಗ್ರಾಮದ ಉಪ ಮುಖ್ಯಸ್ಥ ಆಗಸ್ಟಿನ್ ಟ್ರಾನ್ ವ್ಯಾನ್ ಚೌ ಮಾಧ್ಯಮಕ್ಕೆ ತಿಳಿಸಿದ್ದಾರೆ.

ಜುಲೈ 26ರಿಂದ ಮತ್ತು ಸೆಪ್ಟೆಂಬರ್ 8ರವರೆಗೆ ಒಲಿಂಪಿಕ್ಸ್ ಮತ್ತು ಪ್ಯಾರಾಲಿಂಪಿಕ್ಸ್ ಸ್ಪರ್ಧೆಗಳು ಬಳಸಿದ ನಂತರ ಕ್ರೀಡಾಗ್ರಾಮದಲ್ಲಿರುವ ಅಪಾರ್ಟ್‌ಮೆಂಟ್‌ಗಳನ್ನು ಮನೆಗಳಾಗಿ ಪರಿವರ್ತಿಸಲಾಗುತ್ತದೆ. ಶೇ 35ರಷ್ಟು ಸಂಖ್ಯೆ ಮನೆಗಳನ್ನು ಸಾರ್ವಜನಿಕ ವಸತಿಗಾಗಿ ನೀಡಲು ಉದ್ದೇಶಿಸಲಾಗಿದೆ.

ಹೊಸ ಉತ್ಸಾಹದಲ್ಲಿ ಶ್ರೀಹರಿ

2ನೇ ಬಾರಿ ಒಲಿಂಪಿಕ್ಸ್‌ಗೆ ಸಜ್ಜಾದ ಬೆಂಗಳೂರಿನ ಈಜುಪಟು

ನವದೆಹಲಿ (ಪಿಟಿಐ): ಕರ್ನಾಟಕದ ಈಜುಪಟು ಶ್ರೀಹರಿ ನಟರಾಜ್ ಅವರು ಎರಡನೇ ಬಾರಿ ಒಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಲು ಸಜ್ಜಾಗಿದ್ದಾರೆ.

2023ರ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಎಂಟು ಚಿನ್ನ ಸೇರಿದಂತೆ 10 ಪದಕಗಳನ್ನು ಗೆದ್ದು ‘ಶ್ರೇಷ್ಠ ಈಜುಪಟು’ ಗೌರವ ಗಳಿಸಿದ್ದರು. 16 ವರ್ಷ ವಯಸ್ಸಿನಿಂದಲೇ (2017ರಿಂದ) ಅವರು ಪ್ರಮುಖ ಈಜುಕೂಟಗಳಲ್ಲಿ ನಿರಂತರವಾಗಿ ಸ್ಪರ್ಧಿಸುತ್ತಿರುವ ಶ್ರೀಹರಿ ದೇಹವನ್ನು ಹುರಿಗೊಳಿಸಿಕೊಂಡಿದ್ದಾರೆ.

‘ನನ್ನ 2023ರ ಋತುವು ಉತ್ಸಾಹಭರಿತವಾಗಿತ್ತು. ನಿರಂತರವಾಗಿ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರಿಂದ ದೇಹವು ಬಳಲಿತ್ತು. ಇನ್ನಷ್ಟು ಕೂಟಗಳಲ್ಲಿ ಸ್ಪರ್ಧಿಸಿದ್ದರೆ ದೇಹವು ಮತ್ತಷ್ಟು ಬಳಲುತ್ತಿತ್ತು. ಮಾತ್ರವಲ್ಲದೆ, ಗಾಯಗೊಂಡು ತರಬೇತಿಯಿಂದ ಹೊರಗುಳಿಯುವ ಆತಂಕವೂ ಇತ್ತು. ಹೀಗಾಗಿ, ಕೆಲವು ವಾರ ವಿಶ್ರಾಂತಿ ಪಡೆಯಬೇಕಾಯಿತು’ ಎಂದು ಅವರು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

ವಿರಾಮದ ನಂತರ ಪುನರಾಗಮನ ಮಾಡಿರುವ 23 ವರ್ಷ ವಯಸ್ಸಿನ ಶ್ರೀಹರಿ ಅವರು, ತಮ್ಮ ಎರಡನೇ ಒಲಿಂಪಿಕ್ಸ್‌ಗೆ ಸಿದ್ಧರಾಗಿದ್ದಾರೆ. ಅವರು 100 ಮೀಟರ್ ಬ್ಯಾಕ್‌ಸ್ಟ್ರೋಕ್ ವಿಭಾಗದಲ್ಲಿ ಸ್ಪರ್ಧಿಸಲಿದ್ದಾರೆ.

ಯುನಿವರ್ಸಲಿಟಿ ಪ್ಲೇಸಸ್ ಕ್ವಾಲಿಫಿಕೇಷನ್ ಸಿಸ್ಟಮ್‌ನಲ್ಲಿ ಶ್ರೀಹರಿ ಅವರು ಒಲಿಂಪಿಕ್ಸ್ ಕೋಟಾ ಪಡೆದಿದ್ದಾರೆ. ಅಗ್ರ ರ‍್ಯಾಂಕ್ ಗಳಿಸಿರುವ ದೇಶದ ಇಬ್ಬರು ಈಜುಪಟುಗಳನ್ನು ಒಲಿಂಪಿಕ್ಸ್‌ಗೆ ಆಯ್ಕೆ ಮಾಡುವ ಅವಕಾಶ ರಾಷ್ಟ್ರೀಯ ಈಜು ಫೆಡರೇಷನ್‌ಗೆ ಇರುತ್ತದೆ. ಅದರಂತೆ, ಪುರುಷರ ವಿಭಾಗದಲ್ಲಿ 849 ಅಂಕ ಗಳಿಸಿದ್ದ ಅವರನ್ನು ಆಯ್ಕೆ ಮಾಡಲಾಗಿದೆ.

ಟೋಕಿಯೊ ಒಲಿಂಪಿಕ್ಸ್‌ಗೆ ಅವರು ಒಲಿಂಪಿಕ್ ಕ್ವಾಲಿಫಿಕೇಷನ್ ಟೈಮಿಂಗ್ (ಒಕ್ಯೂಟಿ)ಯಲ್ಲಿ ಅರ್ಹತೆ ಗಳಿಸಿದ್ದರು. ಆದರೆ, ಈ ಬಾರಿ ನೇರ ಪ್ರವೇಶ ಸಿಗದಿರುವುದಕ್ಕೆ ತಲೆಕೆಡಿಸಿಕೊಳ್ಳದೆ, ಮುಂದಿನ ಗುರಿಯತ್ತ ಗಮನ ಹರಿಸಿದ್ದಾರೆ.


‘ನಾನು ಉತ್ತಮ ತರಬೇತಿ ಪಡೆದಿದ್ದರೂ ಒಲಿಂಪಿಕ್ಸ್ ಅರ್ಹತಾ ಸಮಯದ ಗುರಿಯನ್ನು ತಲುಪಲು ಸಾಧ್ಯವಾಗದಿರುವುದಕ್ಕೆ ನಿರಾಸೆಯಾಗಿದ್ದು ನಿಜ. ಕೊಂಚ ಹಿನ್ನಡೆಯ ಹೊರತಾಗಿಯೂ ನನಗೆ ಕೋಟಾ ಸಿಕ್ಕಿದ್ದು ಖುಷಿಯಿದೆ. ಇನ್ನೇನಿದ್ದರೂ ಮುಂದಿನ ಗುರಿಯತ್ತ ಯೋಚನೆ’ ಎಂದಿದ್ದಾರೆ.

ವಿರಾಮದಿಂದ ಹಿಂದಿರುಗಿದ ನಂತರ ನಟರಾಜ್ ಅವರು ಕಠಿಣ ತರಬೇತಿ ಪಡೆದಿದ್ದಾರೆ. ಮೇನಲ್ಲಿ ಸ್ಪೇನ್ ಮತ್ತು ಫ್ರಾನ್ಸ್‌ನಲ್ಲಿ ನಡೆದ ಮೇರ್ ನಾಸ್ಟ್ರಮ್ ಕೂಟದಲ್ಲಿ ಎರಡು ಬೆಳ್ಳಿ ಪದಕಗಳನ್ನು ಜಯಿಸಿದ್ದರು.

‘ಕಳೆದ ಋತುವಿಗೆ ಹೋಲಿಸಿದರೆ ಈ ಬಾರಿ ತರಬೇತಿ ತುಂಬಾ ಚೆನ್ನಾಗಿದೆ. ದೇಹಕ್ಕೆ ವಿಶ್ರಾಂತಿ ನೀಡಿದ ಕಾರಣದಿಂದ ಅದು ಸಾಧ್ಯವಾಯಿತು ಎಂದು ಭಾವಿಸುತ್ತೇನೆ. ತರಬೇತಿಯ ವೇಳೆ ಹಿಂದೆಂದಿಗಿಂತ ವೇಗವಾಗಿ ಗುರಿಯನ್ನು ತಲುಪಿದ್ದೇನೆ’ ಎಂದು ಅವರು ಹೇಳಿದ್ದಾರೆ.

2021ರಿಂದ ನಟರಾಜ್ ಅವರಿಗೆ 100 ಮೀ ಬ್ಯಾಕ್‌ಸ್ಟ್ರೋಕ್‌ನಲ್ಲಿ ತಮ್ಮ ಉತ್ತಮ ಸಮಯವನ್ನು (53.77 ಸೆಕೆಂಡ್) ಸುಧಾರಿಸಲು ಸಾಧ್ಯವಾಗಲಿಲ್ಲ. ಈ ಋತುವಿನಲ್ಲಿ 54.68 ಸೆಕೆಂಡ್ ಅವರ ವೈಯಕ್ತಿಕ ಶ್ರೇಷ್ಠ ಸಾಧನೆಯಾಗಿದೆ.


ಶ್ರೀಹರಿ ನಟರಾಜ್




ಪ್ರಶಸ್ತಿಯೊಂದಿಗೆ ಆಕಾಶ್, ಪ್ರೀಮಲ್

ಟೆನ್‌ಪಿನ್: ಆಕಾಶ್, ಪ್ರೀಮಲ್‌ಗೆ ಪ್ರಶಸ್ತಿ

ಬೆಂಗಳೂರು: ಆಕಾಶ್ ಅಶೋಕ್ ಕುಮಾರ್ ಮತ್ತು ಪ್ರೀಮಲ್ ಜೆ. ಅವರು ಇಲ್ಲಿನ ಅಮೀಬಾ ಬೌಲಿಂಗ್ ಸೆಂಟರ್‌ನಲ್ಲಿ ನಡೆದ ಕರ್ನಾಟಕ ರಾಜ್ಯ ರ‍್ಯಾಂಕಿಂಗ್ ಟೆನ್‌ಪಿನ್ ಬೌಲಿಂಗ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಗುರುವಾರ ನಡೆದ ಪುರುಷರ ಫೈನಲ್‌ನ ಅಗ್ರ ಶ್ರೇಯಾಂಕದ ಆಕಾಶ್ ಅವರು ಎರಡನೇ ಶ್ರೇಯಾಂಕದ ಕಿಶಾನ್ ಅವರನ್ನು ಮಣಿಸಿದರು.

ಮಹಿಳೆಯರ ಫೈನಲ್‌ನಲ್ಲಿ ಪ್ರೀಮಲ್ ಅವರು ಅಗ್ರ ಶ್ರೇಯಾಂಕದ ಗೀತಾ ಅವರನ್ನು ಸೋಲಿಸಿದರು.

ಬೆಂಗಳೂರಿನಲ್ಲಿ ಟ್ರಿನಿಟಿ ಗಾಲ್ಫ್ ಚಾಂಪಿಯನ್ಸ್ ಲೀಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ ಸೆಪ್ಟೆಂಬರ್ ತಿಂಗಳಿನಲ್ಲಿ ಬೆಂಗಳೂರಿನಲ್ಲಿ ಟ್ರಿನಿಟಿ ಗಾಲ್ಫ್ ಚಾಂಪಿಯನ್ಸ್ ಲೀಗ್ ಎರಡನೇ ಆವೃತ್ತಿಯು ನಡೆಯಲಿದೆ ಎಂದು ಪ್ರೊಫೆಷನಲ್ ಗಾಲ್ಫ್ ಟೂರ್ ಆಫ್ ಇಂಡಿಯಾ (ಪಿಜಿಟಿಐ) ಅಧ್ಯಕ್ಷ ಕಪಿಲ್ ದೇವ್ ಘೋಷಿಸಿದರು.

ಗುರುವಾರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಕಪಿಲ್, ‘ಗಾಲ್ಫ್ ಅಪಾರ ಕೌಶಲ್ಯ ಮತ್ತು ಏಕಾಗ್ರತೆ ಬೇಡುವ ಕ್ರೀಡೆಯಾಗಿದೆ. ಟಿಜಿಸಿಎಲ್‌ನ ಎರಡನೇ ಆವೃತ್ತಿಯು ವೃತ್ತಿಪರರು, ಹವ್ಯಾಸಿಗಳು ಮತ್ತು ಪ್ರಸಿದ್ಧ ಗಾಲ್ಫ್ ಆಟಗಾರರನ್ನು ತಂಡವಾಗಿ ಒಂದೆಡೆ ಸೇರಿಸಲಿದೆ‘ ಎಂದರು.

ಭಾರತದ 7 ಹಾಗೂ ಶ್ರೀಲಂಕಾದ 1 ತಂಡವು ಈ ಲೀಗ್‌ನಲ್ಲಿ ಭಾಗವಹಿಸಲಿವೆ.

‘ಇದು ಗಾಲ್ಫ್ ಅಭಿಮಾನಿಗಳಿಗೆ ವಿಶೇಷವಾದ ಕ್ರೀಡಾಕೂಟವಾಗಿರಲಿದೆ. ವಿದೇಶದ ತಂಡ ಸೇರಿದಂತೆ 8 ತಂಡಗಳನ್ನು ಈ ಟೂರ್ನಿಯಲ್ಲಿ ಆಡಲಿವೆ. ಭಾರತದ ಏಳು ನಗರಗಳನ್ನು ಪ್ರತಿನಿಧಿಸುವ ತಂಡಗಳು ಮತ್ತು ಶ್ರೀಲಂಕಾದ ಒಂದು ತಂಡ ಸ್ಪರ್ಧಿಸಲಿವೆ’ ಎಂದು ಕಪಿಲ್‌ದೇವ್ ಹೇಳಿದ್ದಾರೆ.



ಟ್ರಿನಿಟಿ ಗಾಲ್ಫ್ ಚಾಂಪಿಯನ್ಸ್ ಲೀಗ್ ಘೋಷಣೆ ಕಾರ್ಯಕ್ರಮದಲ್ಲಿ ಕಪಿಲ್‌ದೇವ್

ಏಷ್ಯನ್ ಕುಸ್ತಿ: ವಿಶ್ವಜೀತ್, ಧನ್‌ರಾಜ್‌ಗೆ ಬೆಳ್ಳಿ

ಬೆಂಗಳೂರು: ಮರಾಠ ಎಲ್‌ಐಆರ್‌ಸಿ ಬಾಯ್ಸ್ ಸ್ಪೋರ್ಟ್‌ನ ಕೆಡೆಟ್ ವಿಶ್ವಜೀತ್ ಮೋರೆ ಅವರು ಜೋರ್ಡಾನ್‌ನ ಆಮ್ಮನ್‌ನಲ್ಲಿ ನಡೆದ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನ 23 ವರ್ಷದೊಳಗಿನವರ ಗ್ರೀಕೊ-ರೋಮನ್ ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದು ಮೈಲಿಗಲ್ಲು ಸಾಧಿಸಿದ್ದಾರೆ.

ಮತ್ತೊಬ್ಬ ಕೆಡೆಟ್ ಧನರಾಜ್ ಜಾಮ್ನಿಕ್ ಅವರು ಕೂಡಾ ಥಾಯ್ಲೆಂಡ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನ 15 ವರ್ಷದೊಳಗಿನ ಗ್ರೀಕೊ-ರೋಮನ್ ವಿಭಾಗದಲ್ಲಿ ಬೆಳ್ಳಿ ಪದಕ ತಮ್ಮದಾಗಿಸಿಕೊಂಡಿದ್ದಾರೆ.

ಅಭಿಜೀತ್ ಮತ್ತು ಧನರಾಜ್ ಸಾಧನೆಗೆ ಬ್ರಿಗೇಡಿಯರ್ ಜೊಯ್‌ದೀಪ್ ಮುಖರ್ಜಿ ಶ್ಲಾಘನೆ ವ್ಯಕ್ತಪಡಿಸಿದ್ದಾರೆ. ‘ಕೆಡೆಟ್‌ಗಳ ಸಾಧನೆಗಳು ಮರಾಠ ಎಲ್‌ಐಆರ್‌ಸಿ ಬಾಯ್ಸ್ ಸ್ಪೋರ್ಟ್ ಕಂಪನಿಯಲ್ಲಿ ಒದಗಿಸಲಾದ ಉತ್ತಮ ಮಾರ್ಗದರ್ಶನ ಮತ್ತು ತರಬೇತಿಯನ್ನು ಎತ್ತಿತೋರಿಸುತ್ತವೆ’ ಎಂದು ಅವರು ಹೇಳಿದ್ದಾರೆ.

ಟೇಬಲ್ ಟೆನಿಸ್ : ಹಿಮಾಂಶಿ, ರೋಹಿತ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮೈಸೂರು: ಬೆಂಗಳೂರಿನ ಹಿಮಾಂಶಿ ಚೌಧರಿ ಹಾಗೂ ರೋಹಿತ್ ಶಂಕರ್ ಅವರು ಗುರುವಾರ ಇಲ್ಲಿ ಆರಂಭಗೊಂಡ ಮೂರನೇ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ 19 ವರ್ಷದೊಳಗಿನವರ ವಿಭಾಗದಲ್ಲಿ ಕ್ರಮವಾಗಿ ಬಾಲಕ ಹಾಗೂ ಬಾಲಕಿಯರ ವಿಭಾಗದ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಮೈಸೂರು ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆಯು ನಗರದ ಮೈಸೂರು ವಿ.ವಿ. ಜಿಮ್ನಾಷಿಯಂ ಹಾಲ್‌ನಲ್ಲಿ ಆಯೋಜಿಸಿರುವ ಟೂರ್ನಿಯ 19 ವಯಸ್ಸಿನ ಒಳಗಿನವರ ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಹಿಮಾಂಶಿ 15-13, 14-16, 7-11, 11-5 , 17-15, 11-4 ಅಂತರದಲ್ಲಿ ದೇಶ್ನಾ ವಂಶಿಕಾರನ್ನು ಪರಾಭಾವಗೊಳಿಸಿ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಸೆಮಿಫೈನಲ್‌ನಲ್ಲಿ ಹಿಮಾಂಶಿ 8-11, 11-7, 9-11, 12-10, 11-8 ರಿಂದ ಸಹನಾ ಮೂರ್ತಿ ಅವರನ್ನು ಹಾಗೂ ದೇಶ್ನಾ ವಂಶಿಕಾ 11-9, 11-8, 11-13 , 7-11, 11-3ರಿಂದ ತೃಪ್ತಿ ಪುರೋಹಿತ್‌ರನ್ನು ಮಣಿಸಿ ಫೈನಲ್ ಪ್ರವೇಶಿಸಿದ್ದರು.

ಬಾಲಕರ ವಿಭಾಗ ಫೈನಲ್‌ನಲ್ಲಿ ರೋಹಿತ್ 11-5, 11-5, 13-11, 12-10 ರಿಂದ ತೇಶುಬ್ ದಿನೇಶ್ ಎದುರು ವಿಜಯದ ನಗೆ ಬೀರಿದರು. ಸೆಮಿಫೈನಲ್‌ನಲ್ಲಿ ರೋಹಿತ್ 11-6, 5-11, 15-13, 11-9 ರಿಂದ ಅಥರ್ವ ನವರಂಗೆ ಎದುರು ಹಾಗೂ ತೇಶುಬ್ 9-11 , 11-4 , 11-2 , 9-11, 17-15 ರಿಂದ ವಿ.ಜಿ. ವಿಭಾಸ್ ಅವರನ್ನು ಮಣಿಸಿದರು.



ಪ್ರಶಸ್ತಿ ಪತ್ರದೊಂದಿಗೆ ಹಿಮಾಂಶಿ ಚೌಧರಿ ಹಾಗೂ ರೋಹಿತ್ ಶಂಕರ್

ಬೆಂಗಳೂರು ರೇಸ್

ಆಫ್ರಿಕನ್ ಗೋಲ್ಡ್ ಗೆಲ್ಲುವ ನಿರೀಕ್ಷೆ

ಬೆಂಗಳೂರು: ಕರ್ನಾಟಕ ಜುವೆನೈಲ್ ಮಿಲಿಯನ್ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಆಫ್ರಿಕನ್ ಗೋಲ್ಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ದಿ ಮಿಲೆನಿಯಮ್ ಫೋರ್ಸ್ 3, ಕೊರಿನ್‌ಥಿಯನ್ 1, ಮಸಾಕಿ 6

2ನೇ ರೇಸ್: ಕ್ವಾರ್ 7, ಟ್ರಿಪಿಟಾಕ 3, ಸ್ಟೆಲ್ಲಾಂಟಿಸ್ 4

3ನೇ ರೇಸ್: ಫ್ಲೈಟ್ ಆನ್ 2, ಕ್ರಿಸ್ಟಲಾಸ್ 5, ಇಂಪೀರಿಯಲ್ ಸ್ಟಾರ್ 4

4ನೇ ರೇಸ್: ಆಫ್ರಿಕನ್ ಗೋಲ್ಡ್ 2, ಎಕ್ಸಲೆಂಟ್ ಲಾಸ್ 1, ಡೆನ್‌ಸೆಟ್ಸು 3

5ನೇ ರೇಸ್: ಬ್ಲೂ ಗಾಡ್ 9, ಐರಿಷ್ ರಾಕ್‌ಸ್ಟಾರ್ 8, ಕಾನ್‌ಸ್ಟೇಬಲ್ 7

6ನೇ ರೇಸ್: ಫ್ರೀ ಟು ಪ್ಲೇ 1, ಇನ್ಫಿನೇಟ್ ಸ್ಪಿರಿಟ್ 5, ಫೈರ್‌ಫಿಂಚ್ 4

ಉತ್ತಮ ಬೆಟ್: ಫ್ಲೈಟ್ ಆನ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಬೆಂಗಳೂರು ರೇಸ್ ಪ್ರವೇಶ ದರ ಕಡಿತ

ಬೆಂಗಳೂರು ಟರ್ಫ್ ಕ್ಲಬ್ ಆವರಣದ ಆನ್‌ಕೋರ್ಸ್ (ಬೆಂಗಳೂರು) ರೇಸ್‌ಗಳ ಪ್ರವೇಶ ದರವನ್ನು ಸೀಮಿತ ಅವಧಿಗೆ ಕಡಿಮೆ ಮಾಡಲಾಗಿದೆ. ಮೊದಲನೇ ಎನ್‌ಕ್ಲೋಸರ್ ಪ್ರವೇಶ ದರವನ್ನು ₹300 ರಿಂದ ₹200 ಕ್ಕೆ ಮತ್ತು ಎರಡನೇ ಎನ್‌ಕ್ಲೋಸರ್ ಪ್ರವೇಶ ದರವನ್ನು ₹150 ರಿಂದ ₹100ಕ್ಕೆ ಸೀಮಿತ ಅವಧಿಗೆ ಕಡಿಮೆ ಮಾಡಲಾಗಿದೆ ಎಂದು ಬಿ.ಟಿ.ಸಿ ತಿಳಿಸಿದೆ.

ಆನ್‌ಕೋರ್ಸ್ ರೇಸ್‌ಗಳ ಪ್ರವೇಶ ದರದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಸಹ ಬಿ.ಟಿ.ಸಿ ತಿಳಿಸಿದೆ.